
ಕನ್ನಡ
ವೇದಾರ್ಥಕಲ್ಪಲತಿಕಾ

ವಿದ್ವಾನ್ ಸಾಂಬದೀಕ್ಷಿತ



PUSTAK SHAKTI PUBLICATION

103, 3rd Main Road, Tata Silk Farm
Basavanagudi, Bangalore
E-mail : pustakshakti@yahoo.com
Website : www.pustakshakti.com
Phone : 080-2691 5917, Mob : 9448733323

ಲೇಖಕರ ಮಾತು

ಶ್ರೀಗಣೇಶಾಯ ನಮಃ
ಶ್ರೀ ಸರಸ್ವತ್ಯೈ ನಮಃ

ಅಂದಿನ ನಮ್ಮ ನೆಚ್ಚಿನ ರಾಜ್ಯಪಾಲರಾಗಿದ್ದ ಡಾ।। ಟಿ.ಎನ್. ಚತುರ್ವೇದಿಯವರಿಂದ ಬಿಡುಗಡೆಯಾದ ನನ್ನ ಕೃತಿ **ವಿಚಾರವಾಹಿನಿ**, ಅತ್ಯಂತ ಜನಪ್ರಿಯವಾದ ಕೃತಿಗಳಲ್ಲಿ ಒಂದು. ಈ ಕೃತಿ ಬಿಡುಗಡೆಯ ಸಂದರ್ಭದಲ್ಲಿ ಸಾಹಿತ್ಯ ದುರಂಧರರಾದ ದಿ. ವ್ಯಾಸರಾಯ ಬಲ್ಲಾಳರು ಉಪಸ್ಥಿತರಿದ್ದರು. ತಮ್ಮ ಭಾಷಣದಲ್ಲಿ ಈ ಕೃತಿಯನ್ನು ಮುಕ್ತ ಕಂಠದಿಂದ ಹೊಗಳಿದರು.

ವೇದಾರ್ಥ ಕಲ್ಪಲತಿಕಾ, ಬಹ್ಮರ್ಷಿ ದೈವರಾತರಿಂದ ಹೊರಹೊಮ್ಮಿದ ಗ್ರಂಥ ರತ್ನಗಳಲ್ಲೊಂದು. ಪುರೋಹಿತನಾದ ನನಗೆ ಹಸ್ತಾಕ್ಷರವನ್ನಿತ್ತು ಈ ಗ್ರಂಥವನ್ನು ಅನುಗ್ರಹಿಸಿದರು. ಮಾನ್ಯ ಡಾ।। ಡಿ.ಎನ್. ಶಾನುಭಾಗರ ಪ್ರೇರಣೆಯಿಂದ ರೂಪಪಡೆಯಿತು. ಈಗ ನಿವೇದಿತ ಪ್ರಕಾಶನದಿಂದ ಈ ಗ್ರಂಥ ಹೊಸರೂಪ ಪಡೆದು ಸುಂದರ ಮುಖಚಿತ್ರ ತಾಳಿ ಓದುಗರ ಕೈಸೇರುತ್ತಿರುವುದು ಒಂದು ಹೆಮ್ಮೆಯ ವಿಷಯವಾಗಿದೆ. ಎಲ್ಲಾ ಶ್ರೀಮಹಾಬಲೇಶ್ವರನ ಆಶೀರ್ವಾದದ ಫಲ. ಸರ್ವಶಕ್ತನಾದ ಶ್ರೀ ಮಹಾಬಲೇಶ್ವರನು ನಿವೇದಿತ ಪ್ರಕಾಶನದ ರೂವಾರಿಗಳಾದ ಶ್ರೀ ಉಮೇಶ್ ಅವರ ಕುಟುಂಬಕ್ಕೆ ಹಾಗು ಪ್ರಕಾಶನದ ಎಲ್ಲ ತಾಂತ್ರಿಕ ವರ್ಗಕ್ಕೆ ಸಕಲ ಶಕ್ತಿಯನ್ನು ಅನುಗ್ರಹಿಸಲೆಂದು ಮನಸಾರ ಪ್ರಾರ್ಥಿಸಿ ಆಶಿಸುತ್ತೇನೆ.

ಇಂತಿ
ವಿದ್ವಾನ್ ಸಾಂಬದೀಕ್ಷಿತ
ಎಮ್.ಎ. ವೇದರತ್ನ
ಕ್ಷೇತ್ರ ಪುರೋಹಿತ, ದೀಕ್ಷಿತ ಗೇಹಃ
ನಾಗಬೀದಿ, ಗೋಕರ್ಣ- ೫೮೧೩೨೬ (ಉ.ಕ)

ಬ್ರಹ್ಮರ್ಷಿ ದೈವರಾತರ ದೇವನಾಗರೀ ಹಸ್ತಾಕ್ಷರ

श्री वे. साम्बदीक्षित दामोदरोपाध्यायानाम्
करकमलाञ्जलौ समर्पणम् ॥
अशोकाचने. अनन्तचतुर्दशी दिने
विरोधिकृत संवत्सरे
दैवरातः

दि. ३-९-१९७१

ಈ ಓಂ ಶ್ರೀಃ

ಓಂ ಭದ್ರಂ ನೋ ಅಪಿ ವಾತಯ ಮನಃ

॥ ವೇದಾರ್ಥಕಲ್ಪಲತಿಕಾ ॥

ಪೂರ್ವ ಪೀಠಿಕೆ

ಶ್ರೀಮದ್‌ಭಾರತ ಮಾತೃಭೂಮಿ-ವಿಜಯ-ಸ್ವಾನಂದ-ಸಂದೋಹಿನೀ
ವಿದ್ಯಾ-ಬುದ್ಧಿ-ಮಹಃ-ಸುವೀರ್ಯ-ವಿಭವ-ಪ್ರಜ್ಞಾನ-ಸಂಧಾಯಿನೀ ॥
ನಾದ-ಬ್ರಹ್ಮ-ಪರಾಕ್ಷರಾಭಯಕರಾ ವೇದಾರ್ಥವಾಕ್ ಕಾಮಧುಕ್
ಭೂಯಾತ್ 'ಕಲ್ಪಲತಾ' ಸಮಸ್ತಜನತಾನಂದಾಭಿವೃದ್ಧ್ಯೈ ಚಿರಮ್ ॥

ಶ್ರೀ ಭಾರತ ಮಾತೃಭೂಮಿಗೆ ವಿಜಯ ಸ್ವಾನಂದವನ್ನು ಸುರಿಸುತ್ತಿರುವ ವಿದ್ಯಾ, ಬುದ್ಧಿ, ತೇಜಸ್ಸು, ಸುವೀರ್ಯ, ಸಂಪತ್ತು, ಪ್ರಜ್ಞಾನಗಳನ್ನು ಜೋಡಿಸುತ್ತಿರುವ ನಾದ, ಬ್ರಹ್ಮ, ಪರಾಕ್ಷರಾ, ಅಭಯಗಳನ್ನು ಧರಿಸಿರುವ ವೇದಾರ್ಥವಾಕ್ಕೆಂಬ ಕಾಮಧೇನುರೂಪೀ ಕಲ್ಪಲತೆಯು ಸಮಸ್ತ ಜನತೆಯ ಆನಂದಾಭಿವೃದ್ಧಿಯನ್ನು ಸದೈವ ಕರುಣಿಸಲಿ.

ಈ ಪ್ರಪಂಚದಲ್ಲಿ ತೋರುತ್ತಿರುವ ಈಶ ಸೃಷ್ಟಿಯಲ್ಲಿ ನೆಲೆಸಿರುವ ನಮ್ಮೆಲ್ಲ ಮಾನವ ಜಾತಿಗೆ ಆರ್ಷೇಯವಾದ ವೈದಿಕ ತತ್ತ್ವಜ್ಞಾನವು, ಆರ್ಷೇಯವಾದ ದಿವ್ಯಸತ್ತ್ವದಿಂದ ಕೂಡಿರುವ ವೈದಿಕವಾದ ಸದ್ವಿದ್ಯಾಸಂಸ್ಕೃತಿಯು, ಸ್ವತಂತ್ರವೂ ಪವಿತ್ರವೂ ಆದ ಶಾಸ್ತ್ರೀಯ ಜೀವನ, ಕರ್ತವ್ಯ ಕರ್ಮಾನುಸರಣ, ಪ್ರಾಪಂಚಿಕವಾದ ಶಾಂತಿ, ಶಕ್ತಿ, ರಸತತ್ತ್ವ ಪೂರ್ಣವಾದ ಪ್ರವೃತ್ತಿ, ಜನತಾಜಗದೀಶ್ವರನ ಸೇವೆ, ಹಾಗೂ ಮೇಲು ಕೀಳು ಇಲ್ಲದ ಸಮಭಾವನೆ ಮೊದಲಾದ ಸರ್ವಸಂಪತ್ತು ಸಮೃದ್ಧಿ ಸಾಧನಗಳು ಎಲ್ಲರಿಗೂ ಇಷ್ಟವಾದುದೆಂಬುದು ಸರ್ವ ಸಾಮಾನ್ಯ. ಅದೇ ಸದಸದ್ವಿವೇಕದಿಂದ ಕೂಡಿದ ದಿವ್ಯ ಸತ್ತ್ವದಿಂದ ಹಾಗೂ ಯಥೋಕ್ತವಾದ ಯೋಗ್ಯ ಗುಣ ಸಂಪನ್ನ ಸೌಜನ್ಯ ಸದ್ವಿಭೂತಿಯಿಂದ ಮಾನವತೆಯ ಸಾರ್ಥಕತ್ವವನ್ನು ಸಾಧಿಸಲೂ ದೈವೀಸಂಪತ್ತನ್ನು ಪಡೆಯಲೂ ಸದ್ವಿದ್ಯೆಯೇ ಕಾರಣವೆಂಬುದು ನಿರ್ವಿವಾದ ವಿಷಯ. ಅಂಥ ದಿವ್ಯವೂ ಹಾರ್ದಿಕವೂ ಆದ ಸದ್ವಿದ್ಯಾಸತ್ತ್ವವು ಸದಸತ್ತುಗಳ ವಿಮರ್ಶೆ ಹೃದಯದಂತರಾಳದ ತಪಸ್ಸು ಹಾಗೂ ಧೀಯೋಗದಿಂದಲೇ ಲಭ್ಯವು. ಅದೇ ದಿವ್ಯವಾದ ಸುವಿಜ್ಞಾನವು. ಯಾವ ಜ್ಞಾನದಿಂದ ಪೂರ್ಣಾತ್ಮತತ್ತ್ವಾನುಭಾವದ ಉದಯ, ದಿವ್ಯಾತ್ಮ ಸ್ವರೂಪಾವಿರ್ಭಾವ,

ಪರಮ ಶಾಂತಿಶಕ್ತಿ ರಸಾನುಭವವೂ ಉಂಟಾಗುತ್ತದೋ ಅದು. ಇದನ್ನು ಋಗ್ವೇದ ವಸಿಷ್ಠ ದರ್ಶನದಲ್ಲಿ

"ಸುವಿಜ್ಞಾನಂ ಚಿಕಿತುಷೇ ಜನಾಯ ಸಚ್ಚಾಸಚ್ಚ ವಚಸೀ ಪಸ್ಪೃಧಾತೇ ।
ತಯೋರ್ಯತ್ ಸತ್ಯಂ ಯತರದೃಜೀಯಸ್ತದಿತ್‌ಸೋಮೋವತಿ ಹಂತ್ಯಾಸತ್ ॥"

(ಋ. ೭, ೧೦೪, ೧೨)

ಈ ಲೋಕದಲ್ಲಿಯ ಹೊರಗೆ ಹಾಗೂ ಅಂತಃಶರೀರದಲ್ಲಿರುವ ವಿಷಯದ ವಸ್ತುತತ್ವವನ್ನು ತಿಳಿಯಲು ಉದ್ಯುಕ್ತರಾದವರಿಗೆ ಶಾಸ್ತ್ರೀಯ ದೃಷ್ಟಿಯಿಂದ ಸಮರ್ಥಿಸಲು ಯೋಗ್ಯವಾಗುವಂತೆ ಸದಸದ್ರೂಪವಾದ ವಾಕ್ಕು ಹಾಗೂ ತದರ್ಥರೂಪವಾದ ವಿಷಯವನ್ನು ತಿಳಿಸಲು ಸತ್-ಅಸತ್ ಇವೆರಡೂ ಅಹಮಹಮಿಕೆಯಿಂದ ತಮ್ಮ ತಮ್ಮ ವಿಜಯಕ್ಕಾಗಿ ಸ್ಪರ್ಧಿಸಿದಾಗ ಅಂತರ್ಹೃದಯ ಹಾಗೂ ಬುದ್ಧಿರೂಪವಾದ ಇಂದ್ರಿಯಗಳು ತಮ್ಮ ತಮ್ಮ ಬಲಗಳಿಂದ ಪ್ರಯತ್ನಿಸುತ್ತವೆಯೆಂಬುದು ಪ್ರತ್ಯಕ್ಷ ಸಿದ್ಧವೂ ಸರ್ವಾನುಭವ ಪ್ರತೀತಿ ಶುದ್ಧವೂ ಆದ ವಾಸ್ತವಿಕ ವಿಷಯವಾಗಿದೆ. ಆ ಸತ್-ಅಸತ್ ವಿಷಯಗಳ ಸ್ಪರ್ಧೆಯಲ್ಲಿ ಅಂತಿಮವಾಗಿ ಸತ್‌ಗೆ ಜಯ, ಅಸತ್‌ಗೆ ಪರಾಜಯವೆಂಬುದು ನಿಶ್ಚಿತವಾದ ಸರ್ವಾನುಭವ ಸಿದ್ಧವಾದ ವಿಷಯವಾಗಿದೆ. ಈ ವಿಷಯ ವೇದ ಹಾಗೂ ಉಪನಿಷತ್ ವಿದಿತವಾಗಿದೆ. "ಸತ್ಯಮೇವ ಜಯತೇ ನಾನೃತಂ" (ಮುಂ.ಉ. ೩, ೧, ೬)

ಸದಸದ್ ವಿಷಯದ ವಿಮರ್ಶೆಯಲ್ಲಿ ಪ್ರಧಾನ ಇಂದ್ರಿಯವಾದ ಮನಸ್ಸಿನ ಅಧಿಷ್ಠಾತೃ ಸೋಮನು ಸ್ವರಸಾತ್ಮಕನು. ಅದರ ವಿಮರ್ಶಕನು, ಹಾಗೆಯೇ ಪವಿತ್ರವೂ ಸಂಶೋಧಕವೂ ಸೌಮ್ಯವೂ ರಸಾತ್ಮಕವೂ ಸಾತ್ವಿಕವೂ ಆದ ಮನಸ್ಸೂ ಸಮರ್ಥವಾಗಿರುತ್ತದೆ. ಆ ಸದಸತ್ ವಿಷಯದಲ್ಲಿ ಯಾವುದು ಸತ್ಯವೋ ನಿತ್ಯಸಿದ್ಧವೋ ಯಥಾರ್ಥವೋ, ಯಾವುದು ಋಜೀಯಃ – ಅಂದರೆ ಸರಳತಮವಾದ ಕೂಟಕಪಟಾದಿಗಳಿಲ್ಲದಿರುವ ಕೇವಲ ವಾಕ್ ಛಲಾದಿ ಕಂಟಕರಹಿತವಾದ, ಆದ್ದರಿಂದಲೇ ಅಂಥ ನಿಷ್ಕಂಟಕವಾದ ಸರಳವಾದ ವಸ್ತುತತ್ವವಿರು-ತ್ತದೋ ಅಂಥ ಸತ್ಯವನ್ನು ಮನಸ್ಸಿನ ಅಧಿಪತಿಯಾದ ಸೋಮದೇವನು ರಕ್ಷಿಸುವನು. ಅಂತೆಯೇ ಅಸತ್, ಅಸತ್ಯವನ್ನು ರಕ್ಷಿಸನು. ಅಂದರೆ ಸ್ವಾತ್ಮೀಯ ಹಾರ್ದಿಕವಾದ ಸತ್ವದಿಂದ ದೂರೀಕರಿಸುವನೆಂದರ್ಥ. ಇದನ್ನೇ ಬೇರೆ ಬೇರೆ ಮಂತ್ರಗಳಲ್ಲಿ ಮಹರ್ಷಿಗಳು ಮಂತ್ರಮುಖದಿಂದ ಬಣ್ಣಿಸಿದ್ದಾರೆ.

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ ॥

(ಋ. ೧, ೧೮೯, ೧)

"ಋಜುನೀತೀ ನೋ ವರುಣೋ ಮಿತ್ರೋ ನಯತು ವಿದ್ವಾನ್" । (ಋ. ೧, ೯೦, ೧)

ಹೀಗೆ ಒಳ್ಳೆಯದನ್ನು ಪಡೆಯುತ್ತಾ ಕೆಟ್ಟದ್ದನ್ನು ಬಿಟ್ಟಿರಲು ಋಜುಮಾರ್ಗದಿಂದ ನಡೆಯುವದು ಯೋಗ್ಯವೆಂದು ಈ ಮಂತ್ರಗಳು ಪ್ರತಿಪಾದಿಸುತ್ತವೆ.

ಹೀಗೆಯೇ –

"ಶ್ರದಸ್ಮೈ ಧತ್ತ ಸ ಜನಾಸ ಇಂದ್ರಃ" (ಋ. ೨, ೧೨, ೫)

"ಶ್ರದ್ಧಾಂ ಹೃದಯ್ಯ೨ಯಾऽऽಕೂತ್ಯಾ ಶ್ರದ್ಧಯಾ ವಿಂದತೇ ವಸು"
(ಋ. ೧೦, ೧೫೧, ೪)

"ಶ್ರದ್ಧೇ ಶ್ರದ್ಧಾಪಯೇಹ ನಃ" (ಋ. ೧, ೧೫೧, ೫)

"ಶ್ರದ್ಧಯಾ ಸತ್ಯಮಾಪ್ಯತೇ" (ಶು.ಯ.ಸಂ ೧೯, ೩೦)

"ಅಸ್ತೀತ್ಯೇವೋಪಲಬ್ಧವ್ಯಃ" (ಕಠೋಪ. ೬, ೧೩)

"ಅಸತೋ ಮಾ ಸದ್ಗಮಯ" (ಬೃ.ಉ. ೧, ೩, ೨೮)

"ಅಸನ್ನೇವ ಸ ಭವತಿ ಅಸದ್ ಬ್ರಹ್ಮೇತಿ ವೇದ ಚೇತ್ ।
ಅಸ್ತಿ ಬ್ರಹ್ಮೇತಿ ಚೆದ್ವೇದ ಸಂತಮೇನಂ ತತೋ ವಿದುಃ" ॥ (ತೈ.ಉ. ೨।೬)

ಇವೇ ಮೊದಲಾದ ವೇದ ಹಾಗೂ ಉಪನಿಷದ್ವಚನಗಳು ಅದೇ ತತ್ವವನ್ನು ಸಮರ್ಥಿಸುತ್ತವೆ. ಅಸನ್ನಿವಾರಣವನ್ನುಅನೇಕ ಕಡೆ ಹೇಳಿದೆ—

"ಚತುರಶ್ಚಿದ್ದದಮಾನಾದ್ ಬಿಭೀಯಾದಾ ನಿಧಾತೋಃ । ನ ದುರುಕ್ತಾಯ ಸ್ಪೃಹಯೇತ್"
(ಋ. ೧, ೪೧, ೯)

"ಮಾ ವ್ಯೋ ಘ್ನಂತಂ ಮಾ ಶಪಂತಂ ಪ್ರತಿ ವೋಚೇ ೦" (ಋ. ೧, ೪೧, ೮)

"ಮಾಗಾಮನಾಗಾಮದಿತಿಂ ವಧಿಷ್ಟ" (ಋ. ೮, ೧೦೧, ೧೫)

ಹೀಗೆ ಸದಸದಾತ್ಮಕ (ಒಳ್ಳೆಯ ಹಾಗೂ ಕೆಟ್ಟುದರ) ನಿದರ್ಶನವನ್ನು ಬಹುತೇಕವಾಗಿ ವೇದ ಹಾಗೂ ಉಪನಿಷತ್ತುಗಳಲ್ಲಿ ಸತ್ಯ, ಅನೃತ ಶಬ್ದಗಳಿಂದ ವರ್ಣಿಸಿದ್ದು ಕಂಡು ಬರುತ್ತದೆ.

"ಸತ್ಯಮಿದ್ವಾ ಉ ತಂ ವಯಮಿಂದ್ರಂ ಸ್ತವಾಮ ನಾನೃತಂ" ॥ (ಋ. ೮, ೬೨, ೧೨)

ಇದರ ಅಭಿಪ್ರಾಯ– ತಂ = ಆ ರೀತಿಯಲ್ಲಿರುವ ಆ ಪರೋಕ್ಷರೂಪನೂ ಸತ್ಯರೂಪಿಯಾದ ಸರ್ವವಿಭೂತಿಯಿಂದ ಕೂಡಿದ ಪರಮಾತ್ಮನಾದ ಇಂದ್ರನನ್ನು, ವಯಂ = ನಾವು ಸ್ತವಾಮ = ಸ್ತುತಿಸುತ್ತೇವೆ. ಅನ್ಯತನನ್ನಲ್ಲ. ಇಲ್ಲಿ ಇಂದ್ರನೇ ಸತ್ಯ. ಸತ್ಯವೇ ಇಂದ್ರ. ಯಾವಾಗಲೂ ಇಂದ್ರನು ಅನ್ಯತನಲ್ಲ. ಇಲ್ಲಿ ರಹಸ್ಯವೇನೆಂದರೆ ಸದಸದಾತ್ಮಕವಾದ ಸತ್ಯಾನೃತ-ಗಳ ವಾಸ್ತವಿಕ ರೂಪವೆಂದರೆ ವಾಚಿಕವಾದ ಸತ್ಯವೇ ಸತ್ಯ, ಮಾನಸಿಕವಾದ ಸತ್ಯಕ್ಕೆ ಋತವೆಂದು ಹೆಸರು. ನ ಋತಂ ಅನೃತಂ, ಎಂಬ ವ್ಯುತ್ಪತ್ತಿಯಿಂದ ಮನಸ್ಸಿನಿಂದ ವಂಚಿತವಾದುದು ಅನೃತವೆಂದು ಹೇಳಬಹುದು. ಹೀಗೆ ಸಾಮಾನ್ಯವಾಗಿ ಸತ್ಯಕ್ಕೆ ವಿಪರೀತವಾದುದು ಅನೃತವೆಂದು ಪ್ರತಿಪಾದಿತವಾಗಿದೆ.

ಇಲ್ಲಿ ಸತ್ಯವೆಂಬುದೇ ದಿವ್ಯವೂ ದೇವತಾತ್ಮಕವಾದುದು. ಯಥಾರ್ಥವಾದ ವಾಕ್‌ಸತ್ವ-ವುಳ್ಳದ್ದು. ಅನೃತವೆಂಬುದು ಅಸದಾತ್ಮಕವಾದದ್ದು. ಮಾನವನಿಗೆ ಸಂಬಂಧವೆಂಬುದು ವೈದಿಕತತ್ವ. ಯಜ್ಞಾದಿಗಳಲ್ಲಿ ವ್ರತಗ್ರಹಣ ಮಂತ್ರಗಳಲ್ಲಿ–

"ಅನೃತಾತ್ ಸತ್ಯಮುಪೈಮಿ ಮಾನುಷಾದ್ದೈವ್ಯಮುಪೈಮಿ ದೈವೀಂ ವಾಚಂ ಯಚ್ಛಾಮಿ" ॥

(ತೈ.ಬ್ರಾ. ೧, ೨, ೧, ೧೫)

"ಅಗ್ನೇ ವ್ರತಪತೇ ವ್ರತಂ ಚರಿಷ್ಯಾಮಿ ತಚ್ಛಕೇಯಂ ತನ್ಮೇ ರಾಧ್ಯತಾಂ ।

ಇದಮಹಮನೃತಾತ್ ಸತ್ಯಮುಪೈಮಿ" ॥ (ಶು.ಯ. ೧, ೫)

"ದ್ವಯಂ ವಾ ಇದಂ ನ ತೃತೀಯಮಸ್ತಿ ಸತ್ಯಂ ಚೈವಾನೃತಂ ಚ, ಸತ್ಯಮೇವ ದೇವಾ ಅನೃತಂ ಮನುಷ್ಯಾ ಇತಿ ಚ ಬ್ರಾಹ್ಮಣಮ್" (ಶ.ಬ್ರಾ. ೧, ೧, ೧, ೪)

"ಸತ್ಯಸಂಹಿತಾ ವೈ ದೇವಾಃ ಅನೃತಸಂಹಿತಾ ಮನುಷ್ಯಾಃ, ತಸ್ಮಾದ್ದೀಕ್ಷಿತೇನ ಸತ್ಯಮೇವ ವದಿತವ್ಯಂ" (ಐ.ಬ್ರಾ. ೧, ೬)

"ಸತ್ಯಂ ಚಾನೃತಂ ಚ ಸತ್ಯಮಭವತ್" (ತೈ.ಉ. ೨, ೬) ಈ ಉಪನಿಷತ್ತಿನ ಮಾತೂ ಇದನ್ನೇ ತಿಳಿಸುತ್ತಿದೆ.

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ೦ । ಪ್ರಿಯಂ ಚ ನಾನೃತಂ ಬ್ರೂಯಾತ್" (ಮನುಸ್ಮೃತಿ. ೪, ೧೩೮)

"ಸತ್ಯಾನೃತೇ ಮಿಥುನೀಕೃತ್ಯ ಅಹಮಿದಂ ಮಮೇದಮಿತಿ ನೈಸರ್ಗಿಕೋಽಯಂ ಲೋಕವ್ಯವಹಾರಃ" ಹೀಗೆ ಬ್ರಹ್ಮಸೂತ್ರ ಶಾರೀರಕ ಭಾಷ್ಯದಲ್ಲಿ ಸ್ವಲ್ಪ ವಿಶೇಷಾರ್ಥಕವಾದ ವಚನವಿದೆ.

ಈ ಋತ ಸತ್ಯವೆಂಬ ಜೋಡಿ ಮನಸ್ಸು-ವಾಕ್-ಸತ್ವರೂಪ, ಭಾವನಾ-ಕ್ರಿಯಾತತ್ವರೂಪ ಸೋಮಾರುದ್ರ ದೈವರೂಪವೂ ಆಗುತ್ತದೆ.

ಹಾಗೆಯೇ ವ್ಯತ್ಯಸ್ತವಾಗಿ ಸತ್ಯ-ಋತವೆಂಬ ಜೋಡಿ ವಾಕ್-ಮನಃ-ಸತ್ವರೂಪ, ಜ್ಞಾನ-ಭಾವನಾತತ್ವರೂಪ. ಜ್ಯೋತಿ-ರಸರೂಪವಾದ ಅಗ್ನಿ ಹಾಗೂ ಸೋಮದೈವ ರೂಪವೂ ಆಗುತ್ತದೆ. ಜಗತ್ತಿನ ಆದಿ ಸೃಷ್ಟಿಯಲ್ಲಿ ಜ್ಯೋತಿರ್ಮಯನೂ ಪರಮಾತ್ಮನೂ ಆದಿ ಪುರುಷನೂ ಆಗಿ ಚೇತನಾಶಕ್ತಿ ಪ್ರದೀಪ್ತನಾದ ಭಗವಂತನ ತಪಸ್ಸಿನಿಂದ ಆವಿರ್ಭೂತವಾದ ಎರಡು ವಸ್ತುಗಳೇ ಋತ-ಸತ್ಯವೆಂದಾಗಿವೆ. ಹೀಗೆ ಋಗ್ವೇದದಲ್ಲಿ ಅಘಮರ್ಷಣ ಋಷಿಯ ಮಂತ್ರ ದರ್ಶನವಿದೆ.

"ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಧ್ಯಜಾಯತ" (ಋ. ೧೦, ೧೯೦, ೧)

ಹೀಗೆ ಋತವೆಂಬುದು ಮಾನಸಿಕ ಸತ್ಯ, ಸತ್ಯವೆಂದರೆ ವಾಚಿಕಸತ್ಯವೆಂಬ ವಿವರಣೆಯನ್ನು ಹಿಂದೆ ಹೇಳಿದೆ. ಅದರಿಂದ ಋತಸತ್ಯಾತ್ಮಕವಾದ ಮನೋವಾಕ್ ಸತ್ವಗಳ ಸಮನ್ವಯದಿಂದ ಎಲ್ಲ ಯಜ್ಞಗಳೂ ಯೋಗಗಳೂ ತಪಸ್ಸುಗಳೂ ಸಿದ್ಧಿಸುತ್ತವೆ. ಈ ಜೋಡಿ ವಿಶ್ವಸೃಷ್ಟಿಗೆ ಕಾರಣೀಭೂತವಾಗಿದೆ. ಪರಮಾತ್ಮನ ಹಾಗೂ ಎಲ್ಲ ಆಧ್ಯಾತ್ಮಿಕ ದಿವ್ಯ ಕರಣರೂಪವಾದ ಪ್ರಾಪಂಚಿಕ, ಪಾರಮಾರ್ಥಿಕ ವಿಷಯಗಳಲ್ಲಿ ಬಾಹ್ಯಾಭ್ಯಂತರ ವ್ಯವಹಾರಗಳಲ್ಲಿಯೂ ವಾಕ್ ಹಾಗೂ ಮನಸ್ಸುಗಳದೇ ಸಾಮ್ರಾಜ್ಯವೆಂಬುದು ಸರ್ವವಿದಿತ.

ಋತಂ ಸತ್ಯಂ ಪರಂ ಬ್ರಹ್ಮ" (ತೈಂ.ಆ. ೧೦, ೧೨, ೧, ನಾ.ಉ. ೧೨, ೧)

"ಸತ್ಯಂ ಪ್ರಪದ್ಯೇ, ಋತಂ ಪ್ರಪದ್ಯೇ" (ತೈ.ಬ್ರಾ. ૩, ೫, ೧, ೧)

"ಋತಂ ವದಿಷ್ಯಾಮಿ, ಸತ್ಯಂ ವದಿಷ್ಯಾಮಿ" (ತೈ.ಉ. ೧, ೧)

"ಋತಂ ತಪಃ ಸತ್ಯಂ ತಪಃ" (ತೈ.ಆ. ೧೦, ೮, ೧, ನಾ.ಉ. ೮, ೧)

"ಋತಂಚ ಸ್ವಾಧ್ಯಾಯಪ್ರವಚನೇ ಚ" "ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ" (ತೈ.ಉ. ೧, ೯)

"ಋತೇನ ಸತ್ಯಮೃತಸಾಪ ಆಯನ್" (ಋ. ೭/೫೬, ೧೨)

"ಸತ್ಯಂ ತ್ವರ್ತೇನ ಪರಿಷಿಂಚಾಮಿ । ಋತಂತ್ವಾ ಸತ್ಯೇನ ಪರಿಷಿಂಚಾಮಿ" (ತೈ.ಬ್ರಾ. ೨,೧,೧೧,೧)

ಈ ಮೇಲೆ ಹೇಳಿದ ವೇದ ಹಾಗೂ ಉಪನಿಷದ್ವಚನಗಳು ಋತ ಸತ್ಯಗಳ ವಸ್ತು ತತ್ವವನ್ನು ಯಥಾರ್ಥವಾಗಿ ವರ್ಣಿಸಿವೆ. ಇದನ್ನು ಛಂದೋದರ್ಶನದಲ್ಲಿಯೂ ಸ್ಪಷ್ಟಪಡಿಸಿದೆ.

"ವಾಚಂ ದೇವೀಮ್ಮೃತವತೀಮನು ಬ್ರವೀಮಿ ಮನಸಾ" (ಛಂ.ದ. ೨, ೧, ೧)

"ಯಾ ತ್ವಂ ದೇವೀ ದೇವಜುಷ್ಟಾ, ಪ್ರೇರಿತಾ ಮನಸಾ ಸ್ವಯಂ ।

ಚಕ್ಷುರ್ಭ್ಯಾಂ ದೃಷ್ಟಮನುಯಾ ತಾಂ ತ್ವಾಮ್ಮೃತವತೀಂ ವಿದುಃ ॥ (ಛಂ.ದ. ೨,೧,೧೧)

ಸದಸತ್ತುಗಳ ಸತ್ಯ ಅನೃತಗಳ ಸಂಶೋಧನದಿಂದ ಒಂದು ಯೋಗ ಸಿದ್ಧವಾಗುತ್ತದೆ. ಅದಕ್ಕೆ ಅತಿ ಸೂಕ್ಷ್ಮವಾದ ಮನಸ್ಸೇ ಸಾಧನ ಪ್ರಧಾನವೂ ಹೃದಯದ ಅಂತರಾಳದಲ್ಲಿರುವ ಸೋಮ ದೇವತಾಕವಾದ ಕರಣವೆಂಬುದು ಸರಿಯಾಗಿ ಕಾಣುತ್ತದೆ. ಆ ಮನಸ್ಸಿನ ಈ ಸದಸದ್ವಿಮರ್ಶನೆಯ ಪ್ರಕ್ರಿಯೆಯು ಆರ್ಷೇಯವಾದದ್ದೇ. ಈ ಜಗತ್ತಿನಲ್ಲಿಯ ಎಲ್ಲ ಪ್ರಾಣಿಗಳ, ವಿಶೇಷತಃ ಮಾನವರಾದ ನಮ್ಮ ಬುದ್ಧಿಯೇ ಮೊದಲಾದ ಜ್ಞಾನೇಂದ್ರಿಯಗಳು ಹೊರಗಿನ ಹಾಗೂ ಒಳಗಿನ ಎಲ್ಲ ವಸ್ತುಗಳ ಹಾಗೂ ಶಬ್ದಾದಿ ವಿಷಯಗಳ ಜ್ಞಾನಕ್ಕೆ ಹಾಗೂ ಅದರ ಸಂಗ್ರಹಕ್ಕೆ ಸಾಧನಗಳಾಗಿವೆ ಎಂಬುದು ಎಲ್ಲರಿಗೂ ಗೊತ್ತು. ಮತ್ತು ತಾನು ತಿಳಿದ ಎಲ್ಲ ವಿಷಯಗಳನ್ನು ಸರಿಯಾಗಿ ಬೇರೆಯವರಿಗೆ ತಿಳಿಸಲು ಮಾತೇ ಮುಖ್ಯವಾದದ್ದು. ಹೀಗೆ ಮನಸ್ಸು ಹಾಗೂ ವಾಕ್ಕಿನ ಸಾಮರ್ಥ್ಯವಿದೆಯಷ್ಟೆ ?

ಅಧ್ಯಯನ, ಅಧ್ಯಾಪನಗಳಿಗೆ, ಮನಸ್ಸಿನಲ್ಲಿರುವ ಭಾವನೆಯನ್ನು ಇನ್ನೊಬ್ಬರಿಗೆ ಸರಿಯಾಗಿ ತಿಳಿಸಲು ಮಾತೇ ಮುಖ್ಯವಾದದ್ದು. ಆದರೆ ವಾಕ್ಕು ಮನಸ್ಸಿನಿಂದ ಪ್ರೇರಿತವಾದಾಗ ಮಾತ್ರ ಸರಿಯಾಗಿ ಅರ್ಥ ಕೊಡುವದು. ಸರಿಯಾದ ಮನಃ ಪ್ರೇರಿತವಾದ ಮಾತು ಸರಿಯಾದ ಅರ್ಥವನ್ನು ತಿಳಿಸುತ್ತದೆ. ಮಾತು ಮನಃಪ್ರೇರಿತವಾಗದಿದ್ದರೆ ಸಿಕ್ಕಾಪಟ್ಟೆಯಾಗುತ್ತದೆ. ಅದು ಅರ್ಥವಿಲ್ಲದ್ದಾಗುತ್ತದೆಯಷ್ಟೆ. ಹೀಗೆ ಮಾತು ಸರ್ವಸಮರ್ಥವಾಗಿದ್ದರೂ ಮನಸ್ಸಿನಿಂದ ಕೂಡಿರದಿದ್ದರೆ ಸರಿಯಾದ ಅರ್ಥವನ್ನು ಕೊಡುವದಿಲ್ಲ. ಮನಸ್ಸು ಹಾಗೂ ವಾಕ್ಕು ಇವುಗಳ ಜೊತೆಯಿರಬೇಕು. ಇದನ್ನು ಬೃಹಸ್ಪತಿ ಋಷಿ ತನ್ನ ಮಂತ್ರದಲ್ಲಿ :–

"ಸಕ್ತುಮಿವ ತಿತಉನಾ ಪುನಂತೋ ಯತ್ರ ಧೀರಾ ಮನಸಾ ವಾಚಮಕ್ರತ ||
ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಽಧಿ ವಾಚಿ ||"

(ಋ. ೧೦, ೭೧, ೨)

ಈ ಮಂತ್ರದ ಪೂರ್ವಾಚಾರ್ಯ ಸಂಮ್ಮತ ಎಲ್ಲ ವಿದ್ವಾಂಸರೂ ಒಪ್ಪಿದ, ಸರ್ವಶಾಸ್ತ್ರಗಳಿಂದ ಪ್ರತಿಪಾದಿತವಾದ ಅರ್ಥ ಹೀಗೆ. ಇಲ್ಲಿ 'ತಿತಉ', ಎಂಬ ಶಬ್ದವಿದೆ. "ತಿತಉ ಪರಿಪವನಂ ಭವತಿ" (ಯಾಸ್ಕನಿರುಕ್ತ ೪, ೧, ೯) "ಚಾಲನೀ ತಿತಉಃ ಪುಮಾನ್", ಎಂದು ಅಮರಕೋಶ ಸಾರುತ್ತಿದೆ. ಹಿಟ್ಟನ್ನು ಸಾಣಿಸುವ ಸಾಣಿಗೆ ಎಂದರ್ಥ. ಯಜ್ಞಾದಿಗಳಲ್ಲಿ ನೀರು ಹಾಗೂ ತುಪ್ಪಗಳ ಪರಿಶೋಧನೆಗಾಗಿ ದರ್ಭಪವಿತ್ರ ಹಾಗೂ ಸೋಮರಸ ಪರಿಶೋಧನೆಗಾಗಿ ದಶಾಪವಿತ್ರಾದಿಗಳು ಪ್ರಸಿದ್ಧವಾಗಿವೆ.

ಯತ್ತೇ ಪವಿತ್ರಮರ್ಚಿಷ್ಯಗ್ನೇ ವಿತತಮಂತರಾ | ಬ್ರಹ್ಮ ತೇನ ಪುನೀಹಿ ನಃ ||

(ಋ. ೯, ೬೭, ೨೩)

ಇತ್ಯಾದಿ ಮಂತ್ರವಚನಗಳಿಂದ ವಸ್ತುಗಳ ಶುದ್ಧೀಕರಣಕ್ಕೆ ಬಾಹ್ಯ ಮತ್ತು ಅಭ್ಯಂತರ ಸಾಧನಗಳ ಆವಶ್ಯಕತೆಯಿದೆಯಷ್ಟೇ. ಅಂದರೆ ಬಾಹ್ಯ ವಸ್ತುಗಳಾದ ಹಿಟ್ಟು ಮೊದಲಾದವು-

ಗಳನ್ನು ಸ್ವಚ್ಛ ಮಾಡಲು ಸಾಣಿಗೆ ಮೊದಲಾದವುಗಳನ್ನು ಉಪಯೋಗಿಸುವಂತೆ ಒಳ್ಳೆಯದು ಕೆಟ್ಟದ್ದು ಎಂಬುದನ್ನು ವಿಮರ್ಶಿಸಲು ಸೂಕ್ಷ್ಮವಾದ ಅಂತಃಕರಣ ರೂಪವಾದ ಮನಸ್ಸಿನಿಂದ ನಮ್ಮ ಮಾತನ್ನು ಸ್ವಚ್ಛಗೊಳಿಸಿ ಅಂದರೆ ಈ ಮಾತನ್ನು ಈ ಸಮಯದಲ್ಲಿ ಹೇಳಬಹುದೋ ಹ್ಯಾಗೆ ? ಎಂದು ಮನಸ್ಸಿನಿಂದ ವಿಚಾರಿಸಿ ದುಷ್ಟ ಪದಗಳನ್ನು ಬಿಟ್ಟು ಯೋಗ್ಯ ಪದಗಳನ್ನು ಉಚ್ಚರಿಸುವವರಿಗೆ ಧೀರರು ಅಂದರೆ ಬುದ್ಧಿವಂತರೆಂದು ತಿಳಿಯುವರು. ಅಂಥವರ ಮಾತಿನಲ್ಲಿ ಮಂಗಲಕರವಾದ ಲಕ್ಷ್ಮಿಯು ಕುಣಿದಾಡುತ್ತಿರುತ್ತಾಳೆ. ಹೀಗೆ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ವಾಗಿ ಎಲ್ಲ ವಸ್ತುಗಳ ಪ್ರಕಾಶನಗಳಿಗೆ ವಾಕ್ಕೇ ಮುಖ್ಯ ಸಾಧನವಾಗಿಧೆ.

ಆ ಮಾತು ಮನಸ್ಸಿನಿಂದ ಪರಿಶುದ್ಧವಾದಾಗ ಸತ್ಯವಾದದ್ದಾಗುವದು. ಆದ್ದರಿಂದಲೇ ಅದು ಒಂದಕ್ಕೆ ಒಂದು ಪ್ರತಿಷ್ಠಾನವಾಗಿದೆ. "ವಾಙ್ಮೇ ಮನಸಿ ಪ್ರತಿಷ್ಠಿತಾ, ಮನೋ ಮೇ ವಾಚಿ ಪ್ರತಿಷ್ಠಿತಮ್" (ಐ.ಉ.ಶಾಂತಿಪಾಠಃ). ಇವುಗಳ ಕೂಡುವಿಕೆಯಿಂದ ಎಲ್ಲ ಯಜ್ಞಗಳೂ ಸಿದ್ಧವಾಗು-ತ್ತವೆ. ಎಲ್ಲ ಯಜ್ಞಗಳನ್ನು ನಡೆಸಲು ಚಕ್ರರೂಪವಾದದ್ದು. ಇವೆರಡೂ ಮನಸ್ಸು ವಾಕ್ಕೆಂಬ ಧೀಂದ್ರಿಯಗಳು ಮುಖ್ಯವಾಗಿವೆ. "ಏಷ ಹ ವೈ ಯಜ್ಞೋ ಯೋಽಯಂ ಪವತೇ ೦ ತಸ್ಯ ಮನಶ್ಚ ವಾಕ್ ಚ ವರ್ತನೀ" (ಛಾಂ.ಉ. ೪,೧೬,೧) "ಯಜ್ಞಸ್ಯ ವೈ ಮನಶ್ಚ ವಾಕ್ ಚ ವರ್ತನ್ಯೌ" (ಜೈ.ಉ. ೩,೧೬,೧)

ರಥದ ಎರಡು ಚಕ್ರಗಳಂತೆ. ಪುರುಷನ ಎರಡು ಪಾದಗಳಂತೆ. ಬಾಹ್ಯ ಯಜ್ಞಕ್ಕೆ ಆಂತರ್ಯವಾದ ಧೀಯೋಗಕ್ಕೆ ಮನುಷ್ಯನ ವಾಙ್ಮನಸ್ಸುಗಳೇ ಕಾರಣವಾಗಿವೆ. ಇದೇ ಸತ್ಯಂಸಂಪಾದಕವಾದ ಸರ್ವಾರ್ಥಸಾಧಕವಾದ ಅಗ್ನೀಷೋಮಾತ್ಮಕವಾದ ತತ್ವವೆಂಬುದು ಶಾಸ್ತ್ರಾದಿಗಳಿಂದ ನಿರ್ಣೀತವಾಗಿದೆ. ವಾಕ್ಕೇ ಅಗ್ನಿ ಸ್ವರೂಪ, ಮನಸ್ಸು ಸೋಮಸ್ವರೂಪ, "ಮುಖಾದಿಂದ್ರಶ್ಚಾಗ್ನಿಶ್ಚ" (ಋ. ೧೦, ೯೦, ೧೩) "ಮುಖಾದಗ್ನಿರಜಾಯತ", (ಶು.ಯ.ಸಂ. ೩೧, ೧೧) "ಮುಖಾದ್ವಾಗ್ ವಾಚೋಽಗ್ನಿಃ" (ಐ.ಉ. ೧, ೪) "ಅಗ್ನಿರ್ವಾಗ್ಭೂತ್ವಾ ಮುಖಂ ಪ್ರಾವಿಶತ್" (ಐ.ಉ. ೨, ೪) ಹೀಗೆ ಮಾತು ಎಂಬುದು ಅಗ್ನಿಗೆ ಸಂಬಂಧಪಟ್ಟಿದ್ದೆಂಬುದಕ್ಕೆ ಮಂತ್ರ, ಬ್ರಾಹ್ಮಣ ವಚನಗಳಿವೆ. ಈ ವಾಕ್ಕೆಂಬುದೇ ಅಂತರಾತ್ಮನಾದ ಬ್ರಹ್ಮನ ಚೇತನಾತ್ಮಿಕ-ವಾದ ಜ್ಞಾನಪ್ರಧಾನವಾಗಿರುವ ಸಂವಿತ್ ಸ್ವರೂಪವಾದ ಪರಾಶಕ್ತಿಯಾಗಿದೆ. "ವಾಗಷ್ಟಮೀ ಬ್ರಹ್ಮಣಾಸಂವಿದಾನಾ" -ಅದರ ವ್ಯಾಖ್ಯಾನದಲ್ಲಿ- "ವಾಗ್ಘಿ, ಅಷ್ಟಮೀ ಬ್ರಹ್ಮಣಾಸಂವಿತ್ತೇ" (ಬೃ.ಉ. ೨, ೨, ೩) ಎಂದು ಹೇಳಿದೆ.

"ತೇಜೋಮಯೀ ವಾಕ್" (ಛಾಂ.ಉ. ೫, ೪) ಮಾತು ಅಗ್ನಿರೂಪವೆಂಬುದಕ್ಕೆ ಅದು ಜ್ಞಾನಕರಣವಾಗಿಯೂ ಅರ್ಥಪ್ರಕಾಶಕತ್ವವಿರುವದರಿಂದ. "ಚಂದ್ರಮಾ ಮನಸೋ ಜಾತಃ" (ಋ. ೧೦,೯೦,೧೩) "ಹೃದಯಾನ್ಮನೋ ಮನಸಶ್ಚಂದ್ರಮಾಃ", (ಐ.ಉ. ೧,೪) "ಚಂದ್ರಮಾ ಮನೋ ಭೂತ್ವಾ ಹೃದಯಂ ಪ್ರಾವಿಶತ್" (ಐ.ಉ. ೨, ೪) ಹೀಗೆ ಮನಸ್ಸು ರಸಾತ್ಮಕವಾದ ಸೋಮರೂಪವಾಗಿದೆ.

ಕಾಮಸ್ತದಗ್ರೇ ಸಮವರ್ತತಾಧಿ ಮನಸೋ ರೇತಃ ಪ್ರಥಮಂ ಯದಾಸೀತ್ (ಋ. ೧೦,೧೨೯,೪)

ಹೀಗೆ ಮನಸ್ಸು ಇಚ್ಛಾ, ಸಂಕಲ್ಪ, ಭಾವನಾದಿಕರಣ ರೂಪವಾದದ್ದು. "ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾಽ ಶ್ರದ್ಧಾ ಧೃತಿರಧೃತಿರ್ಹ್ರೀರ್ಧೀರ್ಭೀರಿತ್ಯೇತತ್ ಸರ್ವಂ ಮನ ಏವ" (ಬೃ.ಉ. ೧, ೫, ೩) ಹೀಗೆ ಉಪನಿಷತ್ತಿನಲ್ಲಿ ಹಾಗೂ ವೇದದಲ್ಲಿ ಮನಸ್ಸಿನ ಅಧಿಪತಿ ಸೋಮ ಎಂದಿದೆ.

"ಮನಶ್ಚಿನ್ಮನಸಸ್ಪತಿಃ" (ಋ. ೯, ೧೧, ೮) ಇದರಿಂದ ಋತ–ಸತ್ಯಾತ್ಮಕವೂ ಮನೋವಾಕ್ ಸತ್ವರೂಪವೂ ಜ್ಯೋತೀರೂಪ ಹಾಗೂ ರಸರೂಪವಾಗಿಯೂ ಇರುವ ಅಗ್ನೀಷೋಮರೇ ಜಗತ್ತಿಗೆ ಮೂಲಕಾರಣರು. "ಅಗ್ನೀಷೋಮಾತ್ಮಕಂ ಜಗತ್" ಎಂಬುದು ಸಿದ್ಧವಾಗುತ್ತದೆ.

ಹೀಗೆ ಸತ್ಯತ್ವ ರೂಪ ವಸ್ತುತತ್ವದಲ್ಲಿ ಚಕ್ಷುಃ ಮನಃ ಇವೆರಡೂ ಅಂತರ್ಯವಾದ ಸಾಧನವಾಗಿವೆ. ದ್ವಿದೈವತ್ಯ ಗ್ರಹದಲ್ಲಿ (ಯಜ್ಞೀಯ ಪ್ರಕರಣದಲ್ಲಿ) ಇದಕ್ಕೆ ನಿದರ್ಶನವಿದೆ. "ಚಕ್ಷುಶ್ಚ ಮನಶ್ಚ ಮೈತ್ರಾವರುಣಃ" (ಐ.ಬ್ರಾ. ೨, ೨೬) ಇಲ್ಲಿ ಶಬ್ದಾತ್ಮಕವಾದ ವಾಕ್ ಹಾಗೂ ಅರ್ಥಾತ್ಮಕ ಸಂಬಂಧದಿಂದ ಕೂಡಿದ ಚಕ್ಷುಃ ಯಾವುದನ್ನು ಕಣ್ಣಿನಿಂದ ಪ್ರತ್ಯಕ್ಷವಾಗಿ ನೋಡಿರುತ್ತೇವೆಯೋ ಅದನ್ನೇ ಮಾತಿನಿಂದ ಹೇಳುವದು ಸತ್ಯವೆನಿಸುತ್ತದೆ. ಆದ್ದರಿಂದ ಕಣ್ಣಿನಿಂದ ನೋಡಿದ್ದು ಮಾತ್ರ ಸತ್ಯವೆನಿಸುತ್ತದೆ.

"ಚಕ್ಷುರ್ವೈ ವಿಚಕ್ಷಣಂ" ವಿಹ್ಯೇನೇನ ಪಶ್ಯತೀತಿ "ಚಕ್ಷುರ್ವೈ ಸತ್ಯಂ", "ತಸ್ಮಾದ್ವಿಚಕ್ಷಣವತೀಮೇವ ವಾಚಂ ವದೇತ್" (ಐ.ಬ್ರಾ. ೧, ೬) ಹೀಗೆಯೇ ಇನ್ನೊಂದೆಡೆ – "ಚಕ್ಷುರ್ವೈ ಬ್ರಹ್ಮೇತಿ ಸತ್ಯಮಿತ್ಯೇನದುಪಾಸೀತ" (ಬೃ.ಉ. ೪, ೧, ೪)

ಹೀಗೆ ಸತ್ಯವೆಂಬುದು ಮನಸ್ಸು ಹಾಗೂ ಚಕ್ಷುಃ (ಕಣ್ಣು) ಅಂದರೆ ದೃಷ್ಟಿ, ಇವುಗಳ ಕೂಡುವಿಕೆಯಿಂದಲೇ ಸತ್ಯದ ಉದಯವಾಗುತ್ತದೆ. ಇದನ್ನೇ ಬ್ರಹ್ಮ ಕ್ಷತ್ರ ಹಾಗೂ ಕ್ರತು ದಕ್ಷ ಎಂತಲೂ ಇವೆರಡೂ ಮೈತಾವರುಣ ದೇವತಾಕವೆಂದೂ ಸಿದ್ಧವಾಗುತ್ತದೆ. ಇದನ್ನು ಋಗ್ವೇದದಲ್ಲಿ –

"ಇಮಾಂ ಧಿಯಂ ಶಿಕ್ಷಮಾಣಸ್ಯ ದೇವ ಕ್ರತುಂ ದಕ್ಷಂ ವರುಣ ಸಂ ಶಿಶಾಧಿ ।
ಯಯಾತಿ ವಿಶ್ವಾ ದುರಿತಾ ತರೇಮ ಸುತರ್ಮಾಣಮಧಿ ನಾವಂ ರುಹೇಮ" ॥
(ಋ. ೮, ೪೨, ೩)

"ಭದ್ರಂ ನೋ ಅಪಿ ವಾತಯ ಮನೋ ದಕ್ಷಮುತ ಕ್ರತುಂ" ॥ *(ಋ. ೧೦, ೨೫, ೧)*

ಐತರೇಯ ಬ್ರಾಹ್ಮಣದಲ್ಲಿ ಇದರ ಭಾಷ್ಯ "ಕ್ರತುಂ ದಕ್ಷಂ ವರುಣ ಸಂಶಿಶಾಧೀತಿವೀರ್ಯಂ ಪ್ರಜ್ಞಾನಂ ವರುಣ ಸಂಶಿಶಾಧೀತ್ಯೇವ ತದಾಹ" (ಐ.ಬ್ರಾ. ೧, ೧೩, ೨೮). ಕ್ರತು ಎಂದರೆ ವೀರ್ಯ. ದಕ್ಷವೆಂದರೆ ಪ್ರಜ್ಞಾನವೆಂದಿದ್ದಾರೆ. ಅದರಂತೆ "ಸುತರ್ಮಾಣಮಧಿನಾವಂ ರುಹೇಮೇತಿ, ವಾಗ್ವೈ ಸುತರ್ಮಾ ನೌಃ ಯಜ್ಞೋವೈ ಸುತರ್ಮಾ ನೌಃ, ಕೃಷ್ಣಾಜಿನಂ ವೈ ಸುತರ್ಮಾ ನೌಃ" ಇತಿ, (ಐ.ಬ್ರಾ. ೧, ೧೩, ೨೮)

ಇಲ್ಲಿ ಸುತರ್ಮಾನೌಃ ಎಂದರೆ ಸುಲಭವಾಗಿ ದಾಟಿಸುವ ದೋಣಿ, ನಾವೆ. ಅದು ವಾಕ್ಕು ಯಜ್ಞ ಹಾಗೂ ಕೃಷ್ಣಾಜಿನವೆಂದಿದ್ದಾರೆ. ಈ ವಾಗ್ದೇವಿಯಲ್ಲಿ ಮೈತ್ರಾವರುಣ ಸತ್ವವೂ ಕಂಡು ಬರುತ್ತದೆ. ಇದಕ್ಕೆ –

"ಇಳಾಮಕೃಣ್ವನ್ ಮನುಷಸ್ಯ ಶಾಸನೀಂ" (ಋ. ೧, ೩೧, ೧೧)

"ಇಲಾSಸಿಮೈತ್ರಾವರುಣೀ" (ಬೃ.ಉ. ೬, ೪, ೨೮)

ಇಲ್ಲಿ ಕ್ರತು ದಕ್ಷ ಎಂಬುದು ಸಾಂಕೇತಿಕವಾಗಿ ಜ್ಞಾನಕ್ರಿಯಾ-ಶಕ್ತಿತತ್ವ ರೂಪವಾಗಿಯೂ, ಬ್ರಹ್ಮ-ಕ್ಷತ್ರ ತೇಜಸ್ಸುಳ್ಳವೂ ಮೈತ್ರಾವರುಣ ದೈವತ್ಯವೂ ಆಗಿದೆ. ಇದನ್ನು ಶತಪಥ ಬ್ರಾಹ್ಮಣದಲ್ಲಿ ಹೇಳಿದೆ. "ಕ್ರತು-ದಕ್ಷೌಹ ವಾ ಅಸ್ಯ ಮಿತ್ರಾವರುಣೌ- ಏತನ್ನ್ವಧ್ಯಾತ್ಮಂ-ಸ ಯದೇವ ಮನಸಾ ಕಾಮಯತೇ ಇದಂ ಮೇ ಸ್ಯಾದಿದಂ ಕುರ್ವೀಯೇತಿ ಸ ಏವ ಕ್ರತುಃ, ಅಥ ಯದಸ್ಮೈ ಸತ್ ಸಮೃಧ್ಯತೇ ಸ ದಕ್ಷಃ, ಮಿತ್ರ ಏವ ಕ್ರತುರ್ವರುಣೋ ದಕ್ಷೋ ಬ್ರಹ್ಮೈವ ಮಿತ್ರಃ ಕ್ಷತ್ರಂ ವರುಣಃ, ಅಭಿಗಂತ್ಯೆವ ಬ್ರಹ್ಮಕರ್ತಾ ಕ್ಷತ್ರಿಯಃ" (ಶ.ಪ.ಬ್ರಾ. ೪, ೧, ೪, ೧-೬) ಹೀಗೆ ಕ್ರತು ದಕ್ಷಗಳ ಯೋಗದಿಂದ ಎಲ್ಲ ಧ್ಯೇಯವೂ ಸಿದ್ಧಿಸುತ್ತದೆ. ಇದನ್ನೇ ಯಜುರ್ವೇದದಲ್ಲಿ–

ಸಂಶಿತಂ ಮೇ ಬ್ರಹ್ಮ ಸಂಶಿತಂ ವೀರ್ಯಂ ಬಲಂ । ಸಂಶಿತಂ ಕ್ಷತ್ರಂ ಮೇ ಜಿಷ್ಣು ಯಸ್ಯಾಹಮಸ್ಮಿ ಪುರೋಹಿತಃ ॥ (ತೈ.ಸಂ. ೪, ೧, ೧೦, ೩)

ಇದನ್ನು ಬ್ರಾಹ್ಮಣ ರೂಪವಾಗಿ–

"ಬ್ರಹ್ಮಣ್ಯೆವಕ್ಷತ್ರಂ ಸಂಸ್ಕೃತಿ ಕ್ಷತ್ರೇಣ ಬ್ರಹ್ಮ,
ತಸ್ಮಾದ್ ಬ್ರಾಹ್ಮಣೋ ರಾಜನ್ಯವಾನ್-ಅತ್ಯನ್ಯಬ್ರಾಹ್ಮಣಂ ।
ತಸ್ಮಾದ ರಾಜನ್ಯೋ ಬ್ರಾಹ್ಮಣವಾನ್ – ಅತ್ಯನ್ಯಂರಾಜನ್ಯಂ" (ತೈ.ಸಂ. ೫೧, ೧೦, ೩)

ಅಂದರೆ ನನ್ನಲ್ಲಿ ಬ್ರಹ್ಮತೇಜಸ್ಸು, ವೀರ್ಯಬಲ, ಇವೆಲ್ಲ ತೀಕ್ಷ್ಣವಾಗಿವೆ. ಹಾಗೆಯೇ ನಾನು ಯಾವ ರಾಜನ ಪುರೋಹಿತನಾಗಿರುವೆನೋ ಆ ರಾಜನೂ ಜಯಶೀಲನಾಗಿದ್ದಾನೆ. ಇದನ್ನೇ ಬ್ರಾಹ್ಮಣದಲ್ಲಿ ಜ್ಞಾನಪ್ರಧಾನನಾದ ವಿಪ್ರ, ಬಲ ಪ್ರಧಾನನಾದ ಕ್ಷತ್ರಿಯ, ಇವರಿಬ್ಬರೂ ಕೂಡಿದಾಗ ಶ್ರೇಷ್ಠವಾಗಿ ಎಲ್ಲವೂ ನಡೆಯುತ್ತದೆ. ಬುದ್ಧಿಯಿಂದ ಕೂಡಿದ ಬಲ, ಬಲದಿಂದ ಕೂಡಿದ ಬುದ್ಧಿ ಇದ್ದರೆ ಸರ್ವತ್ರ ಜಯವೆಂದೂ ಯಾವ ರಾಜ್ಯದಲ್ಲಿ ಬ್ರಹ್ಮ ಬಲವಿದೆಯೋ ಆ ರಾಜ್ಯ ಹಾಗೂ ಯಾವ ರಾಜ್ಯದಲ್ಲಿ ಕ್ಷತ್ರಿಯ ಬಲವಿದೆಯೋ ಆ ರಾಜ್ಯ ಬೆಳಗುತ್ತದೆ. ಹೀಗೆ ಬ್ರಾಹ್ಮಣನನ್ನು ಮುಂದಿಟ್ಟುಕೊಂಡ ಅಂದರೆ ಬುದ್ಧಿಗೆ ಪ್ರಾಧಾನ್ಯವಿರುವ ರಾಜ್ಯ ಶ್ರೇಷ್ಠವೆಂಬುದಕ್ಕೆ ಋಗ್ವೇದದಲ್ಲಿ–

"ಸ ಇದ್ರಾಜಾ ಪ್ರತಿಜನ್ಯಾನಿ ವಿಶ್ವಾ ಶುಷ್ಮೇಣ ತಸ್ಥಾವಭಿ ವೀರ್ಯೇಣ ।
ಬೃಹಸ್ಪತಿಂ ಯಃ ಸುಭೃತಂ ಬಿಭರ್ತಿ ವಲ್ಗೂಯತಿ ವಂದತೇ ಪೂರ್ವಭಾಜಂ ॥೧॥
ಸ ಇತ್ ಕ್ಷೇತಿ ಸುಧಿತ ಓಕಸಿ ಸ್ವೇ ತಸ್ಮಾ ಇಳಾ ಪಿನ್ವತೇ ವಿಶ್ವದಾನೀಂ ।
ತಸ್ಮೈ ವಿಶಃ ಸ್ವಯಮೇವಾ ನಮಂತೇ ಯಸ್ಮಿನ್ ಬ್ರಹ್ಮಾ ರಾಜನಿ ಪೂರ್ವ ಏತಿ ॥೨॥
ಅಪ್ರತೀತೋ ಜಯತಿ ಸಂ ಧನಾನಿ ಪ್ರತಿಜನ್ಯಾನ್ಯುತ ಯಾ ಸಜನ್ಯಾ ।
ಅವಸ್ಯವೇ ಯೋ ವರಿವಃ ಕೃಣೋತಿ ಬ್ರಹ್ಮಣೇ ರಾಜಾ ತಮವಂತಿ ದೇವಾಃ ॥

(ಋ. ೪, ೫೦, ೭-೯)

ಹೀಗೆ ಬ್ರಹ್ಮ-ಕ್ಷತ್ರ ತೇಜಸ್ಸು ಜ್ಞಾನ-ಕ್ರಿಯಾ ಸತ್ವಾತ್ಮಕವಾದ ಪ್ರತ್ಯಕ್ ಪರಾಗ್ವೃತ್ತಿಕ ಅಂತರ್ಯ-ಬಾಹ್ಯ ಅರ್ಥರೂಪವಾದ, ಬಾಹ್ಯ-ಅಂತರ್ಯಬಾಹ್ಯ ವಿಷಯಕವಾದ, ಆಧಿಭೌತಿಕ-ಆಧ್ಯಾತ್ಮಿಕ ತತ್ವಗಳಿಂದ ಕೂಡಿದ ಪ್ರಪಂಚ-ಪರಮಾರ್ಥ ಸತ್ವಕ, ಶ್ರೇಯಸ್ಸು ಹಾಗೂ ನಿಶ್ರೇಯಸಾತ್ಮಕವಾದದ್ದಾಗುತ್ತದೆ. ಈ ಯೋಗಕ್ಕೆ ಶಾಂಭವೀ ಮುದ್ರೆಯೆಂದು ಹೇಳುತ್ತಾರೆ.

"ಅಂತರ್ಲಕ್ಷ್ಯಂ ಬಹಿರ್ದೃಷ್ಟಿಮುದ್ರಾಸಾ ಶಾಂಭವೀ ಸ್ಮೃತಾ", ಇದಕ್ಕೇ ಸವ್ಯಸಾಚಿತ್ವ ವೆಂದು ಹೇಳುತ್ತಾರೆ. ಮಹಾಭಾರತದಲ್ಲಿ ನರವೀರನಾದ ಅರ್ಜುನನು ದ್ರೌಪದಿಯನ್ನು ಪಡೆಯಲು ಇಟ್ಟ ಸ್ಪರ್ಧೆಯಲ್ಲಿ ಅಧೋದೃಷ್ಟಿಯುಳ್ಳವನಾಗಿ ಊರ್ಧ್ವದಲ್ಲಿರುವ ಮತ್ಸ್ಯಕ್ಕೆ ಗುರಿಯಿಟ್ಟು ಬಾಣ ಹೊಡೆದು ಮತ್ಸ್ಯಭೇದ ಮಾಡಿದ್ದು, ಮಹಾಯುದ್ಧದಲ್ಲಿ ಯುಧಿಷ್ಠಿರನು ಧರ್ಮರಾಜ್ಯ ಪ್ರತಿಷ್ಠಾಪನೆ ಮಾಡಿದ್ದು, ಈ ಶಾಂಭವೀ ಮುದ್ರೆಯನ್ನು ತಿಳಿದಿದ್ದೇ ಕಾರಣವಾಗಿದೆ. ಇದಕ್ಕೆಲ್ಲ ಜ್ಞಾನ ಕ್ರಿಯಾ ಶಕ್ತಿಯುತ ಮೈತ್ರಾವರುಣ ಶಕ್ತಿಯೇ ಕಾರಣವಾಗಿದೆ. ಆದ್ದರಿಂದ ವಸಿಷ್ಠರೂ ಹಾಗೂ ಅಗಸ್ತ್ಯ ಮಹರ್ಷಿಗಳು ಮಿತ್ರ ಹಾಗೂ ವರುಣರಿಂದ ಹುಟ್ಟಿದ್ದಾರೆ. ಅದನ್ನು ಕಾತ್ಯಾಯನರು ತಮ್ಮ ಅನುಕ್ರಮಣಿಕೆಯಲ್ಲಿ,

"ಮಿತ್ರಾವರುಣಯೋರ್ದೀಕ್ಷಿತಯೋರುರ್ವಶೀಮಪ್ಸರಸಂ ದೃಷ್ಟ್ವಾ ವಾಸತೀವರೇ ಕುಂಭೇ ರೇತೋ ಪತತ್, ತತೋ ಗಸ್ತ್ಯ ವಸಿಷ್ಠಾವಜಾಯೇತಾಂ" ಎಂದಿದ್ದಾರೆ. ಯಜ್ಞದೀಕ್ಷಿತರಾದ ಮಿತ್ರ ಹಾಗೂ ವರುಣರಿಗೆ ಉರ್ವಶೀ ದರ್ಶನದಿಂದಾಗಿ ರೇತ ಸ್ಖಲನವಾಯಿತು. ಆ ರೇತಸ್ಸಿನಿಂದ ವಸಿಷ್ಠ ಹಾಗೂ ಅಗಸ್ತ್ಯರ ಉತ್ಪತ್ತಿಯಾಗಿದೆ. ಹಾಗಾಗಿ ಅವರಿಬ್ಬರನ್ನೂ ಮಿತ್ರವರುಣರ ಮಕ್ಕಳೆಂದು ಕರೆದಿದ್ದಾರೆ, ಮೈತ್ರಾವರುಣಿರಗಸ್ತ್ಯ, ಮೈತ್ರಾವರುಣಿರ್ವಸಿಷ್ಠಃ ಎಂದು, ಇದನ್ನು ಋಗ್ವೇದದಲ್ಲಿ–

"ವಿದ್ಯುತೋ ಜ್ಯೋತಿಃ ಪರಿ ಸಂಜಿಹಾನಂ ಮಿತ್ರಾವರುಣಾ ಯದಪಶ್ಯತಾಂ ತ್ವಾ ।
ತತ್ತೇ ಜನ್ಮೋತೈಕಂ ವಸಿಷ್ಠಾಽಗಸ್ತ್ಯೋ ಯತ್ವಾ ವಿಶ ಆಜಭಾರ ॥

(ಋ. ೭, ೩೩, ೧೦)

ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ ಮನಸೋಽಧಿ ಜಾತಃ ॥

(ಋ. ೭, ೩೩, ೧೧)

ಹೀಗೆಯೇ ವಿಶ್ವಾಮಿತ್ರಮಹರ್ಷಿಯೂ ಕೂಡಾ ಜನ್ಮದಿಂದ ರಾಜರ್ಷಿಯಾಗಿದ್ದು ಗಾಯತ್ರೀಮಹಾಮಂತ್ರ ದರ್ಶನದಿಂದ ತಪಸ್ಸಿನಿಂದ ಧೀಯೋಗದಿಂದಾಗಿ ಬ್ರಹ್ಮತ್ವವನ್ನು ಪಡೆದವನಾಗಿದ್ದಾನೆ.

ಕಾತ್ಯಾಯನರ ಅನುಕ್ರಮಣಿಕೆಯಲ್ಲಿ– "ಕುಶಿಕಸ್ತ್ವೈಷೀರಥಿರಿಂದ್ರತುಲ್ಯಂ ಪುತ್ರಮಿಚ್ಛನ್ ಬ್ರಹ್ಮಚರ್ಯಂ ಚಚಾರ. ತಸ್ಯೇಂದ್ರ ಏವ ಗಾಧೀಪುತ್ರೋ ಜಜ್ಞೇ ಗಾಧಿನೋವಿಶ್ವಾಮಿತ್ರಃ", ಎಂದಿದ್ದಾರೆ. ಅಂದರೆ ಇಷೀರಥರಾಜನ ಮಗನಾದ ಕುಶಿಕನು ಇಂದ್ರನಂಥ ಮಗನನ್ನು ಪಡೆಯಬೇಕೆಂದಿಚ್ಛಿಸಿ ಬ್ರಹ್ಮಚರ್ಯರೂಪವಾದ ತಪವನ್ನಾಚರಿಸಿದನು. ಆತನಿಗೆ ಇಂದ್ರನೇ ಗಾಧಿಯೆಂಬ ಮಗನಾಗಿ ಜನಿಸಿದ. ಆ ಗಾಥಿಯ ಮಗನೇ ವಿಶ್ವಾಮಿತ್ರ, ಮಹಾಮಂತ್ರವಾದ ಗಾಯತ್ರೀದರ್ಶಕ. ಅವನು ತನ್ನ ಮಂತ್ರದಲ್ಲಿ –

"ಅಗ್ನಿರಸ್ಮಿ ಜನ್ಮನಾ ಜಾತವೇದಾ ಘೃತಂ ಮೇ ಚಕ್ಷುರಮೃತಂ ಮ ಆಸನ್ ॥
ಅರ್ಕಸ್ತ್ರಿಧಾತೂ ರಜಸೋ ವಿಮಾನೋಽಜಸ್ರೋ ಘರ್ಮೋ ಹವಿರಸ್ಮಿ ನಾಮ ॥"

(ಋ. ೩, ೨೬, ೭)

"ಅಗ್ನಿರ್ಬ್ರಹ್ಮಾ ನೃಷದನೇ ವಿಧರ್ತಾ" (ಋ. ೭, ೭, ೫)

"ತ್ವಂ ಬ್ರಹ್ಮಾ ರಯಿವಿದ್ ಬ್ರಹ್ಮಣಸ್ಪತೇ" (ಋ. ೨, ೧, ೩)

ಇದನ್ನೇ "ಆಗ್ನೇಯ ಯೋ ವೈ ಬ್ರಾಹ್ಮಣಃ" ಹೀಗೆ ಬ್ರಾಹ್ಮಣ, ಬ್ರಾಹ್ಮಣನಿಗೆ ಜಾತವೇದ ಸತ್ವವೂ ಜ್ಞಾನಕ್ರಿಯಾಸಿದ್ಧಿಯೋಗದಿಂದಲೇ– "ತಸ್ಯ ಜಾತವೇದಸ್ತ್ವಂ ಚ ಜ್ಞಾನಕ್ರಿಯಾ-ಸತ್ವಯೋಗಸಿದ್ಧಮೇವ ಭವಿತುಮರ್ಹತಿ"

"ಜನ್ಮನ್‌ಜನ್ಮನ್ನಿಹಿತೋ ಜಾತವೇದಾಃ" (ಋ. ೩, ೧, ೨೧)

"ಯಜ್ಜಾತವೇದೋ ಭುವನಸ್ಯ ಮೂರ್ಧನ್ನತಿಷ್ಠೋ ಅಗ್ನೇ ಸಹ ರೋಚನೇನ"

(ಋ. ೧೦, ೮೮, ೫)

"ಜಾತವೇದಸೇ ಸುನವಾಮ ಸೋಮಂ" (ಋ. ೧, ೯೯, ೧)

ಇವೆಲ್ಲ ಮಂತ್ರಗಳಲ್ಲಿ ಈ ವಿಷಯ ತಿಳಿಸಿದೆ.

ಇದರಂತೆ ಪರಶುರಾಮನೂ ಸಹ ಬ್ರಹ್ಮ-ಕ್ಷತ್ರ ತೇಜಸ್ಸುಗಳಿಂದ ಹುಟ್ಟಿದ್ದಾನಷ್ಟೆ ? ಇದಕ್ಕೆ ದೇವೀಭಾಗವತದಲ್ಲಿ ಪಾಯಸದ ಪರಿವರ್ತನೆಯ ಕಥೆ ಪ್ರಸಿದ್ಧವಾಗಿದೆ.

ಶ್ರೀಭಾರ್ಗವರಾಮರ ಶಿಷ್ಯನಾದ ಭೀಷ್ಮಪಿತಾಮಹನ ವಿಷಯದಲ್ಲಿಯೂ ಇದು ಪ್ರಸಿದ್ಧ-ವಾಗಿದೆ.

"ಇದಂ ಬ್ರಾಹ್ಮಮಿದಂ ಕ್ಷಾತ್ರಂ ಶಾಪಾದಪಿ ಶರಾದಪಿ"

ಈ ಶಾಪವೆಂಬುದು ಬ್ರಾಹ್ಮಣಶಕ್ತಿ, ಶರವೆಂಬುದು ಕ್ಷತ್ರಿಯ ಶಕ್ತಿ, ಪರಶುರಾಮನಲ್ಲಿ ಶಾಪಶಕ್ತಿಯೂ ಇತ್ತು, ಶಸ್ತ್ರಾಸ್ತ್ರಗಳನ್ನು ಬಿಡುವ ಶಕ್ತಿಯೂ ಇತ್ತು. ಈ ಶಕ್ತಿ ಆತನ ಶಿಷ್ಯನಾದ ಭೀಷ್ಮ ಪಿತಾಮಹನಲ್ಲಿಯೂ ಇತ್ತೆಂದರ್ಥ.

ಇಲ್ಲಿ ಮಿತ್ರಾವರುಣರ ತಾತ್ವಿಕ ಶಕ್ತಿಯನ್ನು ನಿರೂಪಿಸವದು ಸೂಕ್ತವಾಗಿದೆ. ಮಿತ್ರಃ ಎಂದರೆ ಸೂರ್ಯ, ಇವನು ಜ್ಯೋತಿರ್ಮಯನೂ ಸರ್ವಲೋಕ ಪ್ರತ್ಯಕ್ಷನೂ ಸರ್ವಲೋಕ ಪ್ರಕಾಶಕನೆಂಬುದೂ ಪ್ರಸಿದ್ಧ.

"ಮಿತ್ರೋ ಜನಾನ್ ಯಾತಯತಿ ಬ್ರುವಾಣೋ ಮಿತ್ರೋ ದಾಧಾರ ಪೃಥಿವೀಮುತ ದ್ಯಾಂ
ಮಿತ್ರಃ ಕೃಷ್ಟೀರನಿಮಿಷಾಽಭಿ ಚಷ್ಟೇ ಮಿತ್ರಾಯ ಹವ್ಯಂ ಘೃತವಜ್ಜುಹೋತ"

(ಋ. ೩, ೫೯, ೧)

"ಮಿತ್ರೋ ಜನಾನ್ ಯಾತಯತಿ ಪ್ರಜಾನನ್ ।
ಸತ್ಯಾಯ ಹವ್ಯಂ ಘೃತವದ್ವಿಧೇಮ" (ತೈ.ಸ. ೩, ೪, ೧೧, ೫)

ಇಲ್ಲಿ "ಬ್ರುವಾಣಃ, ಪ್ರಜಾನನ್" ಎಂಬ ಎರಡು ವಿಶಿಷ್ಟವಾದ ಪದಗಳಿಂದ ನಿರ್ದಿಷ್ಟನಾದ ಮಿತ್ರನು ವಾಙ್ಮುಖದಿಂದ ಜ್ಞಾನಪ್ರಕಾಶಕನಾಗಿ ಸ್ವಯಂ ಜ್ಞಾನ ರೂಪನಾದ ಬ್ರಹ್ಮತೇಜೋ ರೂಪಿಯಾಗಿದ್ದಾನೆ. ಈತನು ಪ್ರಶಾಂತ ಕಿರಣರೂಪಿಯಾದ, ಉಷೋದೇವಿ-ಯೊಡನೆ ಕೂಡಿದ್ದಾನೆ. ಈ ಉಷೆಯೇ ಎಲ್ಲ ಜಗತ್ತುಗಳ ಸಂಜೀವನೀಯ ಜ್ಞಾನರಸ ಸತ್ವವಾಗಿದೆ.

"ವಿಶ್ವಸ್ಯ ಹಿ ಪ್ರಾಣನಂ ಜೀವನಂ ತ್ವೇ ವಿ ಯದುಚ್ಛಸಿ ಸೂನರಿ" (ಋ. ೧, ೪೮, ೧೦)

"ಏಕೈವೋಷಾಃ ಸರ್ವಮಿದಂ ವಿ ಭಾತಿ" (ಋ. ೧, ೫೮, ೨)

ವರುಣನು, ರಸಾಧಿಪತಿ, ರಸಾತ್ಮಾ ಬಲ ಹಾಗೂ ಪ್ರಾಣ ಸತ್ವಗಳಿಂದ ಕೂಡಿದ ಕ್ಷಾತ್ರತೇಜಸ್ಸಿನಿಂದ ಕೂಡಿದ ವೈದ್ಯುತ ತೇಜಸ್ಸಿನಿಂದ ಊರ್ಜಿತನಾದ ಈತ ವಿಶ್ವಾವರಣ-ರೂಪಿಯಾದ ರಾತ್ರಿ ದೇವಿಯಿಂದ ಕೂಡಿದವನಾಗಿ ವಿಶ್ವವನ್ನೆಲ್ಲಾ ಆವರಿಸುತ್ತಾನೆ. ಹೀಗೆ ಉಷಾ, ಹಾಗೂ ರಾತ್ರಿ ಇವರು ವಿಶ್ವಮಾತೃಗಳು. ವಿಶ್ವಕ್ಕೆ ತಾಯಿಯ ಸ್ಥಾನದಲ್ಲಿರುವವರು.

"ಉಷಾಸಾನಕ್ತಾ ಜಗತಾಮಪೀಜುವಾ" (ಋ. ೨, ೩೧, ೫)

"ನಕ್ತೋಷಾಸಾ ಸಮನಸಾ ವಿರೂಪೇ" (ಋ. ೧, ೧೧೩, ೩)

ಇವು ಶುಕ್ಲ-ಕೃಷ್ಣ ರೂಪವಾದ ಅಹೋರಾತ್ರಾತ್ಮಕವಾದ ಕಾಲಾತ್ಮಿಕವಾದವೂ ಅವುಗಳ ಅಧಿದೇವತವೂ ಆಗಿವೆ.

"ಅಹಶ್ಚ ಕೃಷ್ಣಮಹರರ್ಜುನಂ ಚ ವಿ ವರ್ತೇತೇ ರಜಸೀ ವೇದ್ಯಾಭಿಃ

(ಋ. ೬, ೯, ೧)

ಈ ತಾಯಿಯರು ಪರಸ್ಪರ ವಿರೂಪರಾಗಿ ದಿವ್ಯಸತ್ವವುಳ್ಳವರಾಗಿದ್ದಾರೆ. ಇದಕ್ಕೆ ಕುತ್ಸ ಋಷಿಯ ದರ್ಶನದಲ್ಲಿ–

"ದ್ವೇ ವಿರೂಪೇ ಚರತಃ ಸ್ವರ್ಥೇ ಅನ್ಯಾನ್ಯಾ ವತ್ಸಮುಪ ಧಾಪಯೇತೇ ।

ಹರಿರನ್ಯಸ್ಯಾಂ ಭವತಿ ಸ್ವಧಾವಾಂಛುಕ್ರೋ ಅನ್ಯಸ್ಯಾಂ ದದೃಶೇ ಸುವರ್ಚಾಃ ॥

(ಋ. ೧, ೯೫, ೧)

ಇದರರ್ಥ ಹೀಗಿದೆ. ಈ ಜಗತ್ತಿನ ಪ್ರಯೋಜನಕ್ಕಾಗಿ ಇದಕ್ಕೆ ಉತ್ತಮ ಫಲ ಕೊಡುವದಕ್ಕಾಗಿ ಶುಕ್ಲ-ಕೃಷ್ಣವೆಂಬ ವಿರುದ್ಧ ರೂಪವಾದ ಶಕ್ತಿಗಳು ಅಹೋರಾತ್ರ ದೇವತೆಗಳು ತಿರುಗುತ್ತ ತಮ್ಮ ತಮ್ಮ ಮಕ್ಕಳಿಗೆ ಸ್ತನಪಾನ ಮಾಡಿಸುತ್ತವೆ. ರಾತ್ರಿಯಿಂದ ಹುಟ್ಟಿದ ಸೂರ್ಯನಿಗೆ ಉಷಾದೇವಿಯೂ ಉಷಸ್ಸಿನಿಂದ ಉದಿತನಾದ ವರುಣನಿಗೆ ರಾತ್ರಿಯೂ ಸ್ತನಪಾನ ಮಾಡಿಸಿ ಬೆಳಸುತ್ತಾರೆ. ರಾತ್ರಿಯಲ್ಲಿ ಪ್ರತಿಷ್ಠಿತವಾದ ವರುಣನು ರಸವಂತನಾಗಿಯೂ ಹಗಲಿನಲ್ಲಿರುವ ಮಿತ್ರನು ತೇಜಸ್ವಿಯಾಗಿಯೂ ಪ್ರಕಾಶಯುಕ್ತನಾಗಿಯೂ ಕಾಣುತ್ತಾನೆ. ಇದು ಪ್ರತ್ಯಕ್ಷವಷ್ಟೆ ? ಇವರೇ ಸೂರ್ಯಚಂದ್ರರೂ ಹೌದು.

ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ ॥ (ಋ. ೧೦, ೧೯೦, ೧)

ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ ॥ (ಋ. ೧೦, ೧೯೦, ೨)

ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ॥

(ಋ. ೧೦, ೧೯೦, ೩)

ಆಧ್ಯಾತ್ಮಿಕವಾಗಿ ಇವರೇ ಚಕ್ಷುಸ್ಸು, ಮನಸ್ಸು ಎಂಬುದರ ಸತ್ವದಿಂದ ಕೂಡಿದವರಾಗಿ ಜ್ಞಾನ ಭಾವನೆಯಿಂದ ಕೂಡಿ ಕ್ರಿಯಾಶಕ್ತಿ ಪ್ರಧಾನವಾದ ವಾಕ್ಕನ್ನು ಸೇರಿರುತ್ತಾರೆ. ಆದ್ದರಿಂದ ವಾಕ್ ಎಂಬುದೂ ಮೈತ್ರಾವರುಣ ದೈವತಾಕವಾಗಿದೆ.

"ಇಳಾಸಿ ಮೈತ್ರಾವರುಣೀ" (ಬೃ.ಉ. ೬, ೪, ೨೮) ಇವರು ಚಕ್ಷುರ್ಮನಃ ಸಂಯೋಗ-ದಿಂದ ಸತ್ಯವಚನಕ್ಕೆ ಸಹಕಾರಿಗಳಾಗಿರುತ್ತಾರೆ. ಇದರಿಂದ ಯಜ್ಞ ತಪಸ್ಸು ಪರಮಯೋಗ ಹಾಗೂ ಎಲ್ಲಾ ವ್ಯವಹಾರಗಳೂ ಸಿದ್ಧಿಸುತ್ತವೆ.

ಈ ಯಜ್ಞ ವಿದ್ವಾಂಸರ ದೃಷ್ಟಿಯಿಂದ ಸಮಾನವಾಗಿದ್ದರೂ ಆಧ್ಯಾತ್ಮಿಕ ತತ್ವಗಳಿಂದ ಕೂಡಿದ . ಅಂತರ್ಯಜ್ಞವು ಹೊರಗಿನ ದ್ರವ್ಯಾದಿಗಳಿಂದ ಕೂಡಿದ ಬಾಹ್ಯಯಜ್ಞಕ್ಕೆ ಸಮಾನವಾಗಿದೆ. ಈ ಅಂತರ್ಯಜ್ಞವು ಅಂತರಂಗದ ಧೀಯೋಗದಿಂದ ಕೂಡಿದೆ. ಇದನ್ನೇ ಜ್ಞಾನಯಜ್ಞ, ಧ್ಯಾನಯಜ್ಞ, ವಿದ್ವದ್ಯಜ್ಞ, ಬ್ರಹ್ಮಯಜ್ಞ ಮುಂತಾಗಿ ಹೆಸರಿಸಿದ್ದಾರೆ.

ಈ ಎಲ್ಲ ಯಜ್ಞಗಳೂ ಧೀಯೋಗದಿಂದ ಸಾಧ್ಯ, ಇದನ್ನೇ ಮೇಧಾತಿಥಿ ಋಷಿ–

"ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।

ಸ ಧೀನಾಂ ಯೋಗಮಿನ್ವತಿ" ॥ (ಋ. ೧, ೧೮, ೭)

ಬ್ರಹ್ಮಣಸ್ಪತಿ ದೇವತೆಯ ಅನುಗ್ರಹದ ಹೊರತಾಗಿ ವಿದ್ವಾಂಸರಿಂದಲೂ ಯಾವ ಯಜ್ಞವನ್ನು ಮಾಡಲು ಸಾಧ್ಯವಿಲ್ಲ. ಅಂಥ ವೇದವಾಕ್ಯಕ್ಕೆ ಅಧಿಪತಿಯಾದ ಬ್ರಹ್ಮಣಸ್ಪತಿಯು ಮನಸ್ಸು, ಬುದ್ಧಿ, ನೇತ್ರ ಮೊದಲಾದ ಧೀಂದ್ರಿಯಗಳಿಗೆ ಪ್ರೇರಕನಾಗಿದ್ದಾನೆ.

"ನ ಋತೇ ತ್ವತ್ಕ್ರಿಯತೇ ಕಿಂ ಚನಾರೇ ಮಹಾಮರ್ಕಂ ಮಘವಂಚಿತ್ರಮರ್ಚ" ॥

(ಋ. ೧೦, ೧೧೨, ೯)

ನಿನ್ನನ್ನು ಬಿಟ್ಟು ಏನನ್ನೂ ಮಾಡಲಾಗುವದಿಲ್ಲ ಎಂದು ಮುಂತಾದ ಮಂತ್ರಗಳು ಸಮರ್ಥಿಸುತ್ತವೆ.

ಅಲ್ಲದೇ ಬ್ರಹ್ಮೋಪದೇಶಕ್ಕೆ ಯೋಗ್ಯವಾದ ಗಾಯತ್ರೀ ಮಂತ್ರವೂ ಸಹ ಇದನ್ನೇ ಸ್ಪಷ್ಟಪಡಿಸುತ್ತದೆ. ನಮ್ಮ ಬುದ್ಧಿಯನ್ನು ಪ್ರಚೋದಿಸುವ ಆ ಪವಿತ್ರ ದೇವನ ಶ್ರೇಷ್ಠವಾದ ತೇಜಸ್ಸನ್ನೂ ಧ್ಯಾನಿಸುತ್ತೇವೆ ಎಂದು ಇಲ್ಲಿ ಹೇಳಿದ ಜ್ಯೋತಿ ಧ್ಯಾನಾದಿ ಯಜ್ಞಗಳೂ ಆ ವಸ್ತುವಿನ ತತ್ವಜ್ಞಾನದಿಂದ ಸ್ಥಿರವಾದ ಧಾರಣಾಶಕ್ತಿ ಲಭ್ಯವಾಗಿ ಧೀ ಸಿದ್ಧಿ ಗಾಯತ್ರಿಯಿಂದಲೇ ಲಭ್ಯವಾಗುವದಾಗಿಯೂ ಆ ಬುದ್ಧಿಗಳು ಮಂತ್ರಯೋಗಾದಿ ಸರ್ವ ಸಾಧನೆಗಳನ್ನೇ ಅವಲಂಬಿಸಿದ್ದು ಜ್ಞಾನೇಂದ್ರಿಯ ರೂಪವಾಗಿಯೂ ತ್ರಿಕರಣಗಳಾದ ವಾಕ್ಕು, ಮನಃ, ಪ್ರಾಣಗಳ ಸಂವಿದ್ ಇಚ್ಛಾ, ಕೃತಿಗಳೆಂಬ ಶಕ್ತಿಗಳಾಗಿ ಜ್ಞಾನ, ಉಪಾಸನಾ, ಕರ್ಮ ಪರಕವಾಗಿ, ಜ್ಞಾನ, ಭಾವನಾ ಹಾಗೂ ಕ್ರಿಯಾ ಸತ್ವ ಪ್ರಧಾನವಾಗಿವೆ.

ಆ ಎಲ್ಲ ಧೀ ಶಕ್ತಿಗಳು ಚಿದಾತ್ಮನ ಬಾಹ್ಯ ಆಂತರ್ಯ ಮೊದಲಾದ ಸರ್ವವಿಷಯಗಳಿಗೆ ಸಾಧನವಾದ ಚೇತನಾತ್ಮಿಕ ಪರಾಶಕ್ತಿಯ ಮೂರು ಅಂಗಗಳಾಗಿವೆ. ಇದನ್ನು ಪತಂಗ ಋಷಿ–

ಪತಂಗೋ ವಾಚಂ ಮನಸಾ ಬಿಭರ್ತಿ ತಾಂ ಗಂಧರ್ವೋಽವದದ್ಗರ್ಭೇ ಅಂತಃ ।

ತಾಂ ದ್ಯೋತಮಾನಾಂ ಸ್ವರ್ಯಂ ಮನೀಷಾಮೃತಸ್ಯ ಪದೇ ಕವಯೋ ನಿ ಪಾಂತಿ ॥

(ಋ. ೧೦, ೧೭೭, ೨)

ಇಲ್ಲಿ ಗಂಧರ್ವಶಬ್ದವು ಪ್ರಾಣ ಬೋಧಕವಾಗಿದೆ, "ಗಂಧರ್ವೋ ನಾಮ ನಿಹಿತಂ ಗುಹಾಸು" (ನಾ.ಉ. ೨, ೪) "ಯತ್ ಕಿಂಚಾವಿಜ್ಞಾತಂ ಪ್ರಾಣಸ್ಯ ತದ್ರೂಪಂ ಪ್ರಾಣೋ ಹ್ಯವಿಜ್ಞಾತಃ" (ಬೃ.ಉ. ೧, ೫, ೧೦) ಪ್ರಾಣದ ಗುಹ್ಯರೂಪವನ್ನು ಹೇಳಲಾಯಿತು. ಆ ಪ್ರಾಣವು ಗಾಯಕನೆಂದು ಪ್ರಸಿದ್ಧವಾಗಿದೆ. "ಸಾ ಹೈಷಾ ಗಯಾಂಸ್ತತ್ರೇ ಪ್ರಾಣಾ ವೈ ಗಯಾಃ, ತದ್ ಯದ್ ಗಯಾಂಸ್ತತ್ರೇ ತಸ್ಮಾದ್ಗಾಯತ್ರೀನಾಮ" (ಬೃ.ಉ. ೫, ೧೪, ೪)

ಮಂತ್ರಾರ್ಥ ಹೀಗಿದೆ. ಪತಂಗಃ ಸರ್ವಾಂತರ್ಯಾಮಿಯೂ ಚೇತನವೂ ಆದ ಸೂರ್ಯನು ಶಬ್ದರೂಪಿಯಾದ ವಾಕ್ಕನ್ನು ಆಂತರ್ಯವಾದ ಮನಸ್ಸಿನಿಂದ ಧರಿಸಿದ್ದಾನೆ. ಆ ವಾಣಿಯನ್ನು ಗುಹ್ಯರೂಪದಿಂದಿರುವ ಪ್ರಾಣನು ಗಂಧರ್ವರೂಪಿಯಾಗಿ ಅಂತರ್ಹೃದಯದಲ್ಲಿ ಯಾವಾಗಲೂ ಅನುವದಿಸುತ್ತಿರುತ್ತಾನೆ. ಜ್ಞಾನ ಪ್ರಕಾಶನವಾದ ಆಕಾಶಗತವಾದ ಮನಃಪ್ರಚೋದಕವಾದ ಚೇತನಾತ್ಮಿಕವಾದ ವಾಕ್ಕನ್ನು ತಮ್ಮ ಸತ್ಯವಾದ ಹೃದಯಸ್ಥಾನದಲ್ಲಿ ಜ್ಞಾನಿಗಳು ರಕ್ಷಿಸುತ್ತಾರೆ. ಇದರಿಂದ ವಾಕ್-ಮನಃ-ಪ್ರಾಣವೆಂಬ ಮೂರು ಇಂದ್ರಿಯಗಳು ಸರ್ವ ವ್ಯವಹಾರ ಸಾಧನಗಳೆಂಬುದು ನಿಶ್ಚಿತವಾಗಿವೆ. ಇದಕ್ಕಾಗಿ ಇನ್ನೊಂದು ಮಂತ್ರ–

ಯಜ್ಜಾತವೇದೋ ಭುವನಸ್ಯ ಮೂರ್ಧನ್ನತಿಷ್ಠೋ ಅಗ್ನೇ ಸಹ ರೋಚನೇನ ।
ತಂ ತ್ವಾಹೇಮ ಮತಿಭಿರ್ಗೀರ್ಭಿರುಕ್ಥೈಃ ಸ ಯಜ್ಞಿಯೋ ಅಭವೋ ರೋದಸಿಪ್ರಾಃ ॥
(ಋ. ೧೦, ೮೮, ೫)

ಇದರರ್ಥ ಹೀಗೆ, ಆ ಜಾತವೇದಾ ಅಗ್ನಿಯನ್ನು ಉಕ್ಥೈಃ ಪ್ರಾಣದಿಂದ ಮನಸಾ ಮನಸ್ಸಿನಿಂದ ಮಾತಿನಿಂದಲೂ ಕರೆಯುತ್ತೇನೆ.

ಇಲ್ಲಿ ಉಕ್ಥ ಎಂಬ ಶಬ್ದವು ಪ್ರಾಣಬೋಧಕವಾಗಿದೆ. "ಉಕ್ಥಂ ಪ್ರಾಣೋ ವಾ ಉಕ್ಥಂ ಪ್ರಾಣೋ ಹೀದಂ ಸರ್ವಮುತ್ಥಾಪಯತಿ ಉದ್ಧಾಸ್ಮಾದುಕ್ಥವಿದ್ವೀರಸ್ತಿಷ್ಠತಿ" (ಬೃ.ಉ. ೫, ೧೩, ೧) ಈ ತ್ರಿಕರಣರೂಪ ಮೂರು ಧೀಸ್ವರೂಪವಾಗಿದ್ದು ತ್ರಯೀ (ಮೂರು ವೇದಗಳ) ಸ್ವರೂಪವಾಗಿವೆ.

"ಋಚಂ ವಾಚಂ ಪ್ರಪದ್ಯೇ ಮನೋಯಜುಃ
ಪ್ರಪದ್ಯೇ ಸಾಮ ಪ್ರಾಣಂ ಪ್ರಪದ್ಯೇ" (ಶು.ಯ.ಸಂ. ೩೬, ೧)

ಈ ಭೂತತ್ರಯಾತ್ಮಕ ಕರಣಗಳು ಮೂರು ದೇವತಾತ್ಮಕವಾಗಿ ಪ್ರಸಿದ್ಧವಾಗಿವೆ.

"ತಾ ಇಮಾಸ್ತಿಸ್ರೋ ದೇವತಾಃ", "ಅನ್ನಮಯಂ ಹಿ ಸೌಮ್ಯ ಮನಃ, ಆಪೋಮಯಃ ಪ್ರಾಣಃ ತೇಜೋಮಯೀ ವಾಕ್", (ಛಾಂ.ಉ. ೬, ೫, ೪)

ಹೀಗೆ ಆತ್ಮನಿಗೆ ಭೋಗ್ಯರೂಪವಾದ ಅನ್ನವೂ ಅಂಗಾತ್ಮಕವಾಗಿ ಕಾರಣತ್ರಯವಾಗಿದೆ.

"ಯತ್ ಸಪ್ತಾನ್ನಾನಿ ತಪಸಾ ಮೇಧಯಾ ಜನಯತ್ ಪಿತಾ....", ಎಂಬಲ್ಲಿ "ತ್ರೀಣ್ಯಾತ್ಮನೇಽಕುರುತ" "ಮನೋವಾಚಂ ಪ್ರಾಣಂ ತಾನ್ಯಾತ್ಮನೇಽಕುರುತ" "ಸ ವಾ ಅಯಮಾತ್ಮಾ ವಾಙ್ಮಯೋ ಮನೋಮಯಃ ಪ್ರಾಣಮಯಃ" (ಬೃ.ಉ. ೧, ೫, ೩) ಹೀಗೆ ಆತ್ಮನಿಗೆ ಕರಣತ್ರಯ ಯೋಗದಿಂದ ತನ್ಮಯತ್ವವನ್ನೂ ಹೇಳಲಾಗಿದೆ. ಆಮೇಲೆ ಇವೇ ಮೂರು ಕರಣಗಳಿಗೆ ಅಧಿಲೋಕ, ಅಧಿದೈವತ. ಅಧಿವಿದ್ಯ, ಅಧಿಪ್ರಜ, ಅಧ್ಯಾತ್ಮ, ಮೊದಲಾದವುಗಳ ಯೋಗದಿಂದ ಬೇರೆ ಬೇರೆಯಾಗಿ ಸ್ವರೂಪವನ್ನು ತಿಳಿಸಿದ್ದಾರೆ. "ತ್ರಯೋ ಲೋಕಾ ಏತ ಏವ, ವಾಗೇವಾಯಂ ಲೋಕಃ ಮನೋಽಂತರಿಕ್ಷಲೋಕಃ, ಪ್ರಾಣೋಽಸೌಲೋಕಃ, ತ್ರಯೋ ವೇದಾ ಏತ ಏವ, ವಾಗೇವ ದೇವಾಃ ಮನಃ ಪಿತಃ ಪ್ರಾಣೋ ಮನುಷ್ಯಾಃ, ಪಿತಾಮಾತಾಪ್ರಜಾ ಏತ ಏವ, ವಿಜ್ಞಾತಂ ವಿಜಿಜ್ಞಾಸ್ಯಮವಿಜ್ಞಾತಮೇತ ಏವ", (ಬೃ.ಉ. ೧, ೫, ೪-೮) ಹೀಗೆ ವಿಸ್ತರಿಸಿ ಹೇಳಿದ್ದಾರೆ.

ಹಾಗೆಯೇ ಅಧಿದೈವತ ತತ್ವದಲ್ಲಿ ಅಗ್ನಿಸೂರ್ಯಚಂದ್ರ ರೂಪರಾಗಿ ಸಮರ್ಥಿಸಿದ್ದು ಕಂಡು ಬರುತ್ತದೆ. ಒಂದೇ ಲಕ್ಷ್ಯದಲ್ಲಿ ಪದದಲ್ಲಿ ವಸ್ತುವಿನಲ್ಲಿ ಹಾಗೂ ಆತ್ಮನಲ್ಲಿ ವಾಙ್ಮನಃ ಪ್ರಾಣರೂಪಗಳ ಇಡುವಿಕೆಯೇ ಯೋಗ ಎನ್ನುವದು ಮೊದಲನೇ ಧೀಯೋಗ.

ಪಂಚಧೀಂದ್ರಿಯಯೋಗ :

ಈ ವಾಙ್ಮನಃ ಪ್ರಾಣಗಳೆಂಬ ಕರಣತ್ರಯಗಳೊಡನೆ ಶ್ರೋತ್ರ ಕಿವಿ ನೇತ್ರ, ಕಣ್ಣು ಇವುಗಳನ್ನು ಸೇರಿಸುವದರಿಂದ ಪಂಚಧೀಯ ಎಂದಾಗುತ್ತದೆ. ಈ ಐದು ಕರಣಗಳಲ್ಲಿ ಕೊನೆಯದಾದ ಶ್ರೋತ್ರನೇತ್ರಗಳು ನಾಮ ರೂಪಗಳಿಗೆ ಸಂಬಂಧವಾಗಿದ್ದು ಶ್ರವಣ-ದರ್ಶನಗಳಿಗೆ ಕ್ಲಪ್ತವಾಗಿವೆ.

"ಭ॒ದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭ॒ದ್ರಂ ಪ॑ಶ್ಯೇಮಾ॒ಕ್ಷಭಿರ್ಯಜತ್ರಾಃ"

(ಋ. ೧, ೮೯, ೮)

"ಆಕಾಶೋ ವೈನಾಮ ನಾಮರೂಪಯೋರ್ನಿರ್ವಹಿತಾ, ತೇ ಯದಂತರಾ ತದ್ಬ್ರಹ್ಮ" (ಛಾ.ಉ. ೮, ೧೪, ೧) ಹೀಗೆ ಉಪನಿಷದ್ವಚನ. ಅಸ್ಯ ಜಗತೋ ನಾಮರೂಪಾಭ್ಯಾಂ ವ್ಯಾಕೃತಸ್ಯ (ಬ್ರ.ಸೂ. ೧, ೧, ೨) ಶಾರೀರಕ ಭಾಷ್ಯದಲ್ಲಿ ಸ್ಪಷ್ಟವಾಗಿದೆ. "ತದೇತದ್ದೃಷ್ಟಂ ಚ ಶ್ರುತಂ ಚೇತ್ಯುಪಾಸೀತ ಚಕ್ಷುಷ್ಯಃ ಶ್ರುತೋ ಭವತಿ" (ಛಾ.ಉ. ೩, ೧೩, ೭), ಹೀಗೆ ಎಲ್ಲ ಕಡೆಗಳಲ್ಲಿ ನಾಮ-ರೂಪಗಳ, ಶ್ರವಣ ದರ್ಶನಗಳಿಗೆ ಶ್ರೋತ್ರ ಹಾಗೂ ನೇತ್ರಗಳೇ ಕಾರಣಗಳಾಗಿವೆ.

ಈ ಪಂಚವಿಧವಾದ ಧೀಂದ್ರಿಯಗಳು ಆಂತರ್ಯವಾದ ಜ್ಞಾನಯೋಗ, ಮಂತ್ರ ಯೋಗ, ಮುಖ್ಯ ಪ್ರಾಣೋಪಾಸನಾರೂಪವಾದ ತಪಸ್ಸುಗಳಲ್ಲಿ ಹಾಗೂ ಬಾಹ್ಯವಾದ ದ್ರವ್ಯ ಯಜ್ಞಾದಿಗಳಲ್ಲಿ ಪ್ರಧಾನಸಾಧನಗಳಾಗಿವೆ. ಇದನ್ನು ಋಙ್ಮಂತ್ರಗಳಲ್ಲಿ, ಬ್ರಾಹ್ಮಣಗಳಲ್ಲಿ ಆರಣ್ಯಕ ಹಾಗೂ ಉಪನಿಷತ್ತುಗಳಲ್ಲಿ ಬಹುವಾಗಿ ತಿಳಿಸಿದ್ದಾರೆ. ಈ ಬಗ್ಗೆ ಋಙ್ಮಂತ್ರ –

ವಿ ಮೇ ಕರ್ಣಾ ಪತಯತೋ ವಿ ಚಕ್ಷುರ್ವೀ೩ದಂ ಜ್ಯೋತಿರ್ಹೃದಯ ಆಹಿತಂ ಯತ್ ॥

ವಿ ಮೇ ಮನಶ್ಚರತಿ ದೂರಆಧೀಃ ಕಿಂ ಸ್ವಿದ್ ವಕ್ಷ್ಯಾಮಿ ಕಿಮು ನೂ ಮನಿಷ್ಯೇ ॥

(ಋ ೬, ೯, ೬)

ಇಲ್ಲಿ ಜ್ಯೋತಿಃ ಶಬ್ದವು ಪ್ರಾಣಬೋಧಕವಾಗಿದೆ.

"ಹೃದಯ ಆಹಿತಂ ಯತ್" ಎಂಬ ನಿದರ್ಶನದಿಂದ ಹೃದಯದಲ್ಲಿಟ್ಟಿದ್ದು ಮುಖ್ಯ-ಪ್ರಾಣಾತ್ಮಕ ಜೀವಾತ್ಮಕ ಹಾಗೂ ಅಂತರಾತ್ಮಸ್ವರೂಪವಾದ ಚೈತನ್ಯ ಜ್ಯೋತಿಯೇ ಸರಿ.

ಆ ಎಲ್ಲ ಸವಿಷಯ-ಸವೃತ್ತಿ ಚೈತನ್ಯ ಮೂಲ ಸತ್ವವಾದ ಧೀಂದ್ರಿಯಗಳ ಹಾಗೂ ಎಲ್ಲ ಭೂತಗಳ ಎಲ್ಲ ಜಗತ್ತುಗಳ ಅಧ್ಯಕ್ಷನಾದ ಪರಮಾತ್ಮನಿಂದ ಸಂವಿದ್-ಇಚ್ಛಾ-ಕೃತಿ, ಶ್ರುತಿ, ದೃಷ್ಟಿ ಮೊದಲಾದ ಶಕ್ತಿರೂಪಗಳಾದ ಧೀ ಸತ್ವಗಳಿಂದ ಸೋಮಸೂರ್ಯಾದಿ ದೇವತೆಗಳು ಹಾಗೂ ರಸತೇಜೋಮಯಾದಿ ಅವರ ಶರೀರ ರೂಪಗಳು ಸದ್ಭೂತಸತ್ವಗಳೂ ಆದಿ ಸೃಷ್ಟಿಯಲ್ಲಿ ಹುಟ್ಟಿದವು ಎಂದು ನಾರಾಯಣ ಋಷಿಯ ಮಂತ್ರದರ್ಶನದಲ್ಲಿ–

ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ ।

ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥

"ದಿಶಃ ಶ್ರೋತ್ರಾತ್, (ಋ ೧೦, ೯೦, ೧೩-೧೪) ಪುರುಷಸೂಕ್ತ

ಇದರ ಅನುವಾದ ರೂಪವಾದ ಉಪನಿಷದ್ವಚನಗಳೂ ಇವೆ.

೧. ಮುಖಾದ್ವಾಗ್, ವಾಚೋಗ್ನಿಃ ೨. ನಾಸಿಕಾಭ್ಯಾಂ ಪ್ರಾಣಃ ಪ್ರಾಣಾದ್ವಾಯುಃ ೩. ಅಕ್ಷೀಭ್ಯಾಂ ಚಕ್ಷುಃ, ಚಕ್ಷುಷ ಆದಿತ್ಯಃ ೪. ಕರ್ಣಾಭ್ಯಾಂ ಶ್ರೋತ್ರಂ ಶ್ರೋತ್ರಾದ್ದಿಶಃ ೫. ಹೃದಯಾನ್ಮನೋ ಮನಸಶ್ಚಂದ್ರಮಾಃ (ಐ.ಉ. ೧.೪)

ಹಾಗೆಯೇ ಆ ದೇವತಾತ್ಮರಾದ ಅಗ್ನಿ-ವಾಯು-ಸೂರ್ಯ-ದಿಗ್-ಚಂದ್ರಮಾ ಮೊದಲಾದ ಜ್ಯೋತಿರಸಾದಿ ಶರೀರವುಳ್ಳ ವಾಕ್ ಪ್ರಾಣಾದಿ ಧೀಂದ್ರಿಯ ಸತ್ವಗಳಿಂದ ಕೂಡಿದ ಆ ಇಂದ್ರಿಯಗಳಿಗೆ ಪ್ರೇರಕರಾಗಿ ಎಲ್ಲರ ಅಂತರಾತ್ಮಗಳ ಆ ಆ ಅಂಗಗಳಲ್ಲಿ ಪ್ರವೇಶಿಸುವದನ್ನೂ ಹೇಳಿದೆ.

"ಅಗ್ನಿರ್ವಾಗ್ಭೂತ್ವಾ ಮುಖಂ ಪ್ರಾವಿಶತ್, ವಾಯುಃ ಪ್ರಾಣೋ ಭೂತ್ವಾ ನಾಸಿಕೇ ಪ್ರಾವಿಶತ್, ಆದಿತ್ಯಶ್ಚಕ್ಷುರ್ಭೂತ್ವಾ ಅಕ್ಷಿಣೀ ಪ್ರಾವಿಶತ್, ದಿಶಃ ಶ್ರೋತ್ರಂ ಭೂತ್ವಾ ಕರ್ಣೌ ಪ್ರಾವಿಶನ್, ಚಂದ್ರಮಾ ಮನೋ ಭೂತ್ವಾ ಹೃದಯಂ ಪ್ರಾವಿಶತ್" (ಐ.ಉ. ೨, ೪)

ಈ ಎಲ್ಲ ಧೀಂದ್ರಿಯಗಳು ತತ್ತದ್ದೇವತಾ ಸಹಿತರಾಗಿ ಎಲ್ಲರ ಅಂತರಾತ್ಮದಲ್ಲಿ ದಿವ್ಯ ಸಂವಿತ್ಸತ್ವವಾಗಿರುತ್ತವೆ. ಇದು ಎಲ್ಲ ಧೀಗಳ ಸಾರಭೂತ ರಸದ ಸತ್ವವಿರುತ್ತದೆ. ಈ ಬಗ್ಗೆ ಮಂತ್ರದಲ್ಲಿ–

ಧ್ರುವಂ ಜ್ಯೋತಿರ್ನಿಹಿತಂ ದೃಶಯೇ ಕಂ ಮನೋ ಜವಿಷ್ಠಂ ಪತಯತ್ಸ್ವಂತಃ ।
ವಿಶ್ವೇ ದೇವಾಃ ಸಮನಸಃ ಸಕೇತಾ ಏಕಂ ಕ್ರತುಮಭಿ ವಿ ಯಂತಿ ಸಾಧು ॥

(ಋ. ೬, ೯, ೫)

ಅಚಲವೂ ಅಜರಾಮರವೂ ಆದ ಜ್ಯೋತಿಯು ಸುಖಾತ್ಮಕವಾದದ್ದಾಗಿ ನೋಡಲು ನಮ್ಮಲ್ಲಿ ಇಡಲಾಗಿದೆ. ಆ ಜ್ಯೋತಿಯು ಅಂತರಂಗದಲ್ಲಿರುವ ಎಲ್ಲ ಧೀಂದ್ರಿಯಗಳಲ್ಲಿ ಅತಿಸೂಕ್ಷ್ಮವಾಗಿಯೂ ಮನಸ್ಸಿಗಿಂತ ವೇಗವುಳ್ಳದ್ದಾಗಿಯೂ ಆಗಿದೆ. ಈ ಎಲ್ಲ ಧೀಂದ್ರಿಯಗಳ ದೇವತೆಗಳು ಒಟ್ಟಾಗಿ ಪ್ರಜ್ಞಾನವೊಂದನ್ನು ಸಂಪಾದಿಸುತ್ತಾರೆ. ಹೀಗೆ ಜ್ಞಾನೇಂದ್ರಿಯಗಳು ತಮ್ಮ ವಿಷಯಗಳು ಬೇರೆಯಾಗಿದ್ದರೂ ಅದರಿಂದ ಉಂಟಾದ ಜ್ಞಾನ ಒಂದೇ ವಿಧವಾಗಿದೆ. ಎಲ್ಲ ಜ್ಞಾನೇಂದ್ರಿಯಗಳ ಅಧ್ಯಕ್ಷನಾದ ಅಂತರಾತ್ಮನೊಬ್ಬನಿಗಾಗಿಯೇ ಇದ್ದ ಆ ಎಲ್ಲ ಜ್ಞಾನೇಂದ್ರಿಯಗಳಿಂದ ಉಂಟಾದ ಜ್ಞಾನಗಳು ಅಂತರಾತ್ಮನಲ್ಲಿ ಐಕ್ಯವಾಗುವವು. ಇದನ್ನೇ ಜ್ಞಾನೇಂದ್ರಿಯಗಳ ಯೋಗ ಅಥವಾ ಸಮತ್ವ ಎನ್ನುತ್ತಾರೆ.

"ಸಮತ್ವಂ ಯೋಗ ಉಚ್ಯತೇ" (ಭ.ಗೀ. ೨, ೪೮) ಯೋಗದಿಂದ ಸ್ವಯಂ ಅಂತರಾತ್ಮನು ಉದಯಿಸುತ್ತಾನೆ ಎಂಬುದನ್ನು ಹಿಂದೆ ಹೇಳಿದೆ. "ಸಧೀನಾಂ ಯೋಗಮಿನ್ವತಿ" (ಋ. ೧, ೧೦, ೭) ಈ ಧೀಂದ್ರಿಯಗಳ ಆ ರೀತಿಯಾದ ಯೋಗವು ಅನ್ವಯ ಹಾಗೂ ವ್ಯತಿರೇಕದಿಂದಾಗುತ್ತದೆ. ಆ ಆ ಲಕ್ಷ್ಯಗಳುಳ್ಳ ಶಬ್ದಾದಿಗಳಲ್ಲಿ ಜ್ಞಾನೇಂದ್ರಿಯ ವಿಷಯಗಳಲ್ಲಿ ಪ್ರವೃತ್ತಿಯಿಂದ ಸಮನ್ವಯವಾಗುತ್ತವೆ. ಹಾಗೆಯೇ ಅವುಗಳ ನಿವೃತ್ತಿಯಿಂದ ವ್ಯತಿರೇಕವಾಗುತ್ತವೆ. ಈ ಅರ್ಥದಲ್ಲಿ ಅಧ್ಯಾತ್ಮ ವಿದ್ಯಾತತ್ತ್ವವನ್ನು ಉಪನಿಷತ್ತು–

"ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ॥
ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥

(ಕೇ.ಉ. ೧, ೧)

ಇಲ್ಲಿ ಕೇನ ಯಾವನಿಂದ, ಕಃ ಎಂಬ ಪದವು ಪ್ರಶ್ನಾರ್ಥಕವಾಗಿದೆ. ಇದು ಪ್ರಜಾಪತಿಶಬ್ದ ಬೋಧಕವೂ ಬ್ರಹ್ಮಾರ್ಥಕವೂ ಆಗಿದೆ. ಕಿಂ ಎಂಬ ಪದವು ಲೋಕದಲ್ಲಿ ಪ್ರಶ್ನಾರ್ಥಕವಾಗಿದೆ. ವೇದದಲ್ಲಿ–

"ಕಸ್ಮೈ ದೇವಾಯ ಹವಿಷಾ ವಿಧೇಮ" (ಋ. ೧೦, ೧೨೧, ೧-೯)

"ಕಸ್ಯ ನೂನಂ ಕತಮಸ್ಯಾಮೃತಾನಾಂ" (ಋ. ೧, ೨೪, ೧)

ಇಲ್ಲಿ ಕಃ ಎಂಬ ಶಬ್ದವು ಪ್ರಜಾಪತಿ ಬೋಧಕವಾಗಿದೆ. ಕೋ ವೈ ನಾಮ ಪ್ರಜಾಪತಿಃ, "ಸ ಪ್ರಜಾಪತಿಮೇವ ಪ್ರಥಮಂ ಉಪಸಸಾರ ಕಸ್ಯನೂನಂ ಕತಮಸ್ಯಾಮೃತಾನಾಮಿತಿ (ಐ.ಬ್ರಾ. ೭, ೧೬, ೩) ಅದರಂತೆ ಉಪನಿಷತ್ತಿನಲ್ಲಿ ಕಃ ಶಬ್ದವು ಬ್ರಹ್ಮ ಬೋಧಕವಾಗಿದೆ. "ಕಂ ಬ್ರಹ್ಮ ಖಂ

ಬ್ರಹ್ಮ ಯದ್ವಾಕಂ ತದೇವ ಖಂ ಯದೇವ ಖಂ ತದೇವ ಕಮಿತಿ" (ಛಾಂ.ಉ. ೪, ೧೦, ೪-೫)
"ಓಂಖಂಬ್ರಹ್ಮ" (ಶು.ಯ.ಸಂ. ೪೦)

ಇಲ್ಲಿ ಧೀ ಎಂಬುದೇ ವೃತ್ತಿ ಲಕ್ಷ್ಯಾದಿ ಸಮನ್ವಯದಿಂದ ಧೀಯೋಗವೆನಿಸುತ್ತದೆ. ಅಲ್ಲಿಯೇ ಹಿಂದೆ ಹೇಳಿದ ಐದು ಜ್ಞಾನೇಂದ್ರಿಯಗಳ ನಿರ್ದೇಶವು ಪ್ರತ್ಯಕ್ಷವಾಗಿದೆ. ಹಾಗೂ ಅಲ್ಲೇ ವ್ಯತಿರೇಕ ಮುಖವಾಗಿ ಅದರ ನಿವೃತ್ತಿ ಯೋಗವೂ ಹೇಳಲ್ಪಟ್ಟಿದೆ.

"ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ । ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ (ಕೇ.ಉ. ೧, ೨) ಇಲ್ಲಿ ವ್ಯತಿರೇಕದಿಂದಾಗಿ ಅವೇ ವಿಷಯಗಳಿಂದಲೇ ಜ್ಞಾನೇಂದ್ರಿಯಗಳ ನಿವೃತ್ತಿಯಿಂದಾಗಿ ಆತ್ಮನಲ್ಲಿ ನೆಲೆಸಿರುವದರಿಂದ ಒಂದು ಯೋಗವು ಕಂಡು ಬರುತ್ತದೆ. ಅದರ ಸ್ಪಷ್ಟವಾದ ರೀತಿ ಹೀಗಿದೆ– "ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನೋ ನ ವಿದ್ಮೋ ನ ವಿಜಾನೀಮಃ ಯಥೈತದನುಶಿಷ್ಯಾತ್ ॥ ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ । ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ॥ (ಕೇನೋ.ಪ. ೧, ೩-೪)

ಅದರಡೇ ಅನಿರ್ವಚನೀಯವಾದ ಹಾಗೂ ಅನುಪಾಸನೀಯವಾದ ವಿಷಯವನ್ನು ಹೀಗೆ ತಿಳಿಸಿದೆ.

ಯದ್ವಾಚಾಽನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥
ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ ।
ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ॥
ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂಶ್ರುತಂ ।
ಯತ್ ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ (ಕಂ.ಉ. ೧, ೫-೮)

ಹೀಗೆ ವಾಙ್ಮನಃ ಚಕ್ಷು ಶ್ರೋತ್ರ, ಪ್ರಾಣರೂಪವಾದ ಪಂಚಜ್ಞಾನೇಂದ್ರಿಯಗಳ ಪ್ರವೃತ್ತಿ, ನಿವೃತ್ತಿ, ನಿಷ್ಠಾ ಎಂಬ ಮೂರು ರೂಪವಾದ ಧೀಯೋಗವು ಆಧ್ಯಾತ್ಮಿಕ ಪಾರಮಾರ್ಥಿಕ ಸತ್ವದಿಂದ ಕೂಡಿದ್ದು ಎಲ್ಲಾ ಯೋಗಗಳಿಗೂ ವಿಶಿಷ್ಟವಾದದ್ದಾಗಿದೆ.

"ಭೃಗುರ್ವೈ ವಾರುಣಿಃ, । ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ ।
ತಸ್ಮಾ ಏತತ್ ಪ್ರೋವಾಚ–ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಮಿತಿ ॥
(ತೈತ್ತಿ. ೩, ೧, ೧)

ಭೃಗುಮಹರ್ಷಿಯು ತಂದೆಯಾದ ವರುಣನನ್ನು ಬ್ರಹ್ಮೋಪದೇಶಕ್ಕಾಗಿ ಪ್ರಾರ್ಥಿಸಿದಾಗ ಬ್ರಹ್ಮವಸ್ತುವನ್ನು ಉಪದೇಶಿಸುತ್ತ ಮೊದಲು ಅದಕ್ಕೆ ಸಾಧನಗಳಾದ ಇಂದ್ರಿಯ ಪಂಚಕಗಳ ತತ್ವವನ್ನು ತಿಳಿಸಿದನು.

ಅನ್ನವು ಆ ಪ್ರಾಣಾದಿಗಳ ಜೀವನಾಧಾರಭೂತವಾದ ವಸ್ತು ಸಮೂಹವಾಗಿದೆ. ಇಂದ್ರಿಯದಲ್ಲಿ, "ಸ ಏಷೋಽಹಃ ಸಂಮಾನಶ್ಚಕ್ಷುರ್ಮಯಃ ಶ್ರೋತ್ರಮಯಶ್ಛಂದೋಯಯೋ ಮನೋಮಯೋ ವಾಙ್ಮಯ ಆತ್ಮಾ" (ಐ.ಆ. ೩, ೨, ೧) ಚಿದಾತ್ಮನಿಗೆ ಇಂದ್ರಿಯಗಳನ್ನು ಅವಲಂಬಿಸಿರುವದರಿಂದ ತನ್ಮಯ ಎಂದು ಹೇಳಲಾಗಿದೆ.

"ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ" (ಭ.ಗೀ. ೧೩, ೭)

"ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ ।
ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರು ಮೋತ್ಕ್ರಮೀಃ ॥ (ಪ್ರಶ್ನೋ. ೨, ೧೨)

ಪ್ರಾಣಸ್ಯೇದಂ ವಶೇ ಸರ್ವಂ, ವಾಚಾದಿ ಪಂಚೇಂದ್ರಿಯಗಳ ನಿರ್ದೇಶದಿಂದ ಪ್ರಾಣಕ್ಕೇ ಪ್ರಾಧಾನ್ಯವನ್ನು ಉಪದೇಶಿಸಿದ್ದಾರೆ.

"ಏವಂ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ" (ಪ್ರ. ೨, ೪)

ಹೀಗೆ ಈ ಧೀಂದ್ರಿಯಗಳಿಗೆ ಬ್ರಹ್ಮಗಿರಿ ರೂಪವನ್ನು ಹೇಳಿದ್ದಾರೆ. ಬ್ರಹ್ಮಾತ್ಮ ಜ್ಞಾನದಲ್ಲಿ ಅದರ ಉಪಾಸನಾರೂಪ ಭಕ್ತಿ ಭಾವನೆಯಲ್ಲಿ ಹಾಗೂ ಅದರ ಸಾಕ್ಷಾತ್ಕಾರದಲ್ಲಿ ಆಶ್ರಯೀಭೂತವಾಗಿರುವದರಿಂದಲೂ ಶ್ರೇಯೋ ನಿಶ್ರೇಯಸಾದಿ ಸಂಪತ್ಸಾಧನಗಳಾಗಿರುವದ ರಿಂದಲೂ ಶ್ರೇಷ್ಠವಾದ ಶ್ರೀರೂಪತ್ವವನ್ನೂ ಹೇಳಿದ್ದಾರೆ.

"ತದೇತದ್‌ಬ್ರಹ್ಮಗಿರಿರಿತ್ಯಾಚಕ್ಷತೇ" (ಐ.ಆ. ೨, ೧, ೮)

"ತಾ ಏತಾಃ ಶೀರ್ಷಂಛ್ರಿಯಃ ಶ್ರಿತಾಃ" (ಐ. ೨, ೧, ೪)

ಈ ಐದು ಇಂದ್ರಿಯಗಳಿಗೆ ಪ್ರಾಣವೆಂಬ ಸಂಜ್ಞೆಯೂ ಇದೆ. (ಅದು ಮುಖ್ಯಪ್ರಾಣ ಸತ್ವದಿಂದಾಗಿ) ಪ್ರಾಣವು ಪ್ರಧಾನವಾಗಿ ಪ್ರಾಣ್ಯೈಕವೃತ್ತಿ ಪ್ರಕೃತಿ ಪ್ರವೃತ್ತಿ ಮೊದಲಾದ ಚಿದ್ಯೋಗದಿಂದಾಗಿ ಹೇಳಿದ್ದಾರೆಂದೂ ಊಹಿಸಬಹುದು.

"ನ ವೈ ವಾಚೋ ನ ಚಕ್ಷೂಂಷಿ ನ ಶ್ರೋತ್ರಾಣಿ ನ ಮನಾಂಸಿ ಇತ್ಯಾಚಕ್ಷತೇ ಪ್ರಾಣಾ ಇತ್ಯೇವಾಽಽಚಕ್ಷತೇ, ಪ್ರಾಣೋ ಹ್ಯೇವೈತಾನಿ ಭವಂತಿ" (ಛಾಂ.ಉ. ೫, ೧, ೧೫) "ಯತ್ರೈಕಶ್ಚಿದ-ಬ್ರವೀತ್" (ಬೃ.ಉ. ೪, ೧, ೧-೬) ಎಂಬಲ್ಲಿ ವಾಗಾದಿ ಐದು ಜ್ಞಾನೇಂದ್ರಿಯಗಳಿಗೆ ಬ್ರಹ್ಮತ್ವ-ವನ್ನು ಪ್ರತಿಪಾದಿಸಿದ್ದಾರೆ. "ವಾಗೇವ ಪ್ರಜ್ಞಾ, ಪ್ರಾಣ ಏವ ಪ್ರಿಯಃ ಚಕ್ಷುಃ ಸತ್ಯಂ, ಶ್ರೋತ್ರಂ ಅನಂತಂ, ಮನಃ ಆನಂದಃ", ಹೀಗೆ ಅವುಗಳ ಪ್ರಜ್ಞಾದಿ ಗುಣಗಳಿಂದಾಗಿ ಉಪಾಸ್ಯತ್ವವನ್ನು ಉಪದೇಶಿಸಿದ್ದಾರೆ. ಈ ಐದರ ಪ್ರತಿಷ್ಠೆಗೆ ಯೋಗ್ಯವಾದದ್ದು ಹೃದಯವೆಂದು ನಿರ್ದೇಶಿಸಿ ಅದರ ಸ್ಥಿತಿ ರೂಪವನ್ನೂ ವರ್ಣಿಸಿದ್ದಾರೆ. "ಏತೇನ ತತ್ರ ಪಂಚಧೀಯೋಗಃ ತತ್ ಪ್ರಕ್ರಿಯಾ ಚ ಗಮ್ಯತೇ" ॥

"ಮನೋ ಬ್ರಹ್ಮೇತ್ಯುಪಾಸೀತ, ಇತ್ಯಧ್ಯಾತ್ಮಂ" (ಛಾಂ.ಉ. ೪, ೧೮, ೧) ಇಲ್ಲಿ ಮನಸ್ಸನ್ನು ಬ್ರಹ್ಮರೂಪವಾಗಿ ಉಪಾಸಿಸಲು ಹೇಳಿ ಆ ಬ್ರಹ್ಮನಿಗೆ– "ವಾಕ್ ಪ್ರಾಣಾಃ, ಚಕ್ಷುಃ ಶ್ರೋತ್ರಂಚ"

ಎಂದು ನಾಲ್ಕು ಪಾದಗಳನ್ನು ತೋರಿಸಿದ್ದಾರೆ. ಅವುಗಳ ಅಧಿದೇವತವನ್ನೂ ಹೇಳಿದ್ದಾರೆ. "ಅಗ್ನಿಃ, ವಾಯುಃ, ಆದಿತ್ಯಃ, ದಿಶಶ್ಚ" ಎಂದು ಮನಸ್ಸಿಗೆ ಮಾತ್ರ ಎಲ್ಲೆಡೆ ಸೋಮನನ್ನೇ ಹೇಳಿದ್ದಾರೆ. "ಚಂದ್ರಮಾ ಮನಸೋಜಾತಃ" ಎಂಬುದರ ವಿವರಣವಾಗಿದೆ.

ಅಂತರ್ಯಾಮಿಣಂ ಬ್ರಹ್ಮ (ಬೃ.ಉ. ೩, ೭, ೧)

ಅಥಾಧ್ಯಾತ್ಮಂ "ಯಃ ಪ್ರಾಣೇ ತಿಷ್ಠನ್ ಪ್ರಾಣಾಭ್ಯಂತರೋ ಯಂ ಪ್ರಾಣೋ ನ ವೇದ ಯಸ್ಯ ಪ್ರಾಣಃ ಶರೀರಂ ಯಃ ಪ್ರಾಣಮಂತರೋ ಯಮಯತಿ ಏಷ ತ ಆತ್ಮಾಽಂತರ್ಯಾಮ್ಯಮೃತಃ" । (ಬೃ.ಉ. ೩, ೭, ೧೬-೨೦) ಹೀಗೆ ಪ್ರಾಣಾದಿ ಪಂಚೇಂದ್ರಿಯಗಳಿಗೆ ಅಂತರ್ಯಾಮಿ ರೂಪಿಯಾಗಿ ಆತ್ಮನನ್ನು ನಿರ್ದೇಶಿಸಿದ್ದರಿಂದ ಅಲ್ಲಿಯೂ ಪಂಚಧೀಯೋಗವನ್ನು ವ್ಯತಿರೇಕವಾಗಿ ಹೇಳಿದಂತಾಯಿತು.

ಅಂತೆಯೇ ಕರ್ಮಕಾಂಡದ ಯಜ್ಞಕಲ್ಪದಲ್ಲಿ ಶ್ರೋತ್ರಿಯರ ಸೋಮಯಾಗಾದಿ ವಿಕೃತಿಯಜ್ಞಗಳಲ್ಲಿ ಹೋತೃವೆಂಬ ಋತ್ವಿಜನು ಹೇಳುವ ಶಸ್ತ್ರಮಂತ್ರಗಳಲ್ಲಿ–

"ಪ್ರ ವೋ ದೇವಾಯಾಗ್ನಯೇ" (ಋ. ೩, ೧೩, ೧) ಎಂಬ ಸೂಕ್ತ ಮಂತ್ರಗಳ ವಿನಿಯೋಗವನ್ನು, ಆ ಶ್ರೇತಯಾಗ (ದ್ರವ್ಯಮಯವಾದ ಬಾಹ್ಯಯಜ್ಞ)ದಲ್ಲಿಯೂ ಕೂಡ ಬ್ರಾಹ್ಮಣ ಗ್ರಂಥದಲ್ಲಿ ಈ ಪ್ರಾಣಾದಿ ಅಂತರ್ಯಧೀಯೋಗವನ್ನು ಹೇಳಿ ಅವುಗಳ ವಿನಿಯೋಗವನ್ನು ಹೇಳಿದೆ.

"ಪ್ರ ವೋ ದೇವಾಯಾಗ್ನಯ ಇತಿ ಶಂಸತಿ ಪ್ರಾಣೋವೈ ಪ್ರ" । (ಐ.ಬ್ರಾ. ೨, ೪೦)

(ಪ್ರ ವೋ ದೇವಾಯಾಗ್ನಯೇ, ಋ. ೩, ೧೩, ೧)

"ಋತಾವಾ ಯಸ್ಯ ರೋದಸೀ ಇತಿ ಶಂಸತಿ ಚಕ್ಷುರ್ವೈ ಋತಂ" (ಐ.ಬ್ರಾ. ೨.)

"ಸ ಯಂತಾ ವಿಪ್ರ ಏಷಾಮಿತಿ ಶಂಸತಿ ಅಪಾನೋ ವೈ ಯಂತಾ ಅಪಾನೇನ ಹ್ಯಯಂ ಯತಃ ಪ್ರಾಣೋ ನ ಪರಾಙ್ಭವತಿ"

"ಸ ನಃ ಶರ್ಮಾಣಿ ವೀತಯ ಇತಿ ಶಂಸತಿ ವಾಗ್ವೈ ಶರ್ಮ"

"ದೀದಿವಾಂಸಮಪೂರ್ವ್ಯಮಿತಿ ಶಂಸತಿ ಮನೋ ವೈ ದೀದಾಯ ಮನಸೋ ಹಿ ನ ಕಿಂಚಿತ್ ಪೂರ್ವ್ಯಮಸ್ತಿ" (ಐ.ಬ್ರಾ. ೫)

"ಉತ ನೋ ಬ್ರಹ್ಮನ್ನವಿಷ ಇತಿ ಶಂಸತಿ ಶ್ರೋತ್ರಂ ವೈ ಬ್ರಹ್ಮಶ್ರೋತ್ರೇಣ ಹಿ ಬ್ರಹ್ಮ ಶೃಣೋತಿ" । (ಋ. ೩, ೧೩, ೩-೬) ಹೀಗೆ ವಿದ್ವದ್ಯಜ್ಞದಲ್ಲಿಯೂ ಆಧ್ಯಾತ್ಮಿಕದಲ್ಲಿಯೂ ಧೀ ಯೋಗ ಸಮಾನವಾಗಿದೆ. ಅಲ್ಲಿ ವಾಗಾದಿ ಪಂಚ ಜ್ಞಾನೇಂದ್ರಿಯಗಳನ್ನು ಹೋತ್ರಾದಿ ಋತ್ವಿಕ್ಕುಗಳನ್ನಾಗಿ ವರ್ಣಿಸಿದ್ದಾರೆ. ಋತ್ವಿಜರಿಂದ ಆ ಯಜ್ಞ ಸಿದ್ಧಿಸುತ್ತಿದೆಯಾದ್ದರಿಂದ ಆ ಬಗ್ಗೆ ಮಂತ್ರ,

"ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು ॥
ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿ ಮಿಮೀತ ಉ ತ್ವಃ ॥"

(ಋ. ೧೦, ೭೧, ೧೧)

ದ್ರವ್ಯ ಯಜ್ಞದಲ್ಲಿ ಋಕ್ ಯಜುಃ ಸಾಮವೇದಗಳಿಂದ ಯಜ್ಞ ನಡೆಸುವ ಋತ್ವಿಜರ ಸಹಯೋಗದಿಂದ ಯಜ್ಞ ಪೂರ್ತಿಯಾಗುತ್ತದೆ. ಆ ಹೋತ್ರಾದಿಗಳಿಗೆ ವಾಕ್ ಮೊದಲಾದ ಇಂದ್ರಿಯಾತ್ಮಕತೆಯನ್ನೂ ಆ ಯಜ್ಞೀಯ ದೇವತೆಗಳ ಸ್ವರೂಪವನ್ನೂ ಹೇಳಿದ್ದು ಅಧ್ಯಾತ್ಮ ತತ್ವಬೋಧಕವಾದ ಬ್ರಾಹ್ಮಣ ವಚನವು ಸುಪ್ರಸಿದ್ಧವಾಗಿದೆ. ವಿದ್ವದ್ಯಜ್ಞ ಸ್ವರೂಪ ತತ್ವವನ್ನು ತಿಳಿಸುವಂಥ ಧೀಯೋಗ ಸಾಧಕ ಮಂತ್ರ– "ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾ ಪತ್ನೀ" ಇತ್ಯಾದಿಯಾಗಿ–

"ವಾಗ್ಘೋತಾ ಪ್ರಾಣ ಉದ್ಗಾತಾ ಚಕ್ಷುರಧ್ವರ್ಯುಃ ಮನೋಬ್ರಹ್ಮಾ ಶ್ರೋತ್ರಮಗ್ನೀ-ದ್ಯಾವದ್ಧ್ರಿಯತೇ ಸಾ ದೀಕ್ಷಾ" (ಮಹಾ.ನಾಂ.ಉ. ೨೫-೧) ಈ ಆಧ್ಯಾತ್ಮಿಕ ವಿದ್ವದ್ಯಜ್ಞದಲ್ಲಿ ಯಜಮಾನ ಪತ್ನೀ ಮುಂತಾದವರೆಲ್ಲ ಆಧ್ಯಾತ್ಮಿಕರೇ. ದಿವ್ಯಸತ್ವಗಳಿಂದ ಕೂಡಿ ಅಗ್ನ್ಯಾದಿ ದೇವತಾವಿಶೇಷರಿಂದ ಕೂಡಿದವರಾಗಿ ಅವರಿಂದ ಪ್ರೇರಿತರಾಗಿ ಎಲ್ಲ ಯಜ್ಞವನ್ನೂ ಸಾಗಿಸುತ್ತಾರೆ. ಸಾಂಗವಾಗಿಯೂ ಸಮಗ್ರವಾಗಿಯೂ ಪೂರೈಸುತ್ತಾರೆಂದರ್ಥ. ಅಲ್ಲಿ ಇಧ್ಮ, ವೇದಿ, ಬರ್ಹಿಃ, ವೇದ ಯೂಪ ಹವಿಸ್ಸು, ಪಶು, ಅಗ್ನಿ, ಶಾಮಿತ್ರ, ಮೊದಲಾದವರೂ ಆಧ್ಯಾತ್ಮಿಕರೇ.

ಈ ವಿದ್ವದ್ಯಜ್ಞದ ಯಜಮಾನ ಅಂತರಾತ್ಮ ಪತ್ನೀ ಶ್ರದ್ಧೆಯೇ, ಯಾವಳು ಯಜ್ಞ ಪುರುಷನಲ್ಲಿ ಶ್ರದ್ಧೆಯಿರುವಳೋ ಆತನ ವಿಷಯದಲ್ಲಿ ಶ್ರದ್ಧೆಯನ್ನುಂಟು ಮಾಡಿ ಯಜ್ಞಕ್ಕಾಗಿ ಪ್ರೇರಿಸುವಳೋ ಅವಳೇ ಶ್ರದ್ಧೆ.

ಶ್ರದ್ಧಾಂ ದೇವಾ ಯಜಮಾನಾ ವಾಯುಗೋಪಾ ಉಪಾಸತೇ ॥ (ಋ. ೧೦, ೧೫೧, ೪)

ಶ್ರದ್ಧೇ ಶ್ರದ್ಧಾಪಯೇಹ ನಃ ॥ (ಋ. ೧೦, ೧೫೧, ೫)

ಶ್ರದ್ಧಾಂ ದೇವಾ ಯಜಮಾನಾಃ ॥ (ತೈ.ಬ್ರ. ೨, ೮, ೮, ೭)

ಶ್ರದ್ಧಯಾ ಸತ್ಯಮಾಪ್ಯತೇ (ಶು.ಯ. ೧೯, ೩೦)

ಶ್ರದ್ಧಯಾ ವಿಂದತೇ ವಸು (ಶು. ೧೦, ೧೫೧, ೪)

ಆ ಯಜ್ಞ ಪೂರೈಸಲು ಬೇಕಾದ ಪಂಚಜ್ಞಾನೇಂದ್ರಿಯಗಳೇ ಪ್ರಧಾನರಾದ ಐದು ಋತ್ವಿಜರು. ವಾಕ್-ಹೋತಾ, ಪ್ರಾಣಃ-ಉದ್ಗಾತಾ, ಚಕ್ಷುಃ-ಅಧ್ವರ್ಯುಃ, ಮನಸ್ಸು-ಬ್ರಹ್ಮಾ, ಕಿವಿ-ಆಗ್ನೀಧ್ರ ಎಂದು. ಅಲ್ಲಿ ಋಗ್ವೇದ ಮಂತ್ರಗಳಿಂದ ದೇವತೆಗಳನ್ನು ಕರೆಯುವದಕ್ಕಾಗಿ ಹಾಗೂ ಯಜ್ಞದ ದೇವತೆಗಳಿಗೆ ವಷಟ್ಕಾರದಿಂದ ಹವಿಸ್ಸನ್ನು ಕೊಡಲು ಇದ್ದಿರುವ

ಹೋತೃವೆಂಬ ಋತ್ವಿಜನು ವಾಗಾತ್ಮಕನು ಋಕ್ಕು ವಾಗ್ರೂಪವಾಗಿದ್ದು ಅಗ್ನಿತತ್ತ್ವದಿಂದ ಕೂಡಿದ್ದಾಗಿದ್ದರಿಂದ–

"ಋಚಂ ವಾಚಂ ಪ್ರಪದ್ಯೇ" ಇತಿ ಯಜುಃ (೩೬, ೧), "ಋಗ್ವೇದ ಏವಾಗ್ನೇರಜಾಯತ" "ಋಚೈವ ಹೌತ್ರಂ ಕುರ್ಯಾತ್" (ಐ.ಬ್ರಾ. ೫, ೩೩)

ಯಜುರ್ಮಂತ್ರಗಳಿಂದ ಯಜ್ಞ ಕರ್ಮವನ್ನು ನಡೆಸುವವನು ಅಧ್ವರ್ಯುವು. ಆದಿತ್ಯಾಧಿಷ್ಠಿತ. ಅವನಿಲ್ಲಿ ಕಣ್ಣು ಅಂದರೆ ಚಕ್ಷುಃ ಸ್ವರೂಪ "ಯಜುಷಾಧ್ವರ್ಯವಂ" (ಐ.ಬ್ರಾ. ೫, ೩೩)

ಸಾಮವೇದದಿಂದ ಯಜ್ಞದಲ್ಲಿ ದೇವತೆಗಳ ಸ್ತೋತ್ರ ಮಾಡುವವನು ಉದ್ಗಾತಾ. ಅವನಿಲ್ಲಿ ಪ್ರಾಣರೂಪ. ಗಾನ ಸಾಮರ್ಥ್ಯದಿಂದ, "ಸಾಮ ಪ್ರಾಣಂ ಪ್ರಪದ್ಯೇ" (ಯಜುಃ ೩೬, ೧) "ಸಾಮ್ನೋದ್ಗೀಥಂ" (ಐ.ಬ್ರಾ. ೭, ೩೩)

ಮೂರೂ ವೇದವನ್ನು ತಿಳಿದವ ಯಜ್ಞದ ದ್ರಷ್ಟಾ ಬ್ರಹ್ಮ ಎಂಬ ಋತ್ವಿಜ. ಅವನಿಲ್ಲಿ ಮನೋರೂಪ– "ವ್ಯಾರಬ್ಧಾ ತ್ರಯೀ ವಿದ್ಯಾ ಭವತಿ, ಅಥ ಕೇನ ಬ್ರಹ್ಮತ್ವಂ ಕ್ರಿಯತೇ ತ್ರಯ್ಯಾ ವಿದ್ಯಯೇತಿ ಬ್ರೂಯಾತ್" (ಐ.ಬ್ರಾ. ೫, ೩೩) ಆಗ್ನೀಧ್ರ ಶ್ರೋತ್ರ ಸ್ಥಾನೀಯನು ಅಧ್ವರ್ಯುಗೆ ಯಜ್ಞದಲ್ಲಿ ಸಹಕಾರಿ. "ಯಾವದ್ಧ್ರಿಯತೇ ಸಾ ದೀಕ್ಷಾ" ಈ ಪಂಚಜ್ಞಾನೇಂದ್ರಿಯಗಳಿಂದ ಕೂಡಿ ಎಲ್ಲಿಯವರೆಗೆ ತದೇಕ ಲಕ್ಷ್ಯದಿಂದ ಅಂತರಾತ್ಮದಲ್ಲಿ ಧರಿಸುತ್ತೇವೆಯೋ ಅದೇ ದೀಕ್ಷೆ. ಈ ಧೀಯೋಗದಿಂದ ಅಂತರಾತ್ಮನು ಪ್ರಸನ್ನನಾಗುತ್ತಾನೆ. ಅಂತೆಯೇ ಯಜ್ಞ ಪುರುಷನನ್ನೂ ಸಂತಸಗೊಳಿಸುತ್ತಾನೆ. ಇದನ್ನೇ ವಿದ್ವದ್ಯಜ್ಞವೆನ್ನುತ್ತಾರೆ. ಹೀಗೆ ಜ್ಞಾನ ಯಜ್ಞದಿಂದ ಬ್ರಹ್ಮಣಸ್ಪತಿಯು ಪ್ರಸನ್ನನಾಗುತ್ತಾನೆಂದು ಹೇಳಿದ್ದು ಸರಿಯಷ್ಟೆ?

ಹೀಗೆ ಜ್ಞಾನಯಜ್ಞದಲ್ಲಿ ವಾಗಾದಿಗಳ ಆರ್ತ್ವಿಜ್ಯವನ್ನು ಉಪನಿಷತ್ತುಗಳಲ್ಲಿ ವಿಸ್ತರಿಸಿ ಹೇಳಲಾಗಿದೆ. ಆಶ್ವಲಯಾಜ್ಞವಲ್ಕ್ಯರ ಸಂವಾದದಲ್ಲಿ– "ಹೋತಾ ಆಶ್ವಲಃ । ಯಾಜ್ಞವಲ್ಕ್ಯೇತಿ ಹೋವಾಚ, ಯದಿದಂ ಸರ್ವಂ ಮೃತ್ಯುನಾಽಽಪ್ತಂ ಸರ್ವಂ ಮೃತ್ಯುನಾಽಽಭಿಪನ್ನಂ ಕೇನ ಯಜಮಾನೋ ಮೃತ್ಯೋರಾಪ್ತಿಮತಿಮುಚ್ಯತ ಇತಿ ಹೋತ್ರರ್ತ್ವಿಜಾಗ್ನಿನಾ ವಾಚಾ, ವಾಗ್ವೈ ಯಜ್ಞಸ್ಯ ಹೋತಾ, ತದ್ಯೇಯಂ ವಾಕ್ ಸೋಽಯಮಗ್ನಿಃ, ಸ ಹೋತಾ ಸ ಮುಕ್ತಿಃ ಸಾಽತಿಮುಕ್ತಿಃ" ಹೀಗೆ ವಾಕ್ಕಿನ ಹೋತೃತ್ವವನ್ನೂ ಅಗ್ನಿ ಸ್ವರೂಪವನ್ನೂ ವರ್ಣಿಸಿದ್ದಾರೆ.

"ಚಕ್ಷುರ್ವೈ ಯಜ್ಞಸ್ಯಾಧ್ವರ್ಯುಃ ತದ್ಯದಿದಂ ಚಕ್ಷುಃ ಸೋಽಸಾವಾದಿತ್ಯಃ, ಪ್ರಾಣೋ ವೈ ಯಜ್ಞಸ್ಯೋದ್ಗಾತಾ ತದ್ಯೋಽಯಂ ಪ್ರಾಣಃ ಸ ವಾಯುಃ, ಸ ಉದ್ಗಾತಾ, ಮನೋ ವೈ ಯಜ್ಞಸ್ಯ ಬ್ರಹ್ಮಾ, ತದ್ಯದಿದಂ ಮನಃ ಸೋಽಸೌ ಚಂದ್ರಃ ಸ ಬ್ರಹ್ಮಾ (ಬೃ.ಉ. ೩, ೧, ೩-೬)

ಹೀಗೆ ವಾಗಾದಿಗಳಿಗೆ ಅಧಿಷ್ಠಾತೃಗಳಾದ ಅಗ್ನ್ಯಾದಿಗಳೇ ಹೊರಗಿನ ಬ್ರಹ್ಮಾಂಡದಲ್ಲಿ ವಿಶ್ವ ಸೃಷ್ಟಿರೂಪವಾದ ಯಜ್ಞದಲ್ಲಿ ಋತ್ವಿಜರು.

ಇವರೇ ಪರಮ ಪುರುಷನ ಸರ್ವಹುತ ಯಜ್ಞದಲ್ಲಿಯೂ ಋತ್ವಿಜರಾಗಿ ವಿಶ್ವದ ಆವಿರ್ಭಾವಕ್ಕೆ ಕಾರಣರಾಗಿದ್ದಾರೆ. ಆದ್ದರಿಂದಲೇ ಪಂಚಜ್ಞಾನೇಂದ್ರಿಯಗಳು ಅತಿಶ್ರೇಷ್ಠವೆಂದು (ಪರೋವರೀಯಸ್ತ್ವಂ) ಪರಿಗಣಿಸಲಾಗಿದೆ.

"ಪ್ರಾಣೇಷು ಪಂಚವಿಧಂ, ಪರೋವರೀಯಃ ಸಾಮೋಪಾಸೀತ, ಪ್ರಾಣೋ ಹಿಂಕಾರಃ, ವಾಕ್ ಪ್ರಸ್ತಾವಃ, ಚಕ್ಷುರುದ್ಗೀಥಃ ಶ್ರೋತ್ರಂ ಪ್ರತಿಹಾರಃ, ಮನೋ ನಿಧನಂ, ಪರೋವರೀಯಾಂಸಿ ವಾ ಏತಾನಿ" (ಛಾಂ.ಉ. ೨, ೭, ೧)

ಇವುಗಳನ್ನು ಒಂದೆಡೆ ಅಂತರಾತ್ಮನಲ್ಲಿ ಪ್ರತಿಷ್ಠಾಪಿಸಿ ಇವುಗಳನ್ನು ಸಂಯಮದಿಂದ ಪರಮಾತ್ಮನಲ್ಲಿ ವಿಲೀನಗೊಳಿಸುವದೇ ಪೂರ್ಣವಾದ ತಪೋಯೋಗ ಸತ್ವಾದಿಗಳ ಸಂಪಾದನವೇ ಮುಖ್ಯವಾದದ್ದು.

ಹಾಗಾಗಿ ಒಂದೊಂದೇ ಇಂದ್ರಿಯಗಳನ್ನು ಪ್ರತ್ಯೇಕವಾಗಿ ತತ್ತದ್ವಿಷಯಗಳಲ್ಲಿ ವಿಲೀನಗೊಳಿಸುವಿಕೆ ಅಪೂರ್ಣವಾದದ್ದು. ಅವುಗಳನ್ನು ಒಂದೆಡೆ ಸೇರಿಸುವದೇ ವೈದಿಕ ತತ್ವ. ಹಾಗೂ ಉಪನಿಷತ್ತುಗಳ ಸಮರ್ಥನೆ.

"ಪ್ರಾಣನ್ನೇವ ಪ್ರಾಣೋ ನಾಮ ಭವತಿ, ವದನ್ ವಾಕ್, ಪಶ್ಯನ್ ಚಕ್ಷುಃ ಶೃಣ್ವಂಶ್ರೋತ್ರಂ, ಮನ್ವಾನೋ ಮನಃ ತಾನ್ಯಸ್ಯೈತಾನಿ ಕರ್ಮನಾಮಾನ್ಯೇವ, ಸ ಯೋऽತ ಏಕೈಕಮುಪಾಸ್ತೇ ನ ಸ ವೇದ, ಅಕೃತ್ಸ್ನೋ ಹ್ಯೇಷಃ, ಅತಃ ಏಕೈಕೇನ ಭವತಿ, ಆತ್ಮೇತ್ಯೇವೋಪಾಸೀತ, ಅತ್ರಹ್ಯೇತೇ ಸರ್ವ ಏಕಂ ಭವಂತಿ, ತದೇತತ್ ಪದನೀಯಮಸ್ಯ ಸರ್ವಸ್ಯ ಯದಯಮಾತ್ಮಾऽನೇನ ಹ್ಯೇತತ್ ಸರ್ವಂ ವೇದ (ಬೃ.ಉ. ೧, ೪, ೭)

ಹೀಗೆಯೇ ಬೇರೆಡೆಯಲ್ಲಿಯೂ ಈ ಪಂಚೇಂದ್ರಿಯ ಯೋಗವನ್ನು ಹೇಳಿದ್ದಾರೆ– "ದ್ವಯಾ ಹ ಪ್ರಾಜಾಪತ್ಯಾ ದೇವಾಶ್ಚಾಸುರಾಶ್ಚ, ತ ಏಷು ಲೋಕೇಷ್ವಸ್ಪರ್ಧಂತ । ತೇ ಹ ದೇವಾ ಊಚುರ್ಹಂತಾಸುರಾನ್ ಯಜ್ಞೇ ಉದ್ಗೀಥೇನಾತ್ಯಯಾಮೇತಿ, ತೇ ಹ ವಾಚಮೂಚುಸ್ತ್ವಂ ನ ಉದ್ಗಾಯೇತಿ ಂ" ಎಂದು ಮುಂತಾಗಿ (ಬೃ.ಉ. ೧, ೩., ೧-೭) ಎಲ್ಲ ಇಂದ್ರಿಯಗಳೂ ಅಸುರರಿಂದ ಸೋತು ಕೊನೆಯಲ್ಲಿ ಮುಖ್ಯಪ್ರಾಣನಿಗೇ ಗೆಲುವಾದದ್ದನ್ನು ತಿಳಿಸಿದೆ.

"ಯೋ ಹ ವೈ ಜ್ಯೇಷ್ಠಂ ಚ ಶ್ರೇಷ್ಠಂ ಚ ವೇದ .... ಕುರ್ವಂತೋ ಮನ್ಯಂತೇ"

(ಬೃ.ಉ. ೬, ೧, ೧-೧೪)

"ಸಂವರ್ಗವಿದ್ಯಾಯಾಮಪಿ ತತ್ಸಮಾನಂ" (ಛಾಂ.ಉ. ೪, ೩, ೧-೨)

"ದೇವಾಸುರಾ ಹ ವೈ ಯತ್ರ ಸಂಯೇತಿರೇ .... ಉಪಾಸತೇ" ಇತಿ (ಛಾಂ.ಉ. ೧, ೨, ೧-೧೪)

ಈ ಯಜುರ್ಮಂತ್ರಗಳಿಂದ ವೇದತ್ರಯಗಳ ಕೂಡುವಿಕೆಯಿಂದ ಪಂಚ ಜ್ಞಾನೇಂದ್ರಿಯ ಯೋಗವನ್ನು ಹೇಳಲಾಗಿದೆ– "ಋಚಂ ವಾಚಂ ಪ್ರಪದ್ಯೇ ಮನೋಯಜುಃ ಪ್ರಪದ್ಯೇ ಸಾಮಪ್ರಾಣಂ ಪ್ರಪದ್ಯೇ ಚಕ್ಷುಃ ಶ್ರೋತ್ರಂ ಪ್ರಪದ್ಯೇ" (ಶು.ಯಂ. ೩, ೧)

॥ ಸಪ್ತಧೀಂದ್ರಿಯಯೋಗ ॥

ಹೊರಗಿನ ಬ್ರಹ್ಮಾಂಡದಲ್ಲಿ ಆಕಾಶಾದಿ ಪಂಚಮಹಾಭೂತಗಳ ಶಬ್ದಾದಿ ಪಂಚವಿಷಯಗಳು ಪ್ರಸಿದ್ಧವಾಗಿವೆ. ಅವುಗಳಿಗೆ ಸಂಬಂಧವಾದ ಶಬ್ದಾದಿಗ್ರಾಹಕವಾದ ಶ್ರೋತ್ರ-ತ್ವಕ್-ಚಕ್ಷು-ಜಿಹ್ವಾ-ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯಗಳು ಬಾಹ್ಯವಾದವು. ಅಂತೆಯೇ ಮನಸ್ಸು-ಬುದ್ಧಿ ಇವೆರಡು ಅಂತಃಕರಣಗಳು. ಈ ಸಪ್ತ ಬುದ್ಧೀಂದ್ರಿಯಗಳು ಅಂತರಾತ್ಮನ ಒಳಗಿನ ಹಾಗೂ ಹೊರಗಿನ ಸರ್ವವ್ಯವಹಾರಗಳ ಸಾಧನಗಳು. ಈ ಏಳು ಇಂದ್ರಿಯಗಳಿಗೆ ಪ್ರಾಣವೆಂಬ ಹೆಸರೂ ಇದೆ. ಯಾಕೆಂದರೆ ಇವು ಪ್ರಾಣ ಪ್ರಾಧಾನ್ಯವಾಗಿಯೂ ಪ್ರಾಣಸ್ವ ರೂಪವಾಗಿಯೂ ಇವೆ.

"ಸಪ್ತ ಹಿ ಶೀರ್ಷಣ್ಯಾಃ ಪ್ರಾಣಾಃ" (ಜೈಮಿ.ಉ. ೨, ೫, ೮) "ಸಪ್ತ ಪ್ರಾಣಾಃ ಪ್ರಭವಂತಿ ತಸ್ಮಾತ್", (ಮುಂ.ಉ. ೨, ೧, ೮) ಬೇರೆ ಶ್ರುತಿಗಳಲ್ಲಿಯೂ ಸಪ್ತ ಪ್ರಾಣಗಳನ್ನು ಹೇಳಿದೆ.

"ಸಪ್ತ ಗತೇರ್ವಿಶೇಷಿತತ್ವಾಚ್ಚ" (ಬ್ರ.ಸೂ. ೨, ೪, ೫)

ಇವುಗಳಲ್ಲಿ ಶ್ರೋತ್ರಾದಿ ಒಂದೊಂದು ಇಂದ್ರಿಯವು ಶಬ್ದಶ್ರವಣ (ಕೇಳುವಿಕೆ)ವೆಂಬ ಒಂದೊಂದು ವಿಷಯಕ್ಕೇ ಸೀಮಿತವಾಗಿದೆ. ಮನಸ್ಸು ಬುದ್ಧಿ ಇವೆರಡು ಎಲ್ಲಕ್ಕೂ ಹೊಂದಿವೆ. ಶಬ್ದಾದಿ ವಿಷಯಗಳೊಡನೆ ಮನೋಬುದ್ಧಿ ಸಂಯೋಗದಿಂದ ಆಂತರ್ಯವಾದ ಒಂದು ಅಲೌಕಿಕ ಯೋಗ ಸಿದ್ಧಿಸುತ್ತದೆ. ಆದರಿಂದ ಅಂತರಾತ್ಮನಲ್ಲಿ ಒಂದು ದೃಢತರವಾದ ಶಕ್ತಿಯೂ ಆತ್ಮಶಾಂತಿಯೂ ಉದಯಿಸುತ್ತದೆ. ಇದನ್ನೇ ಕಠೋಪನಿಷತ್ತಿನಲ್ಲಿ–

"ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತಿ ತಾಮಾಹುಃ ಪರಮಾಂ ಗತಿಂ ॥
ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಂ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥ (ಕಠೋಪ. ೬, ೧೦, ೧೧)

ಅಷ್ಟಧೀಯೋಗ :

ಈ ಹಿಂದೆ ಹೇಳಿದ ಸಪ್ತ ಜ್ಞಾನೇಂದ್ರಿಯಗಳೇ ಶರೀರಾಂತರ್ಗತ ಸಪ್ತ ಋಷಿಗಳು. ಅಂತರಾತ್ಮ ಚೇತನವೇ ಎಂಟನೆಯದು. ಆ ಬಗ್ಗೆ ಉಪನಿಷತ್–

"ಅರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಸ್ತಸ್ಮಿನ್ ಯಶೋ ನಿಹಿತಂ ವಿಶ್ವರೂಪಂ
ತಸ್ಯಾऽऽಸತ ಋಷಯಃ ಸಪ್ತ ತೀರೇ ವಾಗಷ್ಟಮೀ ಬ್ರಹ್ಮಣಾ ಸಂವಿದಾನಾ" (ಬೃ.ಉ.೨,೨,೩)

ಇದಕ್ಕೆ ಬ್ರಾಹ್ಮಣಾನುವಚನ ಹೀಗಿದೆ–

"ಪ್ರಾಣಾ ವಾ ಋಷಯಃ ಪ್ರಾಣಾನೇವೈತದಾಹ ವಾಗಷ್ಟಮೀ ಬ್ರಹ್ಮಣಾ ಸಂವಿದಾನೇತಿ ವಾಗ್ಘಿ, ಅಷ್ಟಮೀ ಬ್ರಹ್ಮಣಾ ಸಂವಿತ್ತೇ" ಆದ್ದರಿಂದಲೇ ಆ ಎಂಟನೆಯದಾದ ವಾಕ್ಕು ಸಪ್ತ ಪ್ರಾಣಗಳಿಗೆ ಅತಿರಿಕ್ತವಾದದ್ದು ಹಾಗೂ ಪರಾತ್ವ ಪ್ರತೀಚೀನತ್ವವನ್ನು ಹೊಂದಿರುತ್ತದೆ.

"ಅಷ್ಟಮೀ ನಾನುಷಜತಿ, ನೇನ್ಮೇವಾಕ್ಪ್ರಾಣೈಃ ಸಮಾನಾಯತನಾಸತ್ಕನುಷಕ್ತಾಽಸದಿತಿ" (ಐ.ಬ್ರಾ.೧,೫,೨)

ಆವಾಕ್ಕೆಂಬುದು ಅಂತರಂಗದಲ್ಲಿ ಪರಾರೂಪವಾಗಿದ್ದರೂ ಪ್ರಾಣಗಳಿಂದ ಕೂಡಿ ಅಂತರ್ಹೃದಯದಲ್ಲಿದ್ದರೂ ಪ್ರಾಣಗಳಿಂದ ಬೇರೆಯಾಗಿ ಚಿದಾತ್ಮನಿಂದ ತಾದಾತ್ಮ್ಯ ಹೊಂದಿ ಚೇತನಾ ಶಕ್ತಿರೂಪದಿಂದಿರುತ್ತದೆ. ಆದ್ದರಿಂದ ಪ್ರತ್ಯಕ್‌ಪರಾವರ್ತನದಿಂದ ವಾಕ್ ಸಂಯಮವನ್ನು ಉಪದೇಶಿಸುತ್ತಿದೆ ವೇದ.

"ಪ್ರತೀಚೀಂ ಜಗ್ರಭಾ ವಾಚಮಶ್ವಂ ರಶನಯಾ ಯಥಾ" (ಋ. ೧೦, ೧೮, ೧೪)

"ಪತಂಗೋ ವಾಚಂ ಮನಸಾ ಬಿಭರ್ತಿ । ತಾಂ ದ್ಯೋತಮಾನಾಂ
ಸ್ವರ್ಯಂ ಮನೀಷಾಮೃತಸ್ಯ ಪದೇ ಕವಯೋ ನಿ ಪಾಂತಿ" (ಋ. ೧೦, ೧೭೭, ೨)

"ವಾಕ್ ಪತಂಗಾಯ ಧೀಯತೇ" (ಋ. ೧೦, ೧೮೯, ೩)

"ಸಪ್ತ ದ್ವಾರಾವಕೀರ್ಣಾಂ ಚ ನ ವಾಚಮನೃತಾಂ ವದೇತ್" (ಮನುಸ್ಮೃತಿಃ)

ಸಪ್ತಪ್ರಾಣಗಳಲ್ಲಿ ಹಾಗೂ ಜ್ಞಾನೇಂದ್ರಿಯಗಳೊಡನೆ ವಾಗ್ವೃತ್ತಿಯು ಅನುಸ್ಯೂತ-ವಾಗಿದೆ. ಹಾಗೆಯೇ ಮಾತಾಡುವಾಗ ಸಪ್ತಪ್ರಾಣಗಳಲ್ಲಿಯೂ ವಾಕ್ಪ್ರವೃತ್ತಿಯು ಸ್ವಭಾವ ಸಿದ್ಧವಾಗಿದೆ.

ಸಪ್ತ ಮರ್ಯಾದೆಗಳು :

ಹೀಗೆ ಈ ಏಳು ಜ್ಞಾನೇಂದ್ರಿಯಗಳನ್ನು ನಿಯಮಿಸಲು ಆತ್ಮ ಸಂಯಮ ಸಿದ್ಧಿಗಾಗಿ ಋಙ್ಮಂತ್ರಗಳಲ್ಲಿ ಸದ್ವಿದ್ಯಾತ್ಮಿಕವಾದ ಸಪ್ತ ಮರ್ಯಾದೆಗಳನ್ನು ಹೇಳಿದ್ದಾರೆ.

"ಸಪ್ತ ಮರ್ಯಾದಾಃ ಕವಯಸ್ತತಕ್ಷುಸ್ತಾಸಾಮೇಕಾಮಿದಭ್ಯಂಹುರೋ ಗಾತ್"
(ಋ. ೧೦, ೫, ೬)

ಹೀಗೆ ವಾಕ್ಸಂಯಮವೊಂದರಿಂದಲೇ ಎಲ್ಲ ಪ್ರಾಣಗಳ ಜ್ಞಾನೇಂದ್ರಿಯಗಳ ಸಂಯಮನ-ವನ್ನು ಋಷಿಗಳು ಉಪದೇಶಿಸುತ್ತಾರೆ. ಆ ಪರಾವಾಕ್ಕೇ ಅವುಗಳೆಲ್ಲವುಗಳ ಪ್ರೇರಣೆಗೆ ಸಮರ್ಥವಾಗಿದೆಯೆಂಬುದನ್ನು ಮಧುಶ್ಛಂದ ಋಷಿ ತನ್ನ ಮೂರು ಮಂತ್ರಗಳಿಂದ ತಿಳಿಸಿದ್ದಾನೆ.

"ಪಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ । ಯಜ್ಞಂ ವಷ್ಟು ಧಿಯಾವಸುಃ
ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಂ । ಯಜ್ಞಂ ದಧೇ ಸರಸ್ವತೀ
ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ । ಧಿಯೋ ವಿಶ್ವಾ ವಿ ರಾಜತಿ"
(ಋ. ೧, ೩, ೧೦-೧೨)

ಇಲ್ಲಿ ವಾಕ್ಕೆಂಬುದೇ ಎಲ್ಲ ಯಜ್ಞಗಳನ್ನು ನಿರ್ವಹಿಸುತ್ತದೆಯೆಂದು ಹೇಳಿದೆ.

"ಯಜ್ಞಂ ವಷ್ಟು ಧಿಯಾವಸುಃ, ವಾಗ್ವೈಧಿಯಾ ವಸು, ಯಜ್ಞಂ ವಹತ್ವಿತ್ಯೇವ ತದಾಹ" (ಐ.ಬ್ರಾ. ೧, ೧, ೪, ೧೬). "ಯಜ್ಞಂ ದಧೇ ಸರಸ್ವತೀ" ಎಂಬುದೂ ಅದನ್ನೇ ಸಮರ್ಥಿಸುತ್ತದೆ. ಸತ್ಯಾತ್ಮಕವಾದ ಮಾತನ್ನು ಮನಸ್ಸನ್ನು ಅಂತರಾತ್ಮನಲ್ಲಿ ಪ್ರೇರೇಪಿಸುವವಳು ವಾಕ್ಕೇ ಸರಿ. "ಮಹೋ ಅರ್ಣಃ ಸರಸ್ವತೀ" ಎಂಬಲ್ಲಿ "ಮಹೋಅರ್ಣಃ ಪರಂಬ್ರಹ್ಮಂ ವಿರಾಜಯತಿ ಸಾ ದೇವೀ" ಎಂಬ ಮಾಧವಋಗ್ಭಾಷ್ಯದಂತೆಯೂ ಮಾತು ಎಂಬುದೇ ಪರಬ್ರಹ್ಮ. ಎಲ್ಲ ಇಂದ್ರಿಯಗಳನ್ನೂ ಪ್ರೇರೇಪಿಸುತ್ತದೆ. ವಾಕ್ಕು ಎಲ್ಲ ಇಂದ್ರಿಯಗಳಿಗೂ ಶ್ರೇಷ್ಠವಾದದ್ದಾಗಿದೆ ಎಂಬುದನ್ನು

"ಧೀಯೋ ಯೋನಃ ಪ್ರಚೋದಯಾತ್" (ಋ. ೩, ೬೨, ೧೦)

ಯಾವುದು ನಮ್ಮೆಲ್ಲರ ಬುದ್ಧಿಯನ್ನು ಪ್ರೇರೇಪಿಸುವ ಸ್ವಯಂಪ್ರಕಾಶನೂ ಬ್ರಹ್ಮಾತ್ಮನೂ ಆ ಸವಿತೃ ದೇವನ ಶ್ರೇಷ್ಠವಾದ ಗಾಯತ್ರೀರೂಪವಾದ ವಾಕ್‌ಶಕ್ತಿಯ ಅಗ್ನಿದೇವತಾಕವಾದದ್ದಾಗಿದೆ. ಇಲ್ಲಿ ಗಾಯತ್ರಿಯು ವಾಙ್ಮುಖದಿಂದ ಬುದ್ಧಿಯ ಪ್ರಚೋದನೆಯನ್ನು ಬ್ರಹ್ಮತ್ವಯೋಗದಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಸಾಧಿಸಲು ಸಮರ್ಥವಾಗಿದೆ. ಆದ್ದರಿಂದ ಆ ವಾಕ್ಕೇ ಬ್ರಹ್ಮಚೋದನೀ ಎನಿಸುತ್ತಾಳೆ.

ಬ್ರಹ್ಮಚೋದನೀವಾಕ್ :

"ಯಾಂ ಪೂಷನ್ ಬ್ರಹ್ಮಚೋದನೀಮಾರಾಂ ಬಿಭರ್ಷ್ಯಾಘೃಣೇ ತಯಾ
ಸಮಸ್ಯ ಹೃದಯಮಾ ರಿಖ ಕಿಕಿರಾ ಕೃಣು" (ಋ. ೬, ೫೩, ೮)

ಇದರ ಅರ್ಥ : ಎಲೇ ವಿಶ್ವಪೋಷಕನಾದ ಜ್ಯೋತಿರಾತ್ಮನೇ! ಬ್ರಹ್ಮನನ್ನೇ ಪ್ರೇರೇಪಿಸುವಂಥಾ ತೀಕ್ಷ್ಣಶಸ್ತ್ರರೂಪವಾದ ಶಕ್ತಿಯನ್ನು ಧರಿಸಿರುವ ನೀನು ನನ್ನ ಹಾಗೂ ಎಲ್ಲರ ಹೃದಯವನ್ನು ತೇಜಸ್ವಿಯಾದದ್ದನ್ನಾಗಿ ತೀಕ್ಷ್ಣವನ್ನಾಗಿ ಮಾಡು. ಈ ಬ್ರಹ್ಮಚೋದನೀ ಶಕ್ತಿಯೆಂಬುದೂ ಪರಾ ವಾಕ್ಕೇ.

ಈ ಮಂತ್ರದಲ್ಲಿಯ ಬ್ರಹ್ಮಚೋದನೀ ಎಂಬಲ್ಲಿ ಬ್ರಹ್ಮಶಬ್ದವು ವೈದಿಕ ಇಂದ್ರನನ್ನೇ ಬೋಧಿಸುತ್ತದೆ. ಆತನೇ ಪರಮೈಶ್ವರ್ಯದಿಂದ ಕೂಡಿದ ಪರಮಪುರುಷನಾದ ಪರಬ್ರಹ್ಮನೇ.

"ಇಂದ್ರೋ ಬ್ರಹ್ಮೇಂದ್ರ ಋಷಿಃ" (ಋ. ೮, ೧೬, ೭)

"ಇಂದ್ರೋ ಮಾಯಾಭಿಃ ಪುರುರೂಪ ಈಯತೇ" (ಋ. ೬, ೪೭, ೧೮) ಹೀಗೆ ವೇದದಲ್ಲಿ ಬ್ರಹ್ಮತತ್ವವನ್ನು ಇಂದ್ರನಲ್ಲಿ ಹೇಳಿದೆ. ಅಂತೆಯೇ ಉಪನಿಷತ್ತುಗಳು ಇದನ್ನು ಸ್ಪಷ್ಟಪಡಿಸಿವೆ. "ಅಯಂ ವೈ ಹರಯೋऽಯಂ ವೈ ದಶ ಚ ಸಹಸ್ರಾಣಿ ಬಹೂನಿ ಚಾನಂತಾನಿ ಚ ತದೇತದ್ಬ್ರಹ್ಮಾಪೂರ್ವಮನಪರಮನಂತರಮಬಾಹ್ಯಂ। ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ

ಇತ್ಯನುಶಾಸನಂ" (ಬೃ.ಉ. ೨, ೫, ೧೯) ಮೇಲಿನ ಮಂತ್ರದ ಉಪನಿಷತ್ತಿನಲ್ಲಿಯೂ ಈ ಬ್ರಾಹ್ಮಣ ವಾಕ್ಯವಿದೆ.

"ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯತ್ ಇದಮದರ್ಶಮಿತೀ೩ । ತಸ್ಮಾದಿಂದ್ರೋ ನಾಮ ಇದಂದ್ರೋ ಹ ವೈ ನಾಮ ತಮಿದಂದ್ರಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ" (ಐ.ಉ. ೧, ೩, ೧೩-೧೪) ಇಂಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಽಕ್ಷನ್ ಪುರುಷಃ ತಂ ವಾ ಏತಮಿಂಧಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ" (ಬೃ.ಉ. ೪, ೨, ೨) ಹಾಗೆಯೇ "ಸತ್ಯಂ ಜ್ಞಾನಮನಂತಂ ಬ್ರಹ್ಮ" (ತೈ.ಉ. ೨, ೧) "ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ" (ಐ.ಉ. ೩, ೩) ಹೀಗೆ ಉಪನಿಷತ್ತಿನಲ್ಲಿ ಇಂದ್ರ ತತ್ತ್ವವನ್ನು ಬಣ್ಣಿಸಿದ್ದಾರೆ. ಹಾಗೆಯೇ–

"ಯಾವದ್ಬ್ರಹ್ಮ ವಿಷ್ಠಿತಂ ತಾವತೀ ವಾಕ್" *(ಋ ೧೦, ೧೧೪, ೮)*

ಈ ಋಗ್ವೇದ ಮಂತ್ರ ಹಾಗೂ, "ಯತ್ರ ಹ ಕ್ವ ಚ ಬ್ರಹ್ಮತದ್ವೈವಾಗ್ಯತ್ರ ವಾ ವಾಕ್ ತದ್ವೈವಾ ಬ್ರಹ್ಮೇತ್ಯೇತದುಕ್ತಂ ಭವತಿ" (ಐ.ಆ. ೧, ೩, ೮)

ಹೀಗೆ ಅದರ ಬ್ರಾಹ್ಮಣವಚನದಂತೆ ಆ ಪರಬ್ರಹ್ಮನ ವಾಚಕ ಸತ್ವಭರಿತವಾದ ಮಾತೂ ಕೂಡಾ ಅದಕ್ಕೆ ಸಮಾನವಾದ ಪ್ರತ್ಯಕ್ಷ ಬ್ರಹ್ಮರೂಪವಾದದ್ದಷ್ಟೇ ಅಲ್ಲ. ಬ್ರಹ್ಮವೇ ಆಗಿದೆ.

ಅಂತೆಯೇ ಗಾಯತ್ರೀ ಮೊದಲಾದ ಛಂದೋನಿಬದ್ಧವಾದ ಮಂತ್ರಗಳೂ ಕೂಡ ಬ್ರಹ್ಮವೆಂದು ಕರೆಯಲ್ಪಟ್ಟಿವೆ. ನೋಡಿ–

"ಬ್ರಹ್ಮಾಣಿ ಮಂದನ್ ಗೃಣತಾಮೃಷೀಣಾಂ" (ಋ. ೧೦, ೮೯, ೧೬)

"ಬ್ರಹ್ಮಣಾ ತೇ ಬ್ರಹ್ಮಯುಜಾ ಯುನಜ್ಮಿ" (ಋ. ೩, ೩೫, ೪)

"ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತೇ" (ಋ. ೨, ೨೩, ೧)

ಹೀಗೆಯೇ ಬ್ರಹ್ಮನನ್ನು ತಿಳಿಯಲು ಆತನ ಉಪಾಸನೆಗೆ ಯೋಗಸಾಧನಕ್ಕೆ ಉಪಕರಣಗಳಾಗಿರುವ ಪ್ರಾಣವೆಂದೆನಿಸಿಕೊಳ್ಳುವ ಧೀಂದ್ರಿಯಗಳಿಗೂ ಬ್ರಹ್ಮ ಶಬ್ದವನ್ನು ಹೇಳಿದ್ದು ಕಂಡು ಬರುತ್ತದೆ.

"ವಾಗ್ವೈ ಬ್ರಹ್ಮ, ಪ್ರಾಣೋ ವೈ ಬ್ರಹ್ಮ, ಚಕ್ಷುರ್ವೈ ಬ್ರಹ್ಮ, ಶ್ರೋತ್ರಂ ವೈ ಬ್ರಹ್ಮ, ಮನೋ ವೈ ಬ್ರಹ್ಮ, ಹೃದಯಂ ವೈ ಬ್ರಹ್ಮ", (ಬೃ.ಉ. ೪, ೧)

ಹೀಗೆ ಪ್ರತ್ಯಕ್ಷವಾಗಿ ವಾಗಾದಿ ಜ್ಞಾನೇಂದ್ರಿಯಗಳಿಗೆ ಬ್ರಹ್ಮತ್ವವನ್ನು ಹೇಳಿದ್ದಾರೆ. ಅಲ್ಲಿಯೂ ಆ ಇಂದ್ರಿಯಗಳಿಗೆ ಬ್ರಹ್ಮದೃಷ್ಟಿಯಿಂದ– "ಪ್ರಜ್ಞಾ, ಪ್ರಿಯಂ, ಸತ್ಯಂ, ಅನಂತಂ, ಆನಂದ, ಸ್ಥಿತಿ ಇತ್ಯಾದಿ ಗುಣಗಳ ಸಹಯೋಗದಿಂದ ಅದರ ಉಪಾಸನಾ ವಿಧಿ ವಿಧಾನಗಳನ್ನೂ ಹೇಳಿದ್ದು ವಿಶೇಷವಾಗಿದೆ.

ಹೀಗೆ ಇವುಗಳ ಅಧಿದೇವತೆಗಳಾದ, ಇಂದ್ರ, ಬ್ರಹ್ಮ, ಆತ್ಮ-ಪುರುಷ-ವಾಕ್-ವೇದ ಮಂತ್ರ ಜ್ಞಾನೇಂದ್ರಿಯ ಮೊದಲಾದ ಎಲ್ಲ ಬ್ರಹ್ಮರೂಪರಾದ ಬ್ರಹ್ಮಸತ್ವ ವಿಶಿಷ್ಟರಾದವರಿಗೆ ಪ್ರೇರಿಸುತ್ತಿರುವ ಆ ಪರಮದಿವ್ಯವಾದ ವಾಕ್ಕೇ ಬ್ರಹ್ಮಚೋದನೀ, ಆರಾತ್ಮಿಕಳಾಗಿ ಚೈತನ್ಯಜ್ಯೋತಿ ಸ್ವರೂಪಳಾದ ಪರಾಶಕ್ತಿಯೇ ಆಗಿರುತ್ತದೆ.

ಇಲ್ಲಿ ಜ್ಞಾನ, ಯೋಗ, ವಿದ್ಯೆ, ಉಪಾಸನಾ, ತಪ, ಯಜ್ಞಾದಿ ಎಲ್ಲ ಸಾಧನ ವಿಶೇಷಗಳಲ್ಲಿ ಸ್ವಾತ್ಮ ಪ್ರಬೋಧರೂಪವಾದ ಅಪ್ರಮಾದವೇ ಪರಮ ಯೋಗವಾಗಿದೆ. ಅದೇ ಜಾಗೃತಿರೂಪವಾದ ಅನಿಮೇಷಾತ್ಮಕವಾದ ಅಂತಃಸ್ಫುರಣರೂಪವಾದ ಧೀಸತ್ವವಾಗಿದೆ. ಇದನ್ನೇ–

"ಇಚ್ಛಂತಿ ದೇವಾಃ ಸುನ್ವಂತಂ ನ ಸ್ವಪ್ನಾಯ ಸ್ಪೃಹಯಾಂತ । ಯಂತಿ ಪ್ರಮಾದಮತಂದ್ರಾಃ ॥"

(ಋ. ೮, ೨, ೧೮)

ದೇವತೆಗಳು ಜ್ಞಾನಯಜ್ಞ ಮಾಡುವವರನ್ನು ಇಚ್ಛಿಸುತ್ತಾರೆ. ವಿಸ್ಮೃತಿ ಶೀಲರನ್ನು ಆಲಸಿಗಳನ್ನು ಇಚ್ಛಿಸುವದಿಲ್ಲ. ಸ್ವಯಂ ಜಾಗೃತಿಶೀಲರಾದವರು ಪ್ರಮಾದವನ್ನು ಹೊಂದುವದಿಲ್ಲ.

ಆದ್ದರಿಂದಲೇ ಮಹಾಭಾರತ ಸನತ್ಸುಜಾತೀಯದಲ್ಲಿ, ಪ್ರಮಾದವೇ ಮೃತ್ಯು. ಅಪ್ರಮಾದವೇ ಅಮೃತತ್ವವೆಂದಿದ್ದಾರೆ.

"ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ" (ಮಹಾ.ಭಾ. ೫, ೪೨, ೪)

ಅಪ್ರಮಾದದಿಂದಲೇ ಎಲ್ಲ ಜ್ಞಾನೇಂದ್ರಿಯಗಳ ಸ್ಥಿರ ಧಾರಣಾದಿ ರೂಪವಾದ ಯೋಗವು ಸಿದ್ಧಿಸುತ್ತದೆಂಬ ಉಪದೇಶವು ಉಪನಿಷತ್ತಿನಲ್ಲಿದೆ.

"ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತಿ ತಾಮಾಹುಃ ಪರಮಾಂ ಗತಿಂ ॥
ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಂ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥" (ಕಠೋಪ. ೬, ೧೦-೧೧)

ನಚಿಕೇತನಿಗೆ ಯಮನ ಉಪದೇಶವಿದು,

"ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಂ ।
ಬ್ರಹ್ಮಪ್ರಾಪ್ತೋ ವಿರಜೋಽಭೂದ್ ವಿಮೃತ್ಯುರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ ॥

(ಕ.ಉ. ೬, ೧೮)

ಇದೇ ಧೀಯೋಗವನ್ನು ಆತ್ಮ ಬುದ್ಧಿ ಮನ ಶರೀರ ಇಂದ್ರಿಯಾದಿಗಳಿಗೆ ಕ್ರಮವಾಗಿ ರಥ-ರಥಿಕ-ಸಾರಥಿ-ಪ್ರಗ್ರಹ-ಅಶ್ವ ಮೊದಲಾದ ರೂಪಗಳನ್ನು ಕೊಟ್ಟಿದ್ದಾರೆ.

"ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥

ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ।" (ಕ.ಉ. ೩, ೩, ೪)

"ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ
ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ॥ (ಕ.ಉ. ೩, ೧೦-೧೧)

ಹೀಗೆ ಅವುಗಳ ರೂಪಕಾದಿ ಕಲ್ಪನೆಯನ್ನು ಮಾಡಿದ್ದಾರೆ. ಅವುಗಳ ನಿಯಮನವನ್ನು ಹೇಳಿದ್ದಾರೆ.

ಪ್ರಾಜ್ಞನಾದವನು ವಾಕ್ಕು ಹಾಗೂ ಮನಸ್ಸುಗಳನ್ನು ನಿಗ್ರಹಿಸಬೇಕು. ಅವುಗಳನ್ನು ಆತ್ಮಜ್ಞಾನದಲ್ಲಿ ಅದನ್ನು ಮಹತ್ತಿನಲ್ಲಿ ಮಹತ್ತನ್ನು ಶಾಂತಾತ್ಮನಲ್ಲಿ ನಿಯಮಿಸ ಬೇಕೆಂದಿದ್ದಾನೆ.

"ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇತ್ ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇತ್ ಶಾಂತ ಆತ್ಮನಿ ॥ (ಕ.ಉ. ೩, ೧೩)

ಅದನ್ನು ಪ್ರಣವಾದಿ ಮಂತ್ರಯೋಗ ಪೂರ್ವಕವಾಗಿ ವಿಧಿಸಿದ್ದಾರೆ.

ಉಪನಿಷತ್ತೆಂಬ ಧನುಸ್ಸನ್ನು ಹಿಡಿದು ಉಪಾಸನೆಯಿಂದ ನಿಶ್ಶಿತವಾದ ಬಾಣವನ್ನು ಭಾವಯುಕ್ತವಾದ ಮನಸ್ಸಿನಿಂದ ಅಕ್ಷರವಾದ ವಸ್ತುವನ್ನು ಲಕ್ಷಿಸಿ ಹೊಡೆಯಬೇಕೆಂಬುದನ್ನು ತಿಳಿ.

೧. ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂ ಹ್ಯುಪಾಸಾನಿಶಿತಂ ಸಂಧಯೀತ
ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ ॥

ಪ್ರಣವವೇಧನುಸ್ಸು ಬಾಣವೇ ಆತ್ಮಾ ಲಕ್ಷ್ಯವಾದದ್ದು ಬ್ರಹ್ಮ. ಜಾಗರೂಕತೆಯಿಂದ ಎಸೆದು ಶರದಂತೆ ತನ್ಮಯನಾಗಬೇಕು.

೨. ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥" (ಮು.ಉ. ೨, ೨, ೩-೪)

ಈ ಜಾಗರಣೆಯೆಂಬ ಯೋಗವನ್ನೇ ಅಪ್ರಮಾದವೆನ್ನುತ್ತಾರೆ. ಅದೇ ಪರಮ ತಪಃ ಸ್ವರೂಪವಾದದ್ದು. ಅಂಥ ಜಾಗರಣಶೀಲನಾದ ಪ್ರಮಾದರಹಿತನಾದ ಮನುಷ್ಯನನ್ನೇ ಎಲ್ಲ ವೇದಗಳೂ ದೇವತೆಗಳೂ ತಾವಾಗಿಯೇ ಇಚ್ಛಿಸುತ್ತಾರೆ. ಮತ್ತು ಸಜಾತೀಯನಾದ ಸಧರ್ಮೀಯನೂ ಆದ ಆತನನ್ನೇ ಅನುಸರಿಸುತ್ತಾರೆ ಎಂದಿದೆ ಋಗ್ವೇದ–

"ಯೋ ಜಾಗಾರ ತಮೃಚಃ ಕಾಮಯಂತೇ ಯೋ ಜಾಗಾರ ತಮು ಸಾಮಾನಿ ಯಂತಿ ।
ಯೋ ಜಾಗಾರ ತಮಯಂ ಸೋಮ ಆಹ ತವಾಹಮಸ್ಮಿ ಸಖ್ಯೇ ನ್ಯೋಕಾಃ ॥"

(ಋ. ೫, ೪೪, ೧೪)

ಹೀಗೆ ಜಾಗರಣ ಶೀಲನಾದ ನರನ ಸಹಯೋಗವನ್ನು ಮನಸ್ಸಿನ ಅಧಿಪತಿಯಾದ ಸೋಮನೂ ಬಯಸಿ ಬರುತ್ತಾನೆಂದರ್ಥ.

ಈ ಭುವನದಲ್ಲಿ ಸದಾ ಜಾಗರಣಶೀಲನಾದವನು ಅಗ್ನಿಯೊಬ್ಬನೇ ಅವನೊಡನೆ ಸೋಮನು ಕೂಡಿರುತ್ತಾನೆ. ಇದರಿಂದ ಅಗ್ನೀಷೋಮಾತ್ಮಕವಾದ ವಾಙ್ಮನಃ ಸತ್ತ್ವ ಸಾಧ್ಯವಾದ ಧೀಯೋಗವು ಸಿದ್ಧಿಸುತ್ತದೆಂದರ್ಥ.

"ಅಗ್ನಿರ್ಜಾಗಾರ ತಮೃಚಃ ಕಾಮಯಂತೇ ॥" (ಋ. ೫, ೪೪, ೧೫)

ಇದು ಸಮಾನಾರ್ಥಕವಾದ ಮಂತ್ರವಾಗಿದೆ.

ಆದ್ದರಿಂದಲೇ ಪ್ರಜ್ಞಾನದಿಂದ ಸದಾಜಾಗೃತನಾಗಿರುವ ಮನುಷ್ಯನಿಗೇ ಪರಮಪುರುಷ ಸಾಕ್ಷಾತ್ಕಾರ ಯೋಗವು ಸಿದ್ಧಿಸುತ್ತದೆಯೆಂದು ಮೇಧಾತಿಥಿ ದರ್ಶನದಲ್ಲಿಯೂ ಹೇಳಿದೆ.

"ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ ।
ವಿಷ್ಣೋರ್ಯತ್ ಪರಮಂ ಪದಂ ॥" (ಋ. ೧, ೨೨, ೨೧)

"ಸಂಜಾಗೃವದ್ಭಿರ್ಜರಮಾಣ ಇಧ್ಯತೇ" (ಋ. ೧೦, ೯೧, ೧)

"ತ್ವೇ ರಯಿಂ ಜಾಗೃವಾಂ ಸೋ ಅನು ಗ್ಮನ್" (ಋ. ೬, ೧, ೨)

ಅದಕ್ಕೆ ಸಮಾನಾರ್ಥಕವಾದ ತತ್ತ್ವಗಳನ್ನು ಉಪನಿಷತ್ತುಗಳಲ್ಲಿ ಅಧ್ಯಾತ್ಮ ತತ್ತ್ವ ದರ್ಶನದಿಂದ ಎಲ್ಲರ ಅಂತರಾತ್ಮನ ಅಂತಃ ಸತ್ತ್ವದ ಜಾಗರಣದಿಂದಾಗಿ ಬ್ರಹ್ಮಾತ್ಮ ತತ್ತ್ವ ಸ್ವರೂಪವನ್ನು ತಿಳಿಸುತ್ತಿದೆ.

"ಯ ಏಷ ಸುಪ್ತೇಷು ಜಾಗರ್ತಿ ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ ।
ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ।
ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ । ಏತದ್ವೈತತ್ ॥" (ಕ.ಉ. ೫, ೮)

ಸುಪ್ತವಾಗಿರುವಾಗಲೂ ಯಾವುದು ಜಾಗೃತವಾಗಿರುತ್ತದೋ ಅದೇ ಶುಕ್ರ. ಅದೇ ಬ್ರಹ್ಮ. ಅದೇ ಅಮೃತ. ಎಲ್ಲ ಲೋಕಗಳೂ ಅದನ್ನೇ ಅವಲಂಬಿಸಿರುತ್ತವೆ. ಅದಕ್ಕೆ ಯಾರ ಅವಲಂಬನೆಯ ಅಗತ್ಯವಿಲ್ಲ. ಅದೇ ಬ್ರಹ್ಮ ತತ್. ಹೀಗೆ ನಚಿಕೇತನಿಗೆ ಯಮನ ಉಪದೇಶ. ಹೀಗೆ ಪ್ರತ್ಯಗಾತ್ಮನಿಗೆ ಜಾಗೃತಿಯೆಂಬುದು ನಿತ್ಯ ಸಿದ್ಧವಾದುದು.

ಹಾಗೆಯೇ ಅಂತರಾತ್ಮನ ಉಪಾಸನೆಗಾಗಿ ಎಲ್ಲರ ಶರೀರಾಂತರ್ಗತವಾಗಿ ಪ್ರಾಣಗಳೂ ಹಾಗೂ ವೈಶ್ವಾನರಾಗ್ನಿಯೂ ಸದಾ ಜಾಗೃತರಾಗಿರುತ್ತಾರೆ. ಪ್ರಾಣಾಗ್ನಿಗಳು ಈ ಶರೀರವೆಂಬ ಪುರದಲ್ಲಿ ಜಾಗೃತರಾಗಿರುತ್ತಾರೆ.

"ಭಗವನ್ ಏತಸ್ಮಿನ್ ಕಾನಿ ಸ್ವಪಂತಿ ಕಾನ್ಯಸ್ಮಿನ್ ಜಾಗ್ರತಿ" ಭಗವಂತನೇ ಈ ಪುರದಲ್ಲಿ ಯಾರು ಮಲಗಿರುತ್ತಾರೆ, ಯಾರು ಜಾಗೃತರಾಗಿರುತ್ತಾರೆಂಬ ಪ್ರಶ್ನೆಗೆ ಪಿಪ್ಪಲಾದರ ಉತ್ತರ, "ಪ್ರಾಣಾಗ್ನಯ ಏವ ಏತಸ್ಮಿನ್ ಪುರೇ ಜಾಗ್ರತಿ" ಎಂದು.

ಈ ಸರ್ವದಾ ಜಾಗರಣ ಶೀಲತ್ವ ಅನಿಮಿಷತ್ವ ಕಣ್ಣು ಮುಚ್ಚದಿರುವಿಕೆ ಇವೆಲ್ಲ ದೇವತಾಧರ್ಮಗಳು.

"ಅಸ್ವಪ್ನಜಸ್ತರಣಯಃ ಸುಶೇವಾ ಅತಂದ್ರಾಸೋಽವೃಕಾ ಅಶ್ರಮಿಷ್ಠಾಃ ।"

(ಋ. ೪, ೪, ೧೨)

"ನೃಚಕ್ಷಸ್ಲೋ ಅನಿಮಿಷಂತೋ ಅರ್ಹಣಾ" (ಋ. ೧೦, ೬೩, ೪)

"ಅನಿಮಿಷಾ ಅದಬ್ಧಾಃ" (ಋ. ೨, ೨೭, ೯)

ಇದನ್ನೇ ಧ್ರುವಾಸ್ಮೃತಿಯೆನ್ನುತ್ತಾರೆ. ಅದು ಅಮೃತತತ್ವದಿಂದಲೂ ಧೀಂದ್ರಿಯಗಳ ಶುದ್ಧ ಸತ್ವದಿಂದಲೂ ಲಭಿಸುತ್ತದೆ.

"ಆಹಾರಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಧ್ರುವಾ ಸ್ಮೃತಿಃ, ಸ್ಮೃತಿಲಭ್ಯೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ" (ಛಾಂ.ಉ. ೭, ೨೬, ೨)

ಅಂಥ ಯಜ್ಞ, ಯೋಗ ತಪಸ್ಸುಗಳಿಂದ ಎಲ್ಲವೂ ಸಿದ್ಧಿಸುತ್ತವೆ. ಆದ್ದರಿಂದಲೇ ಹಿಂದಿನ ಋಷಿಗಳು ಹಿಂದೆ ಹೇಳಿದಂತೆ ಅಂತರ್ಜ್ಞಾನೇಂದ್ರಿಯಗಳ ಯೋಗ, ತಪಸ್ಸು, ಪ್ರಮಾದ ರಹಿತವಾದ ಯಜ್ಞ, ಸತ್ ಅಸತ್ತುಗಳ ವಿಮರ್ಶೆಯಿಂದಾಗಿ ಸದಾ ಜಾಗೃತಿಶೀಲ ಸಂಪನ್ನರಾಗಿ ಎಲ್ಲ ಜಗತ್ತುಗಳಿಗೆ ಅಧಿಷ್ಠಾನ ರೂಪಿಯಾದ ಬ್ರಹ್ಮಚೋದನೀ ವಾಕ್ಕಿನ ಆ ಪರಮಬ್ರಹ್ಮಪದವನ್ನು ಪಡೆದರು. ಆ ಸಾಕ್ಷಾತ್ಕಾರ ರೂಪವಾದ ಸುವಿಜ್ಞಾನದಿಂದಾಗಿ ಬ್ರಹ್ಮಾತ್ಮಿಕವೂ ಛಂದಸ್ಪತಿಯೂ ಮಂತ್ರರೂಪವಾದ ಪರಾವಾಕ್ಕಿನ ದರ್ಶನವನ್ನು ಪಡೆದರು. ಅದರಿಂದಲೇ ಮಂತ್ರದ್ರಷ್ಟಾರರಾಗಿ ಬ್ರಹ್ಮರ್ಷಿಗಳಾದರು. ಹೀಗೆ ಅತೀಂದ್ರಿಯಾರ್ಥ ದರ್ಶಿಗಳಿಂದ ದೃಷ್ಟವಾದ ಮಂತ್ರಗಳನ್ನು ಇತರರೂ ಪಡೆದರು. ಆ ಬ್ರಹ್ಮಮಯಿಯಾದ ವೇದವಾಣಿಯಿಂದಲೇ ಎಲ್ಲರೂ ಆ ದಿವ್ಯವಾದ ತತ್ವಜ್ಞಾನವನ್ನೂ ವಿಜ್ಞಾನವನ್ನೂ ಸಂಪಾದಿಸಿದರು. ಈ ಅರ್ಥದಲ್ಲಿಯೇ ಬೃಹಸ್ಪತಿ ಋಷಿಯ ದರ್ಶನದ ಮಂತ್ರ–

"ಯಜ್ಞೇನ ವಾಚಃ ಪದವೀಯಮಾಯನ್ ತಾಮನ್ವವಿಂದನ್ನೃಷಿಷು ಪ್ರವಿಷ್ಟಾಂ ॥

ತಾಮಾಭೃತ್ಯಾ ವ್ಯದಧುಃ ಪುರುತ್ರಾ ತಾಂ ಸಪ್ತ ರೇಭಾ ಅಭಿ ಸಂ ನವಂತೇ ॥"

(ಋ. ೧೦, ೭೧, ೩)

ಅದರರ್ಥ : ಯಜ್ಞಾದಿ ಸಾಧನದಿಂದ ವಾಕ್ಕಿನ ಪರಮಪದದಿಂದ ಪಡೆದಂಥ ಆ ಋಷಿಗಳ ಮುಖದಿಂದ ಬಂದ ವೇದವಾಣಿಯನ್ನು ಸಪ್ತರೇಭಾಃ–ಛಲರೂಪವಾಗಿ ಅದಕ್ಕೆ

ಸಾಧನಗಳಾದ ಏಳು ನಿಯಮ ವಿಶೇಷಗಳು ಆಶ್ರಯಿಸಿರುತ್ತವೆ. ಇದನ್ನೇ ಬೇರೊಂದೆಡೆ–

ಸಪ್ತ ಮರ್ಯಾದಾಃ ಕವಯಸ್ತತಕ್ಷುಸ್ತಾಸಾಮೇಕಾಮಿದಭ್ಯಂಹುರೋ ಗಾತ್ ॥
ಆಯೋರ್ಹ ಸ್ತಂಭ ಉಪಮಸ್ಯ ನೀಳೆ ಪಥಾಂ ವಿಸರ್ಗೇ ಧರುಣೇಷು ತಸ್ಥೌ ॥

(ಋ. ೧೦, ೫, ೬)

ಇದರ ಅರ್ಥ ಹೀಗಿದೆ– ಏಳು ಧೀಂದ್ರಿಯಗಳನ್ನು ಸಂಯಮಗೊಳಿಸಿ ಸಪ್ತಮರ್ಯಾದಾರೂಪ ನಿಯಮಗಳು ಶಾಸ್ತ್ರವಿಹಿತವಾಗಿವೆ. ಪ್ರವೃತ್ತಿ-ನಿವೃತ್ತಿ-ನಿಷ್ಠಾಗಳನ್ನು ಕವಿಗಳಾದ ಮಹರ್ಷಿಗಳು ಒಂದೆಡೆ ಸೇರಿಸಿದ್ದಾರೆ. ಈ ಮರ್ಯಾದೆಗಳಲ್ಲಿ ಯಾವುದೇ ಒಂದು ಮರ್ಯಾದೆಯನ್ನು ದಾಟಿದರೂ ಮನುಷ್ಯನು ಅಪರಾಧಿಯೂ ಪಾಪಿಯೂ ಆಗುತ್ತಾನೆ. ಈ ಮರ್ಯಾದೆಗಳ ಪಾಲನೆಯಿಂದ ಎಲ್ಲ ಪ್ರಾಣಿಗಳ ಮೂಲಸ್ಥಾನವಾದ ಸರ್ವಬಂಧನದಿಂದ ಮುಕ್ತನಾಗಿ ಪರಮ ಪದದಲ್ಲಿ ಸೇರುತ್ತಾನೆ.

ಈ ಪ್ರಪಂಚದಲ್ಲಿ ವಿಶ್ವಸೃಷ್ಟಿಗಿಂತ ಮೊದಲು ಪರಮ ಪುರುಷನ ಅಂತರ್ಗತವಾಗಿ ನಿತ್ಯಸಿದ್ಧವಾದ ಋಗಾದಿ ವೇದಗಳು ಸತ್ಯಾತ್ಮವಾದವೂ ಸತ್ಯ ಮಂತ್ರರೂಪವೂ ಆಗಿವೆ. ಆ ಬ್ರಹ್ಮ ರೂಪವಾದ ವೇದ ವಾಣಿಗಳೆಂಬ ದಿವ್ಯ ಶಬ್ದಗಳಿಂದ ಮುಂದೆ ಸೃಜಿಸುವ ಎಲ್ಲ ಪ್ರಾಣಿಗಳ ವಿಶೇಷತಃ ಮಾನವರ ಹಿತಶಾಸನ ರೂಪದಿಂದ ಸರ್ವಜ್ಞಾನ ಪ್ರಕಾಶಕ್ಕಾಗಿ ಆ ಸರ್ವವಿದ್ಯೆಗಳ ಬೋಧನೆಗಾಗಿ ಸರ್ವಸ್ವ ಹವನರೂಪವಾದ ಸರ್ವಹುತ ಯಜ್ಞದಿಂದಾಗಿ ಆ ಯಜ್ಞ ಪುರುಷನಾದ ಪರಮಾತ್ಮನಿಂದಾಗಿ ವಿಶ್ವದ ಏಳ್ಗೆಗಾಗಿ ಋಗಾದಿ ವೇದಗಳು ಹುಟ್ಟಿದವು. ಇದನ್ನು ಪ್ರಸಿದ್ಧವಾದ ಪುರುಷ ಸೂಕ್ತದಲ್ಲಿ ನಾರಾಯಣ ಋಷಿಯ ದರ್ಶನದಲ್ಲಿ–

"ತಸ್ಮಾದ್ ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ॥" (ಋ. ೧೦, ೯೦, ೯)

ಅಂತೆಯೇ ಆ ಪುರುಷನ ಮುಖದಿಂದ ನಿಃಶ್ವಾಸರೂಪವಾಗಿ ಹೊರಬಂದ ಪ್ರತ್ಯಕ್ಷ ಬ್ರಹ್ಮರೂಪವಾದ ಋಗಾದಿ ವೇದಗಳನ್ನು ಹಿಂದಿನ ಮಹರ್ಷಿಗಳು ತಪಸ್ಸಿನಿಂದ ನಿರ್ವಿಕಲ್ಪ ಸಮಾಧಿಯಲ್ಲಿ ಭಗವಂತನ ಅನುಗ್ರಹದಿಂದಾಗಿ ಆತನ ಅನುಜ್ಞೆ ಹಾಗೂ ಪ್ರೇರಣೆಯಿಂದ ವಾಗ್ದೇವತೆಯ ಪ್ರಸಾದದಿಂದ ತಮ್ಮ ಅಂತಃಕರಣದಲ್ಲಿ ಕೇಳಿ ತಮ್ಮ ಅಂತಃಶ್ರವಣದಿಂದ ಪಡೆದರು. ಆದ್ದರಿಂದ ಛಂದೋರೂಪವಾದ ಕಾರಣ ಅದು ಶ್ರುತಿಯೆಂದೆನಿಸಿತು. ಅದನ್ನೇ ಛಂದೋದರ್ಶನವೆನ್ನುತ್ತಾರೆ. ಆ ದಿವ್ಯಮಂತ್ರದರ್ಶನದಿಂದಲೇ ಋಷಿಗಳು ಋಷಿತ್ವವನ್ನು ಪಡೆದರು.

"ಋಷಿರ್ವಿಪ್ರಃ ಕಾವ್ಯೇನ" (ಋ. ೮, ೭೯, ೧) ಆ ವೇದಗಳು ಬ್ರಹ್ಮಾತ್ಮನ ನಿಃಶ್ವಾಸವೆಂಬುದು ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿದೆ.

"ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ ಯದೃಗ್ವೇದೋ ಯಜುರ್ವೇದಃ ಸಾಮವೇದೋऽಥರ್ವವೇದಃ ೦... ಸರ್ವಾಣಿ ಚ ಭೂತಾನ್ಯಸ್ಯೈವ ನಿಶ್ವಸಿತಾನಿ" (ಬೃ.ಉ. ೪, ೫, ೧೧) ಇದೇ ಅರ್ಥವನ್ನು ಹೇಳುವ ಸ್ಮೃತಿಗಳೂ ಇವೆ.

"ಅನಾದಿನಿಧನಾನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।
ಆದೌ ವೇದಮಯೀ ದಿವ್ಯಾ ಯತಃ ಸರ್ವಾಃ ಪ್ರವೃತ್ತಯಃ ।।"
"ಯುಗಾಂತೇಂऽತರ್ಹಿತಾನ್ ವೇದಾನ್ ಸೇತಿಹಾಸಾನ್ ಮಹರ್ಷಯಃ ।
ಲೇಭಿರೇ ತಪಸಾ ಪೂರ್ವ ಮನುಜ್ಞಾತಾಃ ಸ್ವಯಂಭುವಾ ।।"

ಆದ್ಯಂತರಹಿತವಾದ ಬ್ರಹ್ಮನಿಂದ ಬಂದ ವೇದವಾಣಿ. ಅದರಿಂದ ಎಲ್ಲ ಜಗದುತ್ಪತ್ತಿ ಇತಿಹಾಸಗಳಿಂದ ಕೂಡಿದ ವೇದವು ಯುಗಾಂತದಲ್ಲಿ ಅಂತರ್ಧನವಾಗಿರಲು ಬ್ರಹ್ಮನಿಂದ ನುಜ್ಞಾತರಾದ ಮಹರ್ಷಿಗಳು ತಪಸ್ಸಿನಿಂದಾಗಿ ಪಡೆದರು ಎಂದು, ಅಲ್ಲದೇ ಇವುಗಳಲ್ಲಿ ಸರ್ವಮಾನವ ಹಿತಾನುಶಾಸನವಿರುವದರಿಂದ ಇದು ಶಾಸ್ತ್ರವಾಗಿದೆ. ಆದ್ದರಿಂದ ಋಗ್ವೇದಾದಿಗಳೇ ಪ್ರಧಾನವಾದ ಶಾಸ್ತ್ರಗಳು.

"ಇಳಾಮಕೃಣ್ವನ್ ಮನುಷಸ್ಯ ಶಾಸನೀಂ" । (ಋ. ೧, ೩೧, ೧೧)

ಅದರ ತಂದೆಯಾಗಿ ವೇದಾದಿಗಳ ಆವಿರ್ಭಾವಕ್ಕೆ ಕಾರಣ ಬ್ರಹ್ಮನಿಗೆ ಶಾಸ್ತ್ರಯೋನಿತ್ವ-ವನ್ನು ಹೇಳಿದ್ದಾರೆ. ಅಧಿಭೂತ ಅಧಿದೈವ ಅಧ್ಯಾತ್ಮವೆಂಬ ತತ್ವತ್ರಯ ಸಿದ್ಧವಾದ ಸರ್ವವಸ್ತುಗಳಲ್ಲಿ ಶಬ್ದಮಾತ್ರ ಪ್ರಮಾಣವಾಗಿರುವದರಿಂದ ಬ್ರಹ್ಮಮೀಮಾಂಸಾ ಸೂತ್ರ–

"ಶಾಸ್ತ್ರಯೋನಿತ್ವಾತ್", (ಬ್ರ.ಸೂ. ೧, ೧, ೩) ಅದರ ಶಾರೀರಿಕ ಭಾಷ್ಯವೂ ಕೂಡಾ, "ಮಹತಃ ಋಗ್ವೇದಾದೇಃ ಶಾಸ್ತ್ರಸ್ಯ ಅನೇಕವಿದ್ಯಾಸ್ಥಾನೋಪಬೃಂಹಿತಸ್ಯ ಪ್ರದೀಪವತ್ ಸರ್ವಾರ್ಥಾವದ್ಯೋತಿನಃ ಸರ್ವಜ್ಞಕಲ್ಪಸ್ಯ ಯೋನಿಃ ಕಾರಣಂ ಬ್ರಹ್ಮ." ಮಹತ್ತರವಾದ ಅನೇಕ ವಿದ್ಯಾಸ್ಥಾನಗಳಿಂದ ವಿಸ್ತರ ರೂಪವಾದ ಪ್ರದೀಪದಂತೆ ಸರ್ವಾರ್ಥಗಳನ್ನು ತೋರಿಸಿರುವ ಸರ್ವಜ್ಞ ಸಮಾನವಾದ ಋಗ್ವೇದಾದಿಗಳಿಗೆ ಕಾರಣರೂಪವಾದ ಬ್ರಹ್ಮ, ಹೀಗೆ ಬ್ರಹ್ಮನಿಂದ ಎಲ್ಲ ವೇದಗಳ ಆವಿರ್ಭಾವವನ್ನು ಹೇಳಿದ್ದಾರೆ.

ಅಲ್ಲದೇ ಬ್ರಹ್ಮನನ್ನು ತಿಳಿಸಲು ವೇದಾದಿ ಶಾಸ್ತ್ರಗಳೇ ಕಾರಣವಾಗಿರುವದರಿಂದ ಬ್ರಹ್ಮನಿಗೇ ಇವು ಕಾರಣವೆಂದೂ ಅಭಿಪ್ರಾಯವಿದೆ.

"ಅಥವಾ ಯಥೋಕ್ತಂ ಋಗ್ವೇದಾದಿಶಾಸ್ತ್ರಂ ಯೋನಿಃಕಾರಣಂ ಪ್ರಮಾಣಂ ತಸ್ಯ ಬ್ರಹ್ಮಣೋ ಯಥಾವತ್ ಸ್ವರೂಪಾಧಿಗಮೇ, ಶಾಸ್ತ್ರಾದೇವ ಪ್ರಮಾಣಾಜ್ಜಗತೋ ಜನ್ಮಾದಿಕಾರಣಂ ಬ್ರಹ್ಮ ಅಧಿಗಮ್ಯತೇ ಇತ್ಯಭಿಪ್ರಾಯಃ"

ಆ ವೇದವೇ ಎಲ್ಲ ವಿದ್ಯೆಗಳ ಜ್ಞಾನಗಳ ಭಾಷೆಗಳ ನಿಧಿ. ಎಲ್ಲ ವಿಶ್ವದ ಮೂಲವೂ ಅನಾದಿ ಸಿದ್ಧವೂ ಎಂದು ಎಲ್ಲ ಶಾಸ್ತ್ರಗಳ ಸಿದ್ಧಾಂತವಾಗಿದೆ.

ಅಂತೆಯೇ ಇಂದೂ ಕೂಡಾ ಭೂಮಂಡಲದಲ್ಲಿ ಪ್ರಚಲಿತವಿರುವ ಎಲ್ಲ ಸಂಸ್ಕೃತ ಪ್ರಾಕೃತಾದಿ ಭಾಷೆಗಳಿಗೆ ಛಂದಸ್ಪತಿಯಾದ ವೇದವಾಕ್ಕೇ ಮಾತೃ ಸ್ಥಾನೀಯವಾಗಿದೆ. ಆದ್ದರಿಂದಲೇ ಭಾಷಾತತ್ವ ಕೋವಿದರೆಲ್ಲರೂ ದೇವವಾಣಿಯೆಂದು ಕರೆದಿದ್ದಾರೆಂಬುದು ಬೇರೆ ಹೇಳಬೇಕಿಲ್ಲ.

ಅಲ್ಲದೇ ಎಲ್ಲ ಧರ್ಮಗಳ ಜ್ಞಾನಭಾವನಾ ಕರ್ಮ ಪುರುಷಾರ್ಥಾದಿಗಳಿಗೆ ಹಾಗೂ ಜಗತ್ತುಗಳಿಗೆ ಪರಮಾಧಿಷ್ಠಾನವು ವೇದವೇ ಆಗಿದೆ. ಶ್ರೇಯಸ್ಸು ನಿಃಶ್ರೇಯಸ್ಸು ಎಲ್ಲಕ್ಕೂ ವೇದವೇ ಪ್ರಧಾನವಾದ ಸಾಧನವಾಗಿದೆ. ಎಲ್ಲ ಮಾನವರ ಜ್ಞಾನದಲ್ಲಿ ಸಂಜೀವನದಲ್ಲಿ ಪ್ರಾಣ ಸಂಜೀವನಿಯೂ ಕೂಡಾ ವೇದವೇ ಆಗಿದೆ. ಅದರಂತೆ ಆಧುನಿಕ ಎಲ್ಲ ವಿಜ್ಞಾನಗಳಿಗೂ ಕೂಡಾ ವೇದವೇ ಪ್ರಧಾನಾಶ್ರಯವಾಗಿದೆ. ವೇದಗಳಿಂದಲೇ ಭೌತಿಕ ಯಂತ್ರಗಳ ಆವಿಷ್ಕಾರವಾಗಿದೆ. ಆಗುತ್ತಿದೆ. ಮುಂದೆಯೂ ಕೂಡ ಅನೇಕ ಯಂತ್ರಾವಿಷ್ಕರಣಗಳು ಇತೋಪ್ಯಧಿಕವಾಗಿ ವೈದಿಕ ತತ್ವ ಸಂಶೋಧನೆಯಿಂದ ಹೊರ ಬರುತ್ತಿರುವದು ಕಂಡು ಬರುತ್ತದೆ. ಹಿಂದಿನ ಪರಮರ್ಷಿಗಳ ಎಲ್ಲ ಐಶ್ವರ್ಯಧನ ಜೀವನ ಸಾಮರ್ಥ್ಯ ಎಲ್ಲ ಅಜರಾಮರವಾದ ವೇದವೇ ಆಗಿತ್ತು ಎಂಬುದಕ್ಕೆ ಯಜುರ್ಮಂತ್ರ ಸಾಕ್ಷಿಯಾಗಿದೆ.

"ಅಹೇ ಬುಧ್ನಿಯ ಮಂತ್ರಂ ಮೇ ಗೋಪಾಯ । ಯಮೃಷಯಸ್ತ್ರಯಿವಿದಾ ವಿದುಃ ।
ಋಚಃಸಾಮಾನಿ ಯಜೂꣳಷಿ, ಸಾಹಿಶ್ರೀರಮೃತಾಸತಾಂ ॥"

(ತ್ರೈ.ಬ್ರಾ. ೧, ೨, ೧, ೨೬)

"ಭದ್ರೈಷಾಂಲಕ್ಷ್ಮೀರ್ನಿಹಿತಾಽಧಿ ವಾಚಿ ॥" (ಋ. ೧೦, ೭೧, ೨)

"ವೇದದಲ್ಲಿ ಮಂತ್ರ ಹಾಗೂ ಬ್ರಾಹ್ಮಣಗಳ ಸ್ವರೂಪ"

ಎಲ್ಲ ವೇದಗಳಲ್ಲಿಯೂ ಮಂತ್ರ ಬ್ರಾಹ್ಮಣಗಳೆಂಬ ಭೇದವಿದ್ದೇ ಇದೆ. ಗಾಯತ್ರ್ಯಾದಿ ಛಂದೋಬದ್ಧವಾದ ಸಂಹಿತಾ ನಿಬಂಧನೆಗೊಳಪಟ್ಟವು ಮಂತ್ರಗಳು. ಅವುಗಳಿಗೆ ಬ್ರಹ್ಮ ಎಂತಲೂ ಛಂದಸ್ಸುಗಳೆಂದೂ ಕರೆಯುವದು ವೈದಿಕ ಪರಂಪರೆ.

"ಪ್ರ ನೂನಂ ಬ್ರಹ್ಮಣಸ್ಪತಿರ್ಮಂತ್ರಂ ವದತ್ಯುಕ್ಥ್ಯಂ ।" (ಋ. ೧, ೪೦, ೫)

"ಅಹೇ ಬುಧ್ನಿಯ ಮಂತ್ರಂ ಮೇ ಗೋಪಾಯ ॥" (ತೈ.ಬ್ರಾ. ೧,೧,೧೦,೩)

ಅದರಂತೆ ಬ್ರಹ್ಮವೆಂದು.

"ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತೇ" (ಋ. ೨, ೨೩, ೧)

"ಉಸ್ರಾ ಇವ ಸೂರ್ಯೋ ಜ್ಯೋತಿಷಾ ಮಹೋ ವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ"

(ಋ. ೨, ೨೩, ೨)

"ಬ್ರಹ್ಮಣಾ ತೇ ಬ್ರಹ್ಮಯುಜಾ ಯುನಜ್ಮಿ" (ಋ. ೩, ೩೫, ೪)

"ಅಮನ್ಯಮಾನಾꣲ ಅಭಿ ಮನ್ಯಮಾನೈರ್ನಿರ್ಬ್ರಹ್ಮಭಿರಧಮೋ ದಸ್ಯುಮಿಂದ್ರ"
(ಋ. ೧, ೩೩, ೯)

"ಬ್ರಹ್ಮಣಾಗ್ನಿಃ ಸಂವಿದಾನೋ ರಕ್ಷೋಹಾ ಬಾಧತಾಮಿತಃ" (ಋ. ೧೦, ೧೬೨, ೧)

ಹೀಗೆ ನೂರಾರು ಪ್ರಮಾಣಗಳಿವೆ. ಹೀಗೆ ಬ್ರಹ್ಮ ಮತ್ತು ಮಂತ್ರ ಸಂಜ್ಞೆಗಳಲ್ಲದೇ ಛಂದಃ ಎಂಬ ಸಂಜ್ಞೆಯೂ ಇದೆ.

"ತಸ್ಮಾದ್ ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ॥" (ಋ. ೧೦, ೯೦, ೧)

"ಯಶ್ಛಂದಸಾಮೃಷಭೋ ವಿಶ್ವರೂಪಃ । ಛಂದೋಭ್ಯೋಽಧ್ಯಮೃತಾತ್ಸಂಬಭೂವ ॥"
(ತೈ. ಉ. ೧, ೪ ವೈಶ್ವದೇವಕಾಂಡೇ)

ಆದ್ದರಿಂದ ಆ ಮಂತ್ರಗಳ ಛಂದಃ ಸಂಹಿತೆಗಳಿಗೇ "ಋಕ್-ಯಜುಃ-ಸಾಮ" ಸಂಜ್ಞೆಗಳು ಶಾಸ್ತ್ರದಲ್ಲಿ ತಿಳಿಸಿವೆ ಮತ್ತು ವೈದಿಕ ಯಜ್ಞಗಳಲ್ಲಿ ಕ್ರಮವಾಗಿ ಶಂಸನ-ಯಜನ-ಸ್ತವನಗಳನ್ನು ಆ ವೇದಗಳಿಗೆ ವಿಧಿಸಿದ್ದಾರೆ.

"ಋಚೈವ ಹೌತ್ರಂ ಕುರ್ಯಾದ್, ಯಜುಷಾಽಽಧ್ವರ್ಯವಮ್, ಸಾಮ್ನೋದ್ಗೀಥಂ" (ಐ.ಬ್ರಾ. ೫, ೫೦, ೧)

ಋಗ್ವೇದದಿಂದ ಹೋತಾ, ಯಜುರ್ವೇದದಿಂದ ಅಧ್ವರ್ಯು, ಸಾಮವೇದದಿಂದ ಉದ್ಗಾತಾ ಯಜ್ಞಗಳಲ್ಲಿ ತಮ್ಮ ತಮ್ಮ ಕರ್ತವ್ಯಗಳನ್ನು ನಡೆಸಬೇಕೆಂದು ವಿಧಿಸಿದ್ದಾರೆ. "ಋಗ್ಭಿಃ ಶಂಸಂತಿ, ಯಜುರ್ಭಿರ್ಯಜಂತೇ, ಸಾಮಭಿಃ ಸ್ತುವಂತಿ" ಎಂದು ಅದನ್ನು ವಿವರಿಸಿದ್ದಾರೆ. ಋಗ್ಯಜುಃ ಸಾಮ ಮಂತ್ರಗಳಿಂದ ಶಂಸನ ಯಜನಾದಿಗಳನ್ನು ವಿಧಿಸಿದ್ದರಿಂದ ಆ ಋಗಾದಿಗಳಿಗೆ ಮಂತ್ರವೆಂಬ ಸಂಜ್ಞೆಯೆಂಬುದು ಬ್ರಾಹ್ಮಣಾದಿ ವಚನಗಳಿಂದ ಸಿದ್ಧವಾಗಿದೆ.

ಆ ಋಕ್-ಯಜುಃ-ಸಾಮಗಳ ಸ್ವರೂಪವನ್ನು ಮಿತತ್ವ, ಅಮಿತತ್ವ, ಸ್ವರತ್ವವೆಂದು, "ಋಗ್ಗಾಥ್ಯಕುಂಬ್ಯಾತನ್ಮಿತಂ, ಯಜುರ್ನಿಗದೋ ವೃಥಾ ವಾಕ್ತದಮಿತಂ, ಸಾಮ ಸ್ವರಃ, (ಐ-ಆ ೨, ೩, ೬) ಎಂದು

ಇದನ್ನೇ ಧರ್ಮಮೀಮಾಂಸಾ ಸೂತ್ರದಲ್ಲಿ ಜೈಮಿನಿ, "ತೇಷಾಂ ಋಗ್ಯತ್ರಾರ್ಥವಶೇನ ಪಾದವ್ಯವಸ್ಥಾ, ಗೀತಿಷು ಸಾಮಾಖ್ಯಾ, ಶೇಷೇ ಯಜುಃ ಶಬ್ದಃ" (ಜೈ.ಸೂ. ೧)

ಅದರಲ್ಲಿ ಗಾಯತ್ರ್ಯಾದಿ ಛಂದೋರೂಪವಾಗಿ ಅರ್ಥಕ್ಕನುಗುಣವಾಗಿ ಒಂದು-ಎರಡು, ಮೂರು, ನಾಲ್ಕು, ಐದು ಪಾದಾದಿಗಳನ್ನು ನಿಯಮಿಸಿ ಋಕ್ ಲಕ್ಷಣ ಹೇಳಿದ್ದಾರೆ.

(ಅದೇ ಮಿತತ್ವ). ಆ ಋಕ್ಕಗಳಿಗೇ ಸಸ್ವರ ಗಾನ ಸಾಮವೆನ್ನಿಸಿಕೊಳ್ಳುತ್ತದೆ. "ತಸ್ಮಾದೃಚ್ಯ-ಧ್ಯೂಢಂ ಸಾಮ ಗೀಯತೇ" (ಛಾಂ.ಉ. ೧, ೬, ೧). ಅದರಂತೆ ಯಜುಸ್ಸಿನ ಲಕ್ಷಣ ಹೇಳುವಾಗ 'ಶೇಷೇ ಯಜುಃ ಶಬ್ದಃ' ಈ ಲಕ್ಷಣಗಳಿಗೆ ಹೊರತಾದ್ದು ಯಜುಸ್ಸು ಎಂದು ಹೇಳಿದ್ದರೂ "ಅನಿಯತಾಕ್ಷರಪಾದಾನಿ ಯಜೂಂಷಿ ಭವಂತಿ", ನಿಯತವಿಲ್ಲದ ಅಕ್ಷರ, ಪದಗಳುಳ್ಳವು ಯಜುಸ್ಸು ಎಂದಿದ್ದಾರೆ. ಇದೇ ಯಜುರ್ಮಂತ್ರಗಳ ಅಮಿತತ್ವವೆಂಬುದು. ಹೀಗೆ ಸ್ತೋತ್ರ, ಗಾನ, ಯಜನಾದಿಗಳು ಈ ಮಂತ್ರಗಳಿಂದಲೇ ನಡೆಯುತ್ತವೆ.

ವೇದ ಎಂಬ ಶಬ್ದವೂ ಕೂಡ ಪ್ರಾಧಾನ್ಯವಾಗಿ ಸಂಹಿತಾಮಂತ್ರಗಳಿಗೆ ಅನ್ವಯಿಸುತ್ತದೆ.

"ಯಃ ಸಮಿಧಾ ಯ ಆಹುತೀ ಯೋ ವೇದೇನ ದದಾಶ ಮರ್ತೋ ಅಗ್ನಯೇ ಯೋ ನಮಸಾ ಸ್ವಧ್ವರಃ"

(ಋ. ೮, ೧೯, ೫)

ಯಾವ ಒಳ್ಳೇ ಯಜ್ಞ ಮಾಡುವವನು ಸಮಿಧಗಳಿಂದ ಆಹುತಿಗಳಿಂದ ವೇದಗಳಿಂದ ನಮಸ್ಕಾರಗಳಿಂದ ಉಪಚರಿಸುವನೋ, ಆ ಯಜ್ಞ ಹಾಗೂ ಯಜ್ಞದಲ್ಲಿಯ ಹವನಾದಿಗಳೂ ಮಂತ್ರಾತ್ಮಕವಾದ ವೇದದಿಂದಲೇ ಸಿದ್ಧಿಸುತ್ತವೆ. ಬ್ರಾಹ್ಮಣಾದಿ ವಾಕ್ಯಗಳಿಂದ ಹವನಾದಿಗಳನ್ನಾಗಲೀ ಸ್ತೋತ್ರ ಗಾನಾದಿಗಳನ್ನಾಗಲೀ ವಿಧಿಸಲಿಲ್ಲ. ಬ್ರಾಹ್ಮಣ ವಾಕ್ಯಗಳು ವಿಧಾಯಕವಾಗಿಯೂ ಕೆಲವೆಡೆ ಮಂತ್ರ ಭಾಷ್ಯಾತ್ಮಕವಾಗಿಯೂ ಇವೆ.

"ಮಂತ್ರಬ್ರಾಹ್ಮಣಯೋರ್ವೇದನಾಮಧೇಯಂ" ಎಂಬುದರಿಂದ ಬ್ರಾಹ್ಮಣಗಳಿಗೆ ವೇದತ್ವ ಸಿದ್ಧವಾದರೂ ಕೂಡ ಆ ಬ್ರಾಹ್ಮಣವಾಕ್ಯಗಳಿಂದ ಹವನಾದಿರೂಪ ಯಜ್ಞಗಳು ಸಿದ್ಧಿಸುವದಿಲ್ಲ. ಆ ಬ್ರಾಹ್ಮಣವಾಕ್ಯಗಳು ವೇದದಲ್ಲಿಯ ವಿಷಯವನ್ನು ತಿಳಿಸುತ್ತ ವೇದದ ಉಪಸರ್ಜನ ಪರಿಶಿಷ್ಟದಂತಿವೆಯೆಂಬುದು ಬ್ರಾಹ್ಮಣವಾಕ್ಯದಿಂದಲೇ ಸಿದ್ಧವಾಗುತ್ತದೆ. ಬ್ರಾಹ್ಮಣ, ಆರಣ್ಯಕ ಉಪನಿಷತ್ತುಗಳು ತಾವು ಹೇಳಿದ ಮಾತಿಗೆ ಪ್ರಮಾಣವಾಗಿ ಋಕ್ಕಗಳನ್ನೇ ಉದಾಹರಿಸುತ್ತವೆ, ಹೀಗೆ ಋಕ್ಕಿನಲ್ಲಿ ಹೇಳಿದೆ ಎಂದು ಮುಂತಾಗಿ–

"ತದೇತದೃಚಾಭ್ಯನೂಕ್ತಂ, ತದಪ್ಯೇತದೃಷಿಣೋಕ್ತಂ, ತದಪ್ಯೇಷಶ್ಲೋಕೋ ಭವತಿ, ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೆ, ಗರ್ಭಏವೈತಚ್ಛಯಾನೋ ವಾಮದೇವ ಏವಮುವಾಚ" ಎಂದು, ಬ್ರಾಹ್ಮಣದಲ್ಲಿ ಶುನಃಶೇಪಾಖ್ಯಾನದಲ್ಲಿ (ಐ.ಬ್ರಾ.) ಇನ್ನೂ ಸ್ಪಷ್ಟವಿದೆ.

"ಶೌನಃ ಶೇಪಮಾಜೀಗರ್ತಿ ವರುಣೋಽಗೃಹ್ಣಾತ್ । ಸ ಏತಾಂ ವಾರುಣೀಮಪಶ್ಯತ್ । ಉದುತ್ತಮಂ ವರುಣ ಪಾಶಮಸ್ಮದಿತ್ಯಾಹ, ವರುಣ ಪಾಶಾದೇವೈನಂ ಮುಂಚತಿ" ಹೀಗೆ ಅನೇಕ ಕಡೆಗಳಲ್ಲಿ ಕಾಣಬಹುದು. ದಿಗ್ದರ್ಶನ ಮಾತ್ರ ಮಾಡಿದೆ. ಮುಂದೆ ಬ್ರಾಹ್ಮಣ ಆರಣ್ಯಕ ಉಪನಿಷತ್ ಪ್ರಕರಣಗಳಲ್ಲಿ ವಿಸ್ತರಿಸಲಾಗುವದು.

"ಆರ್ಷೇಯ-ಛಂದೋ-ದೈವತ-ಬ್ರಾಹ್ಮಣಗಳು, ಬ್ರಾಹ್ಮಣ, ಆರ್ಷೇಯ ಛಂದ ದೈವತಗಳು"

ಋಗ್ವೇದಾದಿ ಎಲ್ಲ ವೇದಗಳಲ್ಲಿ ಎಲ್ಲ ಮಂತ್ರಗಳ ಋಷಿ ಛಂದ ದೈವತ ಬ್ರಾಹ್ಮಣ, ಇವು ಬೇರೆ ಬೇರೆಯಾಗಿವೆ. ಇವುಗಳನ್ನು ತಿಳಿಯದೇ ಅಧ್ಯಯನ, ಅಧ್ಯಾಪನ, ಯಜನ, ಯಾಜನಗಳನ್ನು ಮಾಡಿದಲ್ಲಿ ಯಾತಯಾಮತಾ ಎಂಬ ದೋಷ ಬರುತ್ತದೆಂದು ಮಹರ್ಷಿಗಳು ತಿಳಿಸಿದ್ದಾರೆ. ಅದನ್ನು ಅವಶ್ಯವಾಗಿ ತಿಳಿಯಬೇಕೆಂದು ಬ್ರಾಹ್ಮಣದಲ್ಲಿ ಪ್ರಮಾಣವಚನವಿದೆ.

"ಯೋ ಹ ವಾ ಅವಿದಿತಾರ್ಷೇಯಚ್ಛಂದೋದೈವತ ಬ್ರಾಹ್ಮಣೇನ ಮಂತ್ರೇಣ ಯಜತೇ ಯಾಜಯತಿ ವಾ ಅಧೀತೇಽಧ್ಯಾಪಯತಿ ವಾ ಯಾತಯಾಮಾನ್ಯಸ್ಯಛಂದಾ ಸಿ ಭವಂತಿ, ತಸ್ಮಾತ್ತಾನಿ ಮಂತ್ರೇ ಮಂತ್ರೇ ವಿದ್ಯಾತ್" (ಛಾಂ.ಬ್ರಾ.)

ಇದೇ ಅರ್ಥವನ್ನು ಹೇಳುವ ಕಾತ್ಯಾಯನಕೃತ ಋಗ್ವೇದ ಪರಿಭಾಷಾಸೂತ್ರಂ, "ಅಥ ಋಗ್ವೇದಾಮ್ನಾಯೇ ಶಾಕಲಕೇ ಸೂಕ್ತಪ್ರತೀಕಋಕ್‌ಸಂಖ್ಯಾಋಷಿದೈವತಛಂದಾಂಸ್ಯನುಕ್ರಮಿಷ್ಯಾಮೋ ಯಥೋಪದೇಶಂ, ನ ಹ್ಯೇತತ್‌ಜ್ಞಾನಮೃತೇ ಶ್ರೌತಸ್ಮಾರ್ತಕರ್ಮಪ್ರಸಿದ್ಧಿಃ, ಮಂತ್ರಾಣಾಂ ಬ್ರಾಹ್ಮಣಾರ್ಷೇಯಚ್ಛಂದೋದೈವತವಿದ್ ಯಾಜನಾಧ್ಯಾಪನಾಭ್ಯಾಂ ಶ್ರೇಯೋಽಧಿಗಚ್ಛತಿ ಏತಾಭ್ಯಾಮೇವ, ಯದಿ ಅನೇವಂವಿದೋ ಯಾಜಯಂತಿಯಾತಯಾಮಾನಿಚ್ಛಂದಾಂಸಿ ಭವಂತಿ, ಸ್ಥಾಣುಂ ವರ್ಚ್ಛತಿ ಗರ್ತೇ ವಾ ಪಾತ್ಯತೇ ಪ್ರಮೀಯತೇ ವಾ ಪಾಪೀಯಾನ್ ಭವತೀತಿ ವಿಜ್ಞಾಯತೇ (ಋ.ಪ.ಸೂ. ೧, ೧)

ಇದರಿಂದ ಋಷಿ ದೈವತ ಛಂದಸ್ಸು, ಬ್ರಾಹ್ಮಣಗಳ ಜ್ಞಾನದ ಹೊರತಾಗಿ ಕಲಿತ ಕಲಿಸಿದ ಯಜ್ಞಾದಿ ಕರ್ಮಗಳಲ್ಲಿ ವಿನಿಯೋಗಿಸಿದ ಮಂತ್ರಗಳು ನೀರಸವೂ, ಫಲರಾಹಿತ್ಯವುಳ್ಳವೂ ಆಗುವವು ಎಂಬುದು ಸಿದ್ಧ.

ಆದ್ದರಿಂದ ಸರ್ವವೇದ ಪ್ರಧಾನವಾದ ಗಾಯತ್ರೀಮಂತ್ರಕ್ಕೆ ಉಪನಿಷನ್ ಮುಖೇನ ಋಷಿದೈವತಾದಿಗಳನ್ನು ತಿಳಿಸಿದೆ.

"ಗಾಯತ್ರ್ಯಾ ಗಾಯತ್ರೀಛಂದೋ ವಿಶ್ವಾಮಿತ್ರಋಷಿಃ ಸವಿತಾ ದೇವತಾ ಅಗ್ನಿರ್ಮುಖಂ, ಬ್ರಹ್ಮಾಶಿರೋ ವಿಷ್ಣುರ್ಹೃದಯಂ, ರುದ್ರಃ ಶಿಖಾ, ಪೃಥಿವೀ ಯೋನಿಃ, ಪ್ರಾಣಾಪಾನವ್ಯಾನೋದಾನ-ಸಮಾನಾ ಸ ಪ್ರಾಣಾಶ್ವೇತವರ್ಣಾ ಸಾಂಖ್ಯಾಯನ ಸಗೋತ್ರಾ ಗಾಯತ್ರೀ ಚತುರ್ವಿಂಶತ್ಯಕ್ಷರಾ ತ್ರಿಪದಾ ಷಟ್‌ಕುಕ್ಷಿಃ ಪಂಚಶೀರ್ಷಾ ಉಪನಯನೇ ವಿನಿಯೋಗಃ" (ನಾ.ಉ. ೩೦, ೧೪)

ಇಲ್ಲೆಲ್ಲಾ "ಬ್ರಾಹ್ಮಣಂ", ಎಂಬ ನಿರ್ದಿಷ್ಟಪದವು ಮಂತ್ರಗಳ ವಿನಿಯೋಗವನ್ನು ತಿಳಿಸುತ್ತದೆ. ಅದರಿಂದ ಬ್ರಾಹ್ಮಣ ವಚನಗಳಿಗೆ ಕಲ್ಪರೂಪವನ್ನು ಕೊಟ್ಟಂತಾಗಿದೆ.

॥ ಬ್ರಾಹ್ಮಣ ॥ (ಗ್ರಂಥ)

"ಬ್ರಹ್ಮಣಃ ಇದಂ ಬ್ರಾಹ್ಮಣಂ", ಎಂಬ ವ್ಯುತ್ಪತ್ತಿಯಿಂದ ಬ್ರಹ್ಮ ಎಂದರೆ ವೇದಮಂತ್ರ. ತತ್ಸಂಬಂಧಿ ವಾಙ್ಮಯಗಳು ಬ್ರಾಹ್ಮಣಗಳು, ಇಲ್ಲಿ ಕೆಲವೆಡೆ ವೇದಮಂತ್ರಗಳ ಪ್ರಯೋಗ ವಿಧಿ

ವಿಧಾನಗಳು ಅಲ್ಲಲ್ಲಿ ಮಂತ್ರವ್ಯಾಖ್ಯಾನಗಳೂ ಇದ್ದು ಸಾಮಾನ್ಯವಾಗಿ ಗದ್ಯಾತ್ಮಕವಾಗಿವೆ. ಅಲ್ಲಿಯೂ ಕೂಡ ಯಜ್ಞಾದಿ ವಿಧಿ ವಿಧಾನವನ್ನು ತಿಳಿಸುವದು ಬ್ರಾಹ್ಮಣ. ಮಂತ್ರಾರ್ಥ ವ್ಯಾಖ್ಯಾನಗಳು ಅನು ಬ್ರಾಹ್ಮಣಗಳು. ಬೌಧಾಯನ ಕಾಂಡಾನುಕ್ರಮಣಿಕಾ ಸೂತ್ರದಲ್ಲಿ–

"ಪೌರೋಡಾಶಿಕಂ ಯಾಜಮಾನಂ ಹೋತಾರಃ ಹೌತ್ರಂ ಪಿತೃಮೇಧಃ" ಇತಿ "ಸ ಬ್ರಾಹ್ಮಣಾನಿಸಾನುಬ್ರಾಹ್ಮಣಾನಿ ಪ್ರಾಜಾಪತ್ಯಾನಿ" (ಬೌ.ಗೃ. ಕಾ.ಸೂ. ಪ್ರಶ್ನ: ೩/೩) ಇಲ್ಲಿ ಬ್ರಾಹ್ಮಣ ಅನುಬ್ರಾಹ್ಮಣವೆಂದು ವಿಂಗಡಿಸಲಾಗಿದೆ.

ಬ್ರಾಹ್ಮಣಾಂತರ್ಗತವಾಗಿ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳಿವೆ.

ಬ್ರಾಹ್ಮಣ : ಕೇವಲ ಯಜ್ಞಾದಿಕರ್ಮ ಕಾಂಡವಿಷಯ ಪ್ರಧಾನವಾದದ್ದು.

ಆರಣ್ಯಕ : ಪ್ರಾಣೋಪಾಸನಾದಿ ವಿಷಯ ಪ್ರಧಾನವಾಗಿದ್ದು ಅರಣ್ಯದಲ್ಲಿಯೇ ಏಕಾಂತವಾಗಿ ಅಧ್ಯಯನ ಉಪಾಸನಾದಿಗಳನ್ನು ವಿಧಿಸಿದೆ.

ಉಪನಿಷತ್ : ಅಧ್ಯಾತ್ಮ ತತ್ವಗಳಿಂದ ಕೂಡಿದ್ದು ಜ್ಞಾನಪ್ರಧಾನವಾದ ಅಧ್ಯಾತ್ಮವಿದ್ಯಾ ವಿಷಯವುಳ್ಳ ವಾಙ್ಮಯ. ಈ ಮೂರೂ ಗ್ರಂಥಗಳೂ ಬ್ರಾಹ್ಮಣಾಂತರ್ಗತವಾಗಿವೆ. ಆರಣ್ಯಕ ಉಪನಿಷತ್ತುಗಳನ್ನು ಬ್ರಾಹ್ಮಣವೆಂದೇ ಹೆಸರಿಸಿದ್ದಾರೆ. ಅದರಲ್ಲಿಯೂ ಪ್ರಸಿದ್ಧವಾದ ಉಪನಿಷತ್ತುಗಳು ಕೆಲವು ಮಂತ್ರರೂಪವಾಗಿಯೂ, ಶ್ಲೋಕರೂಪವಾಗಿಯೂ, ಗದ್ಯರೂಪವಾಗಿಯೂ ಇವೆ. ಬ್ರಾಹ್ಮಣ ಗ್ರಂಥಗಳು ಹೆಚ್ಚಾಗಿ ಗದ್ಯರೂಪವಾಗಿಯೇ ಇದ್ದುದರಿಂದ ಉಪನಿಷತ್ತುಗಳನ್ನೂ ಬ್ರಾಹ್ಮಣವೆಂದೇ ಹೆಸರಿಸಿ ಬ್ರಾಹ್ಮಣದಲ್ಲಿಯೇ ಅಂತರ್ಭಾವಗೊಳಿಸುವದು ಪ್ರಾಚೀನ ಆಚಾರ್ಯರಿಗೆ ಸಮ್ಮತವಾದುದು.

"ಮಂತ್ರ ಬ್ರಾಹ್ಮಣಯೋರ್ವೇದನಾಮಧೇಯಂ" ಇಲ್ಲಿ ಇವೆರಡನ್ನೇ ನಿರ್ದೇಶಿಸಿ, ಇವುಗಳಲ್ಲಿ ಆರಣ್ಯಕ, ಉಪನಿಷತ್ತುಗಳನ್ನು ಬೇರೆಯಾಗಿ ತೋರಿಸಿಲ್ಲ.

ಋಗ್ವೇದದಲ್ಲಿ, ಬ್ರಾಹ್ಮಣ, ಆರಣ್ಯಕ ಎಂದು ಎರಡು ಗ್ರಂಥಗಳಿವೆ. ಅವೆರಡೂ ಗದ್ಯಾತ್ಮಕವಾಗಿವೆ. ಆ ಆರಣ್ಯಕದಿಂದಲೇ ಉಪನಿಷತ್ ಭಾಗವನ್ನು ಬೇರೆಯಾಗಿ ಸಂಗ್ರಹಿಸಲಾಗಿದೆ. ಅಲ್ಲಿ ಆಧ್ಯಾತ್ಮಿಕ ವಿಷಯಗಳಿರುವದರಿಂದ ಬ್ರಹ್ಮಸೂತ್ರದಲ್ಲಿ ಅದರ ಅಧಿಕರಣವಿರುವದರಿಂದ ವೇದಾಂತಶಾಸ್ತ್ರ ಕೋವಿದರು ಇದರಲ್ಲಿ ಸಹಭಾಗಿಗಳಾಗಿದ್ದಾರೆ.

ತೈತ್ತರೀಯ ಕೃಷ್ಣ ಯಜುರ್ವೇದದಲ್ಲಿಯೂ ಇದು ಸಮಾನವಾಗಿದೆ. ಅಲ್ಲಿ ಕಾಂಡಾನುಕ್ರಮಣಿಕೆಯಲ್ಲಿ ಮಂತ್ರ ಬ್ರಾಹ್ಮಣಗಳೆರಡೂ ತೋರುತ್ತವೆ. ಅಂತೆಯೇ ವೈಶ್ವದೇವ ಕಾಂಡದಲ್ಲಿ ಕೊನೆಗೆ– ಅಚ್ಛಿದ್ರಾಣಿ ಪಶುಹೌತ್ರಂ "ಉಪನಿಷದಃ" ಎಂದು ನಿರ್ದಿಷ್ಟವಾದ ಭಾಗವನ್ನು ಕಾರಿಕೆಯಲ್ಲಿ ಬಣ್ಣಿಸಿದ್ದಾರೆ. "ಶಂನಃ ಸಾಹಿತ್ಯುಪನಿಷದ್ ಯಾಜ್ಞಿಕ್ಯಂಭಸ್ಯ ವಿಶ್ರುತಾ,

ಭೃಗುರ್ಬ್ರಹ್ಮೇತಿ ವಾರುಣ್ಯಃ ಪ್ರೋಕ್ತಾ ವೇದವಿದಾ ಇಮೇ" ಬೌಧಾಯನಾದಿ ಸೂತ್ರಾನುಸಾರವಾಗಿ ಮಂತ್ರ, ಬ್ರಾಹ್ಮಣಗಳು ಬೇರೆ ಬೇರೆಯಾಗಿವೆ. ಸಾರಸ್ವತ ಪಾಠಕ್ರಮದಲ್ಲಿ ಮಂತ್ರ, ಬ್ರಾಹ್ಮಣ, ಆರಣ್ಯಕ ಎಂದು ಮೂರು ಗ್ರಂಥಗಳು ಪ್ರಚಲಿತವಾಗಿವೆ. ಮೂರೂ ಗ್ರಂಥಗಳಲ್ಲಿ ಮಂತ್ರ ಹಾಗೂ ಬ್ರಾಹ್ಮಣಗಳ ಸೇರುವಿಕೆ ಕಂಡು ಬರುತ್ತದೆ.

ಶುಕ್ಲ ಯಜುರ್ವೇದದಲ್ಲಿ ಮಂತ್ರಭಾಗ ಸಂಹಿತಾಗ್ರಂಥ ಹಾಗೂ ಶತಪಥ ಬ್ರಾಹ್ಮಣವೆಂದು ಎರಡು ಗ್ರಂಥಗಳಿವೆ. ಈ ಬ್ರಾಹ್ಮಣದಲ್ಲಿ ಉಪನಿಷದ್ ಭಾಗವೂ ಅಂತರ್ಗತವಾಗಿದೆ. ಅದಕ್ಕೆ ಬೃಹದಾರಣ್ಯಕೋಪನಿಷತ್ ಎಂದು ಹೆಸರು. ಅಲ್ಲಿ ಸಾಮಾನ್ಯತಃ ಬ್ರಾಹ್ಮಣ ಭಾಗವೆಲ್ಲ ಗದ್ಯರೂಪಾತ್ಮಕವಾಗಿದೆ. ಈಶಾವಾಸ್ಯೋಪನಿಷತ್ತೆಂದು ಪ್ರಸಿದ್ಧ ವಾದದ್ದೊಂದು ಮಾತ್ರ ಮಂತ್ರಾತ್ಮಕವಾಗಿದೆ. ಅದನ್ನು ಶುಕ್ಲ ಯಜುರ್ವೇದದಲ್ಲಿ ಶತಪಥ ಬ್ರಾಹ್ಮಣದಲ್ಲಿ ಕೊನೆಗೆ ಹೇಳಿದ್ದಾರೆ. ಆ ಸಂಹಿತೆಯಲ್ಲಿ ಕೊನೆಯದಾದ ೪೦ನೇ ಅಧ್ಯಾಯ ರೂಪವಾಗಿ ಆಮೇಲೆ ಸೇರಿಸಿದ್ದಾಗಿ ಕಂಡು ಬರುತ್ತದೆ. ಶ್ವೇತಾಶ್ವತರ ಮಂತ್ರೋಪನಿಷತ್ತೂ ಮಂತ್ರರೂಪವಾಗಿ ಸಂಗ್ರಹೀತವಾಗಿದೆ. ಪ್ರಸಿದ್ಧವಾದ ಕೌಷೀತಕೀ ಬ್ರಾಹ್ಮಣೋಪನಿಷತ್ತು ಬ್ರಾಹ್ಮಣರೂಪವಾಗಿದ್ದು ಉಪನಿಷತ್ತುಗಳಲ್ಲಿ ಗೃಹೀತವಾಗಿದೆ. ಬ್ರಹ್ಮಸೂತ್ರದ ಪ್ರತರ್ದ-ನಾಧಿಕರಣದಲ್ಲಿ ಪ್ರಸಿದ್ಧವಾದ ಪ್ರಾಣಾಧಿಕರಣದಲ್ಲಿ ಪ್ರಮಾಣಾರ್ಥವಾಗಿ ಸ್ವೀಕೃತವಾಗಿದೆ. ಕೃಷ್ಣಯಜುರ್ವೇದಾಂತರ್ಗತ ತೈತ್ತರೀಯಾರಣ್ಯಕದಲ್ಲಿ ಕಠೋಪನಿಷತ್ತು ಪ್ರಸಿದ್ಧವಾಗಿದೆ. ಅದಕ್ಕೆ ಕಾಠಕ ಬ್ರಾಹ್ಮಣವೆಂದೂ ಹೇಳುತ್ತಾರೆ. ಮೈತ್ರಾಯಣೀಯ ಶಾಖೆಯಲ್ಲಿ ಕಠಶಾಖೆ-ಯಲ್ಲಿಯೂ ಕೂಡ ಬ್ರಾಹ್ಮಣಾರಣ್ಯಕರೂಪವಾದ ಮೂರೂ ಭಾಗಗಳು ಪಠಿತವಾಗಿವೆ. ಸಾಮವೇದದಲ್ಲಿಯೂ ಅಥರ್ವವೇದದಲ್ಲಿಯೂ ಅದು ಸಮಾನವಾಗಿದೆ. ವಸ್ತುತಃ ಜ್ಞಾನೋಪಾಸನಾದಿ ವಿಷಯ ಭೇದದಿಂದ ಗ್ರಂಥವು ಬೇರೆಯಾಗಿದೆ. ಮಂತ್ರ ಬ್ರಾಹ್ಮಣ ಲಕ್ಷಣರೂಪದಿಂದ ಹೊರತಾಗಿ ಮೂರು ನಾಲ್ಕನೆಯ ಯಾವ ಲಕ್ಷಣಗಳೂ ಹೊಂದುವದಿಲ್ಲ.

ಹೀಗೆ ಬ್ರಾಹ್ಮಣ ಆರಣ್ಯಕ ಉಪನಿಷತ್ತುಗಳೆಂಬ ಗ್ರಂಥಗಳಲ್ಲಿ ಅಲ್ಲಲ್ಲಿ ಪ್ರಸಂಗೋಪಾತ್ತವಾಗಿ ಕರ್ಮ-ಉಪಾಸನಾ-ಜ್ಞಾನ-ಕಾಂಡಗಳ ಪ್ರಯೋಜನವನ್ನು ಹೇಳಿದ್ದಾರೆ. ಅದರ ಉಪವ್ಯಾಖ್ಯಾನಕ್ಕೆ ಪ್ರಮಾಣಭೂತವಾದ ಋಗಾದಿ ಮಂತ್ರಗಳನ್ನೂ ಉಪದೇಶಿಸು-ತ್ತಾರೆ. ಅಲ್ಲಲ್ಲಿ ಮಂತ್ರಗಳಿಗೆ ಪಾದಶಃ ಅಂಶತಃ ಹಾಗೂ ಸಮಗ್ರವಾಗಿ ಅರ್ಥೈಸಿದ್ದಾರೆ. ಇದೂ ಸಹ ಬ್ರಾಹ್ಮಣ ವಾಕ್ಯಗಳ ಮಂತ್ರಾರ್ಥರೂಪತ್ವದಲ್ಲಿ ಪ್ರಮಾಣವಾಗಿವೆ.

"ಇಮಾಂ ಧಿಯಂ, ಶಿಕ್ಷಮಾಣಸ್ಯ ದೇವ ಕ್ರತುಂ ದಕ್ಷಂ ವರುಣ ಸಂ ಶಿಶಾಧಿ ।
ಯಯಾತಿ ವಿಶ್ವಾ ದುರಿತಾ ತರೇಮ ಸುತರ್ಮಾಣಮಧಿ ನಾವಂ ರುಹೇಮ ॥"

(ಋ. ೮, ೪೨, ೩)

ಈ ಮಂತ್ರದ ಯಜ್ಞದಲ್ಲಿ ವಿನಿಯೋಗವನ್ನು ತಿಳಿಸುವಾಗ ಮಂತ್ರಪಾದದ ಅಲ್ಪ ವ್ಯಾಖ್ಯಾನ – "ಕ್ರತುಂ ದಕ್ಷಂ ವರುಣ ಸಂಶಿಶಾಧೀತಿ ವೀರ್ಯಂ ಪ್ರಜ್ಞಾನಂ ಮಯಿ ಸಂಶಿಶಾಧೀತ್ಯೇವ ತದಾಹ,".

ಅದರಂತೆ ಕೊನೆಯ ಪಾದದ ವ್ಯಾಖ್ಯಾನ– "ಸುತರ್ಮಾಣಮಧಿ ನಾವಂ ರುಹೇಮೇತಿ ಅಗ್ನಿರ್ವೈ ಸುತರ್ಮಾ ನೌಃ ವಾಗ್ವೈ ಸುತರ್ಮಾನೌಃ ಕೃಷ್ಣಾಜಿನಂ ವೈಸುತರ್ಮಾನೌಃ" (ಐ.ಬ್ರಾ. ೧, ೧೩, ೨೮)

"ಭದ್ರಂ ನೋ ಅಪಿ ವಾತಯ ಮನೋ ದಕ್ಷಮುತ ಕ್ರತುಂ" *(ಋ. ೧೦, ೨೫, ೧)*

ಹೀಗೆ ಬೇರೆ ಮಂತ್ರಗಳಲ್ಲಿಯೂ ಇದೇ ತತ್ವವನ್ನಾಧರಿಸಿ ಕ್ರತುದಕ್ಷ ಇವು ಮಿತ್ರ ವರುಣದೇವತಾಕಗಳು, ಎಂದು,

"ಕ್ರತೂದಕ್ಷೌ ಹ ವಾ ಅಸ್ಯ ಮಿತ್ರಾವರುಣೌ" ಇತಿ ಏತನ್ವಧ್ಯಾತ್ಮಂ– ಸ ಯದೇವ ಮನಸಾ ಕಾಮಯತೇ ಇದಂ ಮೇ ಸ್ಯಾದಿದಂ ಕುರ್ವೀಯೇತಿ ಸಃ ಕ್ರತುಃ, ಅಥ ಯದಸ್ಮೈ ತತ್ಸಮೃಧ್ಯತೇ ಸ ದಕ್ಷಃ, ಮಿತ್ರ ಏವ ಕ್ರತುರ್ದಕ್ಷೋವರುಣಃ ಬ್ರಹ್ಮೈವ ಮಿತ್ರಃ ಕ್ಷತ್ರಂ ವರುಣಃ, ಅಭಿಗಂತೈವ ಬ್ರಹ್ಮ ಕರ್ತಾ ಕ್ಷತ್ರಿಯಃ" ಇತಿ, (ಶ.ಪ.ಬ್ರಾ. ೪, ೧, ೪, ೧-೬)

ಕ್ರತುದಕ್ಷ ಇವರೇ ಮಿತ್ರಾವರುಣರು. ಮನಸ್ಸಿನಲ್ಲಿ ಇದನ್ನು ಪಡೆಯಬೇಕು. ಇದನ್ನು ಮಾಡಬೇಕೆಂಬ ಹಂಬಲವೇ ಕ್ರತು. ಅದರ ಫಲವೇ ದಕ್ಷ. ಮಿತ್ರನೇ ಕ್ರತು ವರುಣನೇ ದಕ್ಷ, ಬ್ರಹ್ಮವೇ ಮಿತ್ರ ಕ್ಷತ್ರವೇ ವರುಣ, ಪಡೆಯುವಿಕೆ ಬ್ರಹ್ಮ, ಕಾರ್ಯ ಮಾಡುವಿಕೆ ಕ್ಷತ್ರ ಎಂದು ಶಪಥದಲ್ಲಿದೆ.

ಹೀಗೆ ಬ್ರಹ್ಮಕ್ಷತ್ರಗಳ ಸತ್ವಬೋಧಕವಾದ ಮಂತ್ರ ಹಾಗೂ ಅದರ ವ್ಯಾಖ್ಯಾನರೂಪವಾದ ಬ್ರಾಹ್ಮಣ ತೈತ್ತರೀಯ ಸಂಹಿತೆಯಲ್ಲಿ ಕಂಡುಬರುತ್ತದೆ. ಯಜುರ್ಮಂತ್ರ ಹೀಗಿದೆ –

"ಸಂ ಶಿತಂ ಮೇ ಬ್ರಹ್ಮ ಸಂ ಶಿತಂ ವೀರ್ಯಂ ಬಲಂ, ಸಂ ಶಿತಂ ಕ್ಷತ್ರಂ ಜಿಷ್ಣು
ಯಸ್ಯಾಹಮಸ್ಮಿ ಪುರೋಹಿತಃ," *(ತೈ.ಸಂ. ೪, ೧, ೧೦, ೬)*

ಅದಕ್ಕೆ ಬ್ರಾಹ್ಮಣದಲ್ಲಿ ಬ್ರಹ್ಮಕ್ಷತ್ರಯೋಗನಿದರ್ಶನ ಹೀಗಿದೆ.

"ಬ್ರಹ್ಮಣ್ಣೈವ ಕ್ಷತ್ರಂ ಸಂ ಶ್ಯತಿ, ಕ್ಷತ್ರೇಣಬ್ರಹ್ಮ, ತಸ್ಮಾದ್ ಬ್ರಾಹ್ಮಣೋ ರಾಜನ್ಯವಾನ್
ಅತ್ಯನ್ಯಂ ಬ್ರಾಹ್ಮಣಂ ತಸ್ಮಾದ್ರಾಜನ್ಯೋ ಬ್ರಾಹ್ಮಣವಾನ್ ಅತ್ಯನ್ಯಂ ರಾಜನ್ಯಂ ||
(ತೈ.ಸಂ. ೫, ೧೧೦, ೮)

ಬ್ರಾಹ್ಮಣ ಕ್ಷತ್ರಿಯರ ಒಕ್ಕೂಟ ಎಲ್ಲವನ್ನೂ ಗಳಿಸುತ್ತದೆ. ಬ್ರಾಹ್ಮಣನು ರಾಜನಿಂದ ಕೂಡಿದಾಗ ಇತರ ಬ್ರಾಹ್ಮಣರಿಗಿಂತ ಶ್ರೇಷ್ಠನಾಗುವನು. ಅಂತೆಯೇ ರಾಜನು ಬ್ರಾಹ್ಮಣನಿಂದ ಕೂಡಿದಾಗ ಉಳಿದ ರಾಜರುಗಳಿಗಿಂತ ಶ್ರೇಷ್ಠನೆನಿಸುವನು.

ಇದೇ ಅರ್ಥವನ್ನು ತಿಳಿಸುವ ಮೂರು ಋಕ್ಕುಗಳನ್ನು ಹಿಂದೆಯೇ ತಿಳಿಸಲಾಗಿದೆ.

"ಸ ಇದ್ರಾಜಾ ಪ್ರತಿಜನ್ಯಾನಿ ವಿಶ್ವಾ", ಸ ಇತ್ ಕ್ಷೇತಿ ಸ ಧಿತ ಓಕಸಿ ಸ್ವೇ ||
"ಅಪ್ರತೀತೋ ಜಯತಿ ಸಂಧನಾನಿ", (ಋ. ೪, ೫೦, ೭-೯)

ಹೀಗೆಯೇ ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳಲ್ಲಿ ಬಹಳ ಋಙ್ಮಂತ್ರಗಳ ಸಮಗ್ರ ಅರ್ಥವುಳ್ಳ ವ್ಯಾಖ್ಯಾನಗಳು ಲಭಿಸುತ್ತವೆ.

"ವಾಚಾ ವೈ ದೇವಾಃ ಸಂಧೀಯಂತೇ ವಾಚಾಮಿತ್ರಾಣಿ" ವಾಗೇವೇದಂ ಸರ್ವಂ ತದೇತ-ದೃಚಾಽಭ್ಯನೂಕ್ತಂ "ಏಕಃ ಸುಪರ್ಣಃ ಸ ಸಮುದ್ರಮಾ ವಿವಿವೇಶ | ತಂ ಮಾತಾ ರೇಳ್ಹಿ ಸ ಉರೇಳ್ಹಿ ಮಾತರಂ" (ಋ. ೧೦, ೧೧೪, ೪)

ಆಧ್ಯಾತ್ಮಿಕ ತತ್ತ್ವವನ್ನೇ ತಿಳಿಸುವ ಉಪನಿಷತ್ತುಗಳಲ್ಲಿಯೂ ಋಙ್ಮಂತ್ರಗಳ ಉದಾಹರಣೆ ಹಾಗೂ ವ್ಯಾಖ್ಯಾನಗಳು ಕಂಡುಬರುತ್ತವೆ.

ಐತರೇಯ ಉಪನಿಷತ್ತಿನಲ್ಲಿ "ಪುರುಷೇ ಹ ವಾ ಅಯಮಾದಿತೋ ಗರ್ಭೋ ಭವತಿ ಯದೇತದ್ರೇತಃ" ಪುರುಷನಲ್ಲಿಯೇ ಮೊದಲು ಗರ್ಭಧಾರಣೆಯಾಗುತ್ತದೆ. ಅದನ್ನೇ ರೇತಸ್ಸೆನ್ನು-ತ್ತಾರೆ. ಇಲ್ಲಿಂದ ಹೋಗಿ ಪುನಃ ಹುಟ್ಟುತ್ತಾನೆ. ಇದನ್ನು ವಾಮದೇವ ಋಷಿ ತನ್ನ ದರ್ಶನದಲ್ಲಿ ಹೇಳಿದ್ದಾನೆ.

"ಗರ್ಭೇ ನು ಸನ್ನನ್ವೇಷಾಮವೇದಮ್ಂ ಅಧಶ್ಯೇನೋಜವಸಾ ನಿರದೀಯಂ" ಇತಿ
"ಗರ್ಭ ಏವೈತಚ್ಛಯಾನೋ ವಾಮದೇವ ಏವಮುವಾಚ" (ಐ.ಉ. ೨, ೧-೬)

ಈ ಮೂರನೇ ಅಧ್ಯಾಯವು ಮೂಲತಃ ಐತರೇಯಾಣ್ಯಕದ ೨ನೇ ಅಧ್ಯಾಯದ ಐದನೇ ಖಂಡವಾಗಿದೆ.

"ಬ್ರಹ್ಮ ವಾ ಇದಮಗ್ರ ಆಸೀತ್ ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ ೦ ಇತ್ಯಾದಿ. ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚೇತಿ," ಶತಪಥ ಬ್ರಾಹ್ಮಣದಲ್ಲಿ ಇದು ಪ್ರಸಿದ್ಧವಾಗಿದೆ. (ಬೃ.ಉ. ೧, ೪, ೧೦) ಈ ಮಂತ್ರವು ಮೂಲತಃ ಋಗ್ವೇದದಲ್ಲಿ ನಾಲ್ಕನೇ ವಾಮದೇವ ಮಂಡಲದಲ್ಲಿದೆ. ಅಲ್ಲಿ ವಾಮದೇವನು "ಅಹಂ ಬ್ರಹ್ಮಾಸ್ಮಿ" ಎಂದು ಆತ್ಮ ಸಾಕ್ಷಾತ್ಕಾರದಿಂದ ಹೇಳಿದ ಆತ್ಮಸ್ತುತಿರೂಪವಾಗಿದೆ. ಅದನ್ನೇ ಕಾತ್ಯಾಯನರ ಸರ್ವಾನುಕ್ರಮಣಿಯಲ್ಲಿ "ಅಹಂ ಮನುಃ ಸಪ್ತಾದ್ಯಾಭಿಸ್ತಿಸೃಭಿರಿಂದ್ರಮಿವಾತ್ಮಾ-ನಮೃಷಿಸ್ತುಷ್ಟಾವ," ಈ ಆತ್ಮಸ್ತುತಿಯು ಅನುಭವದಿಂದ ಬಂದಿದ್ದು ಶಾಸ್ತ್ರೀಯ ದೃಷ್ಟಿಯಿಂದ ಆವನ ಮಂತ್ರದರ್ಶನದಿಂದ ಬಂದಿದೆ. ಅಂತೆಯೇ ಬ್ರಹ್ಮಸೂತ್ರದಲ್ಲಿ "ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್," (ಬ್ರ.ಸೂ. ೧, ೧)

ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ವೈಗಾಯತ್ರೀಂ (ಛಾಂ.ಉ. ೩, ೧೨, ೧-೬) ಆ ಗಾಯತ್ರಿ ನಾಲ್ಕು ಪಾದಗಳುಳ್ಳದ್ದು ಷಡ್ವಿದ್ಯೆ, ಇದನ್ನು ಋಕ್ಕು ತಿಳಿಸಿದೆ.

"ಏತಾವಾನಸ್ಯ ಮಹಿಮಾಽತೋ ಜ್ಯಾಯಾಂಶ್ಚ ಪೂರುಷಃ, ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ." (ಋ. ೧೦, ೯೦, ೩)

ಈ ಮಂತ್ರವು ಮೂಲತಃ ಸಾಮವೇದ ಸಂಹಿತಾಂತರ್ಗತವಾಗಿದ್ದು, ಪುರುಷಸೂಕ್ತದಲ್ಲಿದ್ದು ನಾಲ್ಕೂ ವೇದಗಳಲ್ಲಿದೆ. ಈ ವಿಶೇಷ ತತ್ತ್ವವನ್ನು ಬ್ರಹ್ಮ ಮೀಮಾಂಸೆಯ ಜ್ಯೋತಿರಧಿಕರಣದಲ್ಲಿ ನಿರ್ಣಯಿಸಿದೆ. "ಜ್ಯೋತಿಶ್ಚರಣಾಭಿಧಾನಾತ್ ಛಂದೋಽಭಿಧಾನಾನ್ನೇತಿಚೇನ್ನ ತಥಾ ಚೇತೋಽರ್ಪಣ ನಿಗದಾತ್, ತಥಾ ಹಿ ದರ್ಶಯತಿ", ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಂ "ಉಪದೇಶಭೇದಾನ್ನೇತಿಚೇನ್ನೋ ಭಯಸ್ಮಿನ್ನಪ್ಯವಿರೋಧಾತ್" (ಬ್ರ.ಸೂ. ೧೧) ಇವೆಲ್ಲ ನಾಲ್ಕೂ ವೇದಗಳಲ್ಲಿಯ ಪುರುಷಸೂಕ್ತಾಂತರ್ಗತವಾದ ಋಙ್ಮಂತ್ರ ವ್ಯಾಖ್ಯಾನಾತ್ಮಕವಾದ ಬ್ರಾಹ್ಮಣ-ಗ್ರಂಥರೂಪವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಇದೂ ಛಾಂದೋಗ ಬ್ರಾಹ್ಮಣಾಂತರ್ಗತವೇ ಆಗಿದೆ.

"ಪುರುಷೋವಾವಯಜ್ಞಃ ೦" ಎಂಬುದಾಗಿ ಪುರುಷಯಜ್ಞಕ್ಕೆ ಸಂಬಂಧಿಸಿ ಎರಡು ಋಙ್ಮಂತ್ರಗಳನ್ನು ಉದಾಹರಿಸಿದ್ದಾರೆ.

"ಆದಿತ್ಪ್ರತ್ನಸ್ಯರೇತಸೋ ಜ್ಯೋತಿಷ್ಪಶ್ಯಂತಿ ವಾಸರಂ । ಪರೋಯದಿಧ್ಯತೇ ದಿವಾ"

"ಉದ್ವಯಂ ತಮಸಸ್ಪರಿ ಜ್ಯೋತಿಃ ಪಶ್ಯಂತ ಉತ್ತರಂ । ದೇವಂ ದೇವತ್ರಾಸೂರ್ಯಮಗನ್ಮಜ್ಯೋತಿರುತ್ತಮಂ" (ಛಾಂ.ಉ. ೩, ೧೭, ೭)

ಈ ಎರಡೂ ಮಂತ್ರಗಳು ಮೂಲತಃ ಸಾಮಸಂಹಿತಾರ್ಗತ ಋಕ್ಕುಗಳೇ. (ಋ. ೮, ೬, ೩೦); (ಸಾಮ ೧, ೨೦); (ಋ. ೧, ೫೦, ೧೦)

ಮಧು ವಿದ್ಯೆಯಲ್ಲಿ– "ಇಯಂ ಪೃಥಿವೀ ಸರ್ವೇಷಾಂ ಭೂತಾನಾಂ ಮಧು, ಅಸ್ಯೈ ಪೃಥಿವ್ಯೈ ಸರ್ವಾಣಿ ಭೂತಾನಿ ಮಧು ಯಶ್ಚಾಯಮಸ್ಯಾಂ ಪೃಥಿವ್ಯಾಂ ತೇಜೋಮಯೋಽಮೃತಮಯಃ ಪುರುಷೋಽಯಮೇವ ಸಃ ಯೋಽಯಮಾತ್ಮಾ ಇದಮಮೃತಮಿದಂ ಬ್ರಹ್ಮೇದಂ ಸರ್ವಂ". ಈ ಪೃಥಿವಿಯು ಎಲ್ಲ ಭೂತಗಳಿಗೂ ಪ್ರಿಯವಾದದ್ದು. ಈ ಪೃಥಿವಿಗೆ ಎಲ್ಲ ಭೂತಗಳೂ ಪ್ರಿಯವಾದವು. ಈ ಪೃಥ್ವಿಯಲ್ಲಿ ತೇಜೋಮಯನೂ ಅಮೃತಮಯನೂ ಆದ ಪುರುಷನೇ ಆತ್ಮ, ಅಮೃತ ಹಾಗೂ ಬ್ರಹ್ಮ. ಎಲ್ಲವೂ ಬ್ರಹ್ಮನೇ ಎಂದಾರಂಭಿಸಿ, ಪೃಥಿವೀ-ಆಪಃ-ಅಗ್ನಿಃ-ವಾಯುಃ-ಆದಿತ್ಯಃ-ದಿಶಃ-ಚಂದ್ರಃ-ವಿದ್ಯುತ್-ಸ್ತನಯಿತ್ನು-ಆಕಾಶಃ-ಧರ್ಮ-ಸತ್ಯಂ-ಮಾನುಷಂ-ಇತ್ಯಂತವಾಗಿ ಎಲ್ಲವೂ ಮಧುರಮಯವಾಗಿ ನಿರ್ದಿಷ್ಟವಾಗಿದೆ. ಈ ವಿಶ್ವವೇ ಅಮೃತಮಯವೆಂದು ವರ್ಣಿಸುತ್ತಾ ಕೊನೆಗೆ, "ಅಯಮಾತ್ಮಾ ಸರ್ವೇಷಾಂ ಭೂತಾನಾಂ ಮಧು, ಅಸ್ಯಾತ್ಮನಃ, ಸರ್ವಾಣಿ ಭೂತಾನಿ ಮಧು ಇತಿ ಸರ್ವಾಂತರಸ್ಯ ಪ್ರತ್ಯಗಾತ್ಮನಃ ಮಧುತಮಂ ತತ್ತ್ವಂ ಉಪದಿಷ್ಟಂ," ಇವೆಲ್ಲವೂ ಸರ್ವಾಂತರ್ಯಾಮಿಯಾದ ಪರಮಾತ್ಮನ ತತ್ತ್ವಗಳು ಎಂದು ತಿಳಿಸಿ. "ಅಯಮಾತ್ಮಾ ಸರ್ವೇಷಾಂ ಭೂತಾನಾಮಧಿಪತಿಃ ಅಸ್ಮಿನ್ ಆತ್ಮನಿ ಸರ್ವಾಣಿ ಭೂತಾನಿ ಸರ್ವೇ ದೇವಾಃ ಸರ್ವೇ ಲೋಕಾಃ ಸರ್ವೇ ಪ್ರಾಣಾಃ ಸರ್ವೇ ಏತೇ ಆತ್ಮಾನಃ ಸಮರ್ಪಿತಾಃ", ಈ ಆತ್ಮನು ಎಲ್ಲ

ಭೂತಗಳಿಗೆ ಅಧಿಪತಿಯಾಗಿದ್ದಾನೆ. ಈ ಆತ್ಮನಲ್ಲಿಯೇ ಎಲ್ಲ ಭೂತಗಳು ಎಲ್ಲ ದೇವತೆಗಳು ಎಲ್ಲ ಲೋಕಗಳು ಎಲ್ಲ ಪ್ರಾಣಗಳೂ ಈ ಎಲ್ಲ ಆತ್ಮಗಳು ಸಮರ್ಪಿತರಾಗಿದ್ದಾರೆಂದು ಉಪಸಂಹಾರ ಮಾಡಿದ್ದಾರೆ. ಹೀಗೆ ಸ್ವಪ್ರತಿಪಾದಿತವಾದಿತಾರ್ಥವು ಉಪನಿಷತ್ತಿನಲ್ಲಿ ಪ್ರತಿಪಾದಿತ-ವಾಗಿದ್ದು ಆಧ್ಯಾತ್ಮಿಕ ತತ್ವ ಪರಿಪೂರ್ಣವಾದದ್ದನ್ನು ಉದಾಹರಿಸಲು ಪ್ರಧಾನವಾದ ಋಙ್ಮಂತ್ರ-ಗಳನ್ನೇ ಉದಾಹರಿಸಿದ್ದಾರೆ.

"ಇದಂ ವೈತನ್ಮಧು ದಧ್ಯಙ್ ಆಥರ್ವಣೋಽಶ್ವಿಭ್ಯಾಮುವಾಚ, ತದೇತದೃಷಿಃ ಪಶ್ಯನ್ ಅವೋಚತ್, ತದ್ವಾಂ ನರಾ ಸನಯೇ ದಂಸ ಉಗ್ರಂ" (ಋ. ೧, ೧೧೬, ೧೨)

"ಆಥರ್ವಣಾಯಾಶ್ವಿನಾದಧೀಚೇ" (ಋ. ೧, ೧೧೭, ೨೨) "ಪುರಶ್ಚಕ್ರೇದ್ವಿಪದಃ" "ರೂಪಂ ರೂಪಂ ಪ್ರತಿರೂಪೋ ಬಭೂವ" (ಋ. ೬, ೪೭, ೧೮) ಹೀಗೆ ನಾಲ್ಕು ಮಂತ್ರಗಳು. ಅಂತೆಯೇ ಕೊನೆಯ ಮಂತ್ರದ ಸಮಸ್ತಾರ್ಥಗಳನ್ನು ತಿಳಿಸಿದ್ದಾನೆ.

"ಅಯಂ ವೈ ಹರಯೋಽಯಂ ವೈ ದಶ ಚ ಶತಾನಿ ಸಹಸ್ರಾಣಿ ಬಹೂನಿ ಚ ಅನಂತಾನಿ ಚ ತದೇತದ್ಬ್ರಹ್ಮಾಪೂರ್ವ ಮನಂತರಮಬಾಹ್ಯಂ ಅಯಮಾತ್ಮಾ ಬ್ರಹ್ಮ ಸರ್ವಾನುಭೂರಿತ್ಯನುಶಾಸನಂ" (ಬೃ.ಉ. ೨, ೫, ೧-೧೯) ।। ಆತ್ಮನೂ ಎಲ್ಲವೂ ಬ್ರಹ್ಮ ಸ್ವರೂಪ ಎಂಬುದು ಸ್ಪಷ್ಟ. ಇಲ್ಲಿ ಮೂರು ಋಗ್ವೇದ ಮಂತ್ರಗಳು ಹಾಗೂ ಈ ಮೂರೂ ಮಂತ್ರಗಳ ಉಪವ್ಯಾಖ್ಯಾನ ರೂಪವಾದದ್ದು ಬ್ರಾಹ್ಮಣ, ಅಧ್ಯಾತ್ಮ ತತ್ವದ ಉಪಬೃಂಹಣೆ ಮಾಡಿದೆ.

"ಪ್ರಜಾಕಾಮೋ ವೈ ಪ್ರಜಾಪತಿಃ ಸತಪೋಽತಪ್ಯತ ಸ ತಪಸ್ತಪ್ತ್ವಾ ಮಿಥುನಮುತ್ಪಾದಯತೇ ರಯಿಂ ಚ ಪ್ರಾಣಂ ಚೇತ್ಯೇತೌ ಮೇ ಬಹುಧಾ ಪ್ರಜಾಃ ಕರಿಷ್ಯತಃ" ಇಲ್ಲಿ ಪ್ರಜಾಕಾಮನಾದ ಪ್ರಜಾಪತಿ ತಪಸ್ಸಿನಿಂದ ರಯಿಪ್ರಾಣ ಎಂಬ ಮಿಥುನವನ್ನು ಸೃಷ್ಟಿಸಿದನು, ಇವರಿಂದ ಅನೇಕ ರೀತಿಯ ಪ್ರಜೆಗಳುದ್ಭವಿಸುವರೆಂದು. ಇಲ್ಲಿ ರಯಿಪ್ರಾಣವೆಂಬುದು ಸಾಂಕೇತಿಕವಾಗಿ ಸೂರ್ಯ ಹಾಗೂ ಚಂದ್ರರನ್ನು ಪ್ರತಿನಿಧಿಸುತ್ತದೆ. ಅವರ ಮೂರ್ತ ಅಮೂರ್ತ ರೂಪವನ್ನೂ ಸಹ–

"ಸ ಏಷ ವೈಶ್ವಾನರಃ ಪ್ರಾಣೋಽಗ್ನಿರುದಯತೇ ತದೇತದೃಚಾಭ್ಯುಕ್ತಂ" ವಿಶ್ವರೂಪಂ ಹರಿಣಂ ಜಾತವೇದಸಂ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ," ಹೀಗೆ ಋಗ್ವೇದದಲ್ಲೂ ಪ್ರಸಿದ್ಧವಾದ ಮಂತ್ರವನ್ನು ಉದಾಹರಿಸಿದ್ದಾರೆ. ಅಲ್ಲದೇ "ಸಂವತ್ಸರೋ ವೈ ಪ್ರಜಾಪತಿಃ, ತಸ್ಯಾಯನೇ ದಕ್ಷಿಣಂ ಚೋತ್ತರಂ ಚ," ಸಂವತ್ಸರವೇ ಪ್ರಜಾಪತಿಃ, ಅವನ ಮಾರ್ಗ ದಕ್ಷಿಣ ಮತ್ತು ಉತ್ತರ ಇವೆರಡು. "ಏಷ ಹ ವೈ ರಯಿರ್ಯಃ ಪಿತೃಯಾಣಃ," ಹೀಗೆ ದಕ್ಷಿಣಾಯನದ ತತ್ವವನ್ನು ಪಿತೃಯಾಣರೂಪದಿಂದ ವರ್ಣಿಸಿದ್ದಾರೆ. ಹಾಗೆಯೇ "ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಮನ್ವಿಷ್ಯ ಆದಿತ್ಯಮಭಿಜಯಂತೇ, ಏತದ್ವೈ ಪ್ರಾಣಾನಾಮಾಯತನಂ, ಏತದಮೃತಮಭಯಂ, ಏತತ್ ಪರಾಯಣಂ ಏತಸ್ಮಾನ್ನ ಪುನರಾವರ್ತಂತೇ ಇತ್ಯೇಷ ನಿರೋಧಃ" ಉತ್ತರಾಯಣ, ಉತ್ತರಮಾರ್ಗದಲ್ಲಿ ತಪಸ್ಸು ಬ್ರಹ್ಮಚರ್ಯ ಶ್ರದ್ಧಾ ವಿದ್ಯಾದಿಗಳಿಂದ ಆತ್ಮನನ್ನು ತಿಳಿದು ಆದಿತ್ಯನನ್ನು ಸೇರುವರು. ಇದು ಪ್ರಾಣದ ಮನೆ

ಅಮೃತವೂ ಅಭಯವೂ ಶ್ರೇಷ್ಠ ಮಾರ್ಗವೂ ಆಗಿದೆ. ಇಲ್ಲಿಂದ ಪುನಃ ಜನ್ಮವಿಲ್ಲ ಇತ್ಯಾದಿ. ಹೀಗೆ ಹೇಳಿ ಸ್ವಪ್ರತಿಪಾದಿಕ ಅರ್ಥವನ್ನು ತಿಳಿಸಲು ಋಗ್ವೇದದ ಎರಡು ಮಂತ್ರಗಳನ್ನು ಉದಾಹರಿಸಿದ್ದಾರೆ ತದೇಷ ಶ್ಲೋಕಃ ಎಂದು. "ಪಂಚಪಾದಂ ಪಿತರಂ ದ್ವಾದಶಾಕೃತಿಂ, ಸಪ್ತ ಚಕ್ರೇ ಷಡರಆಹುರರ್ಪಿತಮಿತಿ" (ಪ್ರ.ಉ. ೧, ೪, ೧೧); (ಋ. ೧, ೧೬೪, ೧೨)

ಇದು ಶಿಷ್ಯನಾದ ಕಾತ್ಯಾಯನ ಗೋತ್ರದ ಕಬಂಧಿ ಎಂಬವನಿಗೆ ಪಿಪ್ಪಲಾದನು ಕೊಟ್ಟ ಉತ್ತರ. "ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ, ಭಗವನ್ ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತೇ" ಇತಿ ಪ್ರಶ್ನೇ ತಸ್ಮೈ ಸಹೋವಾಚ ಪ್ರಜಾಕಾಮೋ ವೈ ಪ್ರಜಾಪತಿಃ" ಇತ್ಯಾದಿ ಹೀಗೆಯೇ ಪಂಚಾಗ್ನಿ ವಿದ್ಯೆಯಲ್ಲಿ ದೇವಯಾನ ಪಿತೃಯಾಣಗಳ ತತ್ವವನ್ನು ತಿಳಿಸಿದ್ದಾರೆ. "ಯತ್‌ಕೃತ್ವಾ ದೇವಯಾನಂ ವಾ ಪಂಥಾನಂ ಪ್ರತಿಪದ್ಯಂತೇ ಪಿತೃಯಾಣಂ ವಾ, ಅಪಿ ನ ಋಷೇರ್ವಚಃ ಶ್ರುತಮ್–

"ದ್ವೇ ಸ್ರುತೀ ಅಶೃಣವಂ ಪಿತೄಣಾಮಹಂ ದೇವಾನಾಮುತ ಮರ್ತ್ಯಾನಾಂ ।
ತಾಭ್ಯಾಮಿದಂ ವಿಶ್ವಮೇಜತ್ ಸಮೇತಿ ಯದಂತರಾ ಪಿತರಂ ಮಾತರಂ ಚ ॥"

(ಋ. ೧೦, ೮೮, ೧೫)

ಹೀಗೆ ಅದೇ ಅರ್ಥಕ್ಕೆ ಪ್ರಮಾಣಭೂತವಾದ ಋಷಿವಚನ ರೂಪವಾದ ಋಙ್ಮಂತ್ರವನ್ನು ಉದಾಹರಿಸಿದ್ದಾರೆ.

ಈ ಮಾರ್ಗದ್ವಯದ ವರ್ಣನೆ ಛಾಂದೋಗ್ಯೋಪನಿಷತ್ತಿನಲ್ಲಿಯೂ ಸಮಾನವಾಗಿದೆ. "ಅಯಂ ವಾವಲೋಕೋ ಗೌತಮಾಗ್ನಿಃಂ ಇತ್ಯಾದಿ ತದ್ಯ ಇತ್ಥಂ ವಿದುಃಂ ಏಷ ದೇವಯಾನಃ ಪಂಥಾಃ," ಇತ್ಯಾದಿ (ಛಾಂ.ಉ. ೫, ೪, ೧೦) ಇದು ಶ್ವೇತಕೇತುವಿಗೆ ಪ್ರವಾಹಣ ಜೈಬಲಿ ಮಾಡಿದ ತತ್ವೋಪದೇಶ. ಇಲ್ಲಿಯೂ ಕೂಡ ಪೂರ್ವೋಕ್ತವಾದ "ದ್ವೇಸೃತೀ ಅಶೃಣವಂ" ಎಂಬ ಋಙ್ಮಂತ್ರವೇ ಪ್ರಮಾಣ ಭೂತವಾಗಿದೆ. ಇದನ್ನು ಬ್ರಹ್ಮ ಮೀಮಾಂಸೆಯಲ್ಲೂ ನಿರ್ಣಯಿಸಿದ್ದಾರೆ. "ಏತತ್‌ಸಾಮಗಾಯನ್ನಾಸ್ತೇ" ಇತ್ಯತ್ರ ।

"ಅಹಮಸ್ಮಿ ಪ್ರಥಮಜಾ ಋತಾಸ್ಯ, ಪೂರ್ವಂ ದೇವೇಭ್ಯೋ ಅಮೃತಸ್ಯನಾಭಿಃ ।
ಯೋ ಮಾ ದದಾತಿ ಸ ಇದೇವ ಮಾಽಽವಾಃ । ಅಹಮನ್ನಮನ್ನಮದಂತ ಮಾದ್ಮಿ ॥"

(ತೈ.ಉ. ೩, ೧೦)

ಈ ಮಂತ್ರ ಋಗ್ರೂಪವಾಗಿದ್ದರೂ ಮೂಲತಃ ಸಾಮವೇದದ್ದು. ಸಾಕ್ಷಾತ್ಕೃತಾತ್ಮರಾದ ಋಷಿಗಳು ಸಾಮಗಾನದಲ್ಲಿ ತಸ್ಸಾಮರಸ್ಯ ತತ್ವವನ್ನು ತಿಳಿಸುವದಕ್ಕಾಗಿ ಪ್ರಮಾಣಾರ್ಥವಾಗಿ ಉದಾಹರಿಸಿದ್ದಾರೆ.

ಹೀಗೆ ಕೇವಲ ಪಾರಮಾರ್ಥಿಕವಾದ ನಿಃಶ್ರೇಯಸಕರವಾದ ಅಧ್ಯಾತ್ಮ ತತ್ವವನ್ನು ತಿಳಿಸುವಾಗ ಅಲ್ಲದೇ ಪ್ರಾಪಂಚಿಕ ಶ್ರೇಯಃಸ್ಸಾಧನಕ್ಕೂ ತತ್‌ಕಾರಣೀಭೂತವಾದ ಯಜ್ಞಾದಿ

ರೂಪವಾದ ಕರ್ಮದಲ್ಲಿಯೂ ಹಾಗೇ ಲೌಕಿಕ ಧನಾದಿ ಸಂಪಾದನೆಗಳಿಗೂ ಋಗಾದಿ ಮಂತ್ರಗಳನ್ನು ವಿನಿಯೋಗಿಸುವದು ಹಾಗೂ ಆ ಮಂತ್ರಗಳ ಅರ್ಥಾದಿ ವರ್ಣನೆ ಮಾಡಿದ್ದಿರುತ್ತದೆ. ಉದಾಹರಣೆಗಾಗಿ ಮಹತ್ವಪ್ರಾಪ್ತಿಗಾಗಿ ವಿಹಿತವಾದ ಯಜ್ಞದಲ್ಲಿ ಅವಶಿಷ್ಟವಾಗಿ ಉಳಿದ ಸಂಪಾತ ರೂಪವಾದ ಘೃತಪ್ರಾಶನಕ್ಕೂ ಋಙ್ಮಂತ್ರವನ್ನು ವಿಧಿಸಿದ್ದಾರೆ.

"ತತ್ ಸವಿತುರ್ವೃಣೀಮಹೇ ವಯಂ ದೇವಸ್ಯ ಭೋಜನಂ ।
ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ ॥" *(ಋ. ೫, ೮೨, ೧)*

ಈ ಋಕ್ಕಿನ ಮೊದಲನೇ ಮೂರು ಪಾದಗಳಿಂದ ಆಚಮನವನ್ನೂ ನಾಲ್ಕನೇ ಪಾದದಿಂದ ಎಲ್ಲ ಘೃತಪ್ರಾಶನವನ್ನೂ ವಿಧಿಸಿದ್ದಾರೆ. "ತತ್‌ಸವಿತುರ್ವೃಣೀಮಹೇ", ಇತ್ಯಾಚಾಮತಿ, ತ್ರಿಭಿಃ ಪಾದೈಃ ತ್ರಿರಾಚಮನಂ, ತಥಾ "ತುರಂಭಗಸ್ಯ ಧೀಮಹೀತಿ ಸರ್ವಂ ಪಿಬತಿ", ಇತಿ (ಛಾಂ.ಉ. ೫,೨,೭)

ಹಾಗೆಯೇ ಇನ್ನೊಂದೆಡೆ ಮಹತ್ವ ಸಿದ್ಧಿಗಾಗಿ ಹೇಳಿದ ಹೋಮದಲ್ಲಿ "ತತ್ಸವಿತು-ರ್ವರೇಣ್ಯಂ" ಎಂದು ಪ್ರಸಿದ್ಧ ಗಾಯತ್ರೀಮಂತ್ರದ ಮೂರು ಪಾದಗಳೊಡನೆ "ಮಧು ವಾತಾ ಋತಾಯತೇಂ, ಮಧು ನಕ್ತಮುತೋಷಸಃ, ಮಧುಮಾನ್ನೋ ವನಸ್ಪತಿಃಂ" ಎಂಬ ಮೂರು ಋಕ್ಕುಗಳಿಂದ ಭೂಃ ಭುವಃ ಸುವಃ ಸ್ವಾಹಾಂತವಾದ ವ್ಯಾಹೃತಿಗಳಿಂದ ಪ್ರಾಶನೆಯನ್ನು ಹೇಳಿದ್ದಾರೆ.

ಅಥೈನಮಾಚಾಮತಿ ತತ್ಸವಿತುರ್ವರೇಣ್ಯಮ್ಂ ಇತ್ಯಾದಿ (ಬೃ.ಉ. ೬, ೩, ೬)

ಈ ಮಂತ್ರಗಳು ಮೂಲತಃ ಋಗ್ವೇದದೊಳಗಿದ್ದು ಯಜ್ಞಾದಿಗಳಲ್ಲಿ ವಿನಿಯೋಗಕ್ಕಾಗಿ ಯಜುರ್ವೇದದಲ್ಲಿ ಸಂಗ್ರಹಿತವಾಗಿದೆ. "ಮಧುವಾತಾ" (ಋ. ೧,೯೦,೬, ತೈ.ಸಂ. ೪,೨,೯,೩) (ಶ.ಬ್ರಾ. ೧೪,೯,೩,೧೧). ಅಂತೆಯೇ ಸಂತಾನಪ್ರಾಪ್ತಿ ಮೊದಲಾದ ಲೌಕಿಕವಾದ ಇಷ್ಟಪ್ರಾಪ್ತಿ ಗಾಗಿ ಉಪನಿಷತ್ತುಗಳಲ್ಲಿ ವೇದಮಂತ್ರಗಳಿಂದ ವಿಹಿತವಾದ ಸಂಸ್ಕಾರಗಳಿವೆ.

ಗರ್ಭಾಧಾನಾರ್ಥವಾಗಿ ಮಾಡುವ ವೈದಿಕ ಸಂಸ್ಕಾರದಲ್ಲಿ ಅನುಮಂತ್ರಣವನ್ನು ನಾಲ್ಕು ಮಂತ್ರಗಳಿಂದ ವಿಧಿಸಿದ್ದಾರೆ. "ವಿಷ್ಣುರ್ಯೋನಿಂ ಕಲ್ಪಯತು, ಗರ್ಭಂಧೇಹಿ ಸಿನೀವಾಲಿಂ"

ಹಿರಣ್ಮಯೀ ಅರಣೀ ಯಾಭ್ಯಾಂ, ಯಥಾಽಗ್ನಿಗರ್ಭಾ ಪೃಥಿವೀ । (ಬೃ.ಉ. ೬, ೪, ೨೧-೨)

ಹಡೆಯುತ್ತಿರುವಾಗ ಅಭ್ಯುಕ್ಷಣ–

"ಯಥಾ ವಾಯುಃ ಪುಷ್ಕರಿಣೀಂ ಸಮಿಂಗಯತಿ ಸರ್ವತಃ ।
ಏವಾ ತೇ ಗರ್ಭ ಏಜತು ಸಹಾವೈ ತುಜರಾಯುಣಾ ॥" (ಬೃ.ಉ: ೬, ೪, ೨೩)

ಇದು ಸುಖಪ್ರಸವಕ್ಕಾಗಿ ವಿಹಿತವಾದದ್ದು, ಅವಳ ಅಭಿಮಂತ್ರಣ ಮಂತ್ರ.

ಹಾಗೆಯೇ ಸದ್ಯೋಜಾತ ಶಿಶುವಿಗೆ ಜಾತಕರ್ಮ ಸಂಸ್ಕಾರದಲ್ಲಿ ಸಾರಸ್ವತ ರಸವನ್ನು ಸ್ತನದ ಮೂಲಕ ಕೊಡುವದಕ್ಕಾಗಿ,

"ಅಥಾಸ್ಮೈ ಸ್ತನಂ ಪ್ರಯಚ್ಛತಿ,"

"ಯಸ್ತೇ ಸ್ತನಃ ಶಶಯೋ ಯೋ ಮಯೋಭೂರ್ಯೇನ ವಿಶ್ವಾ ಪುಷ್ಯಸಿ ವಾರ್ಯಾಣಿ ।
ಯೋ ರತ್ನಧಾ ವಸುವಿದ್ಯಃ ಸುದತ್ರಃ ಸರಸ್ವತಿ ತಮಿಹ ಧಾತವೇ ಕಃ ॥"

(ಋ. ೧, ೧೬೪, ೪೯)

ಹಾಗೆಯೇ ಆತನ ತಾಯಿಗೂ ಅಭಿಮಂತ್ರಿಸಲು ಮಂತ್ರ ಹೇಳಿದ್ದಾರೆ.

"ಅಥಾಸ್ಯ ಮಾತರಮಭಿಮಂತ್ರಯತೇ"–
"ಇಳಾಽಸಿ ಮೈತ್ರಾವರುಣೀ ವೀರೇ ವೀರಮಜೀಜನತ್ ।
ಸಾ ತ್ವಂ ವೀರವತೀ ಭವ ಯಾಽಸ್ಮಾನ್ ವೀರವತೋಽಕರತ್ ॥" (ಬೃ.ಉ. ೬, ೪, ೨೮)

ಹೀಗೆಯೇ ಲೌಕಿಕವಾದ ಅನೇಕ ಕಾಮನಾ ವಿಶೇಷಗಳಲ್ಲಿ ಉಪನಿಷತ್ತು ವಿಹಿತವಾಗಿ ವ್ಯಾಖ್ಯಾನಿಸಲ್ಪಟ್ಟ ನೂರಾರು ಮಂತ್ರಗಳಿವೆ.

"ಬಹು ವಾ ಇದಂ ಸುಪ್ತಸ್ಯ ವಾ ಜಾಗ್ರತೋ ವಾ ರೇತಃ ಸ್ಕಂದತಿ, । ತದಭಿಮೃಶೇತ್ ಅನುವಾಮಂತ್ರಯೇತ," ಜಾಗೃತನಾಗಿರುವಾಗ ಸ್ವಪ್ನದಲ್ಲಿ ರೇತಸ್ಕಂದನವಾದಾಗ ತದಭಿಮರ್ಶನ ಮತ್ತು ಅನುಮಂತ್ರಣೆಗೆ ವಿಹಿತ ಮಂತ್ರ.

"ಯನ್ಮೇಽದ್ಯ ರೇತಃ ಪೃಥಿವೀಮಸ್ಕಾಂತ್ಸೀದ್ಯದೋಷಧೀರಪ್ಯಸರದ್ ಯದಪಃ । ಇದಮಹಂ ತದ್ರೇತ ಆದದೇ ॥

ಪುನರ್ಮಾಮೈತ್ವಿಂದ್ರಿಯಂ ಪುನಸ್ತೇಜಃ ಪುನರ್ಭಗಃ ।
ಪುನರಗ್ನಿರ್ಧಿಷ್ಣ್ಯಾ ಯಥಾ ಸ್ಥಾನಂ ಕಲ್ಪತಾಂ ॥" (ಬೃ.ಉ. ೬, ೪, ೪-೫)

ತದೇತತ್ಸತ್ಯಂ

"ಮಂತ್ರೇಷು ಕರ್ಮಾಣಿ ಕವಯೋ ಯಾನ್ಯಪಸ್ಯಂಸ್ತಾನಿ ತ್ರೇತಾಯಾಂ ಬಹುಧಾ ಸಂತತಾನಿ ।
ತಾನ್ಯಾಚರಥ ನಿಯತಂ ಸತ್ಯಕಾಮಾ ಏಷ ವಃ ಪಂಥಾಃ ಸುಕೃತಸ್ಯ ಲೋಕೇ ॥"

(ಮು.ಉ. ೧, ೨, ೧)

ಇತ್ಯಾದಿ ಉಪನಿಷದ್ವಚನಗಳಿಂದ ವೇದ ಮಂತ್ರಗಳಲ್ಲಿ ಉಪದೇಶಿಸಲ್ಪಟ್ಟ ಕರ್ಮಗಳ ಆಚರಣೆಯೇ ಪರಮ ಶ್ರೇಯಸ್ಕರವೆಂದು ತಿಳಿಸಿದಂತಾಯಿತು.

ಹೀಗೆ ಬ್ರಾಹ್ಮಣೋಪನಿಷದಾದಿ ಶ್ರೌತಪ್ರಮಾಣಗಳಿಂದ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳೂ, ವೇದಮಂತ್ರಗಳ ವ್ಯಾಖ್ಯಾನ ರೂಪವಾಗಿದ್ದು ಬ್ರಾಹ್ಮಣವೇ ಪ್ರಥಮ ವೇದಭಾಷ್ಯ ಗ್ರಂಥವಾಗಿದೆ. ಅಲ್ಲಿಯೂ ಕೆಲವು ಮಂತ್ರಭಾಗಗಳು ಬ್ರಾಹ್ಮಣಾರಣ್ಯಕ ಉಪನಿಷದ್ ಗ್ರಂಥಗಳಲ್ಲಿವೆ. ಕೆಲವು ಶ್ಲೋಕರೂಪ, ಪದ್ಯರೂಪ ಹಾಗೂ ಗಾಥಾರೂಪಗಳಾಗಿವೆ. ಅವೆಲ್ಲವೂ ಸ್ವತಂತ್ರ ವಾದತತ್ವಾರ್ಥ ಪ್ರತಿಪಾದಕಗಳು. ಕೆಲವು

ಮಂತ್ರಾರ್ಥಾನುವಾದಕಗಳೂ ಯಜ್ಞದ ವಿಷಯಗಳನ್ನೊಳಗೊಂಡವೂ ಆಗಿವೆ. ತದೇಷಾಭಿ-ಯಜ್ಞಗಾಥಾಗೀಯತೇ

"ಆಸಂದೀ ವತಿ ಧಾನ್ಯಾದಂ ರುಕ್ಮಿಣಂ ಹರಿತಸ್ನಜಂ, । ಅಶ್ವಂ ಬಬಂಧ ಸಾರಂಗಂ ०"
(ಐ.ಬ್ರಾ. ೮, ೨೧, ೩)

ಕೆಲ ಋಗ್ವೇದಾಂತರ್ಗತ ಮಂತ್ರಗಳು ವ್ಯಾಖ್ಯಾನವಿಲ್ಲದೇ ಉಪನಿಷತ್ತುಗಳಲ್ಲಿ ಪಠಿತವಾಗಿವೆ.

"ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್०" (ಈಶೋಪ. ೧೮)

ಮೂಲತಃ ಈ ಮಂತ್ರ ಋಗ್ವೇದದ್ದು. (ಋ. ೧, ೧೮೯, ೧)

ಯಜುರ್ವೇದ ಸಾಮವೇದ ಅಥರ್ವ ವೇದಗಳಲ್ಲಿ ಋಗ್ವೇದ ಮಂತ್ರಗಳು ಅಲ್ಲಿಯ ಋಷಿಗಳ ಹೆಸರಿನಲ್ಲಿಯೇ ಪಠಿತವಾಗಿವೆ.

"ಮಾ ನಸ್ತೋಕೇ ತನಯೇ ಮಾ ನಃ"
"ಮಾ ನೋ ಮಹಾಂತಮ್०" (ಋ. ೧, ೧೧೪, ೮-೭)

ಈ ಮಂತ್ರಗಳು ಋಗ್ವೇದದಲ್ಲಿ ಕುತ್ಸದೃಷ್ಟವಾದವು. ಶುಕ್ಲ ಯಜುರ್ವೇದದಲ್ಲಿಯೂ ಕುತ್ಸ ಋಷಿಯದೆಂದೇ ಹೇಳಿದ್ದಾರೆ. "ಮಾನೋ ದ್ವೇ ಕುತ್ಸಃ" ಶುಕ್ಲ ಯಜುರ್ವೇದೀಯ ಸರ್ವಾನುಕ್ರಮ ಸೂತ್ರ.

ಹೀಗೆಯೇ ನೂರಾರು, ಸಾವಿರಾರು ಮಂತ್ರಗಳು ಮೂಲತಃ ಋಗ್ವೇದದಲ್ಲಿದ್ದು ಅನ್ಯತ್ರ ಸಂಗೃಹೀತವಾಗಿವೆ..

"ದ್ವಾಸುಪರ್ಣಾ० ಋಚೋ ಅಕ್ಷರೇ०" ಅಲ್ಲದೇ ಶ್ವೇತಾಶ್ವತರೋಪನಿಷತ್ತಿನಲ್ಲಿ– "ಯುಂಜತೇ ಮನ ಉತ ಯುಂಜತೇ ಧಿಯಃ, ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿಃ ವಿಶ್ವತಶ್ಚಕ್ಷುಃ,० ಋಚೋ ಅಕ್ಷರೇ०, ಸಹಸ್ರಶೀರ್ಷಾಪುರುಷಃ, ಪುರುಷಏವೇದಂ ಸರ್ವಮ್०, ಮಾನಸ್ತೋಕೇ०" ಇವೆಲ್ಲ ಋಗ್ವೇದಾಂತರ್ಗತ ಮಂತ್ರಗಳು.

"ಯುಂಜಾನಃ ಪ್ರಥಮಂ ಮನಸ್ತತ್ತ್ವಾಯ०– ಯುಕ್ತೇತ ಮನಸಾವಯಂ०, ಯತ್ವಾಮನಸಾ ದೇವಾನ್०, ಏಷ ಹಿ ದೇವಃ ಪ್ರದಿಶೋನುಸರ್ವಾಃ, ಯಾ ತೇ ರುದ್ರಶಿವಾತನೂಃ,० ವೇದಾಹಮೇತಂ ಪುರುಷಂ ಮಹಾಂತಮ್०, ಅಣೋರಣೀಯಾನ್०", ಇತ್ಯಾದಿ ಕೃಷ್ಣಯಜುರ್ವೇದಾಂತರ್ಗತ ಮಂತ್ರಗಳು. ಇನ್ನು ಕೆಲವು ಶ್ಲೋಕರೂಪಗಳು ವೇದಗಳಲ್ಲಿ ಕಂಡು ಬರುವದಿಲ್ಲ. ದಿಗ್ದರ್ಶನಾರ್ಥವಾಗಿ ಕೆಲವಷ್ಟು ಮಾತ್ರ ತೋರಿಸಿದೆ.

ಹೀಗೆಯೇ ಬ್ರಾಹ್ಮಣಾರಣ್ಯಕ ಉಪನಿಷದಾದಿಗ್ರಂಥಗಳಲ್ಲಿ ಆಧ್ಯಾತ್ಮಿಕ ಆಧಿದೈವಿಕ, ಆಧಿಭೌತಿಕ ತತ್ವಗಳನ್ನು ಬೋಧಿಸುವ ವೇದಮಂತ್ರ ವ್ಯಾಖ್ಯಾನರೂಪವಾದವು ನೂರಾರು

ಸಿಗುತ್ತವೆ. ಅವೆಲ್ಲವೂ ವೇದಾರ್ಥ ಜ್ಞಾನಕ್ಕೆ ವ್ಯಾಖ್ಯಾನಕ್ಕೆ ಪ್ರಧಾನ ಪ್ರಮಾಣವಾಗಿ ವಿಶಿಷ್ಟಾರ್ಥ ಬೋಧಕಗಳಾಗಿವೆ. ಆದ್ದರಿಂದ ತಪ್ಪದೇ ಅವುಗಳನ್ನು ಅಭ್ಯಸಿಸಬೇಕು.

ಇಲ್ಲಿ ರಹಸ್ಯವೆಂದರೆ ವಸ್ತುತಃ ಉಪನಿಷತ್ ಪ್ರತಿಪಾದಿತವಾದ ಅಧ್ಯಾತ್ಮ ತತ್ವ ಪರಿಪೂರ್ಣ-ವಾದ ಎಲ್ಲವೂ ಮೂಲತಃ ಋಗ್ವೇದಾದಿ ಮಂತ್ರಗಳಲ್ಲಿಯೇ ಅಡಕವಾಗಿವೆಯೆಂಬುದು ಭೃಗು, ಸತ್ಯಕಾಮ, ಉಪಕೋಸಲ, ಯಾಜ್ಞವಲ್ಕ್ಯಾದಿಗಳ ಪ್ರತ್ಯಕ್ಷ ವಚನದಿಂದಲೇ ಸಿದ್ಧವಾಗಿವೆ. ಈ ವಿಷಯದಲ್ಲಿ ವೇದಗಳಲ್ಲಿ ಪ್ರಸಿದ್ಧವಾದ ಆತ್ಮಸ್ತುತಿ, ಜ್ಞಾನಸ್ತುತಿ, ಭಾವವೃತ್ತಾದಿ ಸೂಕ್ತಗಳೇ ಪ್ರತ್ಯಕ್ಷ ಪ್ರಮಾಣವಾಗಿವೆ.

ಪ್ರಜ್ಞಾನಾದಿಯೋಗದಿಂದ ಆತ್ಮಸಾಕ್ಷಾತ್ಕಾರೋದಿತವಾದ ಸರ್ವಾತ್ಮ ತತ್ವಗಳ ವರ್ಣನೆ ಗಳಿಂದ ಕೂಡಿದ ಸ್ವಸ್ವರೂಪಾವಿರ್ಭಾವವಾದಾಗ ಮೂಡಿ ಬಂದ ಛಂದಸ್ಪತೀವಾಗ್‌ವಿವೃತಿಯೇ ಆತ್ಮಸ್ತುತಿಯೆಂದೆನಿಸಿದೆ.

ಜ್ಞಾನಸ್ತುತಿ = ಆ ಆ ಪರಾತ್ಮವಸ್ತು ತತ್ವಜ್ಞಾನವನ್ನು ತಿಳಿಸುವಂತವು.

ಭಾವವೃತ್ತ = ಆದಿ ಸೃಷ್ಟಿಯಲ್ಲಿ ಮೂಡಿ ಬಂದು ತತ್ಪೂರ್ವದಲ್ಲಿಯೂ ತದನಂತರವೂ ಇರುವ ಸ್ವತಃ ಸಿದ್ಧ ವಸ್ತುತತ್ವ, ಸ್ವಭಾವಸಿದ್ಧ ಹಾಗೂ ನೈಸರ್ಗಿಕವೆಂದು ಪರಿಗಣಿತವಾಗಿದೆ.

ಹೀಗೆ ಜ್ಞಾನ ಉಪಾಸನಾ ಕರ್ಮ ಭಕ್ತಿಗಳೇ ಮುಖ್ಯವಾಗಿ ಆಧ್ಯಾತ್ಮ ತತ್ವಯುಕ್ತವಾದ ಶ್ರೇಯಸ್ಸು, ನಿಃಶ್ರೇಯಸ್ಸಾದಿ ಸಾಧನವೂ ಪ್ರತ್ಯಕ್ಷ ಸಿದ್ಧವೂ ಸಾಧನಗಳಾದ ಭೌತಿಕ ವೈಜ್ಞಾನಿಕ ವಿಷಯಗಳೂ ಸಹ ವೇದಮಂತ್ರಗಳಲ್ಲೇ ಅಂತರ್ಹಿತವಾಗಿವೆ.

ಆತ್ಮಸ್ತುತಿ– (೧) "ಅಹಂ ಮನುರಭವಂ ಸೂರ್ಯಶ್ಚ" ವಾಮದೇವ ಋಷಿದರ್ಶನದ ಮೂರು ಮಂತ್ರಗಳು (ಋ. ೪, ೧೬, ೧-೩) "ಅಹಂ ಮನುಃ ಸಪ್ತಆದ್ಯಾಭಿಸ್ತಿಸೃಭಿರಿಂದ್ರ-ಮಿವಾತ್ಮಾನಮೃಷಿಸ್ತುಷ್ಟಾವ" ಇತಿ ಸರ್ವಾನುಕ್ರಮಸೂತ್ರಂ.

(೨) "ಅಹಂ ರುದ್ರೇಭಿರ್ವಸುಭಿಶ್ಚರಾಮಿಂ (ಋ. ೧೦,೧೨೫,೧-೮) ವಾಗಂಭ್ರಣೀ ಋಷಿಯ ೮ ಋಕ್ಕುಗಳ ಸೂಕ್ತ, "ಅಹಮಷ್ಟೌ ವಾಗಾಂಭೃಣ್ಯಾತ್ಮಾನಂ ತುಷ್ಟಾವ," ಇತಿ (ಸ.ಸೂ. ೧೦, ೧೨೫) ಇದು ವಾಗ್ ಋಷಿಕೆಯ ಚಿಜ್ಯೋತಿ ರುದ್ರಾದಿ ದಿವ್ಯಾತ್ಮಿಕೆಯ ಸರ್ವಾತ್ಮ ಶಕ್ತಿರೂಪವಾದ ವಿಶ್ವ ವಿಭೂತಿಯೋಗ ಸಿದ್ಧವಾದ ವಾಗಾತ್ಮ ಸ್ವರೂಪ ವರ್ಣನೆಯಿದೆ.

(೩) "ಉದಸೌ ಸೂರ್ಯೋ ಅಗಾತ್‌ಂ" (ಋ. ೧೦,೧೫೯,೧-೬) ಶಚ್ಯಾಪೌಲೋಮಿ, ಶಚೀದೇವಿಯ ಮಂತ್ರದರ್ಶನ, "ಉದಸೌ ಷಟ್ ಪೌಲೋಮೀಶಚ್ಯಾತ್ಮಾನಂ ತುಷ್ಟಾವ, (ಸ.ಸೂ. ೧೦, ೧೫೯)

(೪) "ಆಯಂ ಗೌಃ ಪೃಶ್ನಿರಕ್ರಮೀತ್‌ಂ, (ಋ. ೧೦, ೧೮೯, ೧-೩) ಸಾರ್ಪರಾಜ್ಞೀ ಋಷಿಯ ದರ್ಶನ, "ಆಯಂ ಗೌಃ ಸಾರ್ಪ ರಾಜ್ಞ್ಯಾತ್ಮದೈವತಂ," (ಸ.ಸೂ. ೧೦, ೧೮೯)

(೫) "ಅಹಂ ಭುವಂ ವಸುನಃ ಪೂರ್ವ್ಯಸ್ಪತಿಃ" (ಋ. ೧೦, ೪೮, ೧-೧೧) ವೈಕುಂಠ-

(೬) "ಅಹಂ ದಾಂ ಗೃಣತೇ ಪೂರ್ವ್ಯಂ ವಸುಂ" (ಋ. ೧೦, ೪೯, ೧-೧೧) ಋಷಿದರ್ಶನ-೨೨ ಮಂತ್ರಗಳು.

(೭) "ಇತಿ ವಾ ಇತಿ ಮೇ ಮನಃಂ, (ಋ. ೧೦, ೧೧೯, ೧-೧೩) ಲಬ ಋಷಿದರ್ಶನ ೧೩ ಮಂತ್ರಗಳು, "ಇತಿ ವೈ ಸಪ್ತೋನೈಂದ್ರೋಲಬಆತ್ಮಾನಂ ತುಷ್ಟಾವ" (ಸ.ಸೂ.)

(೮) ಜ್ಞಾನಸ್ತುತಿ– "ಬೃಹಸ್ಪತೇ ಪ್ರಥಮಂವಾಚೋ ಅಗ್ರಮ್‌ಂ" (ಋ. ೧೦, ೭೧, ೧-೧೧), ಬೃಹಸ್ಪತಿ ದರ್ಶನ, "ಬೃಹಸ್ಪತೇ ಬೃಹಸ್ಪತಿಃ ಜ್ಞಾನಂ ತುಷ್ಟಾವ" ಇತಿ (ಸ.ಸೂ. ಐ.ಆ. ೧, ೧೧, ೧೪) ೧೧ ಮಂತ್ರಗಳು.

(೯) ಭಾವವೃತ್ತಂ– "ನಾಸದಾಸೀನ್ನೋಸದಾಸೀತ್ ತದಾನೀಮ್" (ಋ. ೧೦,೧೨೯,೧-೭) ಪ್ರಜಾಪತಿ ಋಷಿದರ್ಶನ ಏಳು ಮಂತ್ರಗಳು, "ಯೋ ಯಜ್ಞೋ ವಿಶ್ವತಸ್ತಂತುಭಿಸ್ತತಃ" ಇತಿ ಚ "ನಾಸತ್ ಸಪ್ತಪ್ರಜಾಪತಿಃ ಪರಮೇಷ್ಠೀ ಭಾವವೃತ್ತಂತು," (ಸ.ಸೂ. ೧, ೧೩೦, ೧-೭)

(೧೦)"ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ" (ಋ. ೧೦, ೧೯೦, ೧-೩) ಅಘಮರ್ಷಣ ಋಷಿದರ್ಶನದ ಮೂರು ಮಂತ್ರಗಳು. "ಋತಂ ತೃಚಂ ಮಾಧುಶ್ಛಂದಸೋಽ-ಘಮರ್ಷಣೋ ಭಾವವೃತ್ತಮಾನುಷ್ಟುಭಮ್" (ಸ.ಸೂ. ೧೯೦)

(೧೧)"ದೇವಾನಾಂ ನು ವಯಂ ಜಾನಾ ಪ್ರವೋಚಾಮ ವಿಪನ್ಯಯಾಂ" ಇತಿ (ಋ. ೧೦, ೭೯ ೧-೯) ಬೃಹಸ್ಪತಿ ಋಷಿದರ್ಶನ ಅಥವಾ ಅದಿತಿ ಋಷಿಕೆಯ ದರ್ಶನ, "ದೇವಾನಾಂ ನವಲೌಕ್ಯೋ ವಾ ಬೃಹಸ್ಪತಿಃ ದಾಕ್ಷಾಯಣ್ಯದಿತಿರ್ವಾ" (ಸ.ಸೂ. ೧೦, ೭೨) "ಅತ್ರ ದೇವಾನಾಂ ಜಾನಾನಿ ಜನ್ಮಾನಿ ಪ್ರವೋಚಾಮ," ದೇವತೆಗಳ ಜನ್ಮವನ್ನು ಹೇಳುತ್ತೇವೆಂದಿರುವದರಿಂದ ಇದೂ ಸಹ ಭಾವ-ವೃತ್ತವೇ ಆಗಿದೆ. ಆದಿ ಸೃಷ್ಟಿಯ ಆವಿರ್ಭಾವವನ್ನು ಇಲ್ಲಿ ಹೇಳಿದೆ.

"ಬ್ರಹ್ಮಣಸ್ಪತಿರೇತಾ ಸಂ ಕರ್ಮಾರ ಇವಾಧಮತ್ ।
ದೇವಾನಾಂ ಪೂರ್ವೇ ಯುಗೇಽಸತಃ ಸದಜಾಯತ ॥"

ಇವೆಲ್ಲ ವಸ್ತುಗಳನ್ನೂ ಕಮ್ಮಾರರು ತಯಾರಿಸಿದಂತೆ ಬ್ರಹ್ಮಣಸ್ಪತಿ ತಯಾರಿಸಿದನು. ದೇವತೆಗಳ ಹಿಂದಿನ ಯುಗದಲ್ಲಿ ಅಸತ್ತಿನಿಂದ ಸತ್ತು ಉದ್ಭವವಾಗಿದೆ.

(೨) ಇಂಥದೇ ವಿಷಯವನ್ನು ತಿಳಿಸುವ ಮುಂದಿನ ಮಂತ್ರಗಳು–

"ತದಾಶಾ ಅನ್ವಜಾಯಂತ ತದುತ್ತಾನಪದಸ್ಪರಿ ।
ಭೂರ್ಜಜ್ಞ ಉತ್ತಾನಪದೋ ಭುವ ಆಶಾ ಅಜಾಯಂತ ॥
ಅದಿತೇರ್ದಕ್ಷೋ ಆಜಾಯತ ದಕ್ಷಾದ್ವದಿತಿಃ ಪರಿ ।
ಅದಿತಿರ್ಹ್ಯಜನಿಷ್ಟ ದಕ್ಷ ಯಾ ದುಹಿತಾ ತವ ।
ತಾಂ ದೇವಾ ಅನ್ವಜಾಯಂತ ಭದ್ರಾ ಅಮೃತಬಂಧವಃ ॥" *(ಋ. ೧೭೨, ೨-೫)*

ಹೀಗೆಯೇ ನಾಲ್ಕೂ ವೇದಗಳಲ್ಲಿ ಪ್ರಸಿದ್ಧವಾದ ಪುರುಷಸೂಕ್ತವು ಅಧ್ಯಾತ್ಮ ಹಾಗೂ ದೇವತಾತತ್ತ್ವಗಳನ್ನು ತಿಳಿಸುವದಾಗಿದೆ. ಅಲ್ಲಿ ಪರಮ ಪುರುಷನ ಸರ್ವಾಂತರಾತ್ಮತ್ವ, ವಿಶ್ವರೂಪತ್ವ, ಸರ್ವವೇದಾವಿರ್ಭಾವ ಕಾರಣತ್ವ ಸರ್ವಯಜ್ಞ ಯೋಗ ಧರ್ಮಾದಿಸಾಧನತ್ವ, ಸರ್ವಹುತಾದಿ ಯಜ್ಞಾತ್ಮತ್ವವನ್ನು ಪ್ರತಿಪಾದಿಸಿದೆ. ಹೀಗೆಯೇ "ಏತಾವಾನಸ್ಯ ಮಹಿಮಾಽತೋ ಜ್ಯಾಯಾꣳಶ್ಚ ಪೂರುಷಃ" ಇದೊಂದೇ ಮಂತ್ರದ ವ್ಯಾಖ್ಯಾನ ಛಾಂದೋಗ್ಯೋಪನಿಷತ್ತಿನಲ್ಲಿ ನಿರ್ದಿಷ್ಟವಾಗಿದೆ. ಹಾಗೆಯೇ "ಜ್ಯೋತಿಶ್ಚರಣಾಭಿಧಾನಾತ್," (ಬ್ರ.ಸೂ. ೧, ೧) ಇಲ್ಲಿ ಅಧಿಕರಣಮುಖದಿಂದ ಅದೇ ಪುರುಷನ ಜ್ಯೋತಿಃ ಸ್ವರೂಪವನ್ನು ಬಣ್ಣಿಸಿದೆ.

ಹಾಗೆಯೇ ಪರಮೈಶ್ವರ್ಯ ಪೂರ್ಣನಾದ ಆ ಇಂದ್ರನ ಪೂರ್ಣತ್ವವನ್ನೂ ಸಾರ್ವಭೌಮತತ್ತ್ವವನ್ನೂ ಪ್ರತಿಪಾದಿಸುವ ಅನೇಕ ಸೂಕ್ತಗಳು ಋಗ್ವೇದದಲ್ಲಿವೆ.

"ಯೋ ಜಾತ ಏವ ಪ್ರಥಮೋ ಮನಸ್ವಾನ್", (ಋ. ೨, ೧೨, ೧-೧೫) ಗೃತ್ಸಮದ ಋಷಿದರ್ಶನ. ಪ್ರತಿ ಮಂತ್ರದ ಕೊನೆಯಲ್ಲಿಯೂ "ಸ ಜನಾಸ ಇಂದ್ರಃ" ಹೇ ಜನರೇ ! ಅವನೇ ಇಂದ್ರನು ಎಂದು ಇಂದ್ರನ ಸರ್ವವಿಭೂತಿ ಯೋಗಪೂರ್ಣತೆ ಪ್ರದರ್ಶಿತವಾಗಿದೆ. "ತದಿದಾ ಸ ಭುವನೇಷು ಜ್ಯೇಷ್ಠಮ್," (ಋ. ೧೦, ೧೨೦, ೧-೯) ಬೃಹದ್ದಿವ ಋಷಿಯ ದರ್ಶನ, ೯ ಮಂತ್ರಗಳು ಇಂದ್ರನ ಸರ್ವಜ್ಯೇಷ್ಠತೆಯನ್ನು ಬಣ್ಣಿಸಿದೆ. ಮೊದಲಿನ ಮೂರು ಋಕ್ಕುಗಳನ್ನು ಐತರೇಯ ಆರಣ್ಯಕದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. (ಐ.ಆ. ೧, ೧೨)

"ವಿ ಹಿ ಸೋತೋರಸೃಕ್ಷತಂ ವಿಶ್ವಸ್ಮಾದಿಂದ್ರ ಉತ್ತರಃ" (ಋ. ೧೦, ೮೬, ೧) ವೃಷಾಕಪಿ ಋಷಿದರ್ಶನ ಇಂದ್ರನ ಶ್ರೇಷ್ಠತೆಯನ್ನು ವರ್ಣಿಸಿದೆ.

"ರೂಪಂರೂಪಂ ಪ್ರತಿರೂಪೋ ಬಭೂವಂ" ಉಪನಿಷತ್ತಿನಲ್ಲಿ ಮಧುವಿದ್ಯೆಯಲ್ಲಿ ಇಂದ್ರನೇ ಪರಬ್ರಹ್ಮವೆಂದಿದೆ. (ಬೃ.ಉ. ೨, ೫, ೧೯)

ಇವೆಲ್ಲಕ್ಕಿಂತಲೂ ಶ್ರೇಷ್ಠತಮವಾದ ವಿಶಿಷ್ಟ ತತ್ತ್ವಗಳುಳ್ಳ ಜ್ಞಾನಮೋಕ್ಷ ಮೊದಲಾದ ಪರಮೋಚ್ಚ ತತ್ತ್ವಗಳನ್ನು ತಿಳಿಯಾದ ಭಾಷೆಯಲ್ಲಿ ತಿಳಿಸುವ ದೀರ್ಘತಮ ಋಷಿಯ ದರ್ಶನ ೫೨ ಋಕ್ಕುಗಳುಳ್ಳ ಅಸ್ಯ ವಾಮೀಯಸೂಕ್ತ ಪ್ರಸಿದ್ಧವಾಗಿದೆ.

"ಅಸ್ಯ ವಾಮಸ್ಯ ಪಲಿತಸ್ಯ ಹೋತುಃ" (ಋ. ೧, ೧೬೪, ೧-೫೨)

ಅದರ ಸರ್ವಾನುಕ್ರಮಸೂತ್ರ– "ಅಸ್ಯ ದ್ವಿಪಂಚಾಶದ್ ಅಲ್ಪಸ್ತವಂ ತ್ವೇತತ್,

ಸಂಶಯೋತ್ಥಾಪನಪ್ರಶ್ನಪ್ರತಿವಾಕ್ಯಾನ್ಯತ್ರಪ್ರಾಯೇಣ-ಜ್ಞಾನ-ಮೋಕ್ಷಾಕ್ಷರಪ್ರಶಂಸಾ ಚ, ಸಂವತ್ಸರಸಂಸ್ಥಂ ಕಾಲಚಕ್ರವರ್ಣನಂ" (ಸ.ಸೂ. ೧, ೧೬೪)

ಈ ಸೂಕ್ತವು ಅಥರ್ವಸಂಹಿತೆಯಲ್ಲೂ ಸ್ವಲ್ಪ ಪಾಠಭೇದ ಹಾಗೂ ಮಂತ್ರಗಳು ಹಿಂದು ಮುಂದಾಗಿ ಪಠಿತವಾಗಿದೆ. (ಅ.ಸಂ. ೯, ೯, ೧)

ಅಥರ್ವವೇದದಲ್ಲಿ ಸ್ಕಂಭ-ಮಣಿ ವ್ರಾತ್ಯಾದಿ ಬಹಳ ಸೂಕ್ತಗಳು ಆಧ್ಯಾತ್ಮಿಕವಾಗಿವೆ.

ಈ ಎಲ್ಲ ಅಭಿಪ್ರಾಯಗಳನ್ನು ನಿರುಕ್ತಾಚಾರ್ಯರಾದ ಯಾಸ್ಕರು ವಿಸ್ತಾರವಾಗಿ ತಿಳಿಯಲು ಅಲ್ಲಲ್ಲಿ ವರ್ಣಿಸಿದ್ದಾರೆಂಬುದನ್ನು ವಿದ್ವಾಂಸರು ತಿಳಿದೇ ಇದ್ದಾರೆ.

ವೇದಾಂಗ ತತ್ತ್ವ ವಿಮರ್ಶೆ :

ಅಥರ್ವವೇದದ್ದಾದ ಮುಂಡಕೋಪನಿಷತ್ತಿನಲ್ಲಿ ವೇದ ವೇದಾಂಗಳನ್ನು ಸೂಚಿಸಿದ್ದಾರೆ. "ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ," ಎಂದು ಪರಾ ಮತ್ತು ಅಪರಾ ವಿದ್ಯೆಯನ್ನು ತಿಳಿಸುವಾಗ ಋಗ್ವೇದಾದಿ ನಾಲ್ಕು ವೇದಗಳೊಡನೇ ವೇದಾಂಗಗಳನ್ನೂ ತಿಳಿಸಿದ್ದಾರೆ.

"ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾ-ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ" ಇತಿ (ಮುಂ.ಉ. ೧, ೧, ೪-೫)

ಈ ವೇದಾಂಗಗಳೂ ಅವುಗಳ ವಿಷಯಗಳು ಅಲ್ಲಲ್ಲಿ ವೇದಮಂತ್ರ, ಬ್ರಾಹ್ಮಣ ಆರಣ್ಯಕ, ಉಪನಿಷತ್ತುಗಳಲ್ಲಿ ಸಾಂಕೇತಿಕವಾಗಿ ಬಂದಿವೆ. ಆದ್ದರಿಂದ ಕೇವಲ ಪಾಣಿನ್ಯಾದಿ ಪ್ರಣೀತಶಿಕ್ಷಾದಿ ಗ್ರಂಥಗಳು ಮಾತ್ರ ವೇದಾಂಗಗಳೆಂಬುದು ಸರಿಯಲ್ಲ. ವೇದಾದಿಗಳಲ್ಲಿ ಇವು ಮೊದಲು ಕಾಣುತ್ತವೆ.

ಇದು ಶಾಸ್ತ್ರಚಿಂತಕರಿಗೂ ವೇದ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಆಶಂಕಾಸ್ಪದ ವಿಷಯವಾಗಿದೆ.

॥ ವಾಙ್ಮುಖದಿಂದಲೇ ವಾಕ್‌ಶಿಕ್ಷಣ ॥

॥ ಶಿಕ್ಷಾ ಎಂಬ ಮೊದಲನೇ ವೇದಾಂಗ ॥

ಶಿಕ್ಷಾ– ಎಲ್ಲಾ ಶಿಕ್ಷಾಗಳ ಮೂಲವಾದದ್ದು ಶ್ರೇಷ್ಠವಾದ ಅಕ್ಷರವೇ. ಹಾಗೇ ಎಲ್ಲಾ ಅಕ್ಷರಗಳ ಮೂಲಾಧಿಷ್ಠಾನ ಪರಾ ವಾಕ್ಕು. ಆ ವಾಕ್ಕಿನ ಮೂಲಕವೇ ಎಲ್ಲ ಅಕ್ಷರಗಳ ಆವಿರ್ಭಾವ. ಅಕ್ಷರಾತ್ಮಿಕವಾದ ವಾಙ್ಮೂಲಕವೇ ಎಲ್ಲ ಅರ್ಥಗಳ ಆವಿರ್ಭಾವ. ಇತರರಿಗೆ ವಿಷಯವನ್ನು ತಿಳಿಸಲು ವಾಕ್ಕೇ ಸಾಧನವಾಗಿರುತ್ತದೆಂಬುದು ನಿರ್ವಿವಾದ. ಆದ್ದರಿಂದ ವಾಕ್‌ಶಿಕ್ಷಣವೇ ಶಿಕ್ಷಣ. "ಶಿಕ್ಷ ವಿದ್ಯೋಪಾದಾನೇ" ಎಂಬ ಧಾತುವಿನಿಂದ ಶಿಕ್ಷಾ ಶಬ್ದದ ನಿಷ್ಪತ್ತಿ. ಆದ್ದರಿಂದ ಸದ್ವಿದ್ಯೆಯನ್ನು ತಿಳಿಸಲು ಬುದ್ಧಿಯು ಪ್ರಧಾನ ಸಾಧನವು. ಇದನ್ನೇ ಋಗ್ವೇದದಲ್ಲಿ–

"ಇಮಾಂ ಧಿಯಂ ಶಿಕ್ಷಮಾಣಸ್ಯ ದೇವ ಕ್ರತುಂ ದಕ್ಷಂ ವರುಣ ಸಂ ಶಿಶಾಧಿ ।
ಯಯಾತಿ ವಿಶ್ವಾ ದುರಿತಾ ತರೇಮ ಸುತರ್ಮಾಣಮಧಿ ನಾವಂ ರುಹೇಮ ॥"

(ಋ. ೮, ೪, ೨-೩)

ಇದಕ್ಕೆ ಬ್ರಾಹ್ಮಣಾನುವಚನ– "ಕ್ರತುಂ ದಕ್ಷಂ ವರುಣ ಸಂಶಿಶಾಧೀತಿ– ವೀರ್ಯಂ ಪ್ರಜ್ಞಾನಂ ಮಯಿ ಸಂಶಿಶಾಧೀತ್ಯೇವತದಾಹ". ಕಲಿಯುವವನಿಗೆ ವೀರ್ಯವನ್ನೂ ಪ್ರಕೃಷ್ಟ

ಜ್ಞಾನವನ್ನೂ ಯಾವ ಬುದ್ಧಿಯಿಂದ ಎಲ್ಲ ಕಷ್ಟಗಳನ್ನು ದಾಟುವೆವೋ, ವಾಕ್ಕೆಂಬ ದೋಣಿಯನ್ನು ಏರುವೆವೋ ಅಂಥ ಬುದ್ಧಿಯನ್ನು ನೀಡು ಎಂದು ವರುಣನಲ್ಲಿ ಪ್ರಾರ್ಥನೆ.

"ಸುತರ್ಮಾಣಮಧಿ ನಾವಂ ರುಹೇಮೇತಿ – ಅಗ್ನಿರ್ವೈಸುತರ್ಮಾನೌಃ ವಾಗ್ವೈ ಸುತರ್ಮಾನೌಃ ಕೃಷ್ಣಾಜಿನಂ ವೈ ಸುತರ್ಮಾನೌಃ" ಎಂದು (ಐ.ಬ್ರಾ. ೧, ೧೩, ೨೮)

"ಶಿಕ್ಷಾ ಣೋ ಅಸ್ಮಿನ್ ಪುರುಹೂತ ಯಾಮನಿ ಜೀವಾ ಜ್ಯೋತಿರಶೀಮಹಿ"

(ಋ. ೭, ೩೨, ೨೬)

ಶಿಕ್ಷಾಪರವಾದ ಸ್ಪಷ್ಟಾರ್ಥವುಳ್ಳ ಮಂತ್ರ ಇದಾಗಿದೆ. ಆ ವಾಕ್ಕಿನಿಂದಲೇ ಅಕ್ಷರಗಳ ಆವಿರ್ಭಾವವನ್ನು–

"ಗೌರೀರ್ಮಿಮಾಯ ಸಲಿಲಾನಿ ತಕ್ಷತೀಂ ಸಹಸ್ರಾಕ್ಷರಾಪರಮೇ ವ್ಯೋಮನ್" (ಋ. ೧, ೧೬೪, ೪೧)

ಹೀಗೆ ವಾಕ್ಕಿನ ಅಕ್ಷರಾತ್ಮಕತೆಯನ್ನು ಹೇಳಿದೆ. ಮಾಧ್ಯಮಿಕಾ ವಾಕ್ಕೇ ಗೌರೀಶಬ್ದ ವಾಚ್ಯವಾಗಿದೆ. "ವಾಗೇಷಾ ಮಾಧ್ಯಮಿಕಾ" (ನಿರುಕ್ತ). ಆ ವಾಕ್ಕಿನಿಂದ ಅಕ್ಷರಗಳ ಉದಯ–

"ತಸ್ಯಾಃ ಸಮುದ್ರಾ ಅಧಿ ವಿ ಕ್ಷರಂತಿಂ । ತೇನ ಜೀವಂತಿ ಪ್ರದಿಶಶ್ಚತಸ್ರಃ ।
ತತಃ ಕ್ಷರತ್ಯಕ್ಷರಂ ತದ್ವಿಶ್ವಮುಪ ಜೀವತಿ ।।" (ಋ. ೧, ೧೬೪, ೪೨)

ಆ ವಾಕ್ಕು ಅಕ್ಷರರೂಪವಾಗಿದೆ. "ವಾಗಕ್ಷರಂ ಪ್ರಥಮಜಾಋತಸ್ಯ" ಬ್ರಹ್ಮನ ಮೊದಲನೇ ವಾಕ್ಕೇ ಅಕ್ಷರ. (ತೈ.ಬ್ರಾ. ೨, ೮, ೮, ೫)

ಈ ಅಕ್ಷರಗಳನ್ನೇ ವರ್ಣಗಳೆನ್ನುತ್ತಾರೆ. ಇವುಗಳಿಂದಲೇ ಎಲ್ಲ ಅರ್ಥಗಳೂ ವರ್ಣಿಸಲ್ಪಡುತ್ತವೆ. ಆದ್ದರಿಂದ ಶಿಕ್ಷೆಯ ಪ್ರಥಮವಾದ ಅಂಗ ವರ್ಣಗಳು. ಈ ವರ್ಣರೂಪವಾದ ಅಕ್ಷರಗಳಿಂದ ಸ್ವರಗಳು ಕಲ್ಪಿತವಾಗಿವೆ. ಅವು ಮೂರು. ಉದಾತ್ತ, ಅನುದಾತ್ತ, ಸ್ವರಿತಗಳೆಂದು ಇವೂ ವಾಗಾತ್ಮಕವಾಗಿವೆ.

"ತ್ರಿಧಾ ಬದ್ಧೋ ವೃಷಭೋ ರೋರವೀತಿ" (ಋ. ೪, ೫೮, ೩)

"ತ್ರಿಸ್ರೋ ವಾಚ ಈರಯತಿ ಪ್ರ ವಹ್ನಿಃ ೦" (ಋ. ೯, ೯೭, ೩೪)

"ತ್ರಿಸ್ರೋ ವಾಚಃ ಪ್ರ ವದ ಜ್ಯೋತಿರಗ್ರಾಃ" (ಋ. ೭, ೧೦೧, ೧)

ಹೀಗೆ ಸ್ವರ ಎರಡನೇ ಅಂಗ. ಅವು ಹ್ರಸ್ವ, ದೀರ್ಘ, ಪ್ಲುತ ಎಂಬ ಮಾತ್ರಾತ್ರಯ ಭೇದದಿಂದ ಮೂರನೇ ಅಂಗ.

ಈ ಮಾತ್ರೆಗಳು ಪ್ರಾತಃಸವನಾದಿ ಕಾಲಸಂಬಂಧದಿಂದ ಮೃದುಮಧ್ಯ ತಾರಾರೂಪ ವಾಗಿವೆ. ಇವನ್ನೇ ಬಲವೆನ್ನುತ್ತಾರೆ. ಇದೇ ಶಿಕ್ಷೆಯ ನಾಲ್ಕನೇ ಅಂಗ. ಇದೇ ಸ್ವರವೇ ಉಚ್ಚ

ನೀಚಾದಿ ಭೇದಗಳಿಂದ ಏಳು ವಿಧವಾಗಿ ಪರಿಣಮಿಸುತ್ತದೆ.

"ಅಕ್ಷರೇಣ ಮಿಮತೇ ಸಪ್ತ ವಾಣೀಃ" (ಋ. ೧, ೧೬೪, ೨೪)

ಇದೇ ಷಡ್ಜ ಮೊದಲಾದ ಸಂಜ್ಞೆಗಳಿಂದ ಛಂದಃ ಶಾಸ್ತ್ರದಲ್ಲಿ ವರ್ಣಿತವಾಗಿದೆ. "ಸ್ವರಾಃ ಷಡ್ಜ್‌ಋಷಭಗಾಂಧಾರಮಧ್ಯಪಂಚಮಧೈವತನಿಷಾದಾಃ" (ಪಿಂಗಲನಾಗ ಛಂದ). ಇವೆಲ್ಲ ಶೀಕ್ಷಾಧ್ಯಾಯ ದಲ್ಲಿ ಸಂಕ್ಷೇಪವಾಗಿ ವರ್ಣಿತವಾಗಿದೆ.

"ಶೀಕ್ಷಾಂ ವ್ಯಾಖ್ಯಾಸ್ಯಾಮಃ । ವರ್ಣಃ ಸ್ವರಃ । ಮಾತ್ರಾಬಲಂ ।
ಸಾಮ ಸಂತಾನಃ । ಇತ್ಯುಕ್ತಃ ಶೀಕ್ಷಾಧ್ಯಾಯಃ ।" *(ತೈ.ಉ. ೧, ೨)*

॥ ಅಹಂ ಪದವು ಸರ್ವಪ್ರತ್ಯಯಾಸ್ಪದವಾಗಿದೆ ॥

ಆ ಎಲ್ಲ ಅಕ್ಷರಗಳೂ ಮೂಲತಃ ಅಹಂ ಪದದಲ್ಲಿಯೇ ಒಳಗೊಂಡಿವೆ. ಹೃದಯಾಂತರಾಳದಲ್ಲಿರುವ ಚೇತನಾತ್ಮನ ಸಂಸ್ಕರಣ ರೂಪವೂ ಎಲ್ಲ ಜನರ ಜ್ಞಾನಗಳಿಗೆ ಆಸ್ಪದವಾದದ್ದೆಂಬುದು ಎಲ್ಲರ ಅನುಭವದಲ್ಲಿ ಬಂದದ್ದಾಗಿದೆ.

ಅಂದರೆ ಸಂವಿದ್-ಇಚ್ಛಾ-ಕ್ರಿಯಾದಿ ಶಕ್ತಿರೂಪವಾದ ವಾಕ್ಕಿನ ನೂತನವಾದ ಅಧಿಷ್ಠಾನವೆಂಬುದು ಅದರಿಂದ ಅಹಂ ಎಂಬ ವಾಗ್ರೂಪ ಶಬ್ದದ ಹಾಗೂ ಅದರ ಪ್ರತ್ಯಯಕ್ಕಿಂತ ಮೊದಲೇ ವಿಶ್ವಸೃಷ್ಟಿಯಲ್ಲಿ ವಿದ್ಯುಚ್ಛಕ್ತಿಯ ಧಮನ(ಫೂತ್ಕಾರ)ದಿಂದ ವಿದ್ಯುದಾತ್ಮನಿಂದ ಮೊದಲು ಸರ್ವಜಗದ್ಬೀಜರೂಪವಾದ ಪ್ರತ್ಯಕ್ಷ ಬ್ರಹ್ಮರೂಪ ಅಕ್ಷರ ಸರ್ವಸ್ವ ಸಮೂಹ ಹಾಗೂ ವಿಶ್ವವೂ ಹುಟ್ಟಿತೆಂಬುದನ್ನು ಬೃಹಸ್ಪತಿಯ ದರ್ಶನ ಮಂತ್ರ–

"ಬ್ರಹ್ಮಣಸ್ಪತಿರೇತಾ ಸಂ ಕರ್ಮಾರ ಇವಾಧಮತ್ ।
ದೇವಾನಾಂ ಪೂರ್ವೇ ಯುಗೇಽಸತಃ ಸದಜಾಯತ ॥" *(ಋ. ೧೦, ೭೨, ೨)*

ಅದೇ ಸರ್ವವಾಙ್ಮಯಭೂತವಾದ ಅಕ್ಷರ ಸಮಾಮ್ನಾಯವು ರುದ್ರನ ಡಮರುವಿನ ನಿನಾದದಿಂದ ತಿಳಿದು ವೇದಶಾಸ್ತ್ರವೇತ್ತರು ಅದನ್ನೇ ಈ ಚತುರ್ದಶ (೧೪) ಸೂತ್ರಗಳೆನ್ನುತ್ತಾರೆ.

ಅಇಉಣ್ । ಋಲೃಕ್ । ಏಓಙ್ । ಐಔಚ್ । ಹಯವರಟ್ । ಲಣ್ । ಞಮಙಣನಮ್ । ಝಭಞ್ । ಘಢಧಷ್ । ಜಬಗಡದಶ್ । ಖಫಛಠಥಚಟತವ್ । ಕಪಯ್ । ಶಷಸರ್ । ಹಲ್ । ಇತಿಮಾಹೇಶ್ವರಾಣಿ ಸೂತ್ರಾಣಿ, ಈ ಅಕ್ಷರ ಸಮಾಮ್ನಾಯ ದಲ್ಲಿ ಅಡಗಿದ ಆಕಾಶಾದಿಗಳ "ದ್ಯುಮಾಂ ಅಹ" (ಋ) "ಆದಹ ಸ್ವಧಾಮನು" (ಋ).

ಇವೆಲ್ಲ ಪ್ರಸಿದ್ಧವಾಗಿವೆ. ಈ ಅಹಕ್ಕೆ ವಿಶ್ವಾಧಿಷ್ಠಾನಭೂತವಾದ ಪೂರ್ಣಬಿಂದುವಿನ ಯೋಗದಿಂದ "ಅಹಂ" ಎಂಬ ಪದವಾಗಿದೆ. ಹೀಗೆ ಎಲ್ಲ ವಾಕ್ಕುಗಳ, ಅಕ್ಷರಗಳ, ತದರ್ಥಗಳ,

ತತ್‌ಪ್ರತ್ಯಯಗಳ ಮೂಲಭೂತವಾದ ಪರಮ ಪದವು ಈ ಅಹಂ ಎಂಬ ಪದದಲ್ಲಿದೆ. ಇದೇ "ಆಂಭೃಣೀವಾಗ್", ಮಂತ್ರದರ್ಶನದಲ್ಲಿದೆ,

"ಅಹಮೇವ ವಾತ ಇವ ಪ್ರ ವಾಮ್ಯಾರಭಮಾಣಾ ಭುವನಾನಿ ವಿಶ್ವಾ ।

ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂ ಬಭೂವ ॥"

(ಋ. ೧೦, ೧೨೫, ೮)

ಈ ಅಹಂ ಎಂಬ ಚೇತನಾಸತ್ವಾತ್ಮಿಕವಾದ ಪರಾವಾಕ್ಕೇ ವಿಶ್ವಜಗದ್ಬೀಜರೂಪವಾದ ಅಕ್ಷರಾತ್ಮಿಕವಾದ ಪ್ರತ್ಯಕ್ಷ ಬ್ರಹ್ಮರೂಪವಾದದ್ದು. ಅದೇ ವಾಕ್ಕಿನಿಂದಲೇ ಎಲ್ಲ ವರ್ಣಗಳ ಆವಿರ್ಭಾವವಾಗಿದೆ. ಈ ಅಕ್ಷರರೂಪವಾದ ವಾಕ್ಕಿನಿಂದಲೇ ವಿಶ್ವದ ಸೃಷ್ಟಿಯಾಗಿದೆ ಎಂದರ್ಥ.

ಈ ಅಕ್ಷರಗಳ ಉಚ್ಚಾರಣೆ ಕಂಠ, ತಾಲು (ಅಂಗಳ), ತುಟಿ, ದಂತ ಮೊದಲಾದವುಗಳ ಸಂಯೋಗದಿಂದಾಗುವದು. ಇದನ್ನೇ ಬ್ರಾಹ್ಮಣಾಂತರ್ಗತವಾದ ಆರಣ್ಯಕದಲ್ಲಿ "ಓಷ್ಠಾಪಿಧಾನಾ ನಕುಲೀ ದಂತೈಃ ಪರಿವೃತಾ ಪವಿಃ । ಸರ್ವಸ್ಯೈ ವಾಚ ಈಶಾನಾ ಚಾರು ಮಾಮಿಹ ವಾದಯೇದಿತಿ ವಾಗ್ರಸಃ" (ಐ.ಆ. ೩, ೨, ೫)

"ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ"

(ಋ. ೮, ೧೦೦, ೧೧)

ತುರೀಯಂ ವಾಚೋ ಮನುಷ್ಯಾ ವದಂತಿ" (ಋ. ೧.೧೬೪, ೪೫)

"ತ್ರಿಧಾ ಬದ್ಧೋ ವೃಷಭೋ ರೋರವೀತಿ" (ಋ. ४, ५८, ३)

ಹೀಗೆ ಶ್ರುತನಾದ ವೈದ್ಯುತಾಗ್ನಿ ಸ್ವರೂಪನಾದ ರುದ್ರನ ಹೃದಯಾಂತರಾಳದಲ್ಲಿದ್ದು ನಾಲಿಗೆಯಲ್ಲಿ ಮಲಗಿ ಮಾತುಗಳನ್ನು ಉಚ್ಚರಿಸುತ್ತಾನೆ.

"ಅಂತರಿಚ್ಛಂತಿ ತಂ ಜನೇ ರುದ್ರಂ ಪರೋ ಮನೀಷಯಾ ।

ಗೃಭ್ಣಂತಿ ಜಿಹ್ವಯಾ ಸಸಂ ॥" (ಋ. ೮, ೭೨, ೩)

ಹೀಗೆ ವಾಕ್ಕಿನ ಉಚ್ಚಾರಣಾ ವಿಧಿ ಪದ್ಧತಿ, ಶಿಕ್ಷಾ ಇವು ಮಂತ್ರ ಬ್ರಾಹ್ಮಣ ಉಪನಿಷತ್ ಮೊದಲಾದವುಗಳಲ್ಲಿ ವಿಸ್ತಾರವಾಗಿ ಕೆಲವೆಡೆ ಗುಪ್ತರೂಪವಾಗಿ ಸೂಕ್ಷ್ಮರೂಪದಿಂದ ಮಂತ್ರಗಳ ವ್ಯಾಖ್ಯಾನ ಮುಖೇನ ಸಮರ್ಥಿತವಾಗಿದೆ.

"ವ್ಯಾಖ್ಯಾನಾದ್ ವಿಶೇಷಾರ್ಥಪ್ರತಿಪತ್ತಿಃ" ಎಂಬ ನ್ಯಾಯದಿಂದ ಅಕ್ಷರ ಸಮಾಮ್ನಾಯದ ತನ್ಮೂಲಭೂತವಾದ ವೇದದ ಸಂಶೋಧನೆಯಿಂದ ಪ್ರಾಚೀನ ಪಾಣಿನಿ ಮುನಿಯು ವೇದೋಚ್ಚಾರಣಾದಿಗಳಿಗಾಗಿ ಅರ್ವತ್ನಾಲ್ಕು ಅಕ್ಷರಗಳನ್ನು ಕಲ್ಪಿಸಿದ್ದಾನೆ.

"ತ್ರಿಷಷ್ಟಿಶ್ಚತುಃಷಷ್ಟಿರ್ವಾ ವರ್ಣಾಃ ಶಂಭುಮತೇ ಮತಾಃ ।
ಪ್ರಾಕೃತೇ ಸಂಸ್ಕೃತೇ ಚಾಪಿ ಸ್ವಯಂಪ್ರೋಕ್ತಾಃ ಸ್ವಯಂಭುವಾ ॥" (ಪಾ.ಶಿ ೨)

ಆ ಅರವತ್ನಾಲ್ಕು ವರ್ಣಗಳಿವೇ.

"ಸ್ವರಾ ವಿಂಶತಿರೇಕಶ್ಚ ಸ್ಪರ್ಶಾನಾಂ ಪಂಚವಿಂಶತಿಃ ।
ಯಾದಯಶ್ಚಸ್ಮೃತಾಹ್ಯಷ್ಟೌ ಚತ್ವಾರಶ್ಚಯಮಾಃ ಸ್ಮೃತಾಃ ॥"
ಅನುಸ್ವಾರೋವಿಸರ್ಗಶ್ಚ ಕಗಪೌಚಾಪಿ ಪರಾಶ್ರಿತೌ ।
ದುಸ್ಪೃಷ್ಟಶ್ಚೇತಿ ವಿಜ್ಞೇಯೋ ಲೃಕಾರಃ ಪ್ಲುತ ಏವ ಚ ॥

೨೧ ಸ್ವರಗಳು, ಕ ದಿಂದ ಮ ದವರೆಗೆ ೨೫ ಸ್ಪರ್ಶವರ್ಣಗಳು. ಯ ದಿಂದ ಹ ದವರೆಗೆ ಎಂಟು ಯಾದಿಗಳು ೪ ಯಮ; ಚಖ್ನಿತುಃ. ಇಲ್ಲಿ ಖ ದ ಹಿಂದೆ ಇರುವ ಇನ್ನೊಂದು ಖ ಮೊದಲಾದ ವರ್ಣಗಳುಳ್ಳ ಅಂ ಅನುಸ್ವಾರ. ಅಃ ವಿಸರ್ಗ .... ಕಕಾರದ ಹಿಂದಿನ ವಿಸರ್ಗ ಜಿಹ್ವಾಮೂಲೀಯ. ಪಕಾರದ ಹಿಂದಿನ ವಿಸರ್ಗ ... ಉಪಧ್ಮಾನೀಯ. ದುಸ್ಪೃಷ್ಟ ಅಂದರೆ ಳ ಹಾಗೂ ಲೃ೩ ಪ್ಲುತವಾದ ಲೃಕಾರ. ಹೀಗೆ ೬೪ ವರ್ಣಗಳು.

ಕಲ್ಪ : ಯಜ್ಞಾದಿಗಳಲ್ಲಿ ವೇದಮಂತ್ರಗಳ ವಿನಿಯೋಗಕ್ಕೆ ಕಲ್ಪವೆಂದು ಹೆಸರು. "ಕಲ್ಪ್ಯತೇ ಇತಿ ಕಲ್ಪಃ" ಇದು ವ್ಯುತ್ಪತ್ತಿ. ಈ ಕಲ್ಪವೂ ಸಹ ವೇದಗಳಲ್ಲಿಯೇ ಇದೆ.

"ತದೇತತ್ ಸತ್ಯಂ ಮಂತ್ರೇಷು ಕರ್ಮಾಣಿ ಕವಯೋ ಯಾನ್ಯಪಶ್ಯನ್ ತಾನಿ ತ್ರೇತಾಯಾಂ ಬಹುಧಾ ಸಂತತಾನಿ, ತಾನ್ಯಾಚರಥ ನಿಯತಂ ಸತ್ಯಕಾಮಾಃ, ಏಷ ವಃ ಪಂಥಾಃ ಸುಕೃತಸ್ಯ ಲೋಕೇ" ಇತಿ (ಮುಂ.ಉ. ೧, ೨, ೧).

ಈ ಸತ್ಯವನ್ನು ಮಂತ್ರಗಳಲ್ಲಿಯೇ ಕವಿಗಳು ಕರ್ಮಗಳನ್ನು ಕಂಡಿದ್ದಾರೆ. ಅವು ವೇದತ್ರಯಗಳಲ್ಲಿ ವಿಸ್ತಾರವಾಗಿವೆ. ಸತ್ಯಕಾಮರೇ ಅವನ್ನು ತಿಳಿದು ಆಚರಿಸಿರಿ. ಲೋಕದಲ್ಲಿ ಉತ್ತಮವಾದ ಮಾರ್ಗ ಇದು ಎಂದು ಮುಂಡಕೋಪನಿಷತ್ತಿನಲ್ಲಿ ವಿಸ್ತರಿಸಿದೆ.

ವೇದಗಳಲ್ಲಿದೆ ಎನ್ನುವದಕ್ಕೆ ಪ್ರಮಾಣ–

"ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್"

(ಋ. ೧೦, ೯೦, ೧೬)

ಯಜ್ಞಗಳನ್ನು ವಿಧಿಸುವ ಮಂತ್ರ ಇದಾಗಿದೆ.

ಈ ಯಜ್ಞಗಳು ಅಗ್ನಿಮುಖವಾಗಿ ನಡೆಯಬೇಕು ಎಂಬುದಕ್ಕೆ–

"ಅಗ್ನಿರ್ವಿದ್ವಾನ್ ತ್ಸ ಯಜಾತ್ಸೇದು ಹೋತಾ ಸೋ ಅಧ್ವರಾನ್ ಸ ಋತೂನ್ ಕಲ್ಪಯಾತಿ"

(ಋ. ೧೦, ೨, ೩)

"ಇಮಂ ನೋ ಅಗ್ನ ಉಪ ಯಜ್ಞಮೇಹಿ ಪಂಚಯಾಮಂ ತ್ರಿವೃತಂ ಸಪ್ತತಂತುಮ್"

(ಋ. ೧೦, ೧೨೪, ೧)

ಈ ಯಜ್ಞಗಳು ಹವಿಸ್ಸು ದ್ರವ್ಯ ಮೊದಲಾದವುಗಳಿಂದ ಸಾಧ್ಯವಾಗಿದ್ದು ಬಹು ವಿಧವಾಗಿವೆ. ಹಾಗೆಯೇ ಆಧ್ಯಾತ್ಮಿಕವಾದ ಧೀಯೋಗ ಸಾಧ್ಯವಾದ ಜಪಯಜ್ಞಾದಿ ಅಂತರ್ಯಾಗಗಳೂ ಬಹಳ. ಬಾಹ್ಯಯಾಗಗಳು ಅಗ್ನಿಮುಖದಿಂದಲೇ ಸಾಧ್ಯವಾದ್ದರಿಂದ ಮಂತ್ರದಲ್ಲಿ ಅಗ್ನಿಯನ್ನು ಅರಣಿಗಳಿಂದ ಸಿದ್ಧ ಮಾಡಲು ತಿಳಿಸಿದ್ದಾರೆ.

"ಮಂಥತಾ ನರಃ ಕವಿಮದ್ವಯಂತಂ ಪ್ರಚೇತಸಮಮೃತಂ ಸುಪ್ರತೀಕಂ ।
ಯಜ್ಞಸ್ಯ ಕೇತುಂ ಪ್ರಥಮಂ ಪುರಸ್ತಾದಗ್ನಿಂ ನರೋ ಜನಯತಾ ಸುಶೇವಂ ॥"

(ಋ. ೩, ೨೯, ೫)

ಅರಣಿಯಿಂದಲೇ ಅಗ್ನಿ ಮಥನ.

"ಅರಣ್ಯೋರ್ನಿಹಿತೋ ಜಾತವೇದಾ ಗರ್ಭ ಇವ ಸುಧಿತೋ ಗರ್ಭಿಣೀಷು ।
ದಿವೇದಿವ ಈಡ್ಯೋ ಜಾಗೃವದ್ಭಿರ್ಹವಿಷ್ಮದ್ಭಿರ್ಮನುಷ್ಯೇಭಿರಗ್ನಿಃ ॥"

(ಋ. ೩, ೨೯, ೨)

ಅರಣಿಯಿಂದ ಜನಿಸಿದ ಅಗ್ನಿಯೂ ತಾತ್ವಿಕವಾಗಿ ಆದಿತ್ಯನ ಅಂಶಭೂತನಾದವನೆಂದು ಆದಿತ್ಯನನ್ನೇ ಅಗ್ನಿಜನನವಾದಾಗ ಶುನಃಶೇಪ ಋಷಿಯ ಮೂರು ಮಂತ್ರಗಳಿಂದ ಪ್ರಾರ್ಥಿಸಿ ಅದಕ್ಕೆ ಬ್ರಾಹ್ಮಣದಲ್ಲಿ ವಿಚಾರಿಸಿದ್ದನ್ನೂ ವಿಮರ್ಶಿಸಿದ್ದಾರೆ.

"ಅಭಿ ತ್ವಾ ದೇವ ಸವಿತರೀಶಾನಂ ವಾರ್ಯಾಣಾಂ ।
ಸದಾವನ್ ಭಾಗಮೀಮಹೇ ॥"
"ಮೂರ್ಧಾನಂ ರಾಯ ಆರಭೇ" (ಋ. ೧, ೨೪, ೩-೫)

ಈ ಮಂತ್ರಾರ್ಥ ತತ್ವವನ್ನು ತಿಳಿದು ಬ್ರಾಹ್ಮಣದಲ್ಲಿ–

"ಅಗ್ನಯೇ ಮಥ್ಯಮಾನಾಯಾನುಬ್ರೂಹೀತ್ಯಾಹಾಧ್ವರ್ಯುಃ,
ಅಭಿ ತ್ವಾ ದೇವ ಸವಿತರಿತಿ ಸಾವಿತ್ರೀಮನ್ವಾಹ ॥" (ಐ.ಬ್ರಾ. ೧, ೧೬)

ಅಲ್ಲಿ ಈ ವಿಮರ್ಶೆ ಮಾಡಿದ್ದಾರೆ. ಅಗ್ನಿಯನ್ನು ಮಥಿಸಲು ಅಧ್ವರ್ಯು ಹೇಳಿದ. ಆದರೆ ಸವಿತೃದೇವತಾಕ ಮಂತ್ರವನ್ನು ಇಲ್ಲಿ ಏಕೆ ಹೇಳಿದರು ?

"ತದಾಹುರ್ಯದಧ್ವರ್ಯುರಗ್ನಯೇ ಮಥ್ಯಮಾನಾಯಾನುವಾಚಾಹ, ಅಥ ಕಸ್ಮಾತ್ ಸಾವಿತ್ರೀಮನ್ವಾಹೇತಿ," ಅಲ್ಲಿ ಸಮಾಧಾನ ಹೇಳಿದ್ದಾರೆ. "ಸವಿತೃಪ್ರಸೂತೋಹ್ಯೇಷ ಇತಿ" (ಐ.ಬ್ರಾ. ೧, ೧೬)

ಇಲ್ಲಿ "ಸದಾವನ್ ಭಾಗಮೀಮಹೇ" ಎಂದು ಹೇಳಿದ್ದರಿಂದ ಸವಿತೃವಿನ ಅಂಶರೂಪನೇ ಅಗ್ನಿಯಾಗಿದ್ದಾನೆಂಬುದನ್ನು ತಿಳಿಸಿದ್ದಾರೆ. ಅರಣಿಯಿಂದ ಈಗ ಮಥಿಸಿದ ಅಗ್ನಿಯಾದರೂ ವಸ್ತುತಃ ಆದಿಸೃಷ್ಟಿಯಲ್ಲಿ ದ್ಯಾವಾಪೃಥಿವಿಯಿಂದಲೇ ಹುಟ್ಟಿದವನು ಎಂದು ತಿಳಿಸಲು ಆ ದೇವತಾಕವಾದ ಮಂತ್ರವನ್ನೇ ವಿಧಿಸುತ್ತಾರೆ.

"ಮಹೀ ದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಂ ।

ಪಿಪೃತಾಂ ನೋ ಭರೀಮಭಿಃ ॥" (ಋ. ೧, ೨೨, ೧೩)

ಅರಣಿಗಳಲ್ಲೇ ದ್ಯಾವಾ ಪೃಥಿವೀಗಳನ್ನು ಕಲ್ಪಿಸಿ ಅವರಿಂದಲೇ ಅಗ್ನಿಯು ಧರಿಸಲ್ಪಟ್ಟಿದ್ದಾನೆಂಬುದನ್ನು ಬ್ರಾಹ್ಮಣದಲ್ಲಿ ಸ್ಪಷ್ಟಪಡಿಸಿದ್ದಾರೆ.

"ಅಥಕಸ್ಮಾದ್ ದ್ಯಾವಾ ಪೃಥಿವೀಯಾಮಸ್ವಾಹೇತಿ ದ್ಯಾವಾ ಪೃಥಿವೀಭ್ಯಾಮೇವೈತಂ ಜಾತಂ ದೇವಾಃ ಪರ್ಯಗೃಹ್ಣನ್ ಸೋಽದ್ಯಾಪಿ ಪರಿಗೃಹೀತಃ" ಎಂದು ಕಲ್ಪನೆ ಮಾಡಿದ್ದಾರೆ.

ಅಂತೆಯೇ ಅಗ್ನಿಪ್ರತಿಷ್ಠಾಪನೆಗೆ ವೇದಿ ಪೃಥಿವಿಯೇ ಎಂದು ತಿಳಿಸುತ್ತ

"ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ।" (ಋ. ೧, ೧೬೪, ೩೫)

"ವೇದಿಮಾಹುಃ ಪರಮಂತಂ ಪೃಥಿವ್ಯಾಃ ಯಜ್ಞಮಾಹುರ್ಭುವನಸ್ಯ ನಾಭಿಂ" (ತೈ.ಸಂ. ೭, ೪, ೧೮, ೨)

ಆ ಅಗ್ನಿಯು ಪುರೋಹಿತತ್ವ, ಹಾಗೂ ಎದುರಿಗೇ ಇಡುವಿಕೆಯೂ ಸಹ ಮಂತ್ರದಿಂದಲೇ ಕಲ್ಪಿತವಾಗಿದೆ.

"ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ ।" (ಋ. ೧, ೧, ೧)

"ಅಗ್ನಿಂ ದೂತಂ ಪುರೋ ದಧೇ ಹವ್ಯವಾಹಮುಪ ಬ್ರುವೇ । ದೇವಾಁಆಸಾದಯಾದಿಹ ।" (ಋ. ೮, ೪೪, ೩)

ಅಗ್ನಿಯೇ ದೇವತೆಗಳ ಆವಾಹನ ಕರೆಯುವದಿನ್ನು ಮಾಡುವವನಾದ್ದರಿಂದ ಹೋತೃತ್ವ ಹಾಗೂ ಆ ದೇವತೆಗಳ ಹವಿಸ್ಸನ್ನು ನೀಡುವವನೂ ಅವನೇ.

"ಅಗ್ನೇ ದೇವಾಁಇಹಾವಹ" (ಋ. ೧, ೧೨, ೩) "ಸ ದೇವಾಁಏಹ ವಕ್ಷತಿ" (ಋ. ೧, ೧, ೨) ಎಲ್ಲ ದೇವತೆಗಳ ಬಗ್ಗೆಯೂ ಅಗ್ನಿಯಲ್ಲೇ ಹವನ.

"ಯಚ್ಚಿದ್ಧಿ ಶಶ್ವತಾ ತನಾ ದೇವಂದೇವಂ ಯಜಾಮಹೇ ।

ತ್ವೇ ಇದ್ಧೂಯತೇ ಹವಿಃ ॥" (ಋ. ೧, ೨೬, ೬)

ಈ ಅಗ್ನಿಯೇ ಯಜಮಾನನಾಗಿ ನಾವು ಕೊಟ್ಟ ಹವಿಸ್ಸಿನಿಂದ ದೇವತೆಗಳನ್ನು ಯಜಿಸುತ್ತಾನೆ.

"ತ್ವೇ ಇದಗ್ನೇ ಸುಭಗೇ ಯವಿಷ್ಠ್ಯ ವಿಶ್ವಮಾ ಹೂಯತೇ ಹವಿಃ ।

ಸ ತ್ವಂ ನೋ ಅದ್ಯ ಸುಮನಾ ಉತಾ ಪರಂ ಯಕ್ಷಿ ದೇವಾನ್‌ತ್ಸುವೀರ್ಯಾ ॥"

(ಋ. ೧, ೩೬, ೬)

ಹೀಗೆ ಎಲ್ಲ ದೇವತೆಗಳ ಬಗ್ಗೆ ಅಗ್ನಿಮುಖದಲ್ಲಿಯೇ ಹವನವನ್ನು ವಿಧಿಸಿದ್ದಾರೆ.

"ಮಿತ್ರಾಯ ಹವ್ಯಂ ಘೃತವಜ್ಜುಹೋತ" (ಋ. ೩, ೫೯, ೧)

"ಸತ್ಯಾಯ ಹವ್ಯಂ ಘೃತವದ್ವಿಧೇಮ" (ತೈ.ಸಂ. ೩, ೪, ೧೧, ೫)

"ಅಗ್ನೌ ಮಿತ್ರಾಯ ಹವಿರಾ ಜುಹೋತ" (ಋ. ೩, ೫೯, ೫)

ಹೀಗೆ ಸಮಿಧಾದಿಗಳಿಂದ ಹಾಲು, ತುಪ್ಪ ಮೊದಲಾದ ಹವಿಸ್ಸುಗಳಿಂದ ಹಾಗೂ ನಮಸ್ಕಾರಗಳಿಂದ ವೇದಮಂತ್ರದಿಂದಾಗಿ ಯಜ್ಞವು ನಡೆಯುತ್ತದೆಯೆಂದು ಅದರ ವಿಧಿಯನ್ನು ಹೇಳಿದ್ದಾರೆ.

"ಯಃ ಸಮಿಧಾ ಯ ಆಹುತೀ ಯೋ ವೇದೇನ ದದಾಶ ಮರ್ತೋ ಅಗ್ನಯೇ।

ಯೋ ನಮಸಾ ಸ್ವಧ್ವರಃ ॥" (ಋ. ೮, ೧೯, ೫)

ಇದರ ವಿವರಣೆ– "ಉಕ್ತಾನಿ ವೈತಾನಿಕಾನಿ ಗೃಹ್ಯಾಣಿ ವಕ್ಷ್ಯಾಮಃ" (ಆ.ಶ್ರಾ.ಸೂ. ೧) ಪ್ರತ್ಯಕ್ಷವಾಗಿ ಆ ವಿಧಿ ವಚನವನ್ನು ಮಂತ್ರಗಳಲ್ಲಿಯೇ ತಿಳಿಸಿದ್ದಾರೆ.

"ಸಮಿಧಾಽಗ್ನಿಂ ದುವಸ್ಯತ ಘೃತೈರ್ಬೋಧಯತಾತಿಥಿಂ ।

ಆಽಸ್ಮಿನ್ ಹವ್ಯಾ ಜುಹೋತನ ॥" (ಋ. ೮, ೪೪, ೧)

"ಸುಸಮಿದ್ಧಾಯ ಶೋಚಿಷೇ ಘೃತಂ ತೀವ್ರಂ ಜುಹೋತನ ।

ಅಗ್ನಯೇ ಜಾತವೇದಸೇ ॥" (ಋ. ೫, ೫, ೧)

ಇಲ್ಲಿ "ದುವಸ್ಯತ, ಹವ್ಯಾ ಜುಹೋತನ, ಘೃತಂ ತೀವ್ರಂ ಜುಹೋತನ" ಇತ್ಯಾದಿ ಲಿಙಂತ ಮಧ್ಯಮ ಪುರುಷ ಬಹುವಚನ ಪರವಾದ ಕ್ರಿಯಾಪದಗಳಿಂದ ವಿಧ್ಯರ್ಥವನ್ನೇ ಹೇಳಿದ್ದರಿಂದ ವೇದಮಂತ್ರಗಳಲ್ಲಿ ಅದರ ವಿಧಾನಗಳನ್ನು ಹೇಳಿಲ್ಲ ಎಂಬ ಮಾತು ನಿರ್ಮೂಲವೆಂದೇ ಹೇಳಬೇಕಾಗಿದೆ. ಇಂಥ ಕಲ್ಪನೆಗಳಿಗೆ ಅವಕಾಶವಿಲ್ಲ. ವೇದಮಂತ್ರಗಳನ್ನು ಈ ದೃಷ್ಟಿಕೋನ ದಿಂದ ನೋಡದಿರುವದು ಅಥವಾ ಮಂತ್ರಾರ್ಥಗಳ ಕಡೆಗೆ ಲಕ್ಷ್ಯ ಪೂರೈಸದಿರುವದೇ ಕಾರಣವಾಗಿದೆಯೆಂದು ತೋರುತ್ತದೆ.

"ಮಂಥತಾನರಃ, ಅಗ್ನಿಂ ನರೋ ಜನಯತ," ಇತ್ಯಾದಿಗಳಿಂದ ಸ್ಪಷ್ಟವಾಗಿ ವಿಧಿಮುಖದಿಂದ ಅನುಶಾಸನ ಮಾಡಿದಂತಿದೆ. ಅಂತೆಯೇ ವೇದಿಯ ಅಲಂಕಾರವನ್ನು ಕೂಡಾ ವಿಧಿಸಿದ್ದಾರೆ.

"ಅರಂ ಕೃಣ್ವಂತು ವೇದಿಂ ಸಮಗ್ನಿಮಿಂಧತಾಂ ಪುರಃ" *(ಋ. ೧, ೧೭೦, ೪)*

ಇಲ್ಲಿ "ಕಣ್ವಂತು" ಎಂಬ "ಲೋಟ್" ವಿಧಾನವನ್ನು ನಿವಾರಿಸಲು ಶಕ್ಯವಿಲ್ಲ.

"ವಿಧಿನಿಮಂತ್ರಣಾಮಂತ್ರಣಾಧೀಷ್ಟ ಸಂಪ್ರಶ್ನಪ್ರಾರ್ಥನೇಷು ಲಿಙ್" (ಪಾ.ಸೂ. ३, ३, ೧೬೧) "ಲೋಟ್ ಚ" (ಪಾ.ಸೂ. ३, ३, ೧೬೨) ಶಬ್ದಶಾಸ್ತ್ರ ಸಮ್ಮತವಾಗಿದೆ.

ಅಲ್ಲದೇ "ಆಗ್ನೇಯಮಷ್ಟಾಕಪಾಲಂ ನಿರ್ವಪತಿ," ಹೀಗೆ ವರ್ತಮಾನ ಕಾಲದ ಲಟ್ ಪ್ರಯೋಗದಲ್ಲಿಯೂ ಸಾಕ್ಷಾದ್ ವಿಧಿಕಲ್ಪವಾದ ಬ್ರಾಹ್ಮಣ ಗ್ರಂಥಗಳಲ್ಲಿಯೂ ನಿರ್ವಪೇತ್ ಎಂದು ವಿಧಾನಾರ್ಥಕವೇ ಯುಕ್ತವೆಂದು ಮೀಮಾಂಸಕರು ನಿರ್ಣಯಿಸಿದ್ದಾರೆ. ಉತ್ತಮ ಪುರುಷ ದಲ್ಲಿಯೂ ಅದೇ ರೀತಿಯೆಂದಿದ್ದಾರೆ. "ಯಜ್ಞಂ ತೇ ತನವಾವಹೈ" (ಋ. ೧, ೧೭೦, ೪)

"ಯಜಾಮ ದೇವಾನ್ ಯದಿ ಶಕ್ನವಾಮ" (ಋ. ೧, ೨೭, ೧३)

"ಯಜ್ಞಿಯಾನ್ ಹಂತ ದೇವಾಂ ಈಳಾಮಹಾ ಈಡ್ಯಾಂ ಆಜ್ಯೇನ" *(ಋ. ೧೦, ೫३, ೨)*

ಇತ್ಯಾದಿ ಸಾವಿರಾರು ಮಂತ್ರಗಳು ವೇದದಲ್ಲಿ ಕಂಡು ಬರುತ್ತವೆ.

"ಸಮಿಧಾಜಾತವೇದಸೇಂ ಹವಿರ್ಭಿಃ ಶುಕ್ರಶೋಚಿಷೇ ನಮಸ್ವಿನೋ ವಯಂ ದಾಶೇಮಾಗ್ನಯೇ" *(ಋ. ೭, ೧೪, ೧)*

ಸಾಕ್ಷಾತ್ತಾಗಿ ಹವಿರ್ಯಜ್ಞ ಹೇಳಿದ್ದು.

"ಯಜಧ್ವೈನಂ ಪ್ರಿಯಮೇಧಾ ಇಂದ್ರಂ ಸತ್ರಾಚಾ ಮನಸಾ" *(ಋ. ೮, ೨, ३೭)*

ಹೀಗೆ ವೇದ ಮಂತ್ರದಲ್ಲಿ ಈಶ್ವರೀಯ ಸೃಷ್ಟಿಯಜ್ಞದ ವರ್ಣನೆ ಮಾತ್ರ ಇದೆ. ಹವಿರ್ಯಜ್ಞಾದಿಗಳಿಲ್ಲ ಎಂಬ ಮಾತೂ ನಿರ್ಮೂಲವಾಗಿದೆಯೆಂಬ ಮಾತು ವೇದಾರ್ಥಜ್ಞಾನ ವಿಲ್ಲದವರದು.

ಅಥವಾ ಕೇವಲ ಭೌತಿಕ ದೃಷ್ಟಿಯುಳ್ಳವರನ್ನು ಸಂತೋಷಪಡಿಸಿ ಪ್ರಶಂಸಾಪತ್ರಾದಿ ಪಾರಿತೋಷಕಗಳನ್ನು ಗಿಟ್ಟಿಸಲು ಸ್ವಕಪೋಲಕಲ್ಪಿತವಾದದ್ದನ್ನೇ ಹೇಳಿದ್ದು.

ವೇದಮಂತ್ರಗಳಲ್ಲಿಯೇ ಸೋಮಾದಿಹವನವನ್ನೂ ಸೋಮಾಬಿಷವವನ್ನೂ ವಿಧಿಸಿದ್ದಾರೆ.

"ಇಂದ್ರಾಯ ಸೋಮಂ ಯಜ್ಯವೋ ಜುಹೋತ" *(ಋ. ೨, ೧೪, ೮)*

ಯಜಮಾನರೇ ಇಂದ್ರನಿಗಾಗಿ ಸೋಮವನ್ನು ಹೋಮಿಸಿ,

"ಇಂದ್ರಾಯೇಂದುಂ ಪುನೀತನ" (ಋ. ೯, ೬೨, ೨೯)

"ಅಥೋ ಇಂದ್ರಾಯ ಪಾತವೇ ಸುನು ಸೋಮಮುಲೂಖಲ" (ಋ. ೧, ೨೮, ೬)

ಹೀಗೆಯೇ ಹವಿಸ್ಸನ್ನು ಅರ್ಪಿಸುವಾಗ ಸ್ವಾಹಾಕಾರ ವಷಟ್‌ಕಾರ ಸ್ವಧಾಕಾರಾದಿಗಳ ವಿಧಿ, ಮಂತ್ರಗಳಲ್ಲಿಯೇ ಕಂಡುಬರುತ್ತಿದೆ.

"ಇಂದ್ರಾಯೇಂದು ಪುನೀತನ" (ಋ. ೯, ೬೨, ೨೯)

"ಸ್ವಾಹಾಽಗ್ನಯೇ ವರುಣಾಯ ಸ್ವಾಹೇಂದ್ರಾಯ ಮರುದ್ಭ್ಯಃ ।
ಸ್ವಾಹಾ ದೇವೇಭ್ಯೋ ಹವಿಃ" (ಋ. ೫, ೫, ೧೧)
"ಸ್ವಾಹಾಕೃತಂಹ ವಿರದಂತು ದೇವಾಃ" (ಋ. ೧೦, ೧೧೦, ೧೧)
"ಸ್ವಧಾಂ ಪೀಪಾಯ ಸುಭ್ವನ್ನಮತ್ತಿ" (ಋ. ೨, ೩೫, ೭)
"ಸ್ವಧಯಾ ಚಿತ್ಸುತಸ್ಯಾಽಗ್ನೇರ್ವಾ ಪಾಹಿ ಜಿಹ್ವಯಾ ಯಜತ್ರ" (ಋ. ೩, ೩೫, ೧೦)
"ಸ್ವಾಹಾನ್ಯೇ ಸ್ವಧಯಾನ್ಯೇ ಮದಂತಿ" (ಋ. ೧೦, ೧೪, ೩)
"ವಷಟ್ ತೇ ವಿಷ್ಣವಾಸ ಆ ಕೃಣೋಮಿ ತನ್ಮೇ ಜುಷಸ್ವ ಶಿಪಿವಿಷ್ಟ ಹವ್ಯಂ" (ಋ. ೭, ೯೯, ೭)

ಹವಿಸ್ಸನ್ನು ಸಮರ್ಪಿಸುವಾಗ ವಷಟ್‌ಕಾರವು ವಿಹಿತವಾಗಿದೆ.

"ವೌಷಡಿತಿ ವಷಟ್‌ಕರೋತಿ" (ಐ.ಬ್ರಾ. ೩, ೬). ಹೀಗೆ ಬ್ರಾಹ್ಮಣದಲ್ಲಿ ವಿಧಿಸಿರುವದರಿಂದ ವೌಷಟ್ ಎಂದೇ ವಷಟ್ಕಾರವನ್ನು ಆಹುತಿ ಹಾಕುವಾಗ ಯಜ್ಞಗಳಲ್ಲಿ ಹೇಳುತ್ತಾರೆ. ಹೇಗೆಂದರೆ– "ಶ್ರಾವಯೇತ್ಯಾಶ್ರಾವಯಂತಿ" (ಶಿ.ಉ. ೧೭)

"ಓ೩ ಶ್ರಾವಯ" ಎಂದು ಆ ಶ್ರವಣವನ್ನು ಅಧ್ವರ್ಯುಗೆ ವಿಧಿಸಿದ್ದಾರೆ. ಹಾಗಾಗಿ ಅಧ್ವರ್ಯುವು ಆಶ್ರಾವಯ ಎಂಬುದನ್ನು ಓಶ್ರಾವಯ ಎನ್ನುತ್ತಾನೆ. ಹೀಗೆ ಸ್ವಾಹಾ, ವಷಟ್, ಹಂತ, ಸ್ವಧಾ ಎಂದು ಚತುರ್ವಿಧವಿದೆ. ಮೊದಲಿನ ಎರಡು ಅಂದರೆ ಸ್ವಾಹಾ, ವಷಟ್ ಇವು ದೇವತೆಗಳಿಗೆ ಹವನ ಮಾಡುವಾಗ ಮನುಷ್ಯನಿಗಾಗಿ ಹಂತ, ಪಿತೃಗಳಿಗಾಗಿ ಸ್ವಧಾ, ಈ ವಿಷಯವನ್ನು–

"ವಾಚಂ ಧೇನುಮುಪಾಸೀತ, ತಸ್ಯಾಶ್ಚತ್ವಾರಃ ಸ್ತನಾಃ । ೧ಸ್ವಾಹಾಕಾರೋ ೨ವಷಟ್ಕಾರೋ ೩ಹಂತಕಾರಃ ೪ಸ್ವಧಾಕಾರಃ, ತಸ್ಯೈ ದ್ವೌ ಸ್ತನೌ ದೇವಾ ಉಪಜೀವಂತಿ ಸ್ವಾಹಾಕಾರಂ ಚ ವಷಟ್ಕಾರಂ ಚ ಹಂತಕಾರಂ ಮನುಷ್ಯಾಃ ಸ್ವಧಾಕಾರಂ ಪಿತರಃ, ತಸ್ಯಾಃ ಪ್ರಾಣ ಋಷಭೋ ಮನೋ ವತ್ಸಃ" (ಬೃ.ಉ. ೫, ೮, ೧)

ಇಲ್ಲಿ ಸ್ವಾಹಾಕಾರವೆಂಬುದು ಹವನದಲ್ಲಿ ಸಾಮಾನ್ಯವಾಗಿ ಮಂತ್ರದ ಕೊನೆಯಲ್ಲಿ ಪ್ರಯೋಗಿಸಲ್ಪಡುತ್ತದೆಂಬುದು ಪ್ರಸಿದ್ಧವಾಗಿದೆ. ಅಂತೆಯೇ ಶ್ರೌತಯಾಗಗಳಲ್ಲಿ ವೌಃಷಟ್ ಎಂದು ವಷಟ್ಕಾರವನ್ನು ಮಂತ್ರಾಂತ್ಯದಲ್ಲಿ ಹೋತೃ ಎಂಬ ಋತ್ವಿಜ ಪಠಿಸುತ್ತಾನೆ. ಸಮಕಾಲದಲ್ಲಿ ಅಧ್ವರ್ಯುವು ಹೋಮಿಸುತ್ತಾನೆ. "ವಷಟ್ ಕೃತೇಜುಹೋತಿ" ಎಂದು ವಿಧಿ, ಅದರಂತೆ ಹೋತೃಗಣದ ಋತ್ವಿಜರಾದ ಮೈತ್ರಾವರುಣ ....ಮೊದಲಾದವರೂ ಮಂತ್ರಾಂತ್ಯ-ದಲ್ಲಿ ಹವನಕ್ಕೆ ವೌಷಟ್ ಎನ್ನುತ್ತಾರೆ.

ಅದು ಹೇಗೆಂದರೆ–

ಅಗ್ನಿಃ ಸ್ವಿಷ್ಟಕೃತಂ ಯಃಜ– ಹೀಗೆ ಅಧ್ವರ್ಯುವಿನಿಂದ ಪ್ರೇಷಿತನಾದ ಹೋತೃವು ಯೇಃ ಯಜಾಮಹೇಽಗ್ನಿಂಸ್ವಿಷ್ಟಕೃತಮಯಾಳಗ್ನಿರಗ್ರೇಃ ಪ್ರಿಯಾಧಾಮಾನಿಂ, ಇತ್ಯಾದಿ ನಿಗದವನ್ನು ಹೇಳಿ ಕೊನೆಗೆ–

"ಅಗ್ನೇ ಯದದ್ಯ ವಿಶೋ ಅಧ್ವರಸ್ಯ ಹೋತಃ ಪಾವಕಶೋಚೇ ವೇಷ್ಟ್ವಂ ಹಿ ಯಜ್ವಾ । ಋತಾ ಯಜಾಸಿ ಮಹಿನಾ ವಿಯದ್ಭೂರ್ಹವ್ಯಾ ವಹ ಯವಿಷ್ಠ ಯಾ ತೇ ಅದ್ಯಾಃವೌಷಟ್," ಹೀಗೆ ವಷಟ್ಕಾರವನ್ನು ಹೇಳುತ್ತಾರೆ. ಇಲ್ಲೆಲ್ಲಾ ಈ ಋಙ್ಮಂತ್ರಗಳು ಸ್ವರರಹಿತವಾಗಿ ವಿನಿಯುಕ್ತವಾಗಿವೆ.

"ಏಕಶ್ರುತಿ ಸಂತತಮನುಬ್ರೂಯಾತ್", ಅವನ್ನೆಲ್ಲ ಏಕಶ್ರುತಿಯಿಂದ ಹೇಳಬೇಕೆಂದು ವಿಧಾನ.

ಶ್ರೌತಕಲ್ಪದಲ್ಲಿ ಚಾತುರ್ಮಾಸ್ಯಯಾಗದಪಿತೃ ಇಷ್ಟಿಯಲ್ಲಿ ವಷಟ್ಕಾರ ಸ್ಥಾನದಲ್ಲಿ ಸ್ವಧಾವನ್ನು ಹೇಳಿದ್ದಾರೆ. "ಸ್ವಃಧಾನಮಃ" "ಇತಿ ಹೋತ್ರಾ ಪ್ರಯುಜ್ಯತೇ", ಅಂತೆಯೇ ನಮಸ್ಕಾರ ದಿಂದಲೂ ಯಜ್ಞಸಿದ್ಧಿಯಾಗುತ್ತದೆ.

"ನಮೋಭಿರ್ದೇವಮಸುರಂ ದುವಸ್ಯ" *(ಋ. ೫, ೬೨, ೧೧)*

"ಯೋ ನಮಸಾ ಸ್ವಧ್ವರಃ" *(ಋ. ೮, ೧೯, ೫)*

ಆದ್ದರಿಂದಲೇ ಕೃಷ್ಣಯಜುರ್ವೇದದಲ್ಲಿ ಭಗವಾನ್ ರುದ್ರನ ನಮಸ್ಕಾರ ರೂಪವಾದ ಯಜ್ಞವನ್ನು ಮಂತ್ರಮುಖದಿಂದ ಉಪದೇಶಿಸಿದ್ದಾರೆ.

"ನಮಸ್ತೇ ರುದ್ರ ಮನ್ಯವ ಉತೋತ ಇಷವೇ ನಮಃ ।
ನಮಸ್ತೇ ಅಸ್ತು ಧನ್ವನೇ ಬಾಹುಭ್ಯಾ ಮುತತೇ ನಮಃ ॥" *(ತೈ.ಸಂ. ೪,೫,೧,೧)*

ಹೀಗೆ ಮೊದಲಾಗಿ ರುದ್ರಾಧ್ಯಾಯದಲ್ಲಿ ಮುನ್ನೂರಕ್ಕಿಂತಲೂ ಹೆಚ್ಚಾಗಿ ರುದ್ರನನ್ನು ನಮಸ್ಕರಿಸಿದ್ದಾರೆ. ಋಗ್ವೇದದಲ್ಲಿ ರುದ್ರಸೂಕ್ತದಲ್ಲಿದೆ.

"ಮೃಳಾ ನೋ ರುದ್ರೋತ ನೋ ಮಯಸ್ಕೃಧಿ ಕ್ಷಯದ್ವೀರಾಯ ನಮಸಾ ವಿಧೇಮ ತೇ"

(ಋ. ೧, ೧೧೪, ೨)

ಈ ಮೊದಲಾದ ಯಜ್ಞವಿಧಿಗಳನ್ನು ಋಗಾದಿ ಮಂತ್ರೋಪದಿಷ್ಟವಾದವುಗಳನ್ನೇ ಅನುಲಕ್ಷಿಸಿ ಅನುಕ್ರಮವಾಗಿ ಯಜ್ಞಾದಿಗಳನ್ನು ಪೂರ್ವ ಋಷಿಗಳು ಬ್ರಾಹ್ಮಣಾದಿಗಳಿಂದ ಕಲ್ಪಿಸಿದರು. ಅವೆಲ್ಲವೂ ಬ್ರಾಹ್ಮಣ ಗ್ರಂಥಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿವೆ. ಇಲ್ಲಿ ದಿಗ್ದರ್ಶನವನ್ನಷ್ಟೇ ಮಾಡಿದೆ.

ಆ ಬ್ರಾಹ್ಮಣ ಕಲ್ಪವನ್ನನುಸರಿಸಿ ಶ್ರೌತಸೂತ್ರ ಗೃಹ್ಯಸೂತ್ರ (ಸ್ಮಾರ್ತಕಲ್ಪ)ಗಳನ್ನು ರಚಿಸಿದರು. ಆದ್ದರಿಂದ ಬ್ರಾಹ್ಮಣ, ಶ್ರೌತಸೂತ್ರ, ಗೃಹ್ಯಸೂತ್ರಗಳು ಕಲ್ಪವೆನಿಸಿಕೊಂಡಿವೆ.

॥ ಆಂತರ್ಯ ತಪೋ-ಯೋಗ, ಜ್ಞಾನಾದಿ ಯಜ್ಞಾಃ ॥

ಬ್ರಾಹ್ಮಣ ಉಪನಿಷತ್ತು ಹಾಗೂ ವೇದಮಂತ್ರಗಳಲ್ಲಿ ಬಾಹ್ಯದ್ರವ್ಯ ಯಜ್ಞಗಳನ್ನು ಉಪದೇಶಿಸಿದಂತೆ ಆಂತರ್ಯಜ್ಞಾನಾದಿ ಯಜ್ಞಗಳೂ ಉಪದೇಶಿಸಲ್ಪಟ್ಟಿವೆ. ಕೆಲವು ವಿಧಿ ಮುಖವಾಗಿ ಹಾಗೂ ಕೆಲವು ವಿಪರೀತವಾದ ನಿಷೇಧಮುಖವಾಗಿ.

ಋಗ್ವೇದದಲ್ಲಿ ಧೀಯೋಗ–

"ಯಸ್ಮಾದ್ಧೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।
ಸ ಧೀನಾಂ ಯೋಗಮಿನ್ವತಿ ॥" (ಋ ೧, ೧೮, ೭)

ಸ್ಪಷ್ಟತರವಾಗಿ ಧೀಯೋಗ ಶ್ರವಣವು "ಭರ್ಗೋದೇವಸ್ಯ ಧೀಮಹೀ ಧಿಯೋಯೋನಃ ಪ್ರಚೋದಯಾತ್" (ಋ. ೩, ೬೨, ೧೦) ಹೀಗೆ ಸವಿತೃದೇವನ ಜ್ಯೋತಿಯ ಧ್ಯಾನ ಹಾಗೂ ಅದರ ಆಶ್ರಯದಿಂದ ಅಲ್ಲಿ ಇರುವಿಕೆ. ಇಲ್ಲಿ ಉತ್ತಮ ಪುರುಷ ಬಹುವಚನವು ಅಂದರೆ "ಧೀಮಹಿ," "ಧ್ಯಾಯೇಮ". ಇಲ್ಲಿ ವಿಧಾನಮುಖದಿಂದ ಹೇಳಿದ್ದರಿಂದ "ಧ್ಯಾಯೇತ್" ಧ್ಯಾನಿಸಬೇಕು ಎಂಬ ಅರ್ಥವೂ ಸಿದ್ಧಿಸುತ್ತದೆ. ಉಪನಿಷತ್ತುಗಳಲ್ಲಿ ವಿಧಿಮುಖದಿಂದಲೇ ಉಪದೇಶವಿದೆ.

"ಓಮಿತ್ಯೇವಂ ಧ್ಯಾಯಥ. ಆತ್ಮಾನಂ," ಆತ್ಮನನ್ನು ಓಂ ಎಂದೇ ಧ್ಯಾನಿಸಿರಿ. ಹಾಗೆಯೇ ನಿಷೇಧ ಮುಖದಿಂದ ವ್ಯತಿರೇಕದಿಂದ ಮೌನ ವಿಧಿರೂಪವಾಗಿಯೂ "ಅನ್ಯಾ ವಾಚೋ ವಿಮುಂಚಥ" ಬೇರೆ ಮಾತಾಡಬೇಡಿ, (ಮುಂ. ೨, ೨, ೫) "ನಾನುಧ್ಯಾಯಾದ್ ಬಹೂಞ್ಛಬ್ದಾನ್ ವಾಚೋ ವಿಗ್ಲಾಪನಂ ಹಿ ತತ್" (ಬೃ. ೪, ೪, ೨೧)

"ತಸ್ಮಾದ್ ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಮೌನೇನ ತಿಷ್ಠಾಸೇತ್", "ಪಾಂಡಿತ್ಯಂ ಚ ಮೌನಂ ಚ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್" (ಬೃ.ಉ. ೩, ೫, ೧) ಪಾಂಡಿತ್ಯವನ್ನು ಮರೆತು ಬ್ರಾಹ್ಮಣನು ಮೌನದಿಂದಿರಬೇಕು. ಪಾಂಡಿತ್ಯವನ್ನೂ, ಮೌನವನ್ನೂ ಮರೆತು ಬಾಲ್ಯದಿಂದಿರಬೇಕು.

"ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಮ್". (ಮುಂ.ಉ. ೨, ೨, ೪)

ಈ ಮೊದಲಾದ ವಿಧಾನಗಳು ಜ್ಞಾನಯಜ್ಞಬೋಧಕಗಳು ಇವೂ ಕಲ್ಪರೂಪದಿಂದಾಗಿ ಬೋಧಿಸುತ್ತವೆ.

"ಋಚೋ ಅಕ್ಷರೇ ಪರಮೇ ವ್ಯೋಮನ್ ಯ ಇತ್ತದ್ವಿದುಸ್ತ ಇಮೇ ಸಮಾಸತೇ"

(ಋ. ೧, ೧೬೪, ೩೯)

ಈ ರೀತಿಯ ಉಪದೇಶದಿಂದ ಆ ಅಕ್ಷರದಿಂದಲೇ ಅಮೃತತ್ವ ಪ್ರಾಪ್ತಿಯಾಗುತ್ತದೆಂಬ ಅರ್ಥವು ಸಿಗುತ್ತದೆ. ಅದನ್ನೇ "ವಿದ್ಯಯಾಽಮೃತಮಶ್ನುತೇ" (ಈ.ಉ. ೧೧). "ವಿದ್ಯಯಾ ವಿಂದತೇಽಮೃತಂ," (ಕೇ.ಉ. ೨, ೪) ವಿದ್ಯೆಯಿಂದ ಅಮೃತತ್ವ ಪ್ರಾಪ್ತಿಯಾಗುತ್ತದೆ.

ಇದರಂತೆ ಉಪಾಸನೆಗಳಿಂದಲೂ ಇದು ಸಾಧ್ಯವೆಂದು ಉಪಾಸನೆಗಳಿಗೂ ಕಲ್ಪರೂಪ ವಿಧಿಸುತ್ತದೆ ವೇದ,

"ದೇವಂ ನರಃ ಸವಿತಾರಂ ವಿಪ್ರಾ ಯಜ್ಞೈಃ ಸುವೃಕ್ತಿಭಿಃ ।
ನಮಸ್ಯಂತಿ ಧಿಯೇಷಿತಾಃ ॥" (ಋ. ೩, ೬೨, ೧೨)

ಈ ಮಂತ್ರದ ಆಧಾರದಿಂದಲೇ "ಅಹರಹಃ ಸಂಧ್ಯಾಮುಪಾಸೀತ" ಪ್ರತಿದಿನ ಸಂಧ್ಯಾವಂದನೆ ಮಾಡಬೇಕು. ಮೊದಲಾದವುಗಳ ವಿಧಾನವನ್ನು ಬ್ರಾಹ್ಮಣ ಮುಖದಿಂದ ಕಲ್ಪಿಸಿದರು.

"ಉಪ ತ್ವಾಽಗ್ನೇ ದಿವೇದಿವೇ ದೋಷಾವಸ್ತರ್ಧಿಯಾ ವಯಂ ।
ನಮೋ ಭರಂತ ಏಮಸಿ ॥" (ಋ. ೧, ೧, ೭)

ಈ ಮಂತ್ರದಿಂದ ಪ್ರತಿದಿನ ಸಾಯಂಕಾಲ ಪ್ರಾತಃಕಾಲಗಳಲ್ಲಿ ನಮಸ್ಕಾರ ಪೂರ್ವಕ ಹವಿರ್ದ್ರವ್ಯವನ್ನು ಮನಃಪೂರ್ವಕ ಸಮರ್ಪಿಸುತ್ತ ನಿನ್ನ ಬಳಿಗೆ ಬರುತ್ತೇನೆ. ಇಲ್ಲಿ ಸ್ಪಷ್ಟವಾಗಿ ಹೇಳದಿದ್ದರೂ ಅಗ್ನಿಹೋತ್ರಾದಿಗಳಿಗೆ ಮೂಲಭೂತವಾದ ವಚನ ಇದಾಗಿದೆ. "ಸಾಯಂ ಪ್ರಾತರಗ್ನಿಹೋತ್ರಂ ಜುಹುಯಾತ್," ಎಂಬ ಅರ್ಥವು ಕಲ್ಪಿತವಾಗಿದೆ. ಧೀಯೋಗವನ್ನೂ ಕೂಡಾ ಹೀಗೆಯೇ ವಿಧಿಸಿದ್ದಾರೆ.

"ಯಸ್ಮಾದೃತೇ ನ ಸಿಧ್ಯತಿಂ ಸ ಧೀನಾಂ ಯೋಗಮಿನ್ವತಿ," (ಋ. ೧, ೧೮, ೭) ಈ ಧೀಯೋಗದಿಂದ ಆಂತರ್ಯವಾದ ಆಧ್ಯಾತ್ಮಿಕ ಯಜ್ಞವನ್ನು ಸಾಧಿಸಿರಿ ಎಂದು ವಿದ್ವದ್ಯಜ್ಞವನ್ನು ಉಪದೇಶಿಸಿದ್ದಾರೆ.

ಧೀಯೋಗದಿಂದ ಆತ್ಮನ ಸಾಕ್ಷಾತ್ಕಾರ ಪಡೆಯಲು ಈ ವಿದ್ವದ್ಯಜ್ಞದ ಅನುವಾದವನ್ನೇ ಉಪನಿಷದ್ ವಚನದಲ್ಲಿ– "ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾ ಪತ್ನೀ, ಇತ್ಯಾದಿ– "ದಕ್ಷಿಣಾ ವಾಗ್ ಹೋತಾ ಪ್ರಾಣಉದ್ಗಾತಾ ಚಕ್ಷುರಧ್ವರ್ಯುರ್ಮನೋಬ್ರಹ್ಮಾ ಶ್ರೋತ್ರ-ಮಗ್ನೀದ್ ಯಾವದ್ ಧ್ರಿಯತೇ ಸಾದೀಕ್ಷಾ" ಇತ್ಯಾದಿ (ನಾ.ಉ. ೨೫)

ಇಲ್ಲಿ ಆತ್ಮಾನುಭೂತಿರೂಪವಾದ ವಿಜ್ಞಾನವೇ ಹವನಾತ್ಮಕವಾಗಿ ಯಜ್ಞರೂಪವನ್ನು ಹೊಂದುತ್ತದೆ ಎಂದಿದೆ. "ಯದಸ್ಯ ವಿಜ್ಞಾನಂ ತಜ್ಜುಹೋತಿಂ" ಇನ್ನೊಂದೆಡೆ–

ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತಿ ತಾಮಾಹುಃ ಪರಮಾಂ ಗತಿಂ ॥
ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಂ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಸೌ ॥ (ಕ.ಉ. ೬, ೧೦, ೧೧)

ಪಂಚಜ್ಞಾನೇಂದ್ರಿಯಗಳೂ, ಮನಸ್ಸು, ಬುದ್ಧಿ, ಎಲ್ಲ ಸ್ಥಿರವಾಗಿ ನಿಲ್ಲುವದೇ ಪರಮಗತಿ. ಸ್ಥಿರವಾದ ಇಂದ್ರಿಯಗಳ ಧಾರಣವೇ ಯೋಗ. ಯೋಗದಿಂದಾಗಿ ಮಾನವನು ಪ್ರಮಾದ ರಹಿತನಾಗುತ್ತಾನೆ.

"ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಂ, ಬ್ರಹ್ಮ ಪ್ರಾಪ್ತೋ ವಿರಜೋಽಭೂದ್ವಿಮೃತ್ಯುರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ, (ಕ.ಉ. ೬, ೧೮)

ನಚಿಕೇತನು ಪೂರ್ಣಯೋಗವನ್ನೂ, ವಿದ್ಯೆಯನ್ನೂ, ಬ್ರಹ್ಮನನ್ನೂ, ಪಡೆದು ವಿರಜನೂ ಮೃತ್ಯುರಹಿತನೂ ಆದನು. ಅನ್ಯರೂ ಆತ್ಮವನ್ನು ತಿಳಿದು ಹೀಗೇ ಆಗುವರು.

ಅಪ್ರಮಾದ ರೂಪಯೋಗ ವಿಧಿಯೇ ಕಲ್ಪ :

ಇದರಂತೆ ಆಧ್ಯಾತ್ಮಿಕ ನಿಷ್ಠಾರೂಪವಾದ ಅಪ್ರಮಾದರೂಪವಾದ ಯೋಗ ಅದರ ಕಲ್ಪವೂ ಕೂಡಾ ಋಙ್ಮಂತ್ರಗಳಲ್ಲಿ ಕಂಡುಬರುತ್ತದೆ.

"ಯೋ ಜಾಗಾರ ತಮೃಚಃ ಕಾಮಯಂತೇಂ" (ಋ. ೫, ೪೪, ೧೪)

ಜಾಗೃತನಾಗಿರುವವನನ್ನು ಋಙ್ಮಂತ್ರಗಳೇ ಇಚ್ಛಿಸುತ್ತವೆ.

"ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ ।
ವಿಷ್ಣೋರ್ಯತ್ ಪರಮಂ ಪದಂ ॥" (ಋ. ೧, ೨೨, ೨೧)

ಜಾಗೃತರಾದ ವಿದ್ವಾಂಸರು ವಿಷ್ಣುಪದವನ್ನು ಹೊಂದುತ್ತಾರೆ.

"ಸಂಜಾಗೃವದ್ಭಿರ್ಜರಮಾಣ ಇಧ್ಯಸೇ" (ಋ. ೧೦, ೯೧)

ಜಾಗೃತರಾದವರು ಪುಷ್ಟಿಯನ್ನು ಹೊಂದುತ್ತಾರೆ.

"ತ್ವೇ ರಯಿಂ ಜಾಗೃವಾಂಸೋ ಅನುಂ" (ಋ. ೬, ೧, ೩)

ಇದೇ ಯೋಗವನ್ನು ಉಪನಿಷತ್ತುಗಳೂ ತಿಳಿಸಿವೆ.

"ಅಪ್ರಮತ್ತೇನ ವೇದ್ಧವ್ಯಮ್ಂ" (ಮುಂ.ಉ. ೨, ೨, ೪)

"ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭಾವಾಪ್ಯಸೌ" (ಕ.ಉ. ೬, ೧೧)

"ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂ ಹ್ಯುಪಾಸಾನಿಶಿತಂ ಸಂಧಯೀತ ।
ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೌಮ್ಯ ವಿದ್ಧಿ ॥" (ಮು.ಉ.೨,೨,೩)

"ಸತ್ಯಾನ್ನ ಪ್ರಮದಿತವ್ಯಂ । ಧರ್ಮಾನ್ನ ಪ್ರಮದಿತವ್ಯಂ ॥
ಕುಶಲಾನ್ನ ಪ್ರಮದಿತವ್ಯಂ । ಭೂತ್ಯೈರ್ನ್ ಪ್ರಮದಿತವ್ಯಂ ॥"
ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ ॥" (ಇತಿ ಚ ತೈ.ಉ. ೧, ೧೧)

ನಿಷೇಧ ಮುಖದಿಂದ ಸಾಕ್ಷಾತ್ತಾಗಿ ವಿಧಿಸಿದ ಕಲ್ಪ ಇದು. ಹಾಗೆಯೇ ಕೇವಲ ವಾಕ್ಸಂಯಮ ಯೋಗವನ್ನೂ ಋಙ್ಮಂತ್ರ ಉಪದೇಶಿಸಿದೆ.

"ಪ್ರತೀಚೀಂ ಜಗ್ರಭ್ಣಾ ವಾಚಮಶ್ವಂ ರಶನಯಾ ಯಥಾ" *(ಋ. ೧೦, ೧೮, ೧೪)*

ಕುದುರೆಯನ್ನು ಹಗ್ಗದಿಂದ ಬಿಗಿಹಿಡಿಯುವಂತೆ ಮಾತನ್ನು ಬಿಗಿಹಿಡಿ. ಹಾಗೆಯೇ ನಿಷೇಧ ಮುಖದಿಂದಲೂ ಆ ವಿಧಿಗೆ ಸಹಕಾರಿಯಾಗಿ ಉಪದೇಶಿಸಿದೆ.

"ಚತುರಶ್ಚಿದ್ದದಮಾನಾದ್ ಬಿಭೀಯಾದಾ ನಿಧಾತೋಃ ।
ನ ದುರುಕ್ತಾಯ ಸ್ಪೃಹಯೇತ್, ॥" *(ಋ. ೧, ೪೧, ೯)*

ಇದೇ ಅರ್ಥದಲ್ಲಿ ಕಲ್ಪಿಸಿದ ಸ್ಮೃತಿ ವಚನವು ಸುಪ್ರಸಿದ್ಧವಾಗಿದೆ.

"ಸಪ್ತದ್ವಾರಾऽವಕೀರ್ಣಾಂ ಚ ನ ವಾಚಮನೃತಾಂ ವದೇತ್ ॥" ಏಳು ದ್ವಾರಗಳಿಂದ ಬರುತ್ತಿರುವ ಎಲ್ಲ ಮಾತನ್ನೂ ಸತ್ಯವಾಗಿರಿಸಿಕೊ (ಮನು).

ಜ್ಞಾನೋಪಾಸನೆ ಧೀಯೋಗ ವಿದ್ಯೆಗಳು ಕಲ್ಪರೂಪವಾಗಿ ಸಾವಿರಾರು ವಿಧಿಗಳು ವೇದ ಹಾಗೂ ಉಪನಿಷತ್ತುಗಳಲ್ಲಿ ಕಂಡು ಬರುತ್ತವೆ. ಅವನ್ನೆಲ್ಲವನ್ನೂ ನಾನು "ಸಾಕ್ಷಾತ್ಕಾರ ಯೋಗಸುಧೆ"ಯೆಂಬ ನನ್ನ ಗ್ರಂಥದಲ್ಲಿ ವಿಶದೀಕರಿಸಿದ್ದೇನೆ. ಪ್ರಾಧಾನ್ಯವಾಗಿರುವ ಎಲ್ಲ ವಿಷಯಗಳನ್ನು ಅಲ್ಲಿ ಪ್ರಸ್ತಾಪಿಸಿದ್ದೇನೆ.

ವ್ಯಾಕರಣ :

ವ್ಯಾಕರಣವೆಂದರೆ "ವಾಚಃ ವಿಶೇಷೇಣ ಆಕರಣಂ, ವ್ಯಾಕರಣಂ". ಅಕ್ಷರಾತ್ಮಿಕವಾದ ಶಬ್ದಸ್ವರೂಪವಾಗಿರುವ ಮಾತನ್ನು ಜ್ಞಾನ ಹಾಗೂ ಮನಸ್ಸುಗಳಿಂದ ಉಚ್ಚರಿಸಿದಾಗ ತನ್ನ ಮನದಿಂಗಿತವನ್ನು ಅನ್ಯರಿಗೆ ತಿಳಿಸಲು ಮನುಷ್ಯನು ಸಮರ್ಥನಾಗುತ್ತಾನೆ. ಅದನ್ನು ಕೇಳಿದ ಇತರರೂ ಆ ಮಾತಿನ ಅರ್ಥವನ್ನು ತಿಳಿಯಲು ಸಮರ್ಥರಾಗುತ್ತಾರೆ. ಲೌಕಿಕ, ವೈದಿಕ, ಪ್ರಾಪಂಚಿಕ, ಪಾರಮಾರ್ಥಿಕ ಎಲ್ಲ ವಿಷಯಗಳನ್ನು ತಿಳಿಸಲು ವ್ಯಾಕರಣವೆಂಬುದರ ಭಾಷಾತ್ಮಕ ತತ್ವ ಇವರದಾಗಿದೆ.

ಈ ವಿಷಯವೂ ಸಹ ವೇದ ಮಂತ್ರಗಳಲ್ಲಿಯೇ ಅಲ್ಲಲ್ಲಿ ಗುಪ್ತವಾಗಿಯೂ ವ್ಯಕ್ತವಾಗಿಯೂ ಲಭಿಸುತ್ತವೆ. ನೋಡಿ.

"ಸಕ್ತುಮಿವ ತಿತಉನಾ ಪುನಂತೋ ಯತ್ರ ಧೀರಾ ಮನಸಾ ವಾಚಮಕ್ರತ ।
ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಽಧಿ ವಾಚಿ ॥"

(ಋ. ೧೦, ೭೧, ೨)

ಮನಸ್ಸಿನಿಂದ ಪ್ರಪೂತವಾದ ಶಾಸ್ತ್ರಶುದ್ಧವಾದ ಸತ್ಯಾದಿ ತತ್ವಪೂರ್ಣವಾದ ವಾಕ್ಕನ್ನು ಅನುಸರಿಸಿ ಅದರರ್ಥವನ್ನು ತಿಳಿಯಲು ಸಮರ್ಥರಾಗುತ್ತಾರೆ. ಬೇರೆ ಬೇರೆ ಅರ್ಥವನ್ನು ತಿಳಿಯುವವರೂ ವಾಙ್ಮುಖದಿಂದಲೇ ತಿಳಿಯುತ್ತಾರೆ. ಆದ್ದರಿಂದ ಆ ವಾಕ್ಕಿನಲ್ಲಿ ಅದರ ಅರ್ಥಜ್ಞಾನ ಪ್ರಕಾಶನಕ್ಕೆ ಸಮರ್ಥವಾದ ಸರ್ವಲಕ್ಷಣಸಂಪನ್ನಳಾದ ಜ್ಞಾನಾದಿ ಗುಣವಿಶಿಷ್ಟ ಳಾದ ಲಕ್ಷ್ಮಿಯು ಪರಾಶಕ್ತಿರೂಪಳಾಗಿ ವಾಸವಾಗಿದ್ದಾಳೆ. ಈ ಪರಾವಾಕ್ಕಿನ ನಾಲಿಗೆಯಿಂದ ಮುಖದ ಮುಖಾಂತರ ಬಂದ ನಾಲ್ಕನೇ ಪದರೂಪವೇ ವ್ಯಕ್ತವಾದ ರೂಪ. ಅದನ್ನೇ–

"ತುರೀಯಂ ವಾಚೋ ಮನುಷ್ಯಾ ವದಂತಿ" (ಋ. ೧, ೧೬೪, ೪೫)

"ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ"

(ಋ. ೮, ೧೦೦, ೧೧)

ಯಾವುದೋ ಒಂದು ಅನಿರ್ವಚನೀಯವಾದ ನಿತ್ಯಸಿದ್ಧಸಂಕೇತದಿಂದಾಗಿ ಬಂದ ಆ ದಿವ್ಯವಾಣಿಯನ್ನು ಆಂತರ್ಯ ತಪಸ್ಸಿನಿಂದ ಕಂಡರು. ಅವರೇ ದೇವತಾತ್ಮರಾದ ಜ್ಞಾನಿಗಳು. ಅದನ್ನೇ ಎಲ್ಲ ಪ್ರಾಣಿಗಳೂ ತಮ್ಮ ತಮ್ಮ ಸ್ವಭಾವಕ್ಕನುಗುಣವಾಗಿ ಉಚ್ಚರಿಸುತ್ತಾರೆ. ಆ ವಾಕ್ಕೇ ಪರಸ್ಪರರ ಜ್ಞಾನಭಾವವನ್ನು ಅಭ್ಯುದಯಿಸುತ್ತಾ ವಿಶ್ವದ ರಾಣಿಯಾಗಿ ತನ್ನ ಅರ್ಥವನ್ನು ತಾನೇ ತಿಳಿಸುತ್ತದೆ. ಹಾಗಾಗಿ ಮಾತಿನಲ್ಲಿಯೇ ವಾಚಕಶಕ್ತಿಯೂ ಅಡಗಿದೆ. ಅದು ವಾಕ್ಕಿನಲ್ಲಿ ಪರಾವಾಕ್,

"ಯದ್ವಾಗ್ವದಂತ್ಯವಿಚೇತನಾನಿ ರಾಷ್ಟ್ರೀ ದೇವಾನಾಂ ನಿಷಸಾದ ಮಂದ್ರಾ ।
ಚತಸ್ರ ಊರ್ಜಂ ದುದುಹೇ ಪಯಾಂಸಿ ಕ್ವ ಸ್ವಿದಸ್ಯಾಃ ಪರಮಂ ಜಗಾಮ ॥"

(ಋ. ೮, ೧೦೦, ೧೦)

ಛಂದೋದರ್ಶನದಲ್ಲಿ ಈ ವಿಷಯ ಸ್ಫುಟವಾಗಿದೆ.

"ವಾಚಂ ದೇವೀ ಮೃತವತೀಮನು ಬ್ರವೀಮಿ ಮನಸಾ ।
ಯಾ ದೇವೀ ಬ್ರಹ್ಮಣಸ್ಪತೇರೇಕಪದೀ ಯಾ ಬೃಹತೀ ॥"

(ಛಂದೋ.ಅನು. ೨, ೧, ೧)

"ಇದಂ ಪ್ರದಂ ತೇ ತುರೀಯ ಮನು ಬ್ರವೀಮಿ ಜಿಹ್ವಯಾ" (*ಛಂದೋ. ೨, ೧, ೭*)

ಈ ಅರ್ಥವನ್ನು ತಿಳಿಸುವ ಪದವು ತನ್ನ ಮನದಲ್ಲಿದ್ದುದನ್ನು ಇನ್ನೊಬ್ಬರಿಗೆ ತಿಳಿಸುವ ಮಾತನ್ನು ಶಾಸ್ತ್ರೀಯವಾಗಿ ಹೇಳುವುದು ವ್ಯಾಕರಣ.

"ನ ದುರುಕ್ತಾಯ ಸ್ಪೃಹಯೇತ್" (*ಋ. ೧, ೪೧, ೯*)

ಇದನ್ನೇ ಶಾಸ್ತ್ರಮುಖದಿಂದ– "ಸತ್ಯಪೂತಾಂ ವದೇದ್ವಾಚಂ," "ಶಾಸ್ತ್ರಪೂತಾಂ ವದೇದ್ವಾಚಂ," ಎಂಬ ಸ್ಮೃತಿವಾಕ್ಯ ಮಾತು ಪರಿಶುದ್ಧವಾಗಿರಲಿ. ಸತ್ಯವಾಗಿರಲಿ ಎಂದು ತಿಳಿಸುತ್ತದೆ. ನಮ್ಮ ಮುಖದಿಂದ ಶಾಸ್ತ್ರಪೂತವಾದ ಹಾಗೂ ಸತ್ಯಪೂತವಾದದ್ದನ್ನೇ ನುಡಿಸು ಎಂದು ಋಷಿಗಳ ಪ್ರಾರ್ಥನೆ.

"ಓಷ್ಠಾಪಿಧಾನಾ ನಕುಲೀ ದಂತೈಃ ಪರಿವೃತಾ ಪವಿಃ |
ಸರ್ವಸ್ಯೈ ವಾಚ ಈಶಾನಾ ಚಾರು ಮಾಮಿಹ ವಾದಯೇದಿತಿ ವಾಗ್ರಸಃ ||" (ಐ.ಆ. ೩, ೨, ೫)

ಹೀಗೆ ವ್ಯಾಕರಣತತ್ತ್ವವನ್ನು ಮಂತ್ರಗಳಲ್ಲಿ ಬ್ರಾಹ್ಮಣಗಳಲ್ಲಿ ಹೇಳಿದ್ದು ಬಹುವಾಗಿದೆ. ಅದಕ್ಕಾಗಿ ಸ್ವತಂತ್ರ ಗ್ರಂಥವನ್ನೇ ಬೇರೆ ರಚಿಸಬಹುದು. ವೇದಗಳಲ್ಲಿರುವ ಶಬ್ದಗಳನ್ನು ನೋಡಿ ಅವುಗಳ ಸಂಕೇತ ತತ್ತ್ವಗಳನ್ನು ತಿಳಿದು ಪರಿಶುದ್ಧವಾದ ಉಚ್ಚಾರಣೆಯಿಂದಾಗಿ ವಾಗ್ವ್ಯವಹಾರ ಸಿದ್ಧಿಗಾಗಿ ಪಾಣಿನ್ಯಾದಿ ಮುನಿಗಳು ಹಾಗೂ ಹಿಂದಿನ ಇತರ ಆಚಾರ್ಯರೂ ವಾಕ್ತತ್ತ್ವದ ಸಂಶೋಧನೆ ಮಾಡಿ ಅದರ ನಿಯಮಕ್ಕಾಗಿ ಅನೇಕ ಸೂತ್ರಗಳನ್ನು ನಿರ್ಮಿಸಿದರು ಹಾಗೂ ಉಚ್ಚಾರಣ ಪದ್ಧತಿಗಳನ್ನು ತಿಳಿಸಿಕೊಟ್ಟರು ಹಾಗೂ ವೇದಗಳಲ್ಲಿ ಬ್ರಾಹ್ಮಣಗಳಲ್ಲಿರುವ ಶಬ್ದಗಳನ್ನು ನೋಡಿ ಅದರಂತೆ ಭಾಷೆಯನ್ನು ಕಲ್ಪಿಸಿದರು. ಅದನ್ನೇ ಸಂಸ್ಕೃತ ಭಾಷೆಯೆನ್ನುತ್ತಾರೆ. ಈ ಭಾಷೆಯ ಮೂಲವೂ ವೇದವೇ ಎಂದು ಬೇರೆ ಹೇಳಬೇಕಾಗಿಲ್ಲ. ಪಾಣಿನಿಯೂ–

"ಬಹುಲಂ ಛಂದಸಿ" (ಅ. ೨, ೪, ೭೩) "ಛಂದಸಿ ಬಹುಲಂ," (೩, ೨, ೮೮) "ಛಂದಸ್ಯುಭಯಥಾ," (ಅ. ೬, ೪, ೫) ಇತ್ಯಾದಿ ಸೂತ್ರಗಳಿಂದ ಅದನ್ನೇ ಸಮರ್ಥಿಸಿದ್ದಾನೆ. ಇಷ್ಟು ಹೇಳಿಯೂ ಮಂತ್ರಗಳಲ್ಲಿ ಕೆಲವು ವಿಶಿಷ್ಟತೆಯನ್ನು ತೋರಿಸಿದ್ದಾನೆ. "ಜನಿತಾಮಂತ್ರೇ" (ಅ.ಸೂ. ೬, ೪, ೫೩) ಮಂತ್ರೇಘಸ್ಯ.

"ಜನೀ ಪ್ರಾದುರ್ಭಾವೇ," ಈ ಧಾತು ಪ್ರೇರಣಾರ್ಥ, ಚುರಾದಿ (೧೦ನೇ ಗಣ) ಣಿಜಂತ ಪ್ರತ್ಯಯರೂಪ "ಜನಯತಿ" ಎಂದು ಸಂಸ್ಕೃತರೂಪ, ಅದು ಸಂಸ್ಕೃತದಲ್ಲಿಯೂ ಹಾಗೇ ಇದೆ. ವೇದದಲ್ಲಿಯೂ–

"ಜನಯನ್ ದ್ಯಾಮುಷಾಸಮ್‌ಂ", (ಋ. ೧, ೩೨, ೪), "ಉರುಜ್ಯೋತಿರ್ಜನಯನ್ನಾರ್ಯಾಯ" (ಋ. ೭, ೫, ೬) "ದೇವೀಂ ವಾಚಮಜನಯಂತ ದೇವಾಃ" (ಋ. ೮, ೧೦೦, ೧೧). ಕೆಲವೆಡೆ ಜನಿತಾ ಎಂಬ ರೂಪವಿದೆ. ಮಂತ್ರಗಳಲ್ಲಿ ಮಾತ್ರ ಬ್ರಾಹ್ಮಣಗಳಲ್ಲಿಲ್ಲ.

"ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾ ಪೃಥಿವ್ಯಾಃ ।
ಜನಿತಾಗ್ನೇರ್ಜನಿತಾ ಸೂರ್ಯಸ್ಯ ಜನಿತೇಂದ್ರಸ್ಯ ಜನಿತೋತ ವಿಷ್ಣೋಃ ॥"
(ಋ. ೯, ೯೬, ೫)

ಈ ಒಂದೇ ಮಂತ್ರದಲ್ಲಿ ಏಳುಬಾರಿ ಜನಿತಾ ಎಂಬ ಪದ ಬಂದಿದೆ. ಬೇರೆಡೆಯೂ ಕೂಡಾ–

"ಜನಿತಾಽಶ್ವಾನಾಂ ಜನಿತಾ ಗವಾಮಸಿ" (ಋ. ೮, ೩೬, ೫)

ನಿರುಕ್ತ :

ವೈದಿಕ ಶಬ್ದಗಳ ಸರಿಯಾದ ನಿರ್ವಚನವೆಂದೂ ನಿರುಕ್ತವೆಂದೂ ಹೆಸರು. ಶಬ್ದಾರ್ಥವನ್ನು ತಿಳಿಸುವದೂ ನಿರುಕ್ತ. ಅಂತೆಯೇ ಔಪನಿಷತ್ತತ್ವವನ್ನೂ ಅಧ್ಯಾತ್ಮ ವಸ್ತು ನಿರ್ವಚನವನ್ನು ನಿರುಕ್ತ ಶಬ್ದದಿಂದಲೇ ಮಾಡಿದ್ದಾರೆ. ಸವಾ ಏಷ ಆತ್ಮಾ ಹೃದಿ –

"ತಸ್ಯೈತದೇವ ನಿರುಕ್ತಂ ಹೃದ್ಯಯಮಿತಿ ತಸ್ಮಾದ್ಧೃದಯಮಿತಿ" (ಛಾಂ.ಉ. ೮, ೩, ೩)

"ಹೃದಿ ಹ್ಯೇಷ ಆತ್ಮಾ" (ಪ್ರ.ಉ. ೩, ೬) ಇದಕ್ಕೆ ಮೂಲಭೂತ ಋಙ್ಮಂತ್ರ–

"ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಂ ಆ ವಿವೇಶ"
(ಋ. ೪, ೫೮, ೩)

"ಅಮರ್ತ್ಯೋ ಮರ್ತ್ಯಾಂ ಆವಿವೇಶ" (ಋ. ೮, ೪೮, ೧೨)

"ಜೀವೋ ಮೃತಸ್ಯ ಚರತಿ ಸ್ವಧಾಭಿರಮರ್ತ್ಯೋ ಮರ್ತ್ಯೇನಾ ಸಯೋನಿಃ"
(ಋ. ೧, ೧೬೪, ೩೦)

"ನ ತಂ ವಿದಾಥ ಯ ಇಮಾ ಜಜಾನಾನ್ಯದ್ಯುಷ್ಮಾಕಮಂತರಂ ಬಭೂವ"
(ಋ. ೧೦, ೮೨, ೭)

"ಅಂತರಿಚ್ಛಂತಿ ತಂ ಜನೇ ರುದ್ರಂ ಪರೋ ಮನೀಷಯಾ" (ಋ. ೮, ೭೨, ೩)

ಹೀಗೆಯೇ ಅಂತರಾತ್ಮನಾದ ರುದ್ರನ ಹೃದ್ರೂಪವನ್ನೂ–

"ಕದ್ರುದ್ರಾಯ ಪ್ರಚೇತಸೇ ಮೀಳ್ಹುಷ್ಟಮಾಯ ತವ್ಯಸೇ ।
ವೋಚೇಮ ಶಂತಮಂ ಹೃದೇ ॥" (ಋ. ೧, ೪೩, ೧)

ಹಾಗೆಯೇ ಇಂದ್ರ ಶಬ್ದಾರ್ಥದ ಸ್ವರೂಪ ನಿರ್ವಚನಕ್ಕೆ ಮಂತ್ರವರ್ಣ–

"ಇಂದ್ರೋ ಯಾತೋಽವಸಿತಸ್ಯ ರಾಜಾ ।

ಸೇದು ರಾಜಾ ಕ್ಷಯತಿ ಚರ್ಷಣೀನಾಮರಾನ್ನ ನೇಮಿಃ ಪರಿ ತಾ ಬಭೂವ ॥"

(ಋ. ೧, ೩೨, ೧೫)

"ಇಂದ್ರೋ ವಿಶ್ವಸ್ಯ ರಾಜತಿ" (ಸಾಮಂ ೧೭, ೪೫೭)

"ಸರ್ವಂ ತದಿಂದ್ರ ತೇ ವಶೇ" (ಋ. ೮, ೯೩, ೪)

ಈ ಮೊದಲಾದ ಮಂತ್ರಗಳಿಂದ ಆ ಇಂದ್ರನ ಪರಮೈಶ್ವರ್ಯಪೂರ್ಣತೆ ತೋರುತ್ತದೆ.

"ಇಂದ್ರೋ ದಿವ ಇಂದ್ರ ಈಶೇ ಪೃಥಿವ್ಯಾಂ ಇಂದ್ರೋ ಅಪಾಮಿಂದ್ರ ಇತ್ ಪರ್ವತಾನಾಂ ।

ಇಂದ್ರೋ ವೃಧಾಮಿಂದ್ರ ಇನ್ಮೇಧಿರಾಣಾಮಿಂದ್ರಃ ಕ್ಷೇಮೇ ಯೋಗೇ ಹವ್ಯ ಇಂದ್ರಃ ॥"

(ಋ. ೧೦, ೮೯, ೧೦)

"ಇಂದ್ರೋ ರಾಜಾ ಜಗತೋ ಯ ಈಶೇ" (ತೈ.ಆ. ೩, ೧೧, ೭)

ಸ್ಪಷ್ಟಾರ್ಥವಾದ ಉಪನಿಷದ್ ಬ್ರಾಹ್ಮಣವಚನವಿದು.

"ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯತ್ ಇದಮದರ್ಶಮಿತೀ ೩, ತಸ್ಮಾದಿಂದ್ರೋ ನಾಮೇದಂದ್ರೋ ಹ ವೈ ನಾಮ ತಮಿದಂದ್ರಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ" ಇತಿ (ಐ.ಉ. ೧, ೧೩, ೧೪) (ಐ.ಆ. ೨, ೪)

ಇದೇ ಅರ್ಥವನ್ನು ಹೇಳುವ ವಚನ–

"ಇಂಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಽಕ್ಷನ್ ಪುರುಷೇ ತಂವಾ ಏತಮಿಂಧಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ ॥" (ಬೃ.ಉ. ೪, ೨, ೨)

ಹೀಗೆ ಇಂದ್ರನು ಎಲ್ಲ ಇಂದ್ರಿಯಗಳಿಗೆ ಅಧಿಷ್ಠಾತೃವಾಗಿದ್ದಾನೆ. ಹಾಗೂ ಇಂದ್ರ ಇಂದ್ರಿಯಗಳ ತಾದಾತ್ಮ್ಯವಿದೆ ಎಂದು ಶ್ರುತಿ ಹೇಳುತ್ತಿದೆ.

"ಇಂದ್ರಿಯಾಣಿ ಶತಕ್ರತೋ ಯಾ ತೇ ಜನೇಷು ಪಂಚಸು ।

ಇಂದ್ರ ತಾನಿ ತ ಆ ವೃಣೇ" (ಋ. ೩, ೩೭, ೯)

"ಇಂದ್ರ ಇಂದ್ರಿಯೈರ್ಮರುತೋ ಮರುದ್ಭಿರಾದಿತ್ಯೈರ್ನೋ ಅದಿತಿಃ ಶರ್ಮ ಯಂಸತ್"

(ಋ. ೧, ೧೦೭, ೨)

ಹಾಗೆಯೇ– "ಯಶ್ಛಂದಸಾಮೃಷಭೋ ವಿಶ್ವರೂಪಶ್ಛಂದೋಭ್ಯಶ್ಛಂದಾಂಸ್ಯಾ ವಿವೇಶ । ಸತಾಂ ಶಿಕ್ಯಃ ಪುರೋ ವಾ ಚೋಪನಿಷದ್ 'ಇಂದ್ರೋ ಜ್ಯೇಷ್ಠ ಇಂದ್ರಿಯಾಯ' ಋಷಿಭ್ಯೋ ನಮಃ" (ನಾ.ಉ. ೭, ೫)

ಆದ್ದರಿಂದಲೇ ಇಂದ್ರ-ಇಂದ್ರಿಯಗಳ ತಾದಾತ್ಮ್ಯ ಯೋಗವನ್ನು ಕಂಡ ಪಾಣಿನಿಯು ಆ ಇಂದ್ರಿಯಗಳಿಗೆ ಇಂದ್ರಿಯಲಿಂಗತ್ವವನ್ನು ಬೋಧಿಸುವ ಸೂತ್ರರಚನೆ ಮಾಡಿದ್ದಾನೆ.

"ಇಂದ್ರಿಯಮಿಂದ್ರಲಿಂಗಂ, ಇಂದ್ರದೃಷ್ಟಂ, ಇಂದ್ರಸೃಷ್ಟಂ, ಇಂದ್ರಜುಷ್ಟಂ, ಇಂದ್ರದತ್ತಂ ಇತಿ ವಾ" (ಅ.ಸೂ. ೫, ೨, ೯೩)

ಹೀಗೆಯೇ ಬ್ರಹ್ಮಣಸ್ಪತಿ ಶಬ್ದಾರ್ಥನಿರ್ವಚನವೂ ಕೂಡ ಋಙ್ಮಂತ್ರದಲ್ಲಿ ಕಂಡು ಬರುತ್ತಿದೆ.

"ಬ್ರಹ್ಮಣಸ್ಪತಿರೇತಾ ಸಂ ಕರ್ಮಾರ ಇವಾಧಮತ್ ।
ದೇವಾನಾಂ ಪೂರ್ವ್ಯೇ ಯುಗೇಽಸತಃ ಸದಜಾಯತ ॥" (ಋ. ೧೦, ೭೨, ೨)

ವಿಶ್ವಸೃಷ್ಟಿಗಿಂತ ಮೊದಲೇ ಆ ಬ್ರಹ್ಮಣಸ್ಪತಿಯ ಶ್ವಾಸದಿಂದ ಸ್ವರನಾದಾದಿ ರೂಪವಾದ ವಾಕ್ಕಿನಿಂದ ಎಲ್ಲ ಜಗತ್ತಿನ ಆವಿರ್ಭಾವವಾಗಿರುವದರಿಂದ ವಾಗ್ರೂಪವಾದ ಪ್ರತ್ಯಕ್ಷ ಬ್ರಹ್ಮನ ಅಧಿಪತಿತ್ವ ಆತನದಾಗಿದೆ. ಆದ್ದರಿಂದ ಆ ಬ್ರಹ್ಮಣಸ್ಪತಿಯೇ ಎಲ್ಲ ಮಂತ್ರರೂಪವಾದ ಬ್ರಹ್ಮನ ಉತ್ಪಾದಕ ಹಾಗೂ ಅಧಿಪತಿಯಾಗಿದ್ದಾನೆ.

"ಗಣಾನಾಂ ತ್ವಾ ಗಣಪತಿಂ ಹವಾಮಹೇ
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತೇ" ಇತಿ
"ಉಸ್ರಾಇವ ಸೂರ್ಯೋಜ್ಯೋತಿಷಾ ಮಹೋ ವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ"
(ಋ. ೨, ೨೩, ೧೨)

ಅಂತೆಯೇ ಬ್ರಹ್ಮಣಸ್ಪತಿ ಶಬ್ದನಿರ್ವಚನರೂಪವಾದ ಉಪನಿಷದ್ರೂಪ ಬ್ರಾಹ್ಮಣ ವಚನವಿದು, "ಏಷಉ ಬ್ರಹ್ಮಣಸ್ಪತಿಃ ವಾಗ್ವೈಬ್ರಹ್ಮ ತಸ್ಯಾಏಷಪತಿಸ್ತಸ್ಮಾದು ಬ್ರಹ್ಮಣಸ್ಪತಿಃ" (ಬೃ.ಉ. ೧, ೩, ೨೧) ಬೃಹಸ್ಪತಿ ಶಬ್ದಕ್ಕೂ ಕೂಡಾ ಇದೇ ರೀತಿ ನಿರ್ವಚನವಿದೆ. "ಏಷಉ ಬೃಹಸ್ಪತಿಃ ವಾಗ್ವೈ ಬೃಹತೀ ತಸ್ಯಾಏಷಪತಿ" ಇದಕ್ಕೆ ಪ್ರಮಾಣಭೂತವಾದ ಋಙ್ಮಂತ್ರವಿದಾಗಿದೆ.

"ಬೃಹಸ್ಪತೇರ್ಬೃಹತೀ ವಾಚಮಾವತ್" (ಋ. ೧೦, ೧೩೦, ೪)
ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಯತ್ ಪ್ರೈರತ ನಾಮಧೇಯಂ ದಧಾನಾಃ"
(ಋ. ೧೦, ೭೧, ೧)

ಇದರಿಂದ ವಾಕ್ಕಿಗೆ ಬ್ರಹ್ಮ ಎಂದೂ ಬೃಹತೀ ಎಂದೂ ಬೃಹತ್ವಾತ್ ಅದರ ನಿರ್ವಚನದಿಂದ ಸಿದ್ಧವಾಗಿದೆ. ಅದರ ಅಧಿಪತಿತ್ವದಿಂದ ಬೃಹಣಸ್ಪತಿ, ಬೃಹಸ್ಪತಿ ಎಂಬರ್ಥವೂ ಚೇತನಾತ್ಮನಾದ ಪರಮ ಪುರುಷನ ಸ್ವರೂಪವೆಂದೂ ತಿಳಿಯುವದು.

"ಯಾವದ್ ಬ್ರಹ್ಮ ವಿಷ್ಠಿತಂ ತಾವತೀ ವಾಕ್" (ಋ. ೧೦, ೧೧೪, ೮)

ಈ ಮಂತ್ರವು ವಾಕ್ಕೆಂಬುದೇ ಪ್ರತ್ಯಕ್ಷ ಬ್ರಹ್ಮ-ತಾದಾತ್ಮ್ಯದಿಂದಲೂ ತತ್ಸಮಾನವಾದದ್ದು ಎಂಬುದಕ್ಕೆ ಬ್ರಾಹ್ಮಣವಚನ – "ಯತ್ರ ಕ್ವ ಚ ಬ್ರಹ್ಮ ತದ್ವೈವಾಕ್ ಯದ್ವೈವಾಕ್ ತದ್ವಾ ಬ್ರಹ್ಮೇತ್ಯೇತದುಕ್ತಂ ಭವತಿ" (ಐ.ಆ. ೧, ೩, ೮)

ಹೀಗೆ ಮಂತ್ರಬ್ರಾಹ್ಮಣಗಳಲ್ಲಿ ನಿರ್ವಚನವು ಸಮಾನವಾಗಿದೆ. ಅಲ್ಲದೇ ಉಕ್ಥ ಉದ್ಗೀಥ ಮೊದಲಾದ ಶಬ್ದಗಳಿಗೆ ಅಕ್ಷರಶಃ ನಿರ್ವಚನವೂ ಕಂಡು ಬರುತ್ತಿದೆ. ಅಲ್ಲಿ ಪ್ರತ್ಯೇಕವಾಗಿ ಅಕ್ಷರಗಳ ಉಪಾಸನೆಯನ್ನೇ ಉಪದೇಶಿಸಿದ್ದಾರೆ.

"ಅಥ ಖಲು ಉದ್ಗೀಥಾಕ್ಷರಾಣ್ಯುಪಾಸೀತ ಉದ್ಗೀಥಃ ಇತಿ, ಪ್ರಾಣ ಏವ ಉತ್ ಪ್ರಾಣೇನ ಹಿ ಉತ್ತಿಷ್ಠತಿ ವಾಗ್ಗೀಃ ವಾಚೋ ಹಿ ಗಿರ ಇತ್ಯಾಚಕ್ಷತೇ, ಅನ್ನಂ ಥಂ ಅನ್ನೇ ಹೀದಂ ಸರ್ವಂ ಸ್ಥಿತಮ್" (ಛಾಂ.ಉ. ೧, ೩, ೬)

ಅಥ– "ದ್ಯೌರೇವ ಉತ್ ಅಂತರಿಕ್ಷಂ ಗೀಃ ಪೃಥಿವೀಥಮ್, ಆದಿತ್ಯ ಏವ ಉತ್ ವಾಯುರ್ಗೀಃ ಅಗ್ನಿಸ್ಥಮ್, ಸಾಮವೇದ ಏವ ಉತ್ ಯಜುರ್ವೇದೋ ಗೀಃ ಋಗ್ವೇದಸ್ಥಮ್, ದುಗ್ಧೇಽಸ್ಮೈ ವಾಗ್ ದೋಹಮ್" ಇದೂ ಸಹ ಋಗ್ವೇದದಿಂದಲೇ ಉದ್ಧೃತವಾದದ್ದು.

"ಯಜ್ಜಾತವೇದೋ ಭುವನಸ್ಯ ಮೂರ್ಧನ್ನತಿಷ್ಠೋ ಅಗ್ನೇ ಸಹ ರೋಚನೇನ ।
ತಂ ತ್ವಾಹೇಮ ಮತಿಭಿರ್ಗೀರ್ಭಿರುಕ್ಥೈಃ ಸ ಯಜ್ಞಿಯೋ ಅಭವೋ ರೋದಸಿಪ್ರಾಃ ॥"

(ಋ. ೧೦, ೮೮, ೫)

ಇಲ್ಲಿ ಉಕ್ಥ ಶಬ್ದವು ಪ್ರಾಣಬೋಧಕ. ಅಧ್ಯಾತ್ಮ ತತ್ತ್ವೋಪದೇಶಕ್ಕಾಗಿ ಉಪನಿಷತ್ತಿನಲ್ಲಿ ಅದರ ನಿರ್ವಚನವು ಪ್ರಸಿದ್ಧವಾಗಿದೆ.

"ಉಕ್ಥಂ ಪ್ರಾಣೋ ವಾ ಉಕ್ಥಮ್, ಪ್ರಾಣೋ ಹೀದಂ ಸರ್ವಮುತ್ಥಾಪಯತಿ ಉದ್ಧಾಸ್ಮಾದುಕ್ಥವಿದ್ವೀರಸ್ತಿಷ್ಠತಿ ಉಕ್ಥಸ್ಯ ಸಾಯುಜ್ಯತಾಂ ಸಲೋಕತಾಂ ಜಯತಿ ಯ ಏವಂ ವೇದ" (ಬೃ.ಉ. ೫, ೧೩, ೧)

ಅಂತೆಯೇ ಅಗ್ನಿ ಶಬ್ದಾರ್ಥನಿರ್ವಚನಕ್ಕಾಗಿ ಮಂತ್ರ–

"ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್"

(ಋ. ೧, ೧೮೯, ೧)

"ಅಗ್ನಿರ್ನೇತಾ ಭಗ ಇವ ಕ್ಷಿತೀನಾಮ್" (ಋ. ೩, ೨೦, ೪)

"ಅಗ್ನಿರಿವ ಮನ್ಯೋ ತ್ವಿಷಿತಃ ಸಹಸ್ವ ಸೇನಾನೀರ್ನಃ ಸಹುರೆ ಹೂತ ಏಧಿ"

(ಋ. ೧೦, ೮೪, ೨)

ಇದೇ ಅರ್ಥ ನಿರುಕ್ತದಲ್ಲಿದೆ.

"ಅಗ್ನಿಃ ಕಸ್ಮಾದಗ್ರಣೀರ್ಭವತಿ, ಇತಾದಕ್ತಾದ್ದಗ್ಧಾದ್ವಾನೀತಾತ್" (ನಿ.) ಹೀಗೆ ವೇದಮಂತ್ರ, ಬ್ರಾಹ್ಮಣ, ಆರಣ್ಯಕ, ಉಪನಿಷದ್ ಮೊದಲಾದ ಆರ್ಷೇಯವಾಙ್ಮಯಗಳಲ್ಲಿ ನೂರಾರು ಸ್ಥಾನಗಳಲ್ಲಿ ಅನೇಕ ಪ್ರಕಾರವಾಗಿ ವೈದಿಕಶಬ್ದಾರ್ಥನಿರುಕ್ತರೂಪವಾದ ಭಾಷ್ಯವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಅದನ್ನನುಸರಿಸಿ ಯಾಸ್ಕಾದಿ ಮುನಿಗಳು ನಿರುಕ್ತಾಚಾರ್ಯರು ಸಂಗ್ರಹಿಸಿದ್ದಾರೆ. ಅದನ್ನೇ ವೇದಾಂಗ ವಾದ ನಿರುಕ್ತಾದಿ ಗ್ರಂಥರೂಪದಲ್ಲಿ ರಚಿಸಿ ಪ್ರಕಟಿಸಿದ್ದಾರೆ. ಬ್ರಾಹ್ಮಣ ಆರಣ್ಯಕ ಉಪನಿಷತ್ತುಗಳೇ ವೇದದ ಮೊದಲ ಭಾಷ್ಯ. ಇಲ್ಲಿ ದಿಗ್ದರ್ಶನವನ್ನಷ್ಟೇ ಮಾಡಲಾಗಿದೆ. ಆದ್ದರಿಂದ ಇಂದು ವೇದಾಂಗಗಳೆಂದು ಪ್ರಸಿದ್ಧವಾದ ಗ್ರಂಥಗಳಲ್ಲಿ ಅದಕ್ಕೆ ಮೂಲಭೂತವಾದ ಬ್ರಾಹ್ಮಣಾದಿವಚನಗಳನ್ನೂ ಅನುಸಂಧಾನ ಮಾಡಬೇಕು.

ಛಂದಃ :

ಛಂದಃ ಶಬ್ದವು ಗಾಯತ್ರ್ಯಾದಿ ನಿಬಂಧನವುಳ್ಳದ್ದು, ಅಂದರೆ ಅಕ್ಷರಗಳ ಹಾಗೂ (ವರ್ಣಗಳ), ಪದಗಳ ಸರಿಯಾದ ನಿಬಂಧನವಿರುತ್ತದೆ. ಇದನ್ನೇ ವೇದವೇತ್ತರು ಸಂಹಿತೆಯೆಂದು ಹೇಳುತ್ತಾರೆ. ಅಲೌಕಿಕವಾದ ಹಾಗೂ ಅಕೃತ್ರಿಮವಾದ ನಿಯಮದಿಂದ ಕೂಡಿದ್ದು. ಮಂತ್ರಾತ್ಮಕವಾಗಿ ಸಸ್ವರವಾಗಿದ್ದುದಕ್ಕೂ ಛಂದಃ ಎನ್ನುತ್ತಾರೆ. ಅವು ಗಾಯತ್ರಿಯೇ ಮೊದಲಾದ ಪ್ರಧಾನವಾಗಿ ಅಂದರೆ ಗಾಯತ್ರಿ ತ್ರಿಷ್ಟುಪ್ ಜಗತೀ ಎಂದು ಪ್ರಸಿದ್ಧವಾಗಿವೆ. ಅವು ನಾಲ್ಕು ಅಕ್ಷರಗಳಂತೆ ಏಳು ಛಂದಸ್ಸುಗಳಾಗಿವೆ. ವ್ಯಾಹೃತಿಗಳು, ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ ಎಂದು ಏಳು ಛಂದಸ್ಸುಗಳು ಪ್ರಸಿದ್ಧವಾಗಿವೆ. ಅದರಂತೆ ಅತಿ ಛಂದಸ್ಸುಗಳೂ ಏಳು. ಅತಿಜಗತೀ, ಶಕ್ವರೀ, ಅತಿಶಕ್ವರೀ, ಅಷ್ಟಿಃ, ಅತ್ಯಷ್ಟಿಃ, ಧೃತಿಃ, ಅತಿಧೃತಿಃ, ಎಂದು ಏಳು ಮುಖ್ಯವಾಗಿ. ಗಾಯತ್ರೀತ್ರಿಷ್ಟುಪ್ ಜಗತೀ ಇವುಗಳಿಗೆ ಗಾಯತ್ರಂ ತ್ರೈಷ್ಟುಭಂ, ಜಾಗತಂ ಎಂದೂ ಹೇಳುತ್ತಾರೆ.

"ಯದ್ ಗಾಯತ್ರೇ ಅಧಿ ಗಾಯತ್ರಮಾಹಿತಂ ತ್ರೈಷ್ಟುಭಾದ್ ವಾ ತ್ರೈಷ್ಟುಭಂ ನಿರತಕ್ಷತ ।
ಯದ್ ವಾ ಜಗಜ್ಜಗತ್ಯಾಹಿತಂ ಪದಂ ಯ ಇತ್ ತದ್ ವಿದುಸ್ತೇ ಅಮೃತತ್ವಮಾನಶುಃ ॥"

(ಋ. ೧, ೧೬೪, ೨೩)

ಇದು ದೀರ್ಘತಮಾ ಋಷಿಯ ದರ್ಶನ. ಅಗ್ನಿ, ಇಂದ್ರ, ಸೂರ್ಯರು ಈ ಛಂದಸ್ಸುಗಳ ದೇವತೆಗಳು. ಆದ್ದರಿಂದ ಅವುಗಳ ಅಕ್ಷರಗಳೂ ವಸು ೮, ರುದ್ರ ೧೧, ಆದಿತ್ಯ ೧೨ ಎಂದು ಪ್ರಸಿದ್ಧವಾಗಿವೆ.

"ಅಷ್ಟೌ ವಸವಃ ಏಕಾದಶ ರುದ್ರಾಃ ದ್ವಾದಶಾದಿತ್ಯಾಃ" (ಐ.ಬ್ರಾ. ೩, ೨೨) "ಅಷ್ಟಾಕ್ಷರಾ ಗಾಯತ್ರೀ, ಏಕಾದಶಾಕ್ಷರಾ ತ್ರಿಷ್ಟುಪ್, ದ್ವಾದಶಾಕ್ಷರಾ ಜಗತೀ" (ಐ.ಬ್ರಾ. ೩, ೨೮)

ಪೃಥಿವಿಯ ಅಧಿಪತಿಯಾದ ಅಗ್ನಿಯು ವಸುರೂಪನಾಗಿರುವದರಿಂದ ಗಾಯತ್ರೀ ಛಂದಸ್ಸಿಗೆ ೮ ಅಕ್ಷರಗಳ ಯೋಗವಿದೆ. ಅಗ್ನಿಯ ಎಂಟು ಮೂರ್ತಿಗಳು–

"ಅಗ್ನಿಶ್ಚ ಜಾತವೇದಾಶ್ಚ ವೈಶ್ವಾನರಶ್ಚನರ್ಯಪಾಃ ।
ನಿಸರ್ಪೀ ಪಂಕ್ತಿರಾಧಾಶ್ಚ ಸಹೋಜಾ ಅಜಿರಾಪ್ರಭುಃ ॥" (ತೈ.ಆ. ೧, ೯, ೧)

ಅಗ್ನಿಃ, ಜಾತವೇದಾಃ, ವೈಶ್ವಾನರಃ ನರ್ಯಪಾಃ, ನಿಸರ್ಪೀ, ಪಂಕ್ತಿರಾಧಾಃ, ಸಹೋಜಾ, ಅಜಿರಾಪ್ರಭುಃ, ಎಂದು.

ಅಂತರಿಕ್ಷಾಧಿಪತಿಯಾದ ರುದ್ರನ ಏಕಾದಶರೂಪವು ದಿಕ್ಕು, ದೇವತೆ, ಪ್ರಾಣಾದಿಗಳಿಂದಾಗಿದೆ. ಹತ್ತು ಪ್ರಾಣಗಳು ಹಾಗೂ ಆತ್ಮ ಒಂದು ಹೀಗೆ ಹನ್ನೊಂದು.

"ದಶೇಮೇ ಪುರುಷೇ ಪ್ರಾಣಾಃ ಆತ್ಮೈಕಾದಶಃ" (ಬೃ.ಉ. ೩, ೯, ೪)

ಎಂಟು ದಿಕ್ಕುಗಳು ಮೇಲೆ ಕೆಳಗೆ ಮಧ್ಯ ಹೀಗೆ ಹನ್ನೊಂದು ದಿಕ್ಕುಗಳು ಹಾಗೂ ಅದರ ಅಧಿಪತಿಗಳು ಕ್ರಮವಾಗಿ ಇಂದ್ರ ಅಗ್ನಿ ಮುಂತಾದ ದೇವತೆಗಳು ಪ್ರಸಿದ್ಧರಷ್ಟೆ ಇವರ ಯೋಗದಿಂದ ತ್ರಿಷ್ಟುಪ್ ಛಂದಸ್ಸಿಗೆ ೧೧ ಅಕ್ಷರಗಳು–

ತೈತ್ತರೀಯಾರಣ್ಯಕದಲ್ಲಿ ಆ ರುದ್ರರ ಹಾಗೂ ರುದ್ರಾಣಿಯರ ಹೆಸರುಗಳು ಪ್ರತ್ಯೇಕವಾಗಿವೆ.

"ಪ್ರಭ್ರಾಜಮಾನಾನಾಂರುದ್ರಾಣಾಂಸ್ಥಾನೇ ಸ್ವತೇಜಸಾ ಭಾನಿ ।
ಪ್ರಭ್ರಾಜಮಾನೀನಾಂರುದ್ರಾಣೀನಾಂಸ್ಥಾನೇ ಸ್ವತೇಜಸಾ ಭಾನಿ ॥"

ಅವರು, ಪ್ರಭ್ರಾಜಮಾನಾಃ, ವ್ಯವದಾತಾಃ, ವಾಸುಕಿವೈದ್ಯುತಾಃ, ರಜತಾಃ, ಪರುಷಾಃ, ಶ್ಯಾಮಾಃ, ಕಪಿಲಾಃ, ಅತಿಲೋಹಿತಾಃ, ಊರ್ಧ್ವಾಃ, ಅವಪತಂತಃ, ವೈದ್ಯುತಃ ಎಂದು ಪ್ರಸಿದ್ಧವಾಗಿರುವರು.

ಅದರಂತೆ ವಾಮದೇವಾದಿ ಹನ್ನೊಂದು ನಾಮಗಳೂ ಪ್ರಸಿದ್ಧವಾಗಿವೆ.

"ವಾಮದೇವಾಯ ನಮಃ, ಜ್ಯೇಷ್ಠಾಯ ನಮಃ, ರುದ್ರಾಯ ನಮಃ, ಕಾಲಾಯ ನಮಃ, ಕಲವಿಕರಣಾಯ ನಮಃ, ಬಲವಿಕರಣಾಯ ನಮಃ, ಬಲಾಯ ನಮಃ, ಬಲಪ್ರಮಥನಾಯ ನಮಃ, ಸರ್ವಭೂತದಮನಾಯ ನಮಃ, ಮನೋನ್ಮನಾಯ ನಮಃ" (ಮಾ.ಉ. ೧೭, ೨)

ಹಾಗೆಯೇ ನಿಧನಪತಯೇ ನಮಃ ಇವರೂ ಏಕಾದಶರುದ್ರರು– "ನಿಧನಪತಿಃ, ಊರ್ಧ್ವಃ, ಹಿರಣ್ಯಃ, ಸುವರ್ಣಃ, ದಿವ್ಯಃ, ಭವಃ, ಶರ್ವಃ, ಶಿವಃ, ಜ್ವಲಃ, ಆತ್ಮಾಃ, ಪರಮಃ" ಎಂದು (ನಾ.ಉ. ೧೪, ೧೭)

ಹೀಗೆಯೇ ಮಂತ್ರರೂಪವಾಗಿ ಏಳು ಛಂದಸ್ಸುಗಳೂ ನಿರ್ದೇಶಿಸಲ್ಪಟ್ಟಿವೆ.

"ಅಗ್ನೇರ್ಗಾಯತ್ರ್ಯಭವತ್ ಸಯುಗ್ವೋಷ್ಣಿಹಯಾ ಸವಿತಾ ಸಂ ಬಭೂವ ।

ಅನುಷ್ಟುಭಾ ಸೋಮ ಉಕ್ಥೈರ್ಮಹಸ್ವಾನ್ ಬೃಹಸ್ಪತೇರ್ಬೃಹತೀ ವಾಚಮಾವತ್ ।
ವಿರಾಣ್ ಮಿತ್ರಾವರುಣಯೋರಭಿಶ್ರೀರಿಂದ್ರಸ್ಯ ತ್ರಿಷ್ಟುಬಿಹ ಭಾಗೋ ಅಹ್ನಃ ।
ವಿಶ್ವಾನ್ ದೇವಾಂಜಗತ್ಯಾऽವಿವೇಶ ತೇನ ಚಾಕ್ಲೃಪ್ರ ಋಷಯೋ ಮನುಷ್ಯಾಃ ॥

(ಋ. ೧೦, ೧೩೦, ೪-೫)

ಇಲ್ಲಿ ಏಳೂ ಛಂದಸ್ಸುಗಳನ್ನು ಹಾಗೂ ಅವುಗಳ ಅಧಿಪತಿಗಳಾದ ಅಗ್ನ್ಯಾದಿ ದೇವತೆಗಳನ್ನು ಸ್ತುತಿಸಿದ್ದಾರೆ. ಮಂತ್ರಗಳಲ್ಲಿರುವ ಈ ರೂಪಗಳನ್ನು ತಿಳಿದು ಪಿಂಗಲನಾಗನು, "ಛಂದಃ ಗಾಯತ್ರೀ, ದೈವ್ಯೇಕಂ" ಇತ್ಯಾದಿ ಸೂತ್ರಗಳನ್ನು ರಚಿಸಿದನು. ವೇದಾಂಗಗಳಲ್ಲಿ ಈ ಛಂದೋಗ್ರಂಥ ಸುಪ್ರಸಿದ್ಧವಾಗಿದೆ.

"ಮಯರಸತಜಭನಲಗಸಮ್ಮಿತಂ ಭ್ರಮತಿ ವಾಙ್ಮಯಂ ಜಗತಿ ಯಸ್ಯ ।
ಸ ಜಯತಿ ಪಿಂಗಲನಾಗಃ ಶಿವಪ್ರಸಾದಾದ್ ವಿಶುದ್ಧಮತಿಃ ॥"

(ಪಿಂ.ಛಂ.ಸೂ. ಮಂಗಲಾಚರಣಮ್)

ಜ್ಯೋತಿಷಮ್ :

"ಜ್ಯೋತಿಷ"ವೆಂಬುದು ಕಾಲತತ್ತ್ವವನ್ನು ತಿಳಿಸುವ ವೇದಾಂಗಭೂತವಾದ ಶಾಸ್ತ್ರ. ಹಗಲು, ರಾತ್ರಿ, ತಿಥಿ, ಪಕ್ಷ, ಮಾಸ, ಋತು, ಅಯನ, ಸಂವತ್ಸರ, ಯುಗ, ನಕ್ಷತ್ರ, ನಿಮಿಷ, ಕಲಾ, ಮುಹೂರ್ತ, ಕಾಷ್ಠಾ, ಇವೆಲ್ಲ ಈ ಶಾಸ್ತ್ರದಲ್ಲಿ ಅಂತರ್ಗತವಾಗಿವೆ. ಈ ಕಾಲಚಕ್ರವು ಜ್ಯೋತೀರೂಪವಾದ ಸವನ ಸಮಯ ಕಾಲಗಳ ಸಂಬಂಧದಿಂದ ಹಾಗೂ ವಿದ್ಯುತ್ ಆದಿತ್ಯಾದಿ ಜ್ಯೋತಿರೂಪದ ಯೋಗದಿಂದ ಜ್ಯೋತಿಷವೆಂದಾಗಿವೆ. ವೇದ ಹಾಗೂ ಲೋಕದಲ್ಲಿ ಸರ್ವವ್ಯವಹಾರಗಳಿಗೆ ಆಸ್ಪದವಾದ ಬಾಹ್ಯಾಭ್ಯಂತರ ಯಜ್ಞಗಳಿಗೆ ಕಾಲಗಳನ್ನು ತಿಳಿಸುವದಾಗಿದೆ.

ಈ ಕಾಲಚಕ್ರವು ಸ್ವತಃ ಸಿದ್ಧವಾಗಿದ್ದರೂ ಚೈತನ್ಯ ಜ್ಯೋತಿರೂಪ ಪರಮಾತ್ಮನಿಂದ ಅಧಿಷ್ಠಿತವಾಗಿದೆ. ಈ ಶಾಸ್ತ್ರ ಹಿಂದೆ, ಮುಂದೆ, ಇಂದೂ ಅಚ್ಚಳಿಯಾಗಿ ನಿಲ್ಲುವಂಥಾದ್ದು. ಇವೆಲ್ಲವೂ ಋಙ್ಮಂತ್ರಗಳಲ್ಲಿ, ಬ್ರಾಹ್ಮಣಗಳಲ್ಲಿ, ಉಪನಿಷದ್‌ಗಳಲ್ಲಿಯೂ ವಿಸ್ತಾರವಾಗಿ ಸಮರ್ಥಿತವಾಗಿವೆ.

"ದ್ವಾದಶ ಪ್ರಧಯಶ್ಚಕ್ರಮೇಕಂ ತ್ರೀಣಿ ನಭ್ಯಾನಿಕ ಉತಚ್ಚಿಕೇತ ।
ತಸ್ಮಿನ್ ತ್ಸಾಕಂ ತ್ರಿಶತಾ ನ ಶಂಕವೋऽರ್ಪಿತಾಃ ಷಷ್ಟಿರ್ನ ಚಲಾಚಲಾಸಃ ॥"

(ಋ. ೧, ೧೬೪, ೪೮)

ಇಲ್ಲಿ ೧೨ ತಿಂಗಳು ಒಂದು ವತ್ಸರ, ಬೇಸಿಗೆ, ಮಳೆ, ಶೀತ ಕಾಲಗಳು ಹಾಗೂ ೩೬೦ ದಿನಗಳೂ ವರ್ಣಿತವಾಗಿವೆ.

ಅಂತೆಯೇ–

"ದ್ವಾದಶಾರಂ ನಹಿ ತಜ್ಜರಾಯ ವರ್ವರ್ತಿ ಚಕ್ರಂ ಪರಿದ್ಯಾಮೃತಸ್ಯ ।
ಆಪುತ್ರಾ ಅಗ್ನೇ ಮಿಥುನಾಸೋ ಅತ್ರ ಸಪ್ತಶತಾನಿ ವಿಂಶತಿಶ್ಚ ತಸ್ಥುಃ ॥"

(ಋ. ೧, ೧೬೪, ೧೧)

ಇಲ್ಲೂ ಹನ್ನೆರಡು ತಿಂಗಳುಗಳ ಹಾಗೂ ೭೨೦ ಹಗಲು ರಾತ್ರಿಗಳ ಸಂಖ್ಯೆ ಕಂಡುಬರುತ್ತಿದೆ.

ಇದನ್ನೇ ಶತಪಥ ಬ್ರಾಹ್ಮಣದಲ್ಲಿ ೩೬೦ ಹಗಲು, ಹಾಗೂ ೭೨೦ ಹಗಲು ರಾತ್ರಿಗಳ ಒಟ್ಟು ಸಂಖ್ಯೆ ಎಂದು ಸ್ಪಷ್ಟಪಡಿಸಿದ್ದಾರೆ.

"ಶತಾನಿ ತ್ರೀಣಿ ಚ ಷಷ್ಟಿಶ್ಚ ಚ ಸಂವತ್ಸರಸ್ಯಾಹಾನಿ ಸಪ್ತ ಚ ವೈ ಶತಾನಿ ಚ । ವಿಂಶತಿಶ್ಚ ಸಂವತ್ಸರಸ್ಯಾಹೋರಾತ್ರಾಣಿ ॥" (ಶ.ಬ್ರಾ. ೧೨, ೩, ೨, ೩)

ಇದರಂತೆ ಋತುಗಳ ವಿಷಯದಲ್ಲಿ ಮಂತ್ರ–

"ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇ ಅರ್ಧೇ ಪುರೀಷಿಣಮ್ ।
ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ ಷಳರ ಆಹುರರ್ಪಿತಮ್ ॥"

(ಋ. ೧, ೧೬೪, ೧೨)

"ಪಂಚಾರೇ ಚಕ್ರೇ ಪರಿವರ್ತಮಾನೇ ತಸ್ಮಿನ್ನಾತಸ್ಥುರ್ಭುವನಾನಿ ವಿಶ್ವಾ"

(ಋ. ೧, ೧೬೪, ೧೩)

ಆದರ ಉಪವ್ಯಾಖ್ಯಾನರೂಪವಾದ ಉಪನಿಷದ್ ಬ್ರಾಹ್ಮಣದಲ್ಲಿಯೂ ವಿಸ್ತಾರವಾಗಿ ಆ ಕಾಲತತ್ತ್ವವನ್ನು ವರ್ಣಿಸಿದ್ದಾರೆ.

"ಸಂವತ್ಸರೋ ವೈ ಪ್ರಜಾಪತಿಸ್ತಸ್ಯಾಯನೇ ದಕ್ಷಿಣಂ ಚೋತ್ತರಂ ಚಂ" ಇತ್ಯಾದಿ. "ಏತದ್ ವೈ ಪ್ರಾಣಾನಾಮಾಯತನಮ್ ಇತ್ಯೇಷನಿರೋಧಸ್ತದೇಷಶ್ಲೋಕಃ, ಪಂಚಪಾದಂ ಪಿತರಮ್ಂ" ಇತಿ "ಅಹೋರಾತ್ರೋ ವೈ ಪ್ರಜಾಪತಿಃ, ಮಾಸೋ ವೈ ಪ್ರಜಾಪತಿಃ" (ಪ್ರ.ಉ. ೧, ೯; ೧೦; ೧೨; ೧೩)

ಇದೆಲ್ಲವನ್ನೂ ಈ ಹಿಂದೆಯೇ ಉಪನಿಷತ್ ಪ್ರಕರಣದಲ್ಲಿ ಹೇಳಿದೆ. ಅದನ್ನೇ ಇಲ್ಲಿ ಅನ್ವಯಿಸಿಕೊಳ್ಳಬೇಕು. ಬೇರೆ ರೀತಿಯಲ್ಲಿ ಕಾಲಚಕ್ರವರ್ಣನವು ಮಂತ್ರದಲ್ಲಿ ಕಂಡು ಬರುತ್ತಿದೆ.

"ಸಪ್ತ ಯುಂಜಂತಿ ರಥಮೇಕಚಕ್ರಮೇಕೋ ಅಶ್ವೋ ವಹತಿ ಸಪ್ತನಾಮಾ ।
ತ್ರಿನಾಭಿ ಚಕ್ರಮಜರಮನರ್ವಂ ಯತ್ರೇಮಾ ವಿಶ್ವಾ ಭುವನಾಽಧಿ ತಸ್ಥುಃ ॥

"ಇಮಂ.ರಥಮಧಿ ಯೇ ಸಪ್ತ ತಸ್ಥುಃ ಸಪ್ತಚಕ್ರಂ ಸಪ್ತ ವಹಂತ್ಯಶ್ವಾಃ ।
ಸಪ್ತ ಸ್ವಸಾರೋ ಅಭಿ ಸಂನವಂತೇ ಯತ್ರ ಗವಾಂ ನಿಹಿತಾ ಸಪ್ತ ನಾಮ ॥"
(ಋ. ೧, ೧೬೪, ೩-೪)

ಈ ಕಾಲಚಕ್ರವು ಆದಿ ಸೃಷ್ಟಿಯಲ್ಲಿ ವಿದ್ಯುದ್ರೂಪಿಯಾದ ಪುರುಷನಿಂದಲೇ ಆವಿರ್ಭವಿಸಿತು ಎಂದು ಶ್ರುತಿ ತಿಳಿಸುತ್ತಿದೆ.

"ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ ।
ಕಲಾ ಮುಹೂರ್ತಾಃ ಕಾಷ್ಠಾಶ್ಚಾಹೋರಾತ್ರಾಶ್ಚ ಸರ್ವಶಃ ।
ಅರ್ಧಮಾಸಾ ಮಾಸಾಋತವಃ ಸಂವತ್ಸರಶ್ಚ ಕಲ್ಪಂತಾಮ್ ॥" (ತೈ. ೧೦, ೧, ೨)

ಇದೇ ಕಾಲಚಕ್ರದಲ್ಲಿ ನಕ್ಷತ್ರಚಕ್ರವೂ ಒಳಗೊಂಡಿದೆ. ಹಾಗೆಯೇ ಯಜುರ್ವೇದದಲ್ಲಿ–

"ಅಗ್ನಿರ್ನಃ ಪಾತು ಕೃತ್ತಿಕಾಃ । ನಕ್ಷತ್ರಂ ದೇವಮಿಂದ್ರಿಯಮ್ ।
ಇದಮಾಸಾಂ ವಿಚಕ್ಷಣಮ್ । ಹವಿರಾಸಂಜುಹೋತನ ॥" (ತೈ.ಬ್ರಾ. ೩,೧,೧,೧)

ಆ ನಕ್ಷತ್ರಗಳಿಗೆ ಪ್ರತ್ಯೇಕ ದೇವತೆಗಳಿವೆ.

"ಕೃತ್ತಿಕಾ ನಕ್ಷತ್ರಮಗ್ನಿರ್ದೇವತಾ, ರೋಹಿಣೀ ನಕ್ಷತ್ರಂ ಪ್ರಜಾಪತಿರ್ದೇವತಾ, ಮೃಗಶೀರ್ಷಂ ನಕ್ಷತ್ರಂ ಸೋಮೋ ದೇವತಾಂ" ಇತ್ಯಾದಿ. ಹೀಗೆ ಈ ಮಂತ್ರಗಳ ಬ್ರಾಹ್ಮಣಗಳ ಆಧಾರದಿಂದಾಗಿ ಜ್ಯೋತಿಃಶಾಸ್ತ್ರವನ್ನು ಕಲ್ಪಿಸಿ ವೇದಾಂಗಗಳಲ್ಲಿ ಅದನ್ನು ಸಂಗ್ರಹಿಸಿದರೆಂದು ಕಾಣುತ್ತದೆ. ಅದರೊಳಗೂ "ಆರ್ಚಜ್ಯೋತಿಷ, ಯಾಜುಷಜ್ಯೋತಿಷ" ಎಂದು ಬೇರೆ ಬೇರೆಯಾಗಿ ಪ್ರಸಿದ್ಧಿ ಹೊಂದಿದೆ.

ಇಲ್ಲಿ– "ವೇದಾಹಿ ಯಜ್ಞಾರ್ಥಮಭಿಪ್ರವೃತ್ತಾಃ ಕಾಲಾನುಪೂರ್ವಾ ವಿಹಿತಾಶ್ಚ ಯಜ್ಞಾಃ," ಆದ್ದರಿಂದ ಯಜ್ಞಾನುಷ್ಠಾನಕ್ಕಾಗಿ ಯೋಗ್ಯವಾದ ಕಾಲನಿರ್ಣಯವೇ ಜ್ಯೋತಿಷದ ಮುಖ್ಯ ಉದ್ದೇಶ. ವೇದಾಂಗಜ್ಯೋತಿಷದ್ದೆಂಬುದು, ದರ್ಶಪೂರ್ಣಮಾಸ, ನಕ್ಷತ್ರೇಷ್ಟಿ ಮೊದಲಾದ ಯಜ್ಞಗಳು ನಿಯತವಾದ ಸಮಯದಲ್ಲಿ ನಡೆಯಬೇಕೆಂಬುದೇ.

ಹಾಗೆಯೇ ಮಾನವನ ಶರೀರಯಾತ್ರಾ ನಿರ್ವಹಣಾದಿ ಎಲ್ಲ ವ್ಯವಹಾರಗಳಿಗೆ ರಾಷ್ಟ್ರಸಂಚಾಲನವೇ ಮುಂತಾದ ಪ್ರವೃತ್ತಿ ನಿವೃತ್ತಿರೂಪವಾದ ಕ್ರಿಯಾ ಕಲಾಪಗಳು ಸಿದ್ಧಿಸುವದಕ್ಕಾಗಿ ಕಾಲವಿಜ್ಞಾನ ಆವಶ್ಯಕ. ಅದಕ್ಕೆ ಮುಖ್ಯವಾದದ್ದು ಜ್ಯೋತಿಷ ಎಂಬುದು.

"ಪಂಚಸಂವತ್ಸರಮಯಂ ಯುಗಾಧ್ಯಕ್ಷಂ ಪ್ರಜಾಪತಿಮ್ ।
ದಿನರ್ತ್ವಯನ ಮಾಸಾಂಗಂ ಪ್ರಣಮ್ಯಶಿರಸಾಶುಚಿಃ ॥
ಪ್ರಣಮ್ಯಶಿರಸಾ ಕಾಲಮಭಿವಾದ್ಯ ಸರಸ್ವತೀಮ್ ।
ಕಾಲಜ್ಞಾನಂ ಪ್ರವಕ್ಷ್ಯಾಮಿ ಲಗಧಸ್ಯ ಮಹಾತ್ಮನಃ ॥"

ಇಲ್ಲಿ ಯುಗಾಧ್ಯಕ್ಷ, ಪಂಚಸಂವತ್ಸರಮಯ ಮೊದಲಾದ ಶಬ್ದಗಳನ್ನು ಮುಂದೆ ವಿಶದೀಕರಿಸಿದ್ದಾರೆ. ಯುಗಕ್ಕೆ ಐದು ವರ್ಷ.

"ಯುಗಸ್ಯ ಪಂಚವರ್ಷಾಣಿ ಕಾಲಜ್ಞಾನಂ ಪ್ರಚಕ್ಷತೇ" ಎಂದು ಮುಂತಾಗಿ ಹೇಳಿದ್ದನ್ನು ಋಙ್ಮಂತ್ರರೂಪಾಂತರದಿಂದ ತಿಳಿಸಿದೆ.

"ದೀರ್ಘತಮಾ ಮಾಮತೇಯೋ ಜುಜುರ್ವಾನ್ ದಶಮೇ ಯುಗೇ ।
ಅಪಾಮರ್ಥಂ ಯತೀನಾಂ ಬ್ರಹ್ಮಾ ಭವತಿ ಸಾರಥಿಃ ॥" *(ಋ. ೧, ೧೫೮, ೬)*

ಅಧ್ಯಾತ್ಮತತ್ತ್ವೋದಿತವಾದ ಜ್ಯೋತಿಷ್ಯ :

ಈಗ ಅಧ್ಯಾತ್ಮ ತತ್ತ್ವಯೋಗದಿಂದ ಸರ್ವನಿಯಾಮಕನಾದ ವಿದ್ಯುದ್ರೂಪ ಕಾಲಾತ್ಮನಾದ ಯಮನ ಜ್ಯೋತಿಸ್ಸ್ವರೂಪವನ್ನು ಸ್ವಲ್ಪ ವಿಮರ್ಶಿಸೋಣ–

"ಯಮೋ ಹ ಜಾತೋ ಯಮೋ ಜನಿತ್ವಂ ಜಾರಃ ಕನೀನಾಂ ಪತಿರ್ಜನೀನಾಮ್" *(ಋ. ೧, ೬೬, ೪)*

"ಸರ್ವಾ ತಾ ಯಮ ಆಹಿತಾ" *(ಋ. ೧೦, ೧೪, ೧೬)*

ಯಮನ ವಿಶ್ವನಿಯಾಮಕತ್ವವೂ ಲೋಕ ಹಾಗೂ ವೇದದಲ್ಲಿ ಸುಪ್ರಸಿದ್ಧವಾಗಿಯೇ ಇದೆ. ಆತನ ಅಧಿದೈವತ ತತ್ತ್ವದಿಂದಾಗಿ ಅಗ್ನಿ, ವಾಯು, ಸೂರ್ಯ, ರುದ್ರಃ, ಇಂದ್ರ ಇವರ ಆಧ್ಯಾತ್ಮಿಕ ತತ್ತ್ವವೂ ವೇದದಲ್ಲಿ ಪ್ರಸಿದ್ಧವಾಗಿದೆ. ವೈದ್ಯುತಾಗ್ನಿ ಸ್ವರೂಪವೂ ವೈದಿಕ ದೃಷ್ಟಿಯಿಂದ ಸಮೃದ್ಧವಾಗಿದೆ. ಹೀಗೆ ಅಧಿಜ್ಯೋತಿಷ ತತ್ತ್ವಸಿದ್ಧನಾದ ಕಾಲಾತ್ಮನು ಎಲ್ಲರ ಅಂತರಾತ್ಮದಲ್ಲಿ ಪ್ರಾಣರೂಪದಿಂದ ಪ್ರತಿಷ್ಠಿತನಾಗಿದ್ದಾನೆಂದು ಸಾರ್ಪರಾಜ್ಞೀ ಎಂಬ ಋಷಿಕೆ ತನ್ನ ಮೂರು ಮಂತ್ರಗಳಲ್ಲಿ ಕಂಡಿದ್ದಾಳೆ.

"ಆಯಂ ಗೌ ಸಾರ್ಪರಾಜ್ಞ್ಯಾತ್ಮದೈವತಂ ಸೌರ್ಯಂ ವಾ" (ಕಾ.ಸ.ಸೂ. ೧೦, ೧೯೮, ೧-೮)

"ಆಯಂ ಗೌಃ ಪೃಶ್ನಿರಕ್ರಮೀತ್ಂ ।
ಅಂತಶ್ಚರತಿ ರೋಚನಾಽಸ್ಯ ಪ್ರಾಣಾದಪಾನತೀಂ ।
ತ್ರಿಂಶದ್ಧಾಮ ವಿ ರಾಜತಿ ವಾಕ್ ಪತಂಗಾಯ ಧೀಯತೇ ।
ಪ್ರತಿ ವಸ್ತೋರಹ ದ್ಯುಭಿಃ ॥" *(ಋ. ೧೦, ೧೮೯, ೧-೩)*

ಈ ಜ್ಯೋತಿರ್ಮಯನಾದ ಆದಿತ್ಯನು ಆಕಾಶದಲ್ಲಿದ್ದು ತನ್ನ ತಾಪದಿಂದ ಪ್ರಜ್ವಲಿಸುತ್ತಾ ಎಲ್ಲರ ಅಂತರ್ಯದಲ್ಲಿ ಪ್ರಾಣರೂಪದಲ್ಲಿದ್ದು ಒಳಗೂ ಹೊರಗೂ ಸಂಚರಿಸುತ್ತಾ ಪ್ರಾಣಾಪಾನ ಗತಿರೂಪಿಯಾಗಿದ್ದಾನೆಂಬುದನ್ನು ಉಪನಿಷದ್ ಬ್ರಾಹ್ಮಣಗಳೂ ಪ್ರತಿಪಾದಿಸುತ್ತಿವೆ.

"ಆದಿತ್ಯೋ ಹ ವೈ ಬಾಹ್ಯಃ ಪ್ರಾಣಃ ಉದಯತ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ" (ಪ್ರ.ಉ. ೩, ೭)

ಈ ಪ್ರಾಣವು ಚಿದಾತ್ಮನ ಕಿರಣಗತಿಗನುಸಾರವಾಗಿ ಪ್ರತಿದಿನ ೩೦ ಸ್ಥಾನಗಳಲ್ಲಿ ವಿರಾಜಿಸುತ್ತದೆ. ಅಂದರೆ ೮ ಪ್ರಹರಗಳಲ್ಲಿ ೨೪ ತಾಸುಗಳಲ್ಲಿ ೩೦ ವಿಭಾಗದಿಂದ ಅಷ್ಟು ಸಂಕ್ರಮಣದಿಂದ ಕ್ರಮಿಸುತ್ತದೆ. ಈ ಪ್ರಾಣದಿಂದ ಕೂಡಿದ ವಾಕ್ಕೂ ಸಹ ಚೇತನಾರೂಪಿಯಾದ ಪರಮಾತ್ಮನಲ್ಲಿ ಇಡಲ್ಪಟ್ಟಿದೆ. ಆ ವಾಕ್ಕು ಮುಖ್ಯಪ್ರಾಣಗತಿರೂಪವಾದ ಸರಸ್ವತಿಯಾಗಿ ಎಲ್ಲರ ಅಂತರಾತ್ಮನಲ್ಲಿ ನೆಲೆಸಿರುತ್ತದೆ. ಈ ಪ್ರಾಣರೂಪಿ ಅಂತರಾತ್ಮನಿಂದ ಒಳಗೂ ಹೊರಗೂ ತಿರುಗುತ್ತಿರುವ ಉಚ್ಛ್ವಾಸ ನಿಃಶ್ವಾಸ ರೂಪಗತಿಗನುಗುಣವಾಗಿ ಕಾಲಗಣನಾ ಗತಿಯು ಕೂಡಾ ಆಧ್ಯಾತ್ಮಿಕವಾದ ಆಂತರಂಗಿಕ ಕಾಲಚಕ್ರದ ತಿರುಗುವಿಕೆಯಿರುತ್ತದೆ.

"ಅಂತಶ್ಚರತಿ ರೋಚನಾಽಸ್ಯ ಪ್ರಾಣಾದಪಾನತೀ" (ಋ. ೧೦, ೧೮೯, ೨)

"ಅಪಾಙ್ ಪ್ರಾಙೇತಿ ಸ್ವಧಯಾ ಗೃಭೀತೋಽಮರ್ತ್ಯೋ ಮರ್ತ್ಯೇನಾ ಸಯೋನಿಃ" (ಋ. ೧, ೧೬೪, ೩೮)

"ಸ ಯಂತಾ ವಿಪ್ರ ಏಷಾಂ ಸ ಯಜ್ಞಾನಾಮಥಾ ಹಿ ಷಃ" (ಋ. ೩, ೧೩, ೩)

ಇದೇ ಅರ್ಥದಲ್ಲಿ "ಅಪಾನೇನ ಹ್ಯಯಂಯತಃ ಪ್ರಾಣೋ ನ ಪರಾಚೇಭವತಿ" (ಐ.ಬ್ರಾ.) "ತಸ್ಯ ಹ ವಾ ಏತಸ್ಯ ಹೃದಯಸ್ಯ ಪಂಚದೇವ ಸುಷಯಃ, ಸ ಯೋಽಸ್ಯ ಪ್ರಾಙ್‌ಸುಷಿಃ ಸ ಪ್ರಾಣಃ, ಅಥ ಯೋಽಸ್ಯ ಪ್ರತ್ಯಙ್‌ಸುಷಿ ಸೋಽಪಾನಃ" (ಛಾಂ.ಉ. ೩, ೧೩, ೧-೩)

ಒಂದೇ ಪ್ರಾಣದ ಹಿಂದು ಮುಂದಿನ ಗತಿ ವಿಶೇಷವೇ ಪ್ರಾಣ. ಅಪಾನ ಎಂಬ ಸಂಜ್ಞೆ ಹೊಂದಿದೆ. ಇದೇ ಪ್ರಾಣಾಗ್ನಿರೂಪ ವೈಶ್ವಾನರನೇ ದಿವ್ಯಜ್ಯೋತಿಯಾದ ಆದಿತ್ಯನೇ ಒಳಗೂ ಹೊರಗೂ ತುಂಬಿದ್ದು ಸರ್ವಕಾಲಗಳ ವಿಭಾಜಕನಾಗಿದ್ದಾನೆ.

"ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಽಗ್ನಿರುದಯತೇ । ತದೇತದೃಚಾಭ್ಯುಕ್ತಮ್ ॥"
"ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪಂತಮ್ ।
ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥"
(ಪ್ರ.ಉ. ೧, ೭-೮)

ಇದು ಆಧ್ಯಾತ್ಮಿಕ ಹಾಗೂ ಆಧಿಜ್ಯೌತಿಷ ತತ್ವಗಳೆರಡರಿಂದ ಕೂಡಿದೆ. ಈ ಪ್ರಾಣಗತಿ ಗನುಗುಣವಾಗಿ ಕಾಲಚಕ್ರ ಗಣನೆಯೂ ಇದೆ.

"ಸ ಏಷ ಪುರುಷಃ ಕತಿಕೃತ್ವಃ ಪ್ರಾಣಿತಿ ಚಾಪ ಚಾನಿತಿ" ಪುರುಷನು ಎಷ್ಟು ಬಾರಿ ಶ್ವಾಸೋಚ್ಛ್ವಾಸ ಬಿಡುತ್ತಾನೆ ಎಂಬ ಪ್ರಶ್ನೆಗೆ ಉತ್ತರ ಶತಪಥ ಬ್ರಾಹ್ಮಣದಲ್ಲಿ "ಶ್ರಮಾದನ್ಯತ್ರ ಪರಿವರ್ತಮಾನಸ್ತಿಷ್ಠನ್ನಾಸೀನೋ ಯದಿ ವಾ ಸ್ವಪನ್ನಪಿ ಅಹೋರಾತ್ರಾಭ್ಯಾಂ ಪುರುಷಃ ಸಮೇನ ಕತಿ ಕೃತ್ವಃ ಪ್ರಾಣಿತಿ ಚಾಪ ಚಾನಿತಿ ॥" (ಶ.ಬ್ರಾ. ೧೨, ೩, ೨, ೭)

ಈ ಪ್ರಶ್ನೆಗೆ ಎರಡು ಶ್ಲೋಕಗಳಿಂದ ಉತ್ತರ,

"ತದೇಷಶ್ಲೋಕಃ ಪ್ರತ್ಯುಕ್ತಃ,–

"ಶತಂ ಶತಾನಿ ಪುರುಷಃ ಸಮೇನಅಷ್ಟೌ ಶತಾ ಯನ್ಮಿತಂ ತದ್ವದನ್ತಿ ।

ಅಹೋರಾತ್ರಾಭ್ಯಾಂ ಪುರುಷಃ ಸಮೇನಾತಾವತ್ಕೃತ್ವಃ ಪ್ರಾಣಿತಿಚಾಪಚಾನಿತಿ ॥"

(ಶ.ಬ್ರಾ. ೧೨, ೩, ೨-೮)

ಈ ಶ್ಲೋಕದ ಸ್ಪಷ್ಟಾರ್ಥ ಹೀಗೆ. ಪುರುಷನು ಪರಿಶ್ರಮವಿಲ್ಲದಾಗ ಸುಮ್ಮನೆ ಕುಳಿತು, ಮಲಗಿ, ಮಾಡುತ್ತಿದ್ದಾಗ ಒಂದು ದಿನದಲ್ಲಿ ಎಷ್ಟು ಬಾರಿ ಶ್ವಾಸೋಛ್ವಾಸ ಮಾಡುತ್ತಾನೆಂಬ ಪ್ರಶ್ನೆಗೆ ಶತಂಶತಾನಿ– "ಹತ್ತುಸಾವಿರ" (೧೦,೦೦೦) ಅಷ್ಟೌಶತಾನಿ (೮೦೦) ಕೂಡಿಸಿದ (೧೦,೮೦೦) ಹತ್ತುಸಾವಿರದ ಎಂಟುನೂರು ಹಗಲಿಗೆ, ಅದರಂತೆ ರಾತ್ರಿಗೆ ೧೦,೮೦೦, ಸೇರಿಸಿದರೆ ೨೧,೬೦೦ ಬಾರಿಯಾಗುತ್ತದೆ.

ಇದನ್ನೇ ನನ್ನಿಂದ ರಚಿತವಾದ ಅಕ್ಷರಮಾಲಿಕಾದಲ್ಲಿ–

"ಹಂಸೋಽಯಂ ಷಟ್‌ಶತಮಿಹವಾರಂ ಸೈಕಾಧಿಕವಿಂಶತಿಕಸಹಸ್ರಮ್ ।

ಹಂಸಂ ಹೃದಯೆ ಪರಮಾತ್ಮಾನಂ ರಾತ್ರಂದಿನಮನುಜಪತಿ ಪ್ರಾಣಮ್ ॥"

(ಅಕ್ಷರಮಾಲಾ ಶ್ಲೋ. ೪೦)

ಈ ಯೋಗಶಾಸ್ತ್ರದಲ್ಲಿ ಹೇಳಿದ ಪ್ರಾಣಗತಿ ಸಂಖ್ಯೆಯು ಮೂಲತಃ ವೇದೋದಿತವಾಗಿದ್ದು ಜ್ಯೋತಿಸ್ತತ್ವ ವಿಶಿಷ್ಟವಾಗಿದೆ. ಇಲ್ಲಿ "ತ್ರಿಂಶದ್ಧಾಮವಿರಾಜತಿ" ಎಂಬುದು ೩೦ ಮೂವತ್ತು ವಿಭಾಗಗಳಿಂದ ಕೂಡಿದ ಒಂದು ದಿನದಂತೆ ೩೦ ದಿನ ಪರಿಮಿತವಾದ ಒಂದು ಮಾಸದ ಕಲ್ಪನೆ. ಒಂದು ದಿನಕ್ಕೆ ೨ ಘಳಿಗೆಗಳ ಮುಹೂರ್ತ ೩೦, ಎರಡು ಗಳಿಗೆ ಎಂದರೆ ಇಂದಿನ ೪೮ ಮಿನಿಟುಗಳ ಕಾಲಮುಹೂರ್ತ. ಇಂಥ ಒಂದು ಮುಹೂರ್ತದಲ್ಲಿ ೭೨೦ (ಏಳುನೂರಾ ಇಪ್ಪತ್ತು) ಸಲ ಪ್ರಾಣಗತಿಯಿರುತ್ತದೆ. ಅದರಂತೆ ೭೨೦ ಹಗಲು ರಾತ್ರಿಗಳು ಅಂದರೆ ೩೬೦ ಹಗಲು ೩೬೦ ರಾತ್ರಿಗೆ ೧ ಸಂವತ್ಸರ ಕಾಲ ಪ್ರಾಣಗತಿಯಿಂದ ಕಳೆದಂತಾಯಿತು. ಅದು ಸೂರ್ಯನಿಗೆ ಒಂದು ದಿನ. ನಮ್ಮ ಪ್ರಾಣಗತಿಯಿಂದ ಒಂದು ಮುಹೂರ್ತವಷ್ಟೆ ಸೂರ್ಯನ ಒಂದು ದಿನ, ಹೀಗೆ ಹಗಲು ರಾತ್ರಿಗಳಲ್ಲಿ ಪ್ರಾಣಾಪಾನ ಶ್ವಾಸೋಛ್ವಾಸ ಸಹಯೋಗದಿಂದ ಅಂದರೆ ೩೦ ಮುಹೂರ್ತಗಳಿಂದ ಕೂಡಿದ ಒಂದು ದಿನ ೬೦ ಸಂವತ್ಸರಗಳು ಕಳೆದರೆ ನಮಗೆ ಒಂದು ದಿನ. ಪ್ರಾಣಗತಿಯಲ್ಲಿ ಒಂದು ಮುಹೂರ್ತ.

ಅಂಥ ಐದು ಸಂವತ್ಸರಗಳಿಗೆ ಯುಗ ಎಂಬ ಸಂಜ್ಞೆ ವೇದದಲ್ಲಿ ಪ್ರಸಿದ್ಧವಾದದ್ದನ್ನು ವೇದಾಂಗ ಜ್ಯೋತಿಷದಲ್ಲಿ–

"ಪಂಚಸಂವತ್ಸರಮಯಂ ಯುಗಾಧ್ಯಕ್ಷಂ ಪ್ರಜಾಪತಿಮ್ ।"

ದಿತರ್ತ್ವಯನಮಾಸಾಂಗಂ ಪ್ರಣಮ್ಯಶಿರಸಾಶುಚಿಃ,

"ಯುಗಸ್ಯ ಪಂಚವರ್ಷಾಣಿ ಕಾಲಜ್ಞಾನಂ ಪ್ರಚಕ್ಷತೇ"

ಇದಕ್ಕೆ ಮೂಲ ದೈರ್ಘತಮಸಾರ್ಷೇಯ ಮಂತ್ರ

"ದೀರ್ಘತಮಾ ಮಾಮತೇ ಯೋ ಜುಜುರ್ವಾನ್ ದಶಮೇ ಯುಗೇ"

(ಋ. ೧, ೫೮, ೬)

"ದಶಮೋ ಯುಗಃ" ಅಂದರೆ ಐವತ್ತನೇ ವರ್ಷವೆಂದರ್ಥ. ಅಂತೆಯೇ "ಯುಗೇ ಯುಗೇ" ಎಂದರೂ ಇದೇ ಅರ್ಥ ಸಾಂಕೇತಿಕವಾಗಿದೆ. ಹೀಗೆ ಜ್ಯೋತಿಷವೆಂಬುದು ಅತ್ಯಂತ ಗಂಭೀರವಾಗಿದ್ದು ತತ್ವತ್ರಯಗಳಿಂದ ಕಲ್ಪಿತವಾಗಿದೆ. ಇಲ್ಲಿ ದಿಗ್ದರ್ಶನ ಮಾತ್ರಕ್ಕಾಗಿ ಕೆಲವನ್ನೇ ತೋರಿಸಿದೆ. ಸಾಕ್ಷಾತ್ಕಾರಯೋಗ ಸುಧೆಯೆಂಬ ನನ್ನ ಗ್ರಂಥದಲ್ಲಿ ಮುಖ್ಯಪ್ರಾಣೋಪಾಸನೆಯ ಸಂದರ್ಭದಲ್ಲಿ ಅಭ್ಯಾಸಪ್ರಕ್ರಿಯಾ ಸಂದರ್ಭದಲ್ಲಿ ವಿಸ್ತರಿಸಿ ಹೇಳಿದೆ. ಹಾಗೆಯೇ ವಾಕ್ಸುಧೆಯಲ್ಲಿ ಸರಸ್ವತಿಯ ಶಾರದಾ ಎಂಬ ನಾಮದ ತತ್ವವನ್ನು ಹೇಳುವಾಗ ವಿಸ್ತಾರವಾಗಿ ತಿಳಿಸಿದೆ.

ಹೀಗೆ ಶಿಕ್ಷಾದಿ ಆರುಶಾಸ್ತ್ರಗಳನ್ನು ವೇದ ಪುರುಷನ ಅವಯವವಾಗಿ ಕಲ್ಪಸಿದ್ದ ಪಾಣಿನಿಯ ವೈಶಿಷ್ಟ್ಯವಾಗಿದೆ.

"ಛಂದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋಽಥ ಪಠ್ಯತೇ ।
ಜ್ಯೋತಿಷಾಮಯನಂ ಚಕ್ಷುರ್ನಿರುಕ್ತಂ ಶ್ರೋತ್ರಮುಚ್ಯತೇ ॥ ೪೧ ॥
ಶಿಕ್ಷಾಘ್ರಾಣಂ ತು ವೇದಸ್ಯ ಮುಖಂ ವ್ಯಾಕರಣಂ ಸ್ಮೃತಮ್ ।
ತಸ್ಮಾತ್ ಸಾಂಗಮಧೀತ್ಯೈವ ಬ್ರಹ್ಮಲೋಕೇ ಮಹೀಯತೇ ॥ ೪೨ ॥" (ಪಾ.ಶಿ.)

ಆದ್ದರಿಂದಲೇ ಶಾಸ್ತ್ರವು ಸಾಂಗವೇದಾಧ್ಯಯನವನ್ನು ವಿಧಿಸಿದೆ. ಅಂಗೀ ಹಾಗೂ ಅಂಗಗಳ ಸಂಬಂಧ ನಿತ್ಯವಾದದ್ದು. ಅಂಗಗಳಿಲ್ಲದ ಆತ್ಮ, ಆತ್ಮನಿಲ್ಲದ ಅಂಗಗಳೂ ನಿರರ್ಥಕವು ಹ್ಯಾಗೋ ಹಾಗೆ ವೇದಾಂಗಗಳಿಲ್ಲದ ವೇದದಿಂದ ವೇದವಿಲ್ಲದ ವೇದಾಂಗಗಳಿಂದಲೂ ಪ್ರಯೋಜನವಿಲ್ಲ. ವೇದಗಳ ಅರ್ಥಜ್ಞಾನಕ್ಕಾಗಿ ವೇದಾಂಗಗಳ ಅಧ್ಯಯನ ವಿಹಿತವಾಗಿದೆ. ಅದಿಲ್ಲದೇ ವೇದವಿದ್ಯಾಭ್ಯಾಸವು ಅಪೂರ್ಣವೇ ಸರಿ.

॥ ವೇದಾರ್ಥಗಳಲ್ಲಿ ಮೂರು ತತ್ವಗಳ ಯೋಗ ॥

ವೇದ ಮಂತ್ರಗಳಲ್ಲಿ ಬ್ರಾಹ್ಮಣೋಪನಿಷದಾದಿಗಳಲ್ಲಿ ಬಹುವಿಧವಾದ ತತ್ವಗಳು ಉಪದೇಶಿಸಲ್ಪಟ್ಟಿವೆ. ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. "ಅಧಿಲೋಕ ಮಧಿಜ್ಯೌತಿಷಮಧಿವಿದ್ಯಮಧಿಪ್ರಜಮಧ್ಯಾತ್ಮಮ್" (ತೈ.ಶಿ.ಉ. ೧, ೩) ಐದು ತತ್ವಗಳ ನಿರ್ದೇಶ. ಬೇರೆಡೆಗೆ– "ಅಧಿಯಜ್ಞಮಧ್ಯಕ್ಷರಂ ಚೇತಿ," ಎರಡು ತತ್ವಗಳನ್ನು ಸಮರ್ಥಿಸಿದ್ದೂ ಉಂಟು. "ಅಥಾಧ್ಯಕ್ಷರಮೋಂಕಾರಃ" (ಮಾಂ.ಉ. ೧, ೮) ಹೀಗೆ ಪ್ರಣವಾಕ್ಷರ ಸಮರ್ಥನೆ. "ಅಧಿಯಜ್ಞಂ ಚ," ಯಾಸ್ಕನಿರುಕ್ತದಲ್ಲಿ ಶಬ್ದಶಃ ಅರ್ಥತಃ ವಿವರಿಸಿದ್ದಾರೆ. ಮೂಲತಃ ಮಂತ್ರ ಬ್ರಾಹ್ಮಣ ಉಪನಿಷದಾದಿಗಳಲ್ಲಿ ಸಮರ್ಥಿಸಿದ್ದಾರೆ. ಅಧಿಲೋಕದಲ್ಲಿ ಅಧಿಭೂತ ತತ್ವ ಅಂತರ್ಹಿತ

ವಾಗಿದೆ. ಅಧಿಜ್ಯೋತಿಷದಲ್ಲಿ ಅಧಿದೈವತ, ಅಧ್ಯಾತ್ಮ ತತ್ತ್ವದಲ್ಲಿ ಅಧಿಯಜ್ಞ, ಅಧಿವಿದ್ಯ, ಅಧಿಪ್ರಜ ಇವು ಪ್ರತಿಷ್ಠಿತವಾಗಿವೆ. ಕೆಲವೆಡೆ ಅಧಿಭೂತದಲ್ಲಿ ಅಧ್ಯಕ್ಷರ ಅಧಿವಿದ್ಯ ಇದೆ. ವೇದಾದಿ ಶಬ್ದರೂಪಗಳಿಗೆ ಭೌತಿಕತ್ವವನ್ನೂ ಕಲ್ಪಿಸಿದ್ದಾರೆ.

ಸಾಮಾನ್ಯವಾಗಿ "ತ್ರಯೋಽರ್ಥಾಃ ಸರ್ವವೇದಾನಾಮ್," ಎಂಬ ವಚನಕ್ಕನುಗುಣವಾಗಿ ಬಹಳಷ್ಟು ಭಾಷ್ಯಕಾರರು ತತ್ತ್ವತ್ರಯವನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ವೇದಾರ್ಥವನ್ನು ಹೇಳಿದ್ದು ಕಂಡುಬರುತ್ತದೆ. ಪ್ರಾಯಃ ಎಲ್ಲ ಭಾಷ್ಯಗಳೂ ಗದ್ಯಾತ್ಮಕವಾಗಿವೆ. ಆಖ್ಯಾನ ರೂಪವಾಗಿ ಬೃಹದ್ದೇವತೆಯಲ್ಲಿದೆ. ಮಾಧ್ವ ಋಗ್ಭಾಷ್ಯ ಶ್ಲೋಕರೂಪವಾಗಿದೆ. ವೇದಮಂತ್ರ ಗಳಿಗೆ ಮೊದಲಭಾಷ್ಯ, ಬ್ರಾಹ್ಮಣ, ಆರಣ್ಯಕ, ಉಪನಿಷದಾದಿಗಳೇ ಆಗಿವೆಯೆಂಬುದನ್ನು ಈ ಹಿಂದೆಯೇ ತಿಳಿಸಿದೆ.

ಪ್ರಾಚೀನ ಋಷಿಗಳ ಮಾರ್ಗದರ್ಶನಾನುಸಾರ ತತ್ತ್ವತ್ರಯಸಮನ್ವಯ ಯೋಗ ಶ್ರೇಯಸ್ಕರವಾದದ್ದು. ಋಷಿಗಳು ಶಾಸ್ತ್ರದೃಷ್ಟಿಯಿಂದ ಹಾಗೂ ಸ್ವಾನುಭವದಿಂದಾಗಿ ಬ್ರಾಹ್ಮಣ ಆರಣ್ಯಕ ಉಪನಿಷದಾದಿಗಳಿಂದ ಉಪದೇಶಿಸಿದ ತತ್ತ್ವತ್ರಯಗಳ ಸಮನ್ವಯದಿಂದಲೇ ವೇದಾರ್ಥಗ್ರಹಣ ಪೂರ್ಣವಾಗುತ್ತದೆ. ಅನ್ಯಥಾ ಒಂದೇ ತತ್ತ್ವದಿಂದ ತಿಳಿದರೆ ಅದು ಅಪೂರ್ಣ ಜ್ಞಾನವೇ ಸರಿ. ಯಾಕೆಂದರೆ ಅದು ಏಕದೇಶೀಯಜ್ಞಾನವಾಗುತ್ತದೆ. ಕೇವಲ ಶಬ್ದಸ್ವರೂಪ ಜ್ಞಾನವೂ ಸಹ ಇದರಂತೆಯೇ ಎಂಬುದು ಸರ್ವಸಮ್ಮತವಾದದ್ದು. ಆದ್ದರಿಂದ ವಿದ್ವಾಂಸರು ತಾವೇ ತತ್ತ್ವವಿಮರ್ಶೆಯಿಂದ ಯಥೋಚಿತವಾದದ್ದನ್ನೇ ಸಂಗ್ರಹಿಸುವದು ಉಚಿತವೆಂದು ವಿಜ್ಞಾಪಿಸುತ್ತೇನೆ.

॥ ವೇದಾಧ್ಯಯನದಲ್ಲಿ ಅರ್ಥಜ್ಞಾನಸಾಹಿತ್ಯ ॥

ವಾಗರ್ಥಗಳ ಸಂಬಂಧ ನಿತ್ಯವಾಗಿದ್ದುದರಿಂದ ಅರ್ಥಸಹಿತವಾದ ವೇದಾಧ್ಯಯನ ಪೂರ್ಣಫಲವನ್ನು ನೀಡುತ್ತದೆ. ಅರ್ಥವಿಲ್ಲದ ವೇದ ವೇದವಿಲ್ಲದ ಅರ್ಥ ಏಕದೇಶೀಯ ವಾಗಿದ್ದುದರಿಂದ ಅಪೂರ್ಣವೇ ಸರಿ. ಆದ್ದರಿಂದ "ಬ್ರಾಹ್ಮಣೇನ ನಿಷ್ಕಾರಣಧರ್ಮಃ ಷಡಂಗೋ ವೇದೋಽಧ್ಯೇಯೋಜ್ಞೇತಿ," ಬ್ರಾಹ್ಮಣನು ತನ್ನ ಧರ್ಮವೆಂದು ಷಡಂಗಸಹಿತ ವೇದಾಧ್ಯಯನ ಮಾಡಿ ಅದರ ಅರ್ಥವನ್ನು ತಿಳಿಯಬೇಕು ಎಂಬ ವಿಧಿಯು ಯಥಾರ್ಥವಾಗಿದೆ. ಆದ್ದರಿಂದ ಜ್ಞಾನ, ಭಾವನೆ, ಉಪಾಸನೆ ಹಾಗೂ ಕರ್ಮಗಳಲ್ಲಿ ಅರ್ಥಸಹಿತವಾದ ವೇದಮಂತ್ರಗಳ ಪ್ರಯೋಗ ಶಾಸ್ತ್ರವಿಹಿತವಾಗಿದೆ. ಅರ್ಥರಹಿತವಾದ ಮಂತ್ರಗಳ ಉಪಯೋಗ ನಿರರ್ಥಕ. ಅದಕ್ಕಾಗಿ ಬೃಹಸ್ಪತಿ ಋಷಿ ದೃಷ್ಟಮಂತ್ರ–

"ಯಸ್ತಿತ್ಯಾಜ ಸಚಿವಿದಂ ಸಖಾಯಂ ನ ತಸ್ಯ ವಾಚ್ಯಪಿ ಭಾಗೋ ಅಸ್ತಿ ।
ಯದೀಂ ಶೃಣೋತ್ಯಲಕಂ ಶೃಣೋತಿ ನಹಿ ಪ್ರವೇದ ಸುಕೃತಸ್ಯ ಪಂಥಾಮ್ ॥

(ಋ. ೧೦, ೭೧, ೬)

ಪೂರ್ವಾಚಾರ್ಯರಿಂದ ಸಮರ್ಥಿತವಾಗಿ ಸರ್ವಸಮ್ಮತವಾದ ಇದರರ್ಥ ಹೀಗಿದೆ, ಯಾವುದೇ ವಿದ್ವಾಂಸ ವೇದಾಧ್ಯಾಯಿಯಾಗಿ ವೇದವನ್ನು ಪೂರ್ಣವಾಗಿ ಅಭ್ಯಸಿಸಿ ವಾಕ್ಕಿನ ಅಂದರೆ ಶಬ್ದಗಳ ಮಿತ್ರನಂತಿರುವ ಅರ್ಥವನ್ನು ತಿಳಿಯದಿದ್ದಲ್ಲಿ ಕೇವಲ ಅಕ್ಷರಾನುಪೂರ್ವಿಯಾಗಿ ಕೂಗಂಭಟ್ಟನಂತೆ ಒದರಿದರೆ ಅದರ ಲೇಶಮಾತ್ರ ಫಲವೂ ಅವನಿಗೆ ಲಭಿಸಲಾರದು. ಅಂಥ ಮಾತನ್ನು ಕೇಳಿದವನಿಗೂ ಹೇಳಿದವನಿಗೂ ಅದು ನಿರರ್ಥಕವೇ ಸರಿ. ಅದರ ಅರ್ಥಶೂನ್ಯವಾಗಿದ್ದರಿಂದ ಅದು ಫಲವನ್ನು ನೀಡಲಾರದು. ಇದೇ ಅರ್ಥವನ್ನು ತಿಳಿಸುವ ಇನ್ನೊಂದು ಅದೇ ಬೃಹಸ್ಪತ್ಯಾರ್ಷೇಯ ಮಂತ್ರ,

"ಉತ ತ್ವಃ ಪಶ್ಯನ್ ನ ದದರ್ಶ ವಾಚಮುತತ್ವಃ ಶೃಣ್ವನ್ ನಶೃಣೋತ್ಯೇನಾಮ್ ।

(ಋ. ೧೦, ೭೧, ೪)

"ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋಽರ್ಥಮ್ ।
ಯೋಽರ್ಥಜ್ಞ ಇತ್ ಸಕಲಂ ಭದ್ರಮಶ್ನುತೇ ನಾಕಮೇತಿ ಜ್ಞಾನ ವಿಧೂತ ಪಾಪ್ಮಾ ॥"

ವೇದವನ್ನೋದಿ ಅದರರ್ಥ ತಿಳಿಯದವನು, ಭಾರವನ್ನು ಹೊತ್ತ ಒಣ ಕಂಬದಂತೆಯೇ. ಅದೇ ಅರ್ಥಜ್ಞನು ಇಹಲೋಕದ ಸಕಲ ಸುಖವನ್ನನುಭವಿಸಿ, ಜ್ಞಾನದಿಂದಾಗಿ ವಿಧೂತ ಪಾಪನಾಗಿ ಸ್ವರ್ಗವನ್ನೇರುವನು.

॥ ಕ್ರಿಯೆಗೆ ತಕ್ಕಂತೆ ಫಲ ॥

ಈ ವಿಷಯದಲ್ಲಿ ಕೆಲ ವಿದ್ವಾಂಸರ ಮತ ಈ ರೀತಿ ಇದೆ. ಫಲೋತ್ಪತ್ತಿಗೆ ಕ್ರಿಯೆಯೇ ಕಾರಣವಷ್ಟೆ ? ಆದ್ದರಿಂದ ಅರ್ಥಜ್ಞಾನವಿಲ್ಲದಿದ್ದರೂ ಮಂತ್ರೋಚ್ಚಾರಣ ಮಾತ್ರದಿಂದ ಅದರ ಜಪಾದಿಗಳಿಂದಲೇ ಫಲ ಸಿಗುತ್ತದಾದ್ದರಿಂದ ಮಂತ್ರಾತ್ಮಕವಾದ ಆ ಶಬ್ದಗಳಲ್ಲೇ ಅಲೌಕಿಕವಾದ ಸ್ವಾರ್ಥ ಪ್ರಕಾಶಕ ಶಕ್ತಿಯಿದೆ. ತನ್ಮೂಲಕ ಫಲಾದಿಗಳನ್ನು ಕೊಡುವಂಥ ಶಕ್ತಿ ಅದರಲ್ಲಿದೆಯೆಂದು ಕೆಲವರ ಅಭಿಪ್ರಾಯ. ವೈದಿಕ ಶಬ್ದಗಳಲ್ಲಿ ಲೌಕಿಕ ಶಬ್ದಗಳಿಗಿಂತ ಭಿನ್ನವಾದ ಜ್ಞಾನ, ಭಾವ, ಕ್ರಿಯಾದಿ ಸತ್ವಗಳಿಂದ ಕೂಡಿದ ವಿಶಿಷ್ಟತರವಾದ ದಿವ್ಯಶಕ್ತಿ ವೇದಮಂತ್ರಗಳಲ್ಲಿದೆ. ಇದನ್ನೇ ಕವೀಂದ್ರನಾದ ಭವಭೂತಿ–

"ಲೌಕಿಕಾನಾಂ ತು ಸಾಧುನಾಮರ್ಥಂ ವಾಗನುಧಾವತಿ ।
ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ ॥"

ಲೌಕಿಕರಾದ ಮಹಾತ್ಮರ ಮಾತು ಅರ್ಥವನ್ನನುಸರಿಸಿರುತ್ತದೆ. ಆದರೆ ಹಿಂದಿನ ಪೂರ್ವಋಷಿಗಳ ಮಾತನ್ನನುಸರಿಸಿ ಅರ್ಥವು ಓಡುತ್ತದೆ ಎಂಬ ಮಾತೂ ಅರ್ಥಜ್ಞಾನ ರಹಿತವಾದರೂ ಮಂತ್ರಶಕ್ತಿ ಫಲಕಾರಿಯೆಂಬುದನ್ನೇ ತಿಳಿಸುತ್ತದೆ.

ಇದೇ ಅರ್ಥದಲ್ಲಿ ಮೂಲಭೂತವಾದ ಪ್ರಮಾಣವು ಋಙ್ಮಂತ್ರದಲ್ಲಿದೆ.

"ಅಮನ್ಯ ಮಾನಾಽಅಭಿಮನ್ಯ ಮಾನೈರ್ನಿರ್ಬ್ರಹ್ಮಭಿರಧಮೋ ದಸ್ಯುಮಿಂದ್ರ"

(ಋ. ೧, ೩೩, ೯)

ಈ ಮಂತ್ರಕ್ಕೆ ಪೂರ್ವಾಚಾರ್ಯ ವಿದಿತವಾದ ಋಷಿ ವೇದಿತವಾದ ಅರ್ಥ ಹೀಗಿದೆ. ಎಲೇ ಇಂದ್ರನೇ ! "ಅಮನ್ಯಮಾನಾನ್ ಅರ್ಥಜ್ಞಾನಾದಿ ರಹಿತಾನಪಿ ಪುರುಷಾನ್ ಅಭಿಮನ್ಯಮಾನೈಃ" ಆ ಉಪಾಸಕರಾದ ಆ ಆತ್ಮೀಯರನ್ನಾಗಿ ತಿಳಿಯುವ ಹಾಗೂ ತನ್ನವರೆಂಬ ಅಭಿಮಾನದಿಂದ ಅವರನ್ನು ರಕ್ಷಿಸಲು ಸಮರ್ಥವಾದ "ಬ್ರಹ್ಮಭಿಃ," ಮಂತ್ರಗಳಿಂದ "ತ್ವಂ" ನೀನು "ದಸ್ಯುಂ" ಹಿಂಸಕನಾದ ಶತ್ರುವನ್ನು "ನಿರಧಮಃ" ದೂರೀಕರಿಸಿದ್ದೀಯೆ. ಇದರಿಂದ ಮಂತ್ರಗಳಿಗೆ ತಮ್ಮ ಕಾರ್ಯಗಳನ್ನು ಸಿದ್ಧಿಸುವ ಸಾಮರ್ಥ್ಯವು ಸ್ವತಃ ಸಿದ್ಧವಾಗಿದೆಯೆಂದು ತಿಳಿಯುತ್ತದೆ.

ಫಲಪ್ರಾಪ್ತಿಯ ವಿಷಯದಲ್ಲಿ ಕೃತಿಯೇ ಪ್ರಧಾನವೆಂಬುದು ವಸ್ತುಸಿದ್ಧ. ಅಜ್ಞಾನದಿಂದ ಸೇವಿಸಿದ್ದಾದರೂ ವಿಷಾಮೃತಗಳು ಫಲವನ್ನು ಆಗಲೇ ನೀಡುತ್ತವೆಯೆಂಬುದು ಪ್ರತ್ಯಕ್ಷ ಸಿದ್ಧವಷ್ಟೆ ? ಹುಲ್ಲಿನ ರಾಶಿಯಲ್ಲಿ ಅಜ್ಞಾನದಿಂದ ಅಕಸ್ಮಾತ್ ಬೆಂಕಿಬಿದ್ದರೂ ಸುಡುವದಷ್ಟೆ? ಅಂತೆಯೇ ಅಜ್ಞಾನಿಗಳು ಸ್ಮರಿಸಿದ ಜಪಮಂತ್ರ ನಾಮ ಮಂತ್ರಾದಿಗಳು, ಅಂತೆಯೇ ಹೊಲ ಮೊದಲಾದವುಗಳಲ್ಲಿ ಮಾಡಿದ ಕೃಷ್ಯಾದಿಗಳು ಅಜ್ಞಾನದಿಂದ ಬಿತ್ತಿದರೂ ಫಲ ಕೊಡುತ್ತದೆಂಬುದು ಪ್ರತ್ಯಕ್ಷ ದೃಷ್ಟವಲ್ಲವೇ. ಆದ್ದರಿಂದ ಯಾವುದೇ ಕರ್ಮದ ವಿಷಯದಲ್ಲಿ ವಿಶಿಷ್ಟ ಜ್ಞಾನದಿಂದ ಮಾಡಿದಾಗ ವಿಶಿಷ್ಟವಾದ ಫಲ ಸಿಗುತ್ತದೆಂಬುದೂ ಲೋಕಸಿದ್ಧವಾಗಿದೆ. "ಕ್ರಿಯಾಧೀನಂ ಫಲಂ".

ವಸ್ತುತಃ ವೇದಮಂತ್ರಾದಿಗಳ ವಿಷಯದಲ್ಲಿ ಅವುಗಳ ಅರ್ಥಜ್ಞಾನಕ್ಕಾಗಿಯೇ ಪ್ರತ್ಯಕ್ಷ ರೂಪರಾದ ಈ ವೇದಮಂತ್ರಾಕ್ಷರಗಳ ಅವಲಂಬನ. ಅಂದರೆ ಉದಾತ್ತಾದಿ ಸ್ವರಗಳನ್ನು ಚಾಚೂ ತಪ್ಪದೇ ಉಚ್ಚರಿಸಲು ಗುರು ಮುಖದಿಂದ ಪಾಠ. ಅದು ಜಪಯಜ್ಞಾದಿಗಳಿಗೆ ಪ್ರಶಸ್ತವಾಗಿದೆ. ಅಂದರೆ ಮಂತ್ರಾರ್ಥಜ್ಞಾನವಿಲ್ಲದಿದ್ದರೂ ಶ್ರದ್ಧೆಯಿಂದ ಜಪಿಸಿದ ಜಪ ಹಾಗೂ ಕರ್ತವ್ಯಬುದ್ಧಿಯಿಂದ ಮಾಡಿದ ಸಂಧ್ಯಾವಂದನಾದಿಗಳ ಮಂತ್ರಜಪಾದಿಗಳು ಸರ್ವಾತ್ಮನಾ ನಿರರ್ಥಕಗಳಾಗಲು ಶಕ್ಯವಿಲ್ಲ. ಬಾಲಕನು ಐದನೇ ವರ್ಷದಲ್ಲಿಯೋ ಎಂಟನೇ ವರ್ಷದಲ್ಲಿಯೋ ಉಪನೀತನಾಗಿ ಸಂಧ್ಯೋಪಾಸನಾದಿ ನಿತ್ಯಕರ್ಮದಲ್ಲಿ ವಿಹಿತವಾದ ಗಾಯತ್ರೀ ಜಪವನ್ನು ತದರ್ಥಜ್ಞಾನಪೂರ್ವಕವಾಗಿ ಜಪಿಸಲು ಅಸಮರ್ಥನಾಗಿದ್ದಾಗ ನಿರರ್ಥಕವಾದ ಆ ಅನುಷ್ಠಾನವನ್ನು ನಡೆಸಲು ಹ್ಯಾಗೆ ಸಮರ್ಥನಾದಾನು ಆಚಾರ್ಯ ? ಗುರುವಾದರೂ ನಿರರ್ಥಕವಾದ ಆ ಕರ್ತವ್ಯದಲ್ಲಿ ಬಟುವನ್ನು ಪ್ರೇರಿಸಿಯಾನು ? ಎಂಬುದು ವಿಚಾರಾಸ್ಪದವೇ ಸರಿ. ಆ ಕರ್ಮ ನಿರರ್ಥಕವಾಗಿದ್ದರೆ ಅದು ವೃಥಾ ಕಾಲಕ್ಷೇಪವನ್ನು ಯಾಕೆ ವಿಧಿಸಿದ್ದರು. ಶಾಸ್ತ್ರವೂ "ಅಹರಹಃ ಸಂಧ್ಯಾಮುಪಾಸೀತ" ಎಂದು ಏಕೆ ವಿಧಿಸುತ್ತಿತ್ತು ? ಅಂತೂ ಅರ್ಥಜ್ಞಾನವಿಲ್ಲದಿದ್ದರೂ ಆ ಕರ್ತವ್ಯವನ್ನು ಆಚರಿಸಲೇಬೇಕೆಂದಾಯಿತು. ಅಥವಾ ಅದು ನಿತ್ಯಕರ್ಮವಾದ್ದರಿಂದ ಫಲಾಪೇಕ್ಷೆಯಿಲ್ಲದೇ ಮಾಡಬೇಕಾದ ಕರ್ತವ್ಯ. ಅಂತೂ ಕರ್ತವ್ಯವನ್ನು

ಹ್ಯಾಗಾದರೂ ಮಾಡಲೇಬೇಕೆಂದಾಯಿತು. ಇದನ್ನೇ ಜ್ಞಾನಯೋಗಾದಿ ಗಳಿಗೂ ಅನ್ವಯಿಸಬೇಕೆಂಬುದು ಶಾಸ್ತ್ರೀಯವಾದ ತತ್ವ.

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾ" ಇಲ್ಲಿ ಕರ್ಮವನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛಿಸಬೇಕು. ಹೀಗೆ ಕರ್ಮವನ್ನು ವಿಧಿಸಿದೆ.

॥ ವೇದಾರ್ಥಜ್ಞಾನೇ ತದನುಭಾವಪರ್ಯವಸಾಯಿತಾ ॥
(ವೇದಾರ್ಥಜ್ಞಾನದಲ್ಲಿ ತದನುಭಾವವೇ ಕೊನೆ)

ಕೇವಲ ಶಬ್ದಾರ್ಥಜ್ಞಾನಮಾತ್ರದಿಂದ ಪೂರ್ಣತೆಯನ್ನೂ ಸಾರ್ಥಕತೆಯನ್ನೂ ಹೊಂದಿದಂತಾಗುವದಿಲ್ಲ. ಆ ಪೂರ್ಣಾತ್ಮನಾದ ವಸ್ತುವಿನ ತತ್ವತ್ರಯ ಸಾಮರಸ್ಯವನ್ನು ತಿಳಿದಾಗ ಮಾತ್ರ ಅದು ಪೂರ್ಣವಾಗುತ್ತದೆ. ಆದ್ದರಿಂದ ಆ ಮಂತ್ರಗಳ ಅರ್ಥಾನುಭವ ಪರ್ಯವಸಾಯಿತಾ ಸಂಪಾದನೆಗಾಗಿಯೇ ಎಲ್ಲ ವೇದಶಾಸ್ತ್ರಗಳ ಅಧ್ಯಯನ ಹಾಗೂ ಅದರ ಅರ್ಥಜ್ಞಾನ ಸಂಪಾದನೆ ಮುಖ್ಯವಾದದ್ದು.

"ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿವಿಶ್ವೇನಿಷೇದುಃ ।
ಯಸ್ತನ್ ನ ವೇದ ಕಿ ಮೃಚಾಕರಿಷ್ಯತಿಯಇತ್ ತದ್ ವಿದುಸ್ತಇಮೇ ಸಮಾಸತೇ ॥"
(ಋ. ೧, ೧೬೪, ೩೯)

ಪರಮಾಕಾಶದಲ್ಲಿ ತುಂಬಿರುವ ಮಂತ್ರಾಕ್ಷರಗಳಲ್ಲಿ ಎಲ್ಲ ದೇವತೆಗಳ ನಿವಾಸವಿದೆ. ಯಾವನು ಇದನ್ನು ತಿಳಿದಿಲ್ಲವೋ ಅವನು ಮಂತ್ರದಿಂದೇನು ಮಾಡ್ಯಾನು, ಇದನ್ನು ತಿಳಿದವನು ಸಂಪೂರ್ಣ ಫಲವನ್ನು ಹೊಂದುತ್ತಾನೆ ಎಂದರ್ಥ. ಇದೇ ಅರ್ಥದ ಉಪನಿಷತ್ತಿನ ಮಂತ್ರ–

"ಸತ್ಯಂ ಜ್ಞಾನಮನಂತಂ ಬ್ರಹ್ಮ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।
ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ ॥" (ಬೃ.ಉ. ೧, ೧)

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನೇತಿ ॥"

ಪರಮಾಕಾಶದಲ್ಲಿರುವ ಸತ್ಯಜ್ಞಾನಾನಂದರೂಪೀ ಬ್ರಹ್ಮನನ್ನು ತಿಳಿದವನು ಸಕಲ ಇಚ್ಛೆಗಳನ್ನು ಪಡೆಯುವನು.

ವಾಙ್ಮನಗಳಿಗೆ ಅಗೋಚರನಾದ ಆನಂದಸ್ವರೂಪೀ ಬ್ರಹ್ಮನನ್ನು ತಿಳಿದವನು ಎಲ್ಲಿಂದಲೂ ಹೆದರುವದಿಲ್ಲ. ಇತ್ಯಾದಿ ಸಾವಿರಾರು ಪ್ರತ್ಯಕ್ಷ ಸಿದ್ಧಪ್ರಮಾಣಗಳಿವೆ. ಅದನ್ನೆಲ್ಲ ವಿವರಿಸಲು ಶಕ್ಯವಿಲ್ಲವೆಂದು ಇಲ್ಲಿಗೆ ಈ ಪ್ರಕರಣವನ್ನು ಕೊನೆಗೊಳಿಸುವೆ.

ಈಂ ಓಂ ಶ್ರೀಃ

ವೇದಾರ್ಥಕಲ್ಪ ಲತಿಕಾ ಪ್ರಾಣಪೀಠಿಕೆ

ವೇದಾರ್ಥಕಲ್ಪಲತಿಕಾ

॥ ಪ್ರಾಣಪೀಠಿಕೆಯು ॥

ಈಗ ವೇದಾರ್ಥಕಲ್ಪಲತಿಕೆಯೆಂಬ ಗ್ರಂಥವನ್ನು ಪ್ರಾರಂಭಿಸುತ್ತೇನೆ. ಈ ಗ್ರಂಥ ರಚನೆಯು ದಿಲ್ಲಿಯಲ್ಲಿರುವ ಬಿರ್ಲಾಮಂದಿರದ ಸಮೀಪದಲ್ಲಿರುವ ಹಿಂದೂ ಮಹಾಸಭಾ ಭವನದಲ್ಲಿ ಸಂವತ್ ೨೦೧೯ (ಸನ್ ೧೯೬೨) ಆಷಾಢ ಪೂರ್ಣಿಮೆಯಲ್ಲಿ ಪ್ರಾರಂಭಿಸಿ ಕಾರ್ತಿಕ ಪೂರ್ಣಿಮೆಗೆ ಮುಗಿದಿದೆ. ಈ ಚಾತುರ್ಮಾಸ್ಯ ಪೂರಾ ಕೇವಲ ಹಾಲು, ಹಣ್ಣುಗಳನ್ನು ಸೇವಿಸುತ್ತಿದ್ದು ನಿಯಮ ಪೂರ್ವಕವಾದ ವರ್ತನೆಯಲ್ಲಿದ್ದೆ.

ಇದರ ವೈಶಿಷ್ಟ್ಯವೆಂದರೆ ನನ್ನ ಇತರ ಗ್ರಂಥಗಳಿಗಿಂತಲೂ ಇದು ವಿಚಿತ್ರವೂ ವೈಶಿಷ್ಟ್ಯಪೂರ್ಣವೂ ಆಗಿದೆ. ಎಲ್ಲ ವೇದಭಾಷ್ಯಗ್ರಂಥಗಳೂ ಪ್ರಾಯಃ ಗದ್ಯಾತ್ಮಕವಾಗಿವೆ. ಕೇವಲ ಮಾಧ್ವಋಗ್‌ಭಾಷ್ಯ ಒಂದೇ ಪದ್ಯಾತ್ಮಕವಾದದ್ದು ಕಂಡು ಬರುತ್ತಿದೆ. ಅದರಲ್ಲಿ "ಅಗ್ನಿಮೀಳೇ ಪುರೋಹಿತಂ" ಎಂದು ಆರಂಭಗೊಂಡು ಕ್ರಮವಾಗಿ ನಾಲ್ಕುನೂರಾ ನಲ್ವತ್ತೊಂಭತ್ತು (೪೪೯) ಮಂತ್ರಗಳಿಗೆ ಮಾತ್ರ ಭಾಷ್ಯವಿದೆ. ಅದನ್ನು ನೋಡಿ ಅದೇ ಮಾರ್ಗವನ್ನನುಸರಿಸಿ ನನಗೂ ಒಂದು ಪದ್ಯಾತ್ಮಕ ಭಾಷ್ಯವನ್ನು ಬರೆಯಬೇಕೆಂದೆನಿಸಿತು. ಇದೂ ಸಹ ನನ್ನ ಪೂಜ್ಯ ಸದ್ಗುರುಗಳಾದ ಕಾವ್ಯಕಂಠವಾಸಿಷ್ಠ ಗಣಪತಿಮುನಿಗಳ ಅನುಗ್ರಹವೆಂದೇ ನಾನು ಭಾವಿಸುತ್ತೇನೆ. ಅವರಿಗೆ ಪದ್ಯಕಾವ್ಯದಲ್ಲಿಯೇ ವಿಶೇಷ ಆಸಕ್ತಿ ಇತ್ತು. ಉಮಾಸಹಸ್ರಾದಿ ಪದ್ಯಕಾವ್ಯಗಳನ್ನು ಬರೆದೇ ತಮ್ಮ ಕಾವ್ಯಕಂಠ ಎಂಬ ಹೆಸರನ್ನು ದೃಢೀಕರಿಸಿದ್ದರು.

ಈ ಕಲ್ಪಲತೆ ಎಲ್ಲ ವೇದಗಳ ಮೂಲಭೂತವಾದ ಬ್ರಾಹ್ಮಣರಿಗೆ ಉಪನಯನದಲ್ಲಿ ಆವಶ್ಯಕವಾಗಿ ಉಪದಿಷ್ಟವಾದ ಎಲ್ಲ ವೇದಗಳ ಅಧ್ಯಯನ ಹಾಗೂ ಯಜ್ಞಗಳಲ್ಲಿ ಪ್ರಾಧಾನ್ಯವಾಗಿರುವ, ವೇದಬೀಜವೆನಿಸಿಕೊಂಡ ಗಾಯತ್ರೀಮಂತ್ರ ಮುಖದಿಂದಲೇ ಪ್ರಾರಂಭವಾಗಿದೆ. ಸಂವಿದ್ರೂಪವೂ ಚೇತನಾತ್ಮಕವೂ ಆದ ಗಾಯತ್ರೀ ಮಾತೆಯ ಅನುಗ್ರಹದಿಂದಲೇ ಪ್ರಾರಂಭವಾಗಿ ಸರ್ವಜ್ಞಕಲ್ಪವೂ ಸರ್ವಸಂವಿತ್ಪ್ರಕಾಶಕವೂ ವಿಶೇಷವಾಗಿ ಋಗ್ವೇದಾದಿಗಳಲ್ಲಿ ವಾಗ್ರೂಪದಿಂದ ವಿಜೃಂಭಿಸುತ್ತಿರುವ ವಾಗ್ದೇವತಾ ಶಕ್ತಿಯುಳ್ಳ ಮಂತ್ರಗಳ ಸಂಗ್ರಹದಿಂದಲೇ ವೇದಾರ್ಥರೂಪ ಫಲವನ್ನು ನೀಡುವ ಈ ಕಲ್ಪಲತೆ ಸರ್ವಸತ್ಪಾರ್ಥಸಂವಿತ್ ಪ್ರದಾಯಿನಿಯಾಗಲಿ ಎಂದು ಆಶಿಸಿದ್ದೇನೆ.

ಈ ಗ್ರಂಥದಲ್ಲಿ ೩೨ ಕಲೆಗಳಿವೆ. ಪ್ರತ್ಯೇಕ ಕಲೆಯಲ್ಲಿ ಶ್ಲೋಕಗಳೂ ೩೨ ಇವೆ. ಹೀಗೆ ಸಮಗ್ರವಾದ ಈ ಗ್ರಂಥದಲ್ಲಿ ೧೦೨೪ ಶ್ಲೋಕಗಳಿವೆ. ಪ್ರತಿಪಾದನೆಗೆ ಪ್ರಮಾಣಭೂತವಾದ ೮೪ ಮಂತ್ರಗಳು ಪದಸಹಿತವಾಗಿ ಬಂದಿವೆ.

ಈ ಗ್ರಂಥದಲ್ಲಿ, ಶಾರ್ದೂಲವಿಕ್ರೀಡಿತ, ಸ್ರಗ್ಧರಾ, ವಸಂತತಿಲಕಾ, ಇಂದ್ರವಜ್ರಾ, ಉಪೇಂದ್ರವಜ್ರಾ, ಉಪಜಾತಿ ಹೀಗೆ ೬ ವೃತ್ತಗಳ ಪದ್ಯಗಳು ಇವೆ.

ಈ ಸಂಖ್ಯೆಯು ಪೂರ್ಣ ಕಲೆಯಿಂದ ಕೂಡಿದ್ದು ಪೂರ್ಣತೆಯನ್ನು ಹೊಂದಿದೆ. ಹಾಗಾಗಿ ಒಂದೊಂದು ಕಲೆಯೂ ಪೂರ್ಣಸಂಖ್ಯೆಯಿಂದ ಕೂಡಿದ್ದೇ ಆಗಿದೆ. ಆದರ ಈ ಲಕ್ಷಣವು ಗಣಿತಶಾಸ್ತ್ರ ಸಂಕೇತವಾಗಿ ವಸ್ತುತತ್ವ ಸಿದ್ಧವಾಗಿದೆ. ಅದು ಹೇಗೆಂದರೆ ಹುಣ್ಣಿಮೆಯಂದು ಚಂದ್ರನಿಗೆ ೧೬ ಕಲೆಗಳು ಇರುತ್ತವೆ. ಆಮೇಲೆ ಕೃಷ್ಣಪ್ರತಿಪದೆಯಿಂದ ಅಮಾವಾಸ್ಯೆಯವರೆಗೆ ದಿನಕ್ಕೊಂದು ಕಲೆಯಂತೆ ಕ್ಷೀಣಿಸುತ್ತಾ ಅಮಾವಾಸ್ಯೆಯಂದು ಒಂದೇ ಕಲೆಯು ಉಳಿಯುತ್ತದೆ. ಅರ್ಧ (೧/೨) ಕಲೆಯಾಗಲೀ ಸಾರ್ಧ (೧೧/೨) ಕಲೆಯಾಗಲೀ ಇರದೇ ಇರುವದರಿಂದ ಆ ಹದಿನಾರು ಪೂರ್ಣಸಂಖ್ಯೆಯೆಂದು ನಿಶ್ಚಯಿಸಿದೆಯೆಂಬುದು ಶಾಸ್ತ್ರಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಪ್ರಸಿದ್ಧವಾಗಿದೆ.

"ಷೋಡಶಕಲಃ ಸೋಮ್ಯ ಪುರುಷಃ ಪಂಚದಶಾಹಾನಿಮಾಽಶೀಃ ಕಾಮಮಪಃ ಪಿಬನ್ನಪಿಬತೋ ವಿಚ್ಛೇತ್ಸ್ಯತೇ" (ಛಾಂ.ಉ. ೬, ೭, ೧) "ಸಹ ಪಂಚದಶಾಹಾನಿ ನಾಶಾ ಚ, ೦" ಇತ್ಯಾದಿ

"ಏವ ಸೋಮ್ಯತೇ ಷೋಡಶಾನಾಂ ಕಲಾನಾಮೇಕಾಕಲಾ ಅತಿಶಿಷ್ಟಾಽಭೂತ್" (ಛಾಂ.ಉ.೬,೭,೬)

"ಇಹೈವಾಂತಃ ಶರೀರೇ ಸೋಮ್ಯ ಸ ಪುರುಷಃ ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವಂತೀತಿ" (ಪ್ರ.ಉ. ೨, ೨)

ಹಾಗೆಯೇ ಇನ್ನೊಂದೆಡೆ,

"ಧ್ರುವೈವಾಸ್ಯ ಷೋಡಶೀಕಲಾಂ", "ಆತ್ಮೈವಾಸ್ಯ ಷೋಡಶೀಕಲಾಂ" ಇವೆಲ್ಲ ಪ್ರಸಿದ್ಧವಾಗಿವೆ.

ಇದರಂತೆ ವಿದ್ಯೆಯೂ ೬೪ ಕಲಾತ್ಮಿಕವಾಗಿದೆ. ಇಲ್ಲಿ ಇವೆರಡೂ ಸೇರಿ ೧೦೨೪ ಎಂಬ ಒಂದೇ ಸಂಖ್ಯೆಯಿಂದ ತಿಳಿಯುತ್ತದೆ. ಈ ಷೋಡಶ ಸಂಖ್ಯೆ ವಾಗರ್ಥಾತ್ಮವಾದ ನಾಮ ರೂಪಗಳ ಶಕ್ತಿ ಶಿವಾತ್ಮಕರಾದ ಗೌರೀರುದ್ರರ ಯೋಗದಿಂದ ೩೨ ಸಂಖ್ಯೆಯುಳ್ಳವುಗಳಾಗುತ್ತದೆ. ಇಂಥ ಮೂವತ್ತೆರಡು ಕಲೆಗಳಿಂದ ಪೂರ್ಣವಾಗಿ ೧೦೨೪ (೧೬x೬೪=೧೦೨೪, ೩೨x೩೨=೧೦೨೪) ಆಗುತ್ತದೆ. ಇದೇ ಸಂಖ್ಯೆಯಲ್ಲಿ ಷೋಡಶ ಕಲಾತ್ಮಿಕವಾದ ೬೪ ಕಲೆಗಳು ಸೇರಿವೆಯೆಂದು ತಿಳಿಯುತ್ತದೆ. ಆದ್ದರಿಂದಲೇ ವಾಕ್ಕೆಂಬುದು, ಷೋಡಶಸ್ವರಾತ್ಮಿಕವಾಗಿಯೂ ೬೪ ವರ್ಣಗಳಿಂದ ಕೂಡಿದ್ದಾಗಿದೆ.

ವರ್ಣಮಾಲೆಯಲ್ಲಿ ಅ ಕಾರದಿಂದ ಅಃ ವಿಸರ್ಗದವರೆಗೆ ೧೬ ಸ್ವರಗಳು ಪ್ರಸಿದ್ಧವೇ ಆಗಿವೆ. ಹಾಗೆಯೇ ಸುಪ್ರಸಿದ್ಧ ವೈಯಾಕರಣಿ ಪಾಣಿನ್ಯಾಚಾರ್ಯರು "ಅಇಉಣ್, ಋಲೃಕ್,"

ಇತ್ಯಾದಿ ಸೂತ್ರಗಳಿಂದ ಸಂಶೋಧಿತವಾದ ೬೪ ವರ್ಣಗಳನ್ನು ತಿಳಿಸಿದ್ದಾರೆ. ಈ ಶಂಭುಮತದಲ್ಲಿ ೬೩ ಅಥವಾ ೬೪ ವರ್ಣಗಳೆಂದು, "ತ್ರಿಷಷ್ಟಿಶ್ಚತುಃಷಷ್ಟಿರ್ವಾ ವರ್ಣಾಃ ಶಂಭುಮತೇ ಮತಾಃ" (ಪಾ.ಶಿಕ್ಷಾ.)

ಈ ಅರ್ಥವನ್ನೇ ತಿಳಿಸುತ್ತಿರುವ ದೀರ್ಘತಮಾ ಮಹರ್ಷಿದರ್ಶನ ಋಙ್ಮಂತ್ರ ಹೀಗಿದೆ.

"ಗೌರೀರ್ಮಿಮಾಯ ಸಲಿಲಾನಿ ತಕ್ಷತೀ ಏಕಪದೀ, ದ್ವಿಪದೀ, ಸಾ ಚತುಷ್ಪದೀ ।
ಅಷ್ಟಾಪದೀ, ನವಪದೀ, ಬಭೂವುಷೀ ಸಹಸ್ರಾಕ್ಷರಾ, ಪರಮೇ ವ್ಯೋಮನ್ ॥"

(ಋ.ಮಂ. ೧, ೧೬೪, ೪೧)

ಇಲ್ಲಿ "೧-೨-೪-೮-೯" ಸೇರಿ "೨೪" ಆಗುವದು. "ಸಹಸ್ರಾಕ್ಷರಾ" ಎಂಬುದು ಸ್ಪಷ್ಟವಾಗಿದೆ. ಅಂತೂ ೧೦೨೪ ಸಂಖ್ಯೆ ಸರಿಯಾಗಿದೆ.

ಆ ಗೌರೀರುದ್ರಾಣೀರೂಪಿಯಾದ ಮಾಧ್ಯಮಿಕಾ ವಾಕ್ ದೇವತೆಯು ವಿದ್ಯುನ್ಮಯಿಯೂ ಅಕ್ಷರಾತ್ಮಿಕಳೂ, ಸಂಖ್ಯಾತತ್ವಾತ್ಮಿಕಳು ಎಂಬುದು ವೇದದ ಹೃದಯ, ತಿರುಳು. "ವಾಗ್ ಯಾ ಮಾಧ್ಯಮಿಕಾ" ಎಂದು ಯಾಸ್ಕಾಚಾರ್ಯರು ನಿರುಕ್ತದಲ್ಲಿ ಹೇಳಿದ್ದು ಸರಿಯಾಗಿದೆ.

ಈ ಮಂತ್ರವನ್ನು ಇದೇ ಗ್ರಂಥದಲ್ಲಿ ೬೨ ಶ್ಲೋಕಗಳಲ್ಲಿ ವಿಸ್ತಾರವಾಗಿ ವ್ಯಾಖ್ಯಾನಿಸಿದ್ದರೂ ಈ ಸೂಕ್ಷ್ಮತಮವಾದ ತತ್ವಾರ್ಥವನ್ನು ತಿಳಿಯದೇ ಈ ಮೊದಲೇ ೧೦೨೪ ಶ್ಲೋಕಗಳಿಂದ ಈ ಗ್ರಂಥಕಲ್ಪಲತೆಯನ್ನು ಮುಗಿಸಿದ್ದೆ. ಈ ಭೂಮಿಕೆಯನ್ನು ಬರೆಯಲುದ್ಯುಕ್ತನಾದಾಗ ಅಕಸ್ಮಾತ್ತಾಗಿ ಈ ತತ್ವಸತ್ವದಿಂದ ಕೂಡಿದ ಮಂತ್ರ ಸ್ಫುರಿಸಿತು. ಆಗ ವ್ಯಾಖ್ಯಾನಿಸಿ ಮುಗಿಸಿದ್ದಾದರೂ ಈ ಮಂತ್ರದ ಈ ಅರ್ಥ ಸ್ಮರಣೆಗೆ ಬಂದಿದ್ದರಿಂದ ನನ್ನ ಅಂತರಾತ್ಮಕ್ಕೆ ತುಂಬಾ ಸಂತಸವುಂಟಾಯಿತು. ಇದು ಪಟನಾ ನಗರದಲ್ಲಿಯ ಸದಾಕತಾಶ್ರಮ, ಶ್ರೀರಾಜೇಂದ್ರಪ್ರಸಾದರ ಮನೆಯಲ್ಲಿ ದಿ. ೨೪.೧೧.೬೨ ರಂದು ಪ್ರಾತಃಕಾಲದಲ್ಲಿ ಸ್ಫುರಿಸಿತು. ಆಮೇಲೆ ಕಲ್ಪಲತಾ ಗ್ರಂಥದಲ್ಲಿ ಗೌರೀರ್ಮಿಮಾಯ ಎಂಬ ಮಂತ್ರಭಾಷ್ಯದಲ್ಲಿ ನೂತನವಾಗಿ ಶ್ಲೋಕವನ್ನು ರಚಿಸಿ ಆಗಲೇ ಕೂಡಿಸಿಟ್ಟೆ.

"ಅತ್ರೈಕ-ದ್ವಿ-ಚತುಃಪರಾಷ್ಟ-ನವಭಿರ್ಯೋಗಾಚ್ಚತುರ್ವಿಂಶತಿ ।
ಗೌರೀವಾಕ್ ಚ ತದುತ್ತರಾ ಪ್ರತಿಬಭೌ ಪೂರ್ಣಾ ಸಹಸ್ರಾಕ್ಷರಾ ॥
ತಸ್ಮಾತ್ ತತ್ಪರಿಸಂಖ್ಯಯೈವ ಪರಯಾ ಸಂಪೂರ್ಣತಾಮಭ್ಯಗಾದ್ ।
ವೇದಾತ್ ಕಲ್ಪಲತೇವ ಪೂರ್ಣಕಲಯಾ ತತ್ವಾರ್ಥ ಸತ್ವೇಽನ್ವಿಯಾತ್ ॥"

ಈ ಶ್ಲೋಕವನ್ನು ೯ನೇ ಕಲೆಯ ಕೊನೆಯ ೬೨ ನೇ ಶ್ಲೋಕವಾಗಿ ಇಟ್ಟಿದೆ. ಒಮ್ಮೆ ಪ್ರವಚನದಲ್ಲಿ ಶ್ರೀ ರಾಜೇಂದ್ರ ಪ್ರಸಾದರವರಿಗೂ ಈ ನೂತನ, ವೈದಿಕ ಮಂತ್ರಾರ್ಥ ತತ್ವರೂಪ ಶ್ಲೋಕವನ್ನು ವಿವರಿಸಿದೆ. ಅವರೂ ಇದನ್ನು ಕೇಳಿ ನೂತನ ಗಣಿತ ತತ್ವವುಳ್ಳದ್ದಿದೆಂದು ಆಶ್ಚರ್ಯವನ್ನೂ ಸಂತೋಷವನ್ನೂ ಒಮ್ಮೆಲೇ ಅನುಭವಿಸಿದರು. ಇದು

ಪರಗುಣೋತ್ಕರ್ಷವನ್ನು ನೋಡಿ ಸಂತೋಷಪಡುವ ಗುಣವಂತರ ಸ್ವಭಾವಸಿದ್ಧವಾದ ವಿಶಿಷ್ಟಗುಣವಾಗಿದೆ. ಶ್ರೀರಾಜೇಂದ್ರಪ್ರಸಾದರ ಈ ವಿಶಿಷ್ಟ ಗುಣವನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ.

॥ ವೇದಾರ್ಥೇ ತತ್ತ್ವತ್ರಯಸಾಮರಸ್ಯಯೋಗಃ ॥

ಒಬ್ಬನೇ ಆದ ಪರಮವಸ್ತು ಸ್ವರೂಪಿ ಪ್ರತ್ಯಗಾತ್ಮನ ವಿಭೂತಿ ರೂಪವಾದ ವಸ್ತುತ್ರಯಗಳನ್ನು ವೇದ ಹೇಳಿದೆ. ಅವುಗಳ ಸತ್ವರೂಪ ತತ್ವ ಹೀಗಿದೆ.

"ಪ್ರತ್ಯಙ್ದೇವಾನಾಂ ವಿಶಃ ಪ್ರತ್ಯಙ್ ಉದೇಷಿ ಮಾನುಷಾನ್ ।
ಪ್ರತ್ಯಙ್ ವಿಶ್ವಂ ಸ್ವರ್ದೃಶೇ ॥" (ಋ. ೧, ೫೦, ೫)

ಎಲ್ಲರಿಗೆ ದರ್ಶನ ಕೊಡುವದಕ್ಕಾಗಿ ನೀನು ಪಶ್ಚಿಮಾಭಿಮುಖವಾಗಿ ಉದಯಿಸುತ್ತೀಯೆ. ಎಲ್ಲರೂ ಪೂರ್ವಾಭಿಮುಖಿಯಾಗಿ ನಿನ್ನನ್ನು ಕಾಣುತ್ತಾರೆ.

"ಸುಸಂದೃಶಂ ತ್ವಾ ವಯಂ ಪ್ರತಿ ಪಶ್ಯೇಮ ಸೂರ್ಯ ।
ವಿಪಶ್ಯೇಮ ನೃಚಕ್ಷಸಃ ॥" (ಋ. ೧೦, ೧೫೮, ೫)

"ಪುರುಷ ಏವೇದಂ ಸರ್ವಂ ಯದ್ ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥" (ಋ. ೧೦, ೯೦, ೨)

ಈ ಮಂತ್ರಗಳು ಆ ಮೂರು ತತ್ವಗಳನ್ನೇ ಸಾಂಕೇತಿಕವಾಗಿ ವೇದರಹಸ್ಯವನ್ನು ತಿಳಿಸಿ ಸಮರ್ಥಿಸುತ್ತವೆ. ಅದೇ ಮೂರು ತತ್ವಗಳು "ಆಧ್ಯಾತ್ಮಿಕ, ಆಧಿ ದೈವಿಕ, ಆಧಿಭೌತಿಕ" ಎಂಬ ಸಂಜ್ಞೆಗಳಿಂದಾಗಿ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ಎಂಬ ಸತ್ವಸಿದ್ಧವೂ ಅಚೇತನ-ಪ್ರಚೇತನ-ಸಚೇತನಗಳೆಂಬ ಸತ್ವಗಳಿಂದ ಕೂಡಿ ಜಗತ್-ಈಶ-ಜೀವಾತ್ಮ ವಸ್ತು ಸಂಬದ್ಧಗಳಾಗಿರುತ್ತವೆ. "ಇತ್ಯಧಿಭೂತಮ್, ಅಥಾಧಿದೈವತಮ್, ಅಥಾಧ್ಯಾತ್ಮಮ್" ಎಂದು ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳಲ್ಲಿ ಕಂಡು ಬರುತ್ತವೆ. ಕೆಲವೆಡೆ ಪಂಚತತ್ವಗಳೂ ಮತ್ತೂ ಕೆಲವು ಕಡೆ ಬೇರೆಯಾದ ಎರಡು ತತ್ವಗಳೂ ಕಂಡು ಬರುತ್ತವೆ.

"ಅಧಿಲೋಕಮಧಿಜ್ಯೌತಿಷಮಧಿವಿದ್ಯಮಧಿಪ್ರಜಮಧ್ಯಾತ್ಮಮ್" "ಅಥಾಧ್ಯಕ್ಷರಮ್" (ಮೋ.ಉ.) "ಅಥಾಧಿಯಜ್ಞಮ್," ಹೀಗೆ ೧) ಅಧಿಲೋಕ, ೨) ಅಧಿಜ್ಯೋತಿಷಂ, ೩) ಅಧಿವಿದ್ಯ, ೪) ಅಧಿಪ್ರಜ, ೫) ಅಧ್ಯಾತ್ಮ, ೬) ಅಧ್ಯಕ್ಷರ, ೭) ಅಧಿಯಜ್ಞ ಹೀಗೆ ಏಳು ಬಗೆಯಾಗಿ ವಿವರಿಸಿದರೂ ಕೂಡಾ ತತ್ವವೇತ್ತರಾದ ವೇದಾರ್ಥವಿಮರ್ಶನ ಪರಾಯಣರು ಇವುಗಳನ್ನೆಲ್ಲಾ ಮೂರು ಅರ್ಥ ಗಳಲ್ಲಿಯೇ ಅಂತರ್ಭಾವ ಮಾಡುತ್ತಾರೆ. "ತ್ರಯೋಽರ್ಥಾಃ ಸರ್ವವೇದಾನಾಂ" ಎಲ್ಲ ವೇದಗಳಿಗೆ ಮೂರು ಅರ್ಥ, ಎಂಬ ಮಾತನ್ನೇ ಪ್ರಮಾಣೀಕರಿಸುತ್ತಾರೆ. ಹೀಗಿದ್ದರೂ ಈ ಮೂರೂ

ತತ್ತ್ವಗಳು ಒಂದೇ ಆದ ಪರಮ ವಸ್ತುತತ್ತ್ವದಲ್ಲಿ ವ್ಯಸ್ತ-ಸಮಸ್ತ ರೂಪದಿಂದ ಅಂತರ್ಭಾವವಾಗುತ್ತವೆ. ತಾದಾತ್ಮ್ಯದಿಂದಲೂ ಸಾಮರಸ್ಯದಿಂದಲೂ ಸತ್ಯವೆಂಬ ಬಗ್ಗೆ ನಿರ್ವಿವಾದವಾಗಿ ಎಲ್ಲ ಶಾಸ್ತ್ರಗಳೂ ಸಾರುತ್ತಿವೆಯೆಂಬುದು "ಸರ್ವವಿದ್ವತ್‌ಸಮ್ಮ"ತವಾದ ವಿಷಯ.

ಆದ್ದರಿಂದ ಈ ಗ್ರಂಥದಲ್ಲಿ ಎಲ್ಲ ವೇದಮಂತ್ರಗಳಿಗೆ ತತ್ತ್ವತ್ರಯ ಯೋಗದಿಂದಲೇ ಅರ್ಥೈಸಲಾಗಿದೆ ಎಂಬುದು ಸಂಕ್ಷೇಪ.

ಮೊದಲನೆಯ ಪ್ರಾರ್ಥನೆ :

ಈ ಪ್ರಾರ್ಥನೆಯಲ್ಲಿ ಮುಕ್ತಕಂಠವಾಗಿ ಯಥಾರ್ಥವಾಗಿ ಆರ್ಷೇಯವಾದ, ಸೌಮ್ಯ-ವಾದ, ಸಮಭಾವದಿಂದ ಸಹೃದಯದಿಂದ ಹೇಳುತ್ತೇನೆ. ಇಲ್ಲಿಯ ವಿಷಯ ಕೇವಲ ತತ್ತ್ವಾತ್ಮಕವಾದದ್ದು. "ತತ್ತ್ವಾರ್ಥಕಂ ಕೇವಲಮ್" ಎಂದು ವೇದಾರ್ಥವನ್ನು ತಿಳಿಸುವಲ್ಲಿ ತಾತ್ತ್ವಿಕಾರ್ಥವೇ ಪ್ರಧಾನವಷ್ಟೆ.

ಹಾಗಾಗಿ ಇದರಲ್ಲಿ ಕಾವ್ಯಾಲಂಕಾರಾದಿಗಳಾಗಲೀ, ಶಬ್ದಚಿತ್ರಗಳಾಗಲೀ, ಶೃಂಗಾರಾದಿ ರಸಾವಿರ್ಭಾವಕ್ಕೆ ಅನುಕೂಲವಾಗುವಂತಾಗಲೀ ಕಥಾನಕವಾಗಲೀ ಇಲ್ಲ. ಅಂತೆಯೇ ಯಾವುದೇ ಮತದ ಖಂಡನೆ-ಮಂಡನೆ, ಅದಕ್ಕಾಗಿ ಕೆಲ ನಿಂದೆ ಅಥವಾ ಸ್ತುತಿ, ದ್ವೇಷ ಹಾಗೂ ಉದ್ವೇಗಕರವಾದ ಮಾತು ಸ್ವಲ್ಪವೂ ಇಲ್ಲಿಲ್ಲ. ಕೆಲವರು ಬೇರೆಯವರ ಮತವನ್ನು ಖಂಡಿಸಿದಾಗ ಮಾತ್ರ ಸ್ವಮತ ಪ್ರತಿಷ್ಠಾಪನೆ ಹಾಗೂ ಪ್ರಾಶಸ್ತ್ಯವಿರುತ್ತದೆಂದು, ನ್ಯಾಯ ಮೀಮಾಂಸಾದಿ ಶಾಸ್ತ್ರಗಳಲ್ಲಿರುವಂತೆ ತಿಳಿಯುತ್ತಾರೆ. ಹಾಗೆ ಈ ಗ್ರಂಥದಲ್ಲಿ ವಾದವಿವಾದಗಳಾಗಲೀ ಪೂರ್ವೋತ್ತರ ಪಕ್ಷಗಳಾಗಲೀ ಇಲ್ಲ. ಯಥಾರ್ಥವನ್ನು ತಿಳಿಸುವದಷ್ಟೇ ಇಲ್ಲಿಯ ಮುಖ್ಯ ಕಾರ್ಯವಾಗಿದೆ. ಧೀಯೋಗಾದಿ ವಿದ್ಯಾ ಪರಿಶೀಲನೆಗಾಗಿ ಯಥೋಚಿತವಾದ ಸಾಧನ ಪ್ರಕ್ರಿಯೆಗಳನ್ನು ಸಮರ್ಥಿಸಿದ್ದೇನೆ. ಇಲ್ಲಿ ವೇದಮಂತ್ರಗಳೂ ಹಾಗೂ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳು ನಿರ್ದೇಶಿಸಿದ ವಸ್ತುತತ್ತ್ವಗಳ ಯಥಾರ್ಥಸ್ಥಿತಿ ವರ್ಣಿತವಾಗಿದೆ. ಆದ್ದರಿಂದ ಈ ಪ್ರಬಂಧದಲ್ಲಿ ಅಲ್ಲಲ್ಲಿ ಅಲೌಕಿಕವಾದ ತಾತ್ತ್ವಿಕಾರ್ಥದ ಸ್ಪಷ್ಟೀಕರಣಕ್ಕಾಗಿ ಬಹಳ ಪುನರುಕ್ತಿಗಳಾಗಿವೆ. ಅವುಗಳನ್ನು ಸೌಜನ್ಯತೆಯಿಂದಲೂ ಸದ್‌ಭಾವನೆಯಿಂದಲೂ ಸ್ವೀಕರಿಸಿರಿ. ಈ ನನ್ನ ಸವಿನಯ ಪ್ರಾರ್ಥನೆಯನ್ನು ಜನತಾ ಜಗದೀಶ ಸನ್ನಿಧಿಯಲ್ಲಿ ಸಮರ್ಪಿಸುತ್ತೇನೆ. ಆದ್ದರಿಂದ ವಿದ್ವಾಂಸರೂ ವಿದ್ಯಾರ್ಥಿಗಳೇ ಆದಿಯಾಗಿ ಎಲ್ಲ ಜನರೂ ಈ ಪ್ರಾರ್ಥನೆಯನ್ನು ಸ್ವೀಕರಿಸಿರಿ. ಇತಿ ದೈವರಾತಃ.

ಅಷ್ಟೌಶ್ಲೋಕಾಃ ಎಂಟು ಶ್ಲೋಕಗಳು

॥ ಬ್ರಹ್ಮಣಸ್ಪತಿಗೆ ಶ್ರದ್ಧಾಪ್ರಸೂನಾಂಜಲಿಃ ॥

ಇಲ್ಲಿ "ಬ್ರಹ್ಮಣಸ್ಪತಿಃ" ಎಂಬ ಪದದ್ವಯದಲ್ಲಿಯ ಮೊದಲನೇ ಬ್ರಹ್ಮ ಎಂಬ ಸಂಜ್ಞೆ. ಪ್ರತ್ಯಕ್ಷ ಬ್ರಹ್ಮರೂಪಿಯೂ ವೇದಮಂತ್ರಾತ್ಮಿಕೆಯೂ ಆದ ವಾಗ್ದೇವತೆಯದೇ ಆಗಿದೆ. ಅವಳ

ಪತಿಯು ಪರಬ್ರಹ್ಮರೂಪನಾದ ಪರಮಾತ್ಮನೇ ಆಗಿದ್ದಾನೆ. ಶತಪಥಬ್ರಾಹ್ಮಣದಲ್ಲಿ "ಏಷ ಉ ಏವ ಬ್ರಹ್ಮಣಸ್ಪತಿಃ, ವಾಗ್ ವೈ ಬ್ರಹ್ಮ ತಸ್ಯಾ ಏಷ ಪತಿಃ ತಸ್ಮಾದು ಬ್ರಹ್ಮಣಸ್ಪತಿಃ," ಎಂದು (ಬೃ.ಉ. ೧.೩.೨೧) ಹೀಗೆ ನಿರ್ವಚನೆಯಿರುವದರಿಂದ ಆ ಉಭಯಾತ್ಮನೂ ವಾಚ್ಯವಾಚಕ ಅರ್ಥಸತ್ವಾನ್ವಿತನೂ ಆದ ಬ್ರಹ್ಮಣಸ್ಪತಿಯ ಸತ್ತೆಯೇ ಸಮಗ್ರವಾದ ಈ ಪ್ರಪಂಚದಲ್ಲಿಯ ಬ್ರಹ್ಮಾಂಡದಲ್ಲಿಯೂ ಪಿಂಡದಲ್ಲಿಯೂ ಪ್ರಧಾನವೆಂಬುದು ನಿತ್ಯ ಸಿದ್ಧವಾಗಿದೆ.

ಆದ್ದರಿಂದ ಈ ಕಲ್ಪಲತೆಯ ರಚನೆಗೆ ಕೇವಲವಾದ ಸ್ವಬುದ್ಧಿಯಿಂದ ಶಕ್ಯವೇ ಇಲ್ಲೆಂದು ತಿಳಿದು ಆ ಬ್ರಹ್ಮಣಸ್ಪತಿಯ ಸತ್ತೆಯೇ ಪ್ರಧಾನ ಕಾರಣವೆಂದು ತಿಳಿದು ಚೇತನಾತ್ಮಿಕವೂ ಸಂವಿತ್ಸ್ವರೂಪವೂ ಆದ ಅದನ್ನೇ ಇಚ್ಛಿಸುತ್ತಾ ಆ ಪರಮ ಪುರುಷನನ್ನೂ ಪರಾಶಕ್ತಿಯನ್ನೂ ವಂದಿಸುತ್ತಾ ನಿನ್ನ ಅನುಗ್ರಹರೂಪವಾದ ಚೇತನಾಸ್ವರೂಪವೂ ಸಂವಿತ್ತೂ ಛಂದಸ್ವತೀ ಸರಸ್ವತೀ ವಾಗ್ದೇವಿಯನ್ನು ಕರುಣಿಸು ಎಂದು ಬೇಡಿದೆ. ಮತ್ತು ಈ ಹದಿನಾಲ್ಕು ಪದ್ಯರೂಪವಾದ ಪುಷ್ಪಾಂಜಲಿಯನ್ನು ಸಾಂಜಲಿಬಂಧನಾಗಿ ಸಮರ್ಪಿಸಿದೆ.

ಇದರಿಂದ ಬ್ರಹ್ಮಣಸ್ಪತಿಯದೇ ಅಪರನಾಮ ಪರ್ಯಾಯವುಳ್ಳ ಕವೀಂದ್ರರಾದ ವಾಸಿಷ್ಠಗಣಪತಿ ಮುನಿಗಳ ಹಾಗೂ ತಂದೆ ವಿಘ್ನೇಶ್ವರನ ಹಾಗೂ ಮಾತಾಮಹನಾದ ಗಣೇಶನ ಅಂತೆಯೇ ಸರ್ವಪ್ರಧಾನನಾದ ಬ್ರಹ್ಮಣಸ್ಪತಿ ಸಂಜ್ಞೆಗೆ ಯೋಗ್ಯನಾದ ಭಗವಾನ್ ಇಂದ್ರನ ಅನುಗ್ರಹಕ್ಕಾಗಿ ಈ ಶ್ರದ್ಧಾಂಜಲಿಯು ಸಮರ್ಪಿತವಾಗಲಿ. ಮತ್ತು ಎಲ್ಲ ಗುರುವರ್ಯರ ಅನುಗ್ರಹವೂ ಲಭಿಸಲಿ ಎಂದೂ ಪುನಃ ಪುನಃ ಪ್ರಾರ್ಥಿಸುತ್ತೇನೆ.

ಇಲ್ಲಿ ೧೪ ಶ್ಲೋಕಗಳು

॥ ಆರ್ಷೇಯೋ ವೇದಧ್ವಜಃ ॥

॥ ಆರ್ಷೇಯವಾದ ವೇದಧ್ವಜವು ॥

॥ ಈಂ ಓಂ ಶ್ರೀಃ ॥

ಇದು ವೇದತ್ರಯ ಬೀಜರೂಪವಾದ ತಾರತ್ರಯಶಿರೋರೂಪವಾದ ಪ್ರಣವ ತ್ರಯಾಕ್ಷರಾತ್ಮಕವಾದ ದೈವರಾತನ ದಿವ್ಯವೂ ಆರ್ಷೇಯವೂ ಆದ ವೇದಧ್ವಜ ಚಿಹ್ನವು.

॥ ಇಲ್ಲಿ ಮಧ್ಯದಲ್ಲಿ ಓಂ ಎಂಬ ಮೊದಲನೇ ಅಕ್ಷರ ॥ (೧)

ಇಲ್ಲಿ ಮಧ್ಯದಲ್ಲಿ ವಿರಾಜಮಾನವಾಗಿರುವ ಪ್ರಣವ ಓಂಕಾರವೂ ಪ್ರಸಿದ್ಧವಾದದ್ದೇ ಆಗಿದೆ. ಯಜುರ್ಮಂತ್ರಗಳಲ್ಲಿಯೂ ನಾಲ್ಕು ವೇದಗಳಲ್ಲಿಯೂ ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿಯೂ ಪ್ರತಿಪಾದಿತವಾಗಿರುವ, ಸರ್ವವೇದ ಸಾರಭೂತವಾದ ಉದ್ಗೀಥಾದಿ ಸಾಮಸ್ವರ ಪ್ರಧಾನವೂ ಬ್ರಹ್ಮ ಆತ್ಮಾದಿ ಪರವಸ್ತು ವಾಚಕವೂ ಆಗಿದೆ.

"ಓಮಿತಿ ಬ್ರಹ್ಮ ಓಂ ಖಂ ಬ್ರಹ್ಮ ಓಮಿತ್ಯೇಕಾಕ್ಷರಂ ಬ್ರಹ್ಮ," "ಓಮಿತ್ಯೇತದಕ್ಷರಮಿದಂ ಸರ್ವಮ್" "ಓಮಿತ್ಯೇತದಕ್ಷರಮುದ್ಗೀಥಮುಪಾಸೀತ" "ಓಮಿತ್ಯೇವಂ ಧ್ಯಾಯಥ ಆತ್ಮಾನಮ್"

ಇತ್ಯಾದಿಗಳಲ್ಲಿ. ಇದರ ಮಹತ್ವ ಸ್ಪಷ್ಟವಾಗಿದೆ. ಇದೇ ವ್ಯಕ್ತವಾದ ಪ್ರಣವಾಕ್ಷರ.

"ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ । ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂಸಂಗಹೇಣ ಬ್ರವೀಮಿ, ಓಮಿತ್ಯೇತತ್" (ಕಠೋಪನಿಷತ್ ೧, ೨, ೧೫)

॥ ಮೊದಲು ಬರೆದ "ಈಂ," ಎಂಬುದು ಎರಡನೆಯದು ॥ (೨)

"ಈಂ" ಎಂಬ ಈ ಏಕಾಕ್ಷರವು ಗುಪ್ತಪ್ರಣವ ಸಂಜ್ಞಕವಾಗಿದ್ದು ತತ್ವತ್ರಯ ಸತ್ವದಿಂದ ಪೂರ್ಣವಾಗಿದೆ. ಋಗ್ವೇದದಲ್ಲಿಯಾಗಲೀ ನಾಲ್ಕು ವೇದಗಳ ಋಙ್ಮಂತ್ರಗಳಲ್ಲಾಗಲಿ "ಓಂ", ಎಂಬ ಈ ಅಕ್ಷರವು ಕಂಡು ಬರುವದಿಲ್ಲ. ಹಾಗಾಗಿ ಓಂಕಾರವು ಯಜುರ್ವೇದದ್ದೆಂದು ಹೇಳಿದೆ. ಹಾಗೆಯೇ ವೈ. ಆರಣ್ಯಕದಲ್ಲಿಯ ಬ್ರಹ್ಮಯಜ್ಞದಲ್ಲಿ "ಓಮಿತಿ ಪ್ರತಿಪದ್ಯತೇಂತ ದೇತದ್ಯಜುಃ" ಎಂದು.

ಅಂತೆಯೇ "ಭೂರ್ಭುವಃ ಸ್ವಃ", ಎಂಬ ವ್ಯಾಹೃತಿಗಳೂ ಯಜುರ್ಮಂತ್ರ ರೂಪವಾಗಿದೆ. ಆನುಪೂರ್ವಿಯಾಗಿ ಋಗ್ವೇದದಲ್ಲಿ ಪಾಠವಿಲ್ಲ. ಅಂತೆಯೇ ಓಂಕಾರವೂ ಪಠಿತವಾಗಿಲ್ಲ.

ಋಙ್ಮಂತ್ರಗಳಲ್ಲಿ ಪರಬ್ರಹ್ಮರೂಪಿಯಾದ ಸದ್ವಸ್ತು ರೂಪ ಚಿದಾತ್ಮ ವಾಚಕವು "ಈಂ" ಎಂಬುದೇ ನಿದರ್ಶಕವಾಗಿದೆ. "ತತ್‌ಸತ್" ಮೊದಲಾದವುಗಳ ನಿರ್ದೇಶನದಂತೆ. "ಓಂ ತತ್ ಸದಿತಿ ನಿರ್ದೇಶೋಬ್ರಹ್ಮಣ ಸ್ತ್ರಿವಿಧಃ ಸ್ಮೃತಃ".

"ಈಂ" ಎಂಬ ಕೇವಲ ಸ್ಮರಾತ್ಮಕವಾದ ಅಕ್ಷರದಲ್ಲಿಯೇ ಸ್ವಲ್ಪ ರಹಸ್ಯ ಅಡಗಿದೆ. ತತ್ವತ್ರಯ ಸಾಮರಸ್ಯದಿಂದ ಜಗತ್ತು-ಈಶ-ಜೀವಾತ್ಮ ಇವರ ಯೋಗಸತ್ವವನ್ನು ಇದು ತಿಳಿಸುತ್ತದೆ.

ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ರೂಪದಿಂದ ವಿಸ್ತೃತವಾದ ಆಧಿಭೌತಿಕ-ಆಧಿದೈವಿಕ-ಆಧ್ಯಾತ್ಮಿಕ ತತ್ವಗಳಿಂದ ಕೂಡಿದ ಜಗತ್ತು-ಈಶ-ಜೀವಾತ್ಮರ ವಿಭಾಗದಿಂದ ಹಾಗೂ ಸಮಾಸದಿಂದ ಅರ್ಥಾತ್ ವ್ಯಸ್ತ ಸಮಸ್ತರೂಪವಾಗಿ ತೋರುವಂಥಾದ್ದು "ಈಂ" ಎಂಬ ಒಂದೇ ಅಕ್ಷರವಾಗಿದೆ. ಹಾಗೆ ಋಙ್ಮಂತ್ರ ದರ್ಶನ ತಿಳಿಸುತ್ತದೆ.

"ಯ ಈಂ ಚಕಾರ ನ ಸೋ ಅಸ್ಯ ವೇದ ಯ ಈಂ ದದರ್ಶ ಹಿರುಗಿನ್ನು ತಸ್ಮಾತ್"

(ಋ. ೧, ೧೬೪, ೩೨)

"ಈಂ" ಎಂಬುದನ್ನು ಮಾಡಿದವನೂ ನೋಡಿದವನೂ ಇದನ್ನು ತಿಳಿಯಲಿಲ್ಲ ಎಂದು ಪ್ರತ್ಯಕ್ಷ ಜಗತ್ತಿನ ನಿದರ್ಶನವೇ "ಈಂ" ಕಾರವಾಗಿದೆ.

"ತ್ರಿಸ್ರೋ ಮಾತೃಸ್ತ್ರೀನ್ ಪಿತೃನ್‌ಬಿಭ್ರದೇಕ ಊರ್ಧ್ವಸ್ತಸ್ಥೌ ನೇಮವ ಗ್ಲಾಪಯಂತಿ"

(ಋ. ೧, ೧೬೪, ೧೦)

ಹೀಗೆ ಪರೋಕ್ಷಸಿದ್ಧವಾದ ವಿಶ್ವಾಧಾರಕವಾದ ಪರಮಾತ್ಮರೂಪ ಸದ್ವಸ್ತುವನ್ನು ತೋರಿಸುವದು "ಈಂ"ಕಾರವೆಂಬ ಈ ಅಕ್ಷರವು. ಇಲ್ಲಿ "ನ, ಈಂ" ಎಂದು ಪದವಿಭಾಗ ವಿರುವದರಿಂದ "ಈಂ" ಎಂಬುದು ಆ ಪರಮ ಪುರುಷನನ್ನು ಎಂದರ್ಥ.

"ಯ ಈಂ ಚಿಕೇತ ಗುಹಾ ಭವಂತಮಾ ಯಃ ಸಸಾದ ಧಾರಾಮೃತಸ್ಯ"

(ಋ. ೧, ೬೭, ೪)

ಹೀಗೆ ಅಪರೋಕ್ಷದ ಅಂತರಾತ್ಮನ ದರ್ಶಕವಾಗಿದೆ. ಅಂತರಂಗದಲ್ಲಿರುವ "ಈಂ, ಏನಂ" ಅಂತರಾತ್ಮನನ್ನು, ಯಾರು ತಿಳಿಯುವರೋ ಎಂದರ್ಥ. ಅಂತೆಯೇ ಸತ್ಯಸ್ವರೂಪೀ ಆತ್ಮನ ಚೈತನ್ಯಧಾರಾತ್ಮಿಕವಾದ "ಈಂ," ವಾಕ್ಕನ್ನು ಯಾರು ತಿಳಿವರೋ, "ಶ್ಲೋಕಃ, ಧಾರಾ, ಇಳಾ" ಎಂದು ನಿಘಂಟುವಿನಲ್ಲಿ ವಾಕ್ ನಾಮಗಳಲ್ಲಿ ಪಠಿತವಾಗಿದೆ. (ವೈದಿಕ ನಿಘಂಟು ೧, ೧೧)

"ತಾಂ ಪದ್ಮಿನೀಮೀಂ ಶರಣಮಹಂ ಪ್ರಪದ್ಯೇ" ಎಂದು ಶ್ರೀಸೂಕ್ತದಲ್ಲಿ "ಈಂ" ಎಂಬ ಈ ಅಕ್ಷರವು ಪರಾಶಕ್ತಿ ವಾಚಕವಾಗಿದೆ.

"ಆಯಾತು ವರದಾದೇವಿ ಅಕ್ಷರಂ ಬ್ರಹ್ಮಸಮ್ಮಿತಮ್ ।
ಗಾಯತ್ರೀಂ ಛಂದಸಾಂ ಮಾತಾ ಇದಂ ಬ್ರಹ್ಮ ಜುಷಸ್ವ ಮೇ ॥" (ನಾ.ಉ. ೧೫, ೧)

ಇಲ್ಲಿ ಗಾಯತ್ರೀ "ಈಂ" ಎಂದು ಪದ ವಿಭಾಗದಿಂದ "ಈಂ" ಎಂಬುದಕ್ಕೆ ಬ್ರಹ್ಮತ್ವ, ಬ್ರಹ್ಮಸಂಮಿತತ್ವ, ಅಕ್ಷರತ್ವಗಳೂ ಹೇಳಿದಂತಾಗುತ್ತದೆ. ಛಂದೋದರ್ಶನದಲ್ಲಿ ಆ ಬ್ರಹ್ಮಣ-ಸ್ಪತಿಯ ಗುಪ್ತನಾಮವೇ "ಈಂ" ಎಂದೂ, ಅದೇ ವಿಶ್ವಪ್ರಕಾಶಕವೂ ಪರಮಜ್ಯೋತಿಯೂ ಬ್ರಹ್ಮವೂ ಆಗಿದೆಯೆಂದು ಸ್ಪಷ್ಟವಾಗಿ ಉಪದೇಶವಿದೆ.

"ಬ್ರಹ್ಮಣಸ್ಪತೇರ್ಯಃ ಸಮಿದ್ಧಂ ಗೃಣಾತಿ ಶ್ರದಸ್ಮೈ ದಧಾನೋಽಮೃತಂ ನಾಮ ಗುಹ್ಯಮ್ ।
ತಸ್ಯೇದುವಿಶ್ವಮಿದಂ ಭವಾತಿ ಭದ್ರಂ ಬ್ರಹ್ಮತದೀಂ ಜ್ಯೋತಿರ್ವಿಶ್ವಸ್ಯ ದರ್ಶಯತ್ ॥"

(ಛಂ.ದ.ಅನು. ೩, ೧, ೮)

ಅಂತೆಯೇ ಕೇವಲವಾಗಿ ಈ "ಈಂಕಾರ," ಯಜುರ್ವೇದದಲ್ಲಿ ಉಪದಿಷ್ಟವಾಗಿದೆ.

"ಈಂಕಾರಾಯಸ್ವಾಹಾ ಈಂಕೃತಾಯ ಸ್ವಾಹಾ" (ತೈ.ಸಂ. ೭, ೧, ೧೯, ೬)

(ವೈಶ್ವದೇವಕಾಂಡೇ ಅಶ್ವಮೇಧಪ್ರಶ್ನಃ)

ಇಲ್ಲಿ "ಈಂ" ಎಂಬುದೂ ತತ್‌ಸ್ವರನಾದ, ಅನುಸ್ವಾರಾದಿ ಅನುಕರಣ ಮಾತ್ರವೆಂದು ತಿಳಿಯಬೇಕು. ಹ್ಯಾಗೆ ಓಂಕಾರವೋ ಹಾಗೆ.

"ಓಮಿತ್ಯೇತದನುಕೃತಿಹಸ್ಮವಾ ಅಪ್ಯೋಶ್ರಾವಯೇತ್ಯಾಶ್ರಾವಯಂತಿ" (ತೈ.ಶೀ.ಉ. ೮, ೧)

"ಓಂ" ಎಂಬುದು ಅನುಕರಣವಾಗಿದೆ. "ಓಃಶ್ರಾವಯ" ಎಂದು ಆಶ್ರವಣ ಮಾಡುತ್ತಾರೆ. ಯಜ್ಞಗಳಲ್ಲಿ ಸ್ಪಷ್ಟವಾಗಿ ಅನುಕರಣ ರೂಪವನ್ನು ಉಪದೇಶಿಸಿದ್ದಾರೆ. ಆದ್ದರಿಂದ ಅನುಜ್ಞಾಕ್ಷರ ರೂಪವನ್ನು ತಿಳಿಸಿದ್ದಾರೆ.

"ತದ್ವಾ ಏತದನುಜ್ಞಾಕ್ಷರಂ ವಿದ್ಧಿ ಯದ್ಧಿ ಕಿಂಚಾನು ಜಾನಾತಿ ಓಮಿತ್ಯೇವತದಾಹ"
(ಛಾಂ.ಉ. ೧, ೧೮)

ಹೀಗೆ "ಓಂ, ಈಂ," ಎಂಬ ಈ ಎರಡೂ ಅಕ್ಷರಗಳೂ ಸಮಾನವಾಗಿವೆ.

॥ ಕೊನೆಯಲ್ಲಿ ಇದ್ದ ಶ್ರೀಃ ಎಂಬ ಮೂರನೆಯ ಅಕ್ಷರ ॥ (೩)

"ಶೇಷೇಯಜುಃ ಶಬ್ದಃ" (ಜೈ.ಮೀ.ಸೂ.) ಎಂಬುದರಿಂದ ಯಜುಷ್ಪ್ರಪ್ರಧಾನವುಳ್ಳದ್ದು, ಛಂದೋವಾಗ್ವಿಭೂತಿ ಸ್ವರೂಪವಾದ, ಋಗ್ಯಜುಃ ಸಾಮ ಸಂಪದ್ರೂಪವಾಗಿರುವ ಲಕ್ಷ್ಮೀಬೀಜಾಕ್ಷರವಾಗಿದ್ದು ಶ್ರೀದೇವೀಶಕ್ತಿ ವಾಚಕವಾಗಿ ಪರಮಾತ್ಮ ಪರಮಪುರುಷನ ಪತ್ನೀಸ್ವರೂಪವಾಗಿದೆ.

"ಶ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ" (ಶು.ಯ.ಸಂ. ೩೦, ೨೨)

ಅದರದೇ ಅನುಶ್ರವಣ–

"ಅಹೇಬುಧ್ನಿಯಮಂತ್ರಂ ಮೇ ಗೋಪಾಯಯಮೃಷಯಸ್ತ್ರಯೀ ವಿದಾ ವಿದುಃ ।
ಋಚಃ ಸಾಮಾನಿ ಯಜೂಂಷಿ ಸಾಹಿಶ್ರೀರಮೃತಾ ಸತಾಮ್ ॥" (ತೈ.

ಇದರಲ್ಲಿ ಆ ಶ್ರೀ ಗೆ ತ್ರಯೀಸ್ವರೂಪವನ್ನು ನೀಡಲಾಗಿದೆ.

ಇಲ್ಲಿ ಎರಡೂ ಕಡೆ "ಶ್ರೀಃ" ಎಂಬ ವಿಸರ್ಗಾಂತ ಪದವೇ ಬೀಜಾಕ್ಷರವಾಗಿದೆ. ಇದು ಪ್ರಥಮಾ ವಿಭಕ್ತ್ಯಂತವಾದ ಏಕಾಕ್ಷರ ಪದವಾಗಿದೆ. (ಶ್ರೀಃ)

ತಂತ್ರಶಾಸ್ತ್ರದಲ್ಲಿ "ಶ್ರೀಂ", ಎಂದು ಅನುಸ್ವಾರಾಂತ ಲಕ್ಷ್ಮೀಬೀಜವಿದೆ. ಅದು ದಶ ಮಹಾವಿದ್ಯೆಗಳಲ್ಲಿ ಅಂತಿಮವಾದ ಶಕ್ತಿಬೀಜಪರಕವಾದ ಕಮಲಾ ಬೀಜ ಮಂತ್ರಾಕ್ಷರವಾಗಿದೆ. ಅಂತೆಯೇ "ಓಂ, ಹ್ರೀಂ, ಶ್ರೀಂ" ಎಂಬ ಮಂತ್ರದಲ್ಲಿ "ಐಂ, ಹ್ರೀಂ, ಶ್ರೀಂ", ಎಂಬ ತ್ರ್ಯಕ್ಷರೀ ಮಂತ್ರದಲ್ಲಿಯೂ ಕೂಡ ಮೂರನೆಯ ಬೀಜಾಕ್ಷರ ಸಮಾನವಾಗಿರುವದು ವಿಶೇಷವಾಗಿದೆ.

ಹೀಗೆ "ಓಂ", ವ್ಯಕ್ತಪ್ರಣವ, "ಈಂ", ಗುಪ್ತಪ್ರಣವ, "ಶ್ರೀಃ", ಶಾಕ್ತ ಪ್ರಣವ, ಹೀಗೆ ತ್ರಿತಾರಾತ್ಮಕವಾದ ಧ್ವಜ ಚಿಹ್ನವನ್ನು ಸಂಶೋಧಿಸಲಾಗಿದೆ. ಋಗ್ವೇದ, ಸಾಮವೇದ, ಯಜುರ್ವೇದಗಳ ಬೀಜಗಳು ಕ್ರಮವಾಗಿ "ಈಂ, ಓಂ, ಶ್ರೀಃ", ಎಂಬಿವು ಪ್ರಾಧಾನ್ಯವಾಗಿ ಪ್ರಣವಾತ್ಮಕಗಳೂ ಮೂಲಬೀಜ ಮಂತ್ರಾಕ್ಷರಗಳೂ ಆಗಿವೆ.

"ಋಚಃ ಸಾಮಾನಿ ಜಜ್ಞಿರೇ, ಯಜುಸ್ತಸ್ಮಾದಜಾಯತ । ಋಚಃ ಸಾಮಾನಿ ಯಜೂಂಷಿ," ಎಂದಿರುವದರಿಂದ "ಋಕ್ ಸಾಮಯಜುಃ" ಕ್ರಮೇಣವಾಗಿಯೇ ಪಾಠ ಮಾಡಲಾಗಿದೆ. ಸ್ಮೃತಿಯೂ ಕೂಡಾ "ಋಕ್‌ಸಾಮಯಜುರೇವ ಚ" ಎಂದಿದೆ.

ಇಲ್ಲಿ ಇನ್ನೊಂದು ವಿಶಿಷ್ಟಾರ್ಥವನ್ನು ಗಮನಿಸಬಹುದಾಗಿದೆ. "ಶ್ರೀಶ್ಚತೇಲಕ್ಷ್ಮೀಶ್ಚ ಪತ್ನ್ಯೌ" ಎಂಬ ವಚನದಂತೆ ಮಧ್ಯದಲ್ಲಿ ಮಧ್ಯದಲ್ಲಿರುವ ಓಂಕಾರ ರೂಪೀ ಪರಮಾತ್ಮನು ಜ್ಞಾನ ಪ್ರಧಾನನಾಗಿದ್ದು ಆತನ ಎಡಬಲಗಳಲ್ಲಿ ಇಚ್ಛಾಶಕ್ತಿ, ಕ್ರಿಯಾಶಕ್ತಿಗಳೇ ಪ್ರಧಾನವಾಗಿರುವ ಶ್ರೀಃ (ಶ್ರಯತೇ ಶ್ರಿಯತೇ ಇತಿ ಶ್ರೀಃ), ಲಕ್ಷ್ಮೀಃ (ಲಕ್ಷಯತಿ ಲಕ್ಷ್ಯತೆ ಇತಿ ಲಕ್ಷ್ಮೀಃ) ಎಂದೂ ಎರಡೂ ಶಕ್ತಿಗಳಾಗಿವೆ. ಇಲ್ಲಿ "ಈಂ" ಎಂಬ ಬೀಜಾಕ್ಷರವು ದಕ್ಷಿಣಾರ್ಥಶಕ್ತಿ ಲಕ್ಷಣವಾಗಿದ್ದು ಲಕ್ಷ್ಮೀ ಶಕ್ತಿಯ ಬೀಜಾಕ್ಷರವಾಗಿದೆ. "ತಾಂ ಪದ್ಮಿನೀಮೀಂ ಶರಣಮಹಂ ಪ್ರಪದ್ಯೇ" ಎಂದು ಶ್ರೀಸೂಕ್ತದಲ್ಲಿದೆ. ಹೀಗೆ ವೇದಮಂತ್ರಾದಿ ಪ್ರಮಾಣದಿಂದ ಚೆನ್ನಾಗಿ ವಿಮರ್ಶಿಸಿ ನಾನು ಈ "ಈಂ ಓಂ ಶ್ರೀಃ" ಎಂಬುದನ್ನು ಧ್ವಜರೂಪದಿಂದ ಆಶ್ರಮ-ದಲ್ಲಿಟ್ಟಿದ್ದೇನೆ. ಆಶ್ರಮ ಧ್ವಜ ಇದೇ ಆಗಿದೆ. ಆಶ್ರಮದ ಎಲ್ಲ ಪುಸ್ತಕಗಳಲ್ಲಿ ಹಾಗೂ ವ್ಯಾವಹಾರಿಕ ಪತ್ರಗಳಲ್ಲಿ ಮೊದಲು ಸಂದರ್ಶನಕ್ಕಾಗಿ ಸಂಮಾನದಿಂದ ಕೂಡಿಸಿದ್ದೂ ಮಹಾಮಾಂಗಲ್ಯಪ್ರದವೂ ಸರ್ವಸಂಪತ್ತುಗಳಿಗೆ ಮೂಲಸತ್ವಭೂತವಾದದ್ದೂ ಇದಾಗಿದೆ.

ಆದ್ದರಿಂದ ಪಾಠಕರ ಶ್ರೋತೃವರ್ಗಗಳ ಸಮಾಧಾನಕ್ಕಾಗಿ ಮೊದಲು ಇವುಗಳ ತತ್ವವನ್ನು ತಿಳಿಸುವ ತತ್ವಸ್ವರೂಪವಾದ ಶ್ಲೋಕದಲ್ಲಿ ವರ್ಣಿಸಿದ್ದೇನೆ.

ವೇದಧ್ವಜವು ಬಹುಕಾಲ ವಿಜಯಿಸಲಿ. "ವೇದಧ್ವಜಶ್ಚಿರಂ ವಿಜಯತಾಂ" ಎಂದು ಆಶಿಸುತ್ತೇನೆ. –ದೈವರಾತಃ.

ಇಲ್ಲಿ ಹೀಗೆ ೧೦+೮+೧೪+೧೦ ಹೀಗೆ ೪೨ ಶ್ಲೋಕಗಳಿವೆ.

ವೇದಾರ್ಥ ಕಲ್ಪಲತಿಕಾ

ಈ ಕಲ್ಪಲತೆಯು ವೇದಮೂಲಭೂತ ಛಂದಸ್ಸೆಂಬ ರಸಸತ್ವದಿಂದ ಸುಲಲಿತವಾದ, ಗಾಯತ್ರೀಮಂತ್ರ ಮೂಲೋದಿತವಾದ ಪ್ರಣವ ಬೀಜಾಕ್ಷರ ಮೂಲ ಪೂರ್ಣ ಬಿಂದುಪದ ಸಂಕ್ಲಿಷ್ಟವಾದ, ವ್ಯಾಹೃತಿತ್ರಯ ಸತ್ವದಿಂದ ವಿಶಿಷ್ಟವಾದ ತ್ರಯೀಸ್ವರ ರಸಾದಿಕಲಾವಿಶಿಷ್ಟವಾದ ತತ್ವತ್ರಯಂ ಸಾಮರಸ್ಯ ಸತ್ವದಿಂದ ಕೂಡಿದ ವಿಶ್ವತೋಮುಖಿ ಸ್ವರೂಪದಿಂದ ವಿಸ್ತೃತವಾದ ಸುವಿಶಾಲವಾದ ಸರ್ವವಿಭೂತಿ ವಿಕಾಸದಿಂದ ವಿಲೋಲಿತವಾದದ್ದಾಗಿಯೂ ಕಾಣುತ್ತದೆ. ಈ ವಿಚಿತ್ರತರ ಸಂವಿತ್ಕಲಾ ವಿಲಾಸ ಸಂಪ್ಲುತವಾದ ಸರ್ವಾರ್ಥತತ್ವ ಪ್ರಕಾಶದಲ್ಲಿ ಸಮರ್ಥ-ವಾಗಿರುವ ಜ್ಞಾನ-ಭಾವನಾ-ಕರ್ಮಾದಿಯೋಗ ವಿದ್ಯಾನುಭೂತಿ ಸತ್ವರಸ ಪರಿಪೂರ್ಣವಾಗಿದೆ.

ಈ ಕಲ್ಪಲತೆಯಲ್ಲಿ ೩೨ ಕಲೆಗಳಿರುತ್ತವೆ. ಅವುಗಳಲ್ಲಿ ಮೊದಲಿಗೆ ಗಾಯತ್ರೀ ಮಂತ್ರಾರ್ಥ ಸತ್ವವನ್ನು ಸಮರ್ಥಿಸುವಲ್ಲಿ ಪರಿಕಲ್ಪಿತವಾದ ೬ ಕಲೆಗಳು ಗಾಯತ್ರೀಸಂಬಂಧ ವಾದ ವಿಶಿಷ್ಟತೆಯನ್ನು ತೋರಿಸುವ ೧೯೨ ಶ್ಲೋಕಗಳಿವೆ.

ಅದರಲ್ಲೂ ಈ ಪ್ರಥಮ ಕಲೆಯಲ್ಲಿ ಗಾಯತ್ರೀ ಹಾಗೂ ಪ್ರಣವ ವ್ಯಾಹೃತಿರೂಪ ಯಜುರ್ಮಂತ್ರಗಳ ತತ್ವಾರ್ಥವನ್ನು ತಿಳಿಸಿದೆ. ಅವುಗಳ ಋಷಿದೈವತ ಛಂದಸ್ಸುಗಳನ್ನೂ ನಿರೂಪಿಸಿದೆ. ಹಾಗೆಯೇ ಅಂತ್ಯದಲ್ಲಿ ಗಾಯತ್ರೀ ಶಬ್ದಾರ್ಥದ ಸಂಕ್ಷೇಪ ನಿರೂಪಣೆ ಇದೆ. ಬ್ರಹ್ಮೋಪದೇಶಕಾಲಕ್ಕೆ ಬಟುವಿಗೆ ಗಾಯತ್ರೀಮಂತ್ರಕ್ಕಿಂತ ಮೊದಲು "ಓಂ ಭೂರ್ಭುವಃ ಸ್ವಃ" ಎಂಬ ಪ್ರಣವ ಹಾಗೂ ವ್ಯಾಹೃತಿ ಮಂತ್ರಗಳನ್ನೂ ಸಂಯೋಜಿಸಿದೆ. ಆಮೇಲೆ ಪೂರ್ವಾಚಾರ್ಯ ಪರಂಪರೆಯಿಂದ ಬಂದ ಜಪ ಪ್ರಾಣಾಯಾಮಾದಿಗಳನ್ನು ಪ್ರಕ್ರಿಯಾ ಪದ್ಧತಿಯನ್ನೂ ಜೋಡಿಸಿದೆ. ವಾಸ್ತವಿಕವಾಗಿ ಪ್ರಣವ ವ್ಯಾಹೃತಿಗಳಿಂದ ಕೂಡಿದ ಗಾಯತ್ರೀ ಮಂತ್ರ ಯಾವ ವೇದದಲ್ಲಿಯೂ ಮೂಲತಃ ಇಲ್ಲ. ಗಾಯತ್ರೀ ಮಂತ್ರವು ನಿಯತವಾದ ಪಾದಗಳಿಂದ ಕೂಡಿದ್ದು ಋಗ್ರೂಪವಾಗಿದೆ. ಎಂಟು ಅಕ್ಷರಗಳುಳ್ಳ ಮೂರು ಪಾದಗಳಿಂದ ಕೂಡಿದೆ.

"ಪ್ರಥಮಂ ಛಂದಸ್ತ್ರಿಪದಾಗಾಯತ್ರೀ, ಅಷ್ಟಾಕ್ಷರಾಗಾಯತ್ರೀ" ಇತ್ಯಾದಿ ವಚನಗಳು ಪ್ರಮಾಣವಾಗಿವೆ.

ಪ್ರಣವ ವ್ಯಾಹೃತಿಗಳು ಯಜೂರೂಪವಾಗಿವೆ. "ಓಮಿತಿ ಪ್ರತಿಪದ್ಯತೇ ತ್ರಿನೇವಪ್ರಾಂಯುಕ್ತ ಭೂರ್ಭುವಃಸ್ವರಿತ್ಯಾಹ, ಏತದ್ವೈ ವಾಚಃ ಸತ್ಯಮ್" (ತೈ.ಆ. ೨, ೧೧) ಹೀಗೆ ನಿರ್ದೇಶಿಸಿದೆ.

"ಭೂರ್ಭುವಃ ಸ್ವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ" (ಶೀ. ೩, ೫, ೧)

ಹೀಗೆ ಗಾಯತ್ರಿಯ ಶಿರೋಮಂತ್ರವು ಯಜೂರೂಪವಾದದ್ದು. "ಓಂ ಆಪೋಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಃ ಸುವರೋಮ್" ಎಂದು ಪ್ರಸಿದ್ಧವಾಗಿದೆ. (ನಾ.ಉ. ೧೫, ೨) ಪ್ರಾಣಾಯಾಮಾದಿಗಳಲ್ಲಿ ಇದನ್ನು ಸೇರಿಸಿ ಮಾಡಬೇಕೆಂದು ವಿಹಿತವಾಗಿದೆ.

"ಗಾಯತ್ರೀಂ ಶಿರಸಾ ಸಾರ್ಧಂ ಜಪೇದ್ ವ್ಯಾಹೃತಿಪೂರ್ವಿಕಾಮ್ ।
ಪ್ರತಿಪ್ರಣವಸಂಯುಕ್ತಾಂ ತ್ರಿರಯಂ ಪ್ರಾಣಸಂಯಮಃ ॥" (ಯಾ.ಸ್ಮೃ. ೨)

ಮೂರು ಬಾರಿ ಗಾಯತ್ರಿಯನ್ನು ವ್ಯಾಹೃತಿಪೂರ್ವಕವಾಗಿ ಪ್ರಣವಸಂಯುಕ್ತವಾಗಿ ಪ್ರಾಣಾಯಾಮದಲ್ಲಿ ಮೂರು ಬಾರಿ ಹೇಳಬೇಕು.

(ಓಂ ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ಓಂ ಆಪೋಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಃ ಸುವರೋಂ ಎಂದು). ಅಲ್ಲಿಯೂ ಕೂಡಾ ಜಪಾದಿಗಳಲ್ಲಿ ಮೂರು ವ್ಯಾಹೃತಿಗಳು, ಪ್ರಾಣಾಯಾಮದಲ್ಲಿ ಸಪ್ತ ವ್ಯಾಹೃತಿಗಳು ವಿಹಿತವಾಗಿವೆ. "ಓಂ ಭೂಃ, ಓಂ ಭುವಃ, ಓಂ ಸುವಃ,

ಓಂ ಮಹಃ, ಓಂ ಜನಃ, ಓಂ ತಪಃ, ಓಂ ಸತ್ಯಂ" ಎಂದು (ನಾ.ಉ. ೧೫, ೨) ಬ್ರಹ್ಮಾತ್ಮಕವಾದ ಏಕಾಕ್ಷರೀಮಂತ್ರ ಓಂ ಎಂಬುದು ಪ್ರಣವ ಎಂದು ಪ್ರಸಿದ್ಧವಾಗಿದೆ. "ಯ ಉದ್ಗೀಥಃ ಸ ಪ್ರಣವಃ, ಯಃ ಪ್ರಣವಃ ಸ ಉದ್ಗೀಥಃ" ಅದು ಪ್ರಣವವು (ಛಾಂ.ಉ. ೧, ೫, ೧) ಅದರ ಋಷಿಃ ಛಂದಃ ದೇವತೆಗಳು ಉಪನಿಷತ್ತಿನಲ್ಲಿ ಉಕ್ತವಾಗಿವೆ.

"ಓಮಿತ್ಯೇಕಾಕ್ಷರಂ ಬ್ರಹ್ಮ ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್ ।
ಗಾಯತ್ರಂ ಛಂದಂ ಪರಮಾತ್ಮಂ ಸ್ವರೂಪಮ್ ।
ಸಾಯುಜ್ಯಂ ವಿನಿಯೋಗಮ್ ॥" (ನಾ.ಉ. ೧೪,)

ಬೇರೆಡೆ, "ಪ್ರಣವಸ್ಯ ಬ್ರಹ್ಮಾ ಬ್ರಹ್ಮಾ ದೈವೀ ಗಾಯತ್ರೀ," ವಿಶೇಷ ರೂಪವಾಗಿ (ಆ.ಗೃ.ಪರಿ.)ಯಲ್ಲಿ ಹೇಳಿದೆ. ಪ್ರಣವ ಒಂದೇ ಅಕ್ಷರವಾದ್ದರಿಂದ "ದೈವೀಗಾಯತ್ರೀ" ಎಂಬ ವಿಶಿಷ್ಟ ಛಂದಃ ಸಂಜ್ಞೆ ಇದೆ.

"ಛಂದಃ । ಗಾಯತ್ರೀ । ದೈವ್ಯೇಕಮ್" (ಛಂ.ಸೂ. ೧) ಗಾಯತ್ರೀಮಂತ್ರಕ್ಕೆ ೮ ಅಕ್ಷರಗಳುಳ್ಳ ೩ ಪಾದಗಳು ಪ್ರಸಿದ್ಧವಾಗಿವೆ. ೨೪ ಅಕ್ಷರಗಳು–

"ಗಾಯತ್ರೀ ಚತುರ್ವಿಶತ್ಯಕ್ಷರಾತ್ರಿಪದಾ" (ನಾ.ಉ.೧೪,) ಆದ್ದರಿಂದ ಏಕಾಕ್ಷರ ರೂಪವಾದ ಪ್ರಣವವೂ ಯಜುರ್ಲಕ್ಷಣವನ್ನು ಹೊಂದಿದೆ. ಸಮಸ್ತವ್ಯಾಹೃತಿಗಳಿಗೆ "ಪರಮೇಷ್ಠೀಪ್ರಜಾಪತಿಃ ಪ್ರಜಾಪತಿರ್ಬೃಹತೀ" (ಆ.ಗೃ.ಪರಿ.)

"ಗಾಯತ್ರೀಶಿರಸಃ ಪ್ರಜಾಪತಿರ್ಬ್ರಹ್ಮಾऽಗ್ನಿವಾಯ್ವಾದಿತ್ಯಾ ಯಜುಃ" (ಆ.ಗೃ.ಪ.)

"ಆಪೋಜ್ಯೋತಿ" ಎಂಬ ಗಾಯತ್ರಿ ಶಿರೋಮಂತ್ರಕ್ಕೆ ಪ್ರಜಾಪತಿ ಋಷಿಃ ಬ್ರಹ್ಮಾ ಅಗ್ನಿ ವಾಯು ಆದಿತ್ಯರು ದೇವತೆ. ಯಜುಶ್ಛಂದಃ ಗಾಯತ್ರೀ ಮಂತ್ರಕ್ಕೆ ವಿಶ್ವಾಮಿತ್ರ ಋಷಿ, ಸವಿತಾದೇವತಾ, ಗಾಯತ್ರೀಛಂದಃ, ಇದೂ ಸಹ "ಗಾಯತ್ರ್ಯಾಗಾಯತ್ರೀ ಛಂದೋ ವಿಶ್ವಾಮಿತ್ರ ಋಷಿಃ, ಸವಿತಾದೇವತಾ", ಎಂದು (ನಾ.ಉ. ೧೪)ರಲ್ಲಿ ಹೇಳಿದೆ. ಅಂತೆಯೇ ವಿನಿಯೋಗವೂ "ಗಾಯತ್ರೀ ಚತುರ್ವಿಂಶತ್ಯಕ್ಷರಾತ್ರಿಪದಾಷಟ್ಕುಕ್ಷಿಃ ಪಂಚಶೀರ್ಷಾ ಉಪನಯನೇ ವಿನಿಯೋಗಃ" (ನಾ.ಉ. ೧೪)

ಈ ವಿಷಯದಲ್ಲಿ ಅನಿವಾರ್ಯವಾಗಿ ಬಂದ ವಿವಾದಗ್ರಸ್ತವಾದ ವಿಚಾರವು ಹೀಗಿದೆ. ಈ ವಿಶ್ವಾಮಿತ್ರ ಋಷಿಯು ಮಹಾಭಾರತದ ಇತಿಹಾಸದಲ್ಲಿ ಪ್ರಸಿದ್ಧನಾದ ಪುರಾಣಪುರುಷನಾದ ಗಾಥಿರಾಜನ ಮಗ ಆತನೇ ಋಗ್ವೇದದ ಮೂರನೆಯ ಮಂಡಲದ ಋಷಿ, ಕಾತ್ಯಾಯನರ ಸರ್ವಾನುಕ್ರಮಣಿ.

"ಕುಶಿಕಸ್ತ್ವೈಷೀರಥಿರಿಂದ್ರ ತುಲ್ಯಂ ಪುತ್ರಮಿಚ್ಛನ್ ಬ್ರಹ್ಮಚರ್ಯಂ ಚಚಾರ ತಸ್ಯೇಂದ್ರ ಏವಗಾಥೀ ಪುತ್ರೋ ಜಜ್ಞೇ । ಗಾಥಿನೋ ವಿಶ್ವಾಮಿತ್ರಃ ಸ ತೃತೀಯಂ ಮಂಡಲಮಪಶ್ಯತ್ ॥" (ಋ.ಸ.ಕ್ರ.ಸೂ. ೩, ೧) ಇದೊಂದು ವಿಷಯ ಆರ್ಷೇಯ ಪ್ರಸಿದ್ಧವಾದದ್ದೇ.

ಅಲ್ಲಿ "ಪ್ರಾಣಾ ವಾ ಋಷಯಃ, ಪ್ರಾಣೋ ವೈ ವಸಿಷ್ಠಃ, ಪ್ರಾಣೋ ವಿಶ್ವಾಮಿತ್ರಃ," ಪ್ರಾಣವನ್ನೆ ವಸಿಷ್ಠ ವಿಶ್ವಾಮಿತ್ರಾದಿಗಳೆಂಬ ನಾಮದಿಂದ ನಿರ್ದೇಶಿಸಿದೆ. ಪ್ರಾಣವೇ ಇಲ್ಲಿ ವಿಶ್ವಾಮಿತ್ರ ಋಷಿಯೆಂಬುದು ಇನ್ನೊಂದು ಪಕ್ಷ. ಅಲ್ಲಿಯೂ ವಿಚಿಕಿತ್ಸೆಯಿಂದ ನೋಡಿದಾಗ ನಮ್ಮಲ್ಲಿ ಪ್ರಸಿದ್ಧವಾದ ಪ್ರಾಣವನ್ನೇ ಋಷಿಯಾಗಿ ಕಲ್ಪಿಸಿದರೆ ಇಂಥ ಮಂತ್ರದರ್ಶನ ಸಾಮರ್ಥ್ಯ ವಿಶ್ವಪ್ರಾಣರೂಪನಾದ ಸೂರ್ಯಾಂತರ್ಯಾಮಿಯೂ ಇಂದ್ರನೆಂಬ ಬ್ರಹ್ಮಾತ್ಮ ತತ್ವವುಳ್ಳವನೇ ಋಷಿಯೆಂದು ತಿಳಿಯಬೇಕಾಗುತ್ತದೆ. "ಪೂಷನ್ನೇಕರ್ಷೇಯಮ ಸೂರ್ಯ" (ಈ.ಉ. ೧೬,)

"ಇಂದ್ರೋ ಬ್ರಹ್ಮೇಂದ್ರ ಋಷಿಃ" *(ಋ. ೮, ೧೬, ೭)*

"ಯಶ್ಛಂದ ಸಾ ಮೃಷಭೋ ವಿಶ್ವರೂಪಃ ಛಂದೋಭ್ಯೋಽಧ್ಯಮೃತಾತ್ ।
ಸಂಬ್ರಭೂವ ಸಮೇಂದ್ರೋಮೇಧಯಾ ಸ್ಪೃಣೋತು ॥" *(ಶೀ.ಉ. ೪,)*

ಆದ್ದರಿಂದ ರಾಜರ್ಷಿಯಾದರೂ ವಿಶ್ವಾಮಿತ್ರನು ಇಂದ್ರಸತ್ವದಿಂದ ಹುಟ್ಟಿದವನಾದ್ದರಿಂದ ಮತ್ತು ಬಹುತಪಸ್ಸಿನ ಫಲವಾಗಿ ಬ್ರಹ್ಮರ್ಷಿತ್ವವನ್ನು ಹೊಂದಿ ತಾನೇ ಅಗ್ನಿಯೆಂಬ ಮಂತ್ರದರ್ಶನ ಮಾಡಿದ್ದಾನೆ.

"ಅಗ್ನಿರಸ್ಮಿಜನ್ಮನಾಜಾತವೇದಾಃ" ಎಂಬುದೇ ಆ ಮಂತ್ರ. ಹೀಗೆ ಇಂದ್ರಸತ್ವದಿಂದಾವಿರ್ಭೂತನಾದ ಆತನೇ ಇಂದ್ರಾತ್ಮನೂ ಆಗಿದ್ದಾನೆ. "ತಸ್ಯೇಂದ್ರ ಏವ ಗಾಥೀ ಪುತ್ರೋ ಜಜ್ಞೇ, ಗಾಥಿನೋ ವಿಶ್ವಾಮಿತ್ರಃ," ಎಂಬುದು ವಿಶೇಷವಾಗಿದೆ.

ಇಲ್ಲಿ ಸವಿತಾದೇವತಾ ಎಂಬ ವಿಷಯದಲ್ಲಿಯೂ ತುಂಬಾ ವಿಮರ್ಶೆ ಹಾಗೂ ಮೀಮಾಂಸೆಗಳು ನಡೆದಿವೆ. "ಸವಿತಾ" ಎಂಬ ಶಬ್ದವನ್ನು ಕೇಳಿದಾಗ ಆಕಾಶದಲ್ಲಿ ಗೋಚರಿಸುವ ಸೂರ್ಯನೇ ಮೊದಲು ಕಂಡು ಆಮೇಲೆ ಬುದ್ಧಿಯನ್ನು ವ್ಯಾಪಿಸುತ್ತಾನೆ.

ಅದು ಸರಿ. ವಾಚ್ಯಾರ್ಥದಲ್ಲಿ ಶಬ್ದಶಕ್ತಿಯಿಂದ ಮೊದಲು ವ್ಯವಹಾರ ಪ್ರವೃತ್ತಿಯು ಅನಿವಾರ್ಯವಷ್ಟೆ ? ತತ್ವದೃಷ್ಟ್ಯಾ ಲಕ್ಷ್ಯಾರ್ಥದಲ್ಲಿಯೂ ಶಾಸ್ತ್ರೋಪದೇಶದಿಂದ ವಿಶಿಷ್ಟತೆ ತೋರುವದು ನಿರ್ವಿವಾದವಾಗಿದೆ. ಕೇವಲ ಭೌತಿಕನಾದ ಸೂರ್ಯನಿಗೆ ಈ ರೀತಿಯ ಪರೋಕ್ಷಸಿದ್ಧವಾದ ದೇವತಾತ್ವವಿಲ್ಲ. ತದಂತರ್ಗತವಾದ ಶಕ್ತಿಯೇ ಪ್ರಧಾನವಾದದ್ದು. ಆದ್ದರಿಂದಲೇ,

"ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್" (ಶು.ಯ.ಸಂ. ೪, ೧೬)

"ಸ ಯಶ್ಚಾಯಂ ಪುರುಷೋ ಯಶ್ಚಾಸಾವಾದಿತ್ಯೇತ್ಸ ಏಕಃ" (ಬೃ.ಉ. ೧೧, ೪)

ಆದಿತ್ಯನಲ್ಲಿರುವ ಒಬ್ಬನೇ ಆದ ಪುರುಷ. ಈ ಅರ್ಥದಲ್ಲಿ ಅಂತರ್ಯಾಮಿ ಬ್ರಾಹ್ಮಣವೂ ಪ್ರಮಾಣವಾಗಿದೆ.

"ಆದಿತ್ಯಾದಂತರಾ ಯಂ ಆದಿತ್ಯೋನ ವೇದ, ಯಸ್ಯ ಆದಿತ್ಯಃ, ಶರೀರಮ್", "ಯಃ ಆದಿತ್ಯೇತಿಷ್ಠನ್, ಆದಿತ್ಯಮಂತರೋ ಯಮಯತಿ" (ಬೃ.ಉ. ೩, ೭, ೯) ಆದಿತ್ಯನೂ ಯಾವನನ್ನು ತಿಳಿಯನೋ ಯಾವನಿಗೆ ಆದಿತ್ಯನೇ ಶರೀರವೋ, ಯಾವನು ಆದಿತ್ಯನಲ್ಲಿದ್ದು ಆತನನ್ನು ನಡೆಸುವನೋ, ಆತನೇ ಸರ್ವಾಂತರಾತ್ಮನಾದ ಸವಿತಾ, ಗಾಯತ್ರೀಮಂತ್ರದ ಪ್ರಧಾನದೇವತೆ. ಈ ವೇದಶಾಸ್ತ್ರ ಪ್ರಮಾಣ ಸಿದ್ಧವಾದ ತತ್ತ್ವವು ಎಲ್ಲ ವೇದವೇತ್ತರಿಗೆ ಸಮ್ಮತವಾಗಿದೆ.

"ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ"

(*ಋ. ೧, ೧೧೫, ೧*)

ತ್ರಿಲೋಕಗಳು ಹಾಗೂ ಸ್ಥಾವರ ಜಂಗಮಗಳ ಆತ್ಮಾ ಸೂರ್ಯನೇ. ಆದ್ದರಿಂದ ಇಲ್ಲಿ ಗಾಯತ್ರೀ ಎಂಬ ಸ್ತ್ರೀಲಿಂಗವನ್ನು ಕೇಳಿ ಗಾಯತ್ರೀ ಎಂಬ ದೇವತೆಯಾಗಲು ಶಕ್ಯವಿಲ್ಲ. ಆ ಛಂದಸ್ಸಿನಲ್ಲಿ ಮಂತ್ರವಿರುವದರಿಂದ ಹಾಗಿದ್ದರೂ ತೇಜೋಧ್ಯಾನಾವಲಂಬನಾರ್ಥವಾಗಿ ಆ ಸವಿತೃದೇವತೆಯ ಯೋಗದಿಂದ ತದಧಿಷ್ಠಾನಭೂತವಾದ ಪರದೈವವನ್ನೇ ಛಂದೋಮುಖ ದಿಂದ ಸಮನ್ವಯ ಮಾಡಿ ಜಪ ಹಾಗೂ ಉಪಾಸನಾದಿಗಳಲ್ಲಿ ಗಾಯತ್ರೀ ಎಂಬ ಹೆಸರಿನಿಂದಲೇ ಧ್ಯಾನ ಹಾಗೂ ಕಲ್ಪನೆ ಮಾಡಲಾಗುತ್ತಿದೆ. ಮೂರೂ ಸಂಧ್ಯಾಕಾಲಗಳಲ್ಲಿ ಬೇರೆ ಬೇರೆಯಾಗಿ,

"ಬಾಲಾಂ ಬಾಲಾದಿತ್ಯ ಮಂಡಲಮಧ್ಯಸ್ಥಾಮ್ಂ ।
ಬ್ರಹ್ಮದೈವತ್ಯಾಂ ಗಾಯತ್ರೀಂ ನಾಮದೇವತಾಂ ಧ್ಯಾಯಾಮಿ ॥" (ಆ.ಗೃ.ಪ.)
"ಮಧ್ಯಂದಿನೇ ತಾಂ ಯುವಾಂ ಯುವಾದಿತ್ಯಮಂಡಲಮಧ್ಯಸ್ಥಾಮ್ಂ ।
ರುದ್ರದೈವತ್ಯಾಂ ಸಾವಿತ್ರೀಂ ನಾಮದೇವತಾಂ ಧ್ಯಾಯಾಮಿ ॥
ಅಥ ಸಾಯಂ ತಾಂ ವೃದ್ಧಾಂ ವೃದ್ಧಾದಿತ್ಯ ಮಂಡಲಮಧ್ಯಸ್ಥಾಮ್ಂ ।
ವಿಷ್ಣು ದೈವತ್ಯಾಂ ಸರಸ್ವತೀಂ ನಾಮದೇವತಾಂ ಧ್ಯಾಯಾಮೀತಿಂ ॥ (ಆ.ಗೃ.ಪರಿ.)

ವಸ್ತುತಃ ಆ ತೇಜಸ್ಸಿನ ಧ್ಯಾನವೇ ಪ್ರಧಾನವಾದದ್ದು. ಶ್ಲೋಕಾದಿಪಠನದಲ್ಲಿ "ಭರ್ಗೋದೇವಸ್ಯ ಧೀಮಹಿ" ಎಂದು ಮೂಲಮಂತ್ರದಲ್ಲಿಯೇ ಧ್ಯಾನವಿದೆ. ಹಾಗೆಯೇ (ಪಂಚಶೀರ್ಷ), ಐದು ಶಿರಸ್ಸುಗಳು ಮುಂತಾಗಿ ಸ್ತ್ರೀರೂಪಕಲ್ಪನೆಯಿಂದ ಕೆಲವರು ಧ್ಯಾನಿಸುತ್ತಾರೆ. ಗಾಯತ್ರೀ ಎಂಬುದು ಛಂದಸ್ಸಿನ ಹೆಸರೇ ಹೊರತು ದೇವತೆಯದಲ್ಲ. ದೇವತೆಯು ಸವಿತೃವೇ ಎಂಬುದು ಸಿದ್ಧವಾಗಿಯೇ ಇದೆ.

ಗಾಯತ್ರೀಛಂದಸ್ಸಿನ ಬಗ್ಗೆಯೂ ಮೂಲಶ್ಲೋಕದಲ್ಲಿ ಹೇಳದೇ ಇರುವ ಕೆಲವು ವಿಷಯಗಳನ್ನು ಇಲ್ಲಿ ತಿಳಿಸಬಯಸುತ್ತೇನೆ.

"ಅಷ್ಟಾಕ್ಷರಾ ಗಾಯತ್ರೀ ತ್ರಿಪದಾ ಚತುರ್ವಿಂಶತ್ಯಕ್ಷರಾ," ಇದು ಛಂದಸ್ಸಿನ ಲಕ್ಷಣ. (೨೪ ಅಕ್ಷರಗಳು ೮ ಅಕ್ಷರಗಳುಳ್ಳ ಮೂರು ಪಾದ, ಇದು.) ಆದರೆ ಗಾಯತ್ರಿಯ ಮೊದಲನೇ ಪಾದದಲ್ಲಿ "ತತ್ಸವಿತುರ್ವರೇಣ್ಯಂ" ಎಂದು ಏಳೇ ಅಕ್ಷರಗಳಿವೆ. ವರೇಣ್ಯಂ, ಎಂಬ ಪದದಲ್ಲಿ

ಣೆಯಂ, ಅಕ್ಷರದ್ವಯವನ್ನು ಊಹಿಸಿ ಅಷ್ಟಾಕ್ಷರ ಭಾವನೆ ಮಾಡಬೇಕು. "ಏಕಾಕ್ಷರೀ ಭಾವಾನ್ ವ್ಯಾಹೇತ್" ( ) ಹೀಗೆ ಮಾರ್ಗದರ್ಶನ ಮಾಡಿದ್ದಾರೆ.

ಗಾಯತ್ರೀ ಶಿರೋಮಂತ್ರ–

"ಓಂ ಆಪೋಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಃ ಸುವರೋಮ್" (ನಾ.ಉ. ೧೫,೨)

ಈ ಶಿರೋಮಂತ್ರವೂ ಪ್ರಣವವ್ಯಾಹೃತಿಗಳಂತೆ ಯಜುರ್ಲಕ್ಷಣದಿಂದ ಕೂಡಿದ್ದು ಗಾಯತ್ರೀಮಂತ್ರದಿಂದ ಬೇರೆಯಾಗಿಯೇ ಇದೆ. ಇದನ್ನು ಪ್ರಾಣಾಯಾಮಾದಿಗಳಲ್ಲಿ ವಿನಿಯೋಗಾರ್ಥವಾಗಿ ಸಂಗ್ರಹಿಸಿ, ಇದರ ವಿಶಿಷ್ಟಾರ್ಥವನ್ನು ಶ್ಲೋಕದಲ್ಲಿ ವರ್ಣಿಸಿದ್ದೇನೆ.

ಗಾಯತ್ರೀ ಶಬ್ದಾರ್ಥವು ವ್ಯುತ್ಪತ್ತಿ ಸಿದ್ಧವಾಗಿ ಸುಪ್ರಸಿದ್ಧವಾಗಿದೆ.

"ಗಾಯಂತಂ ತ್ರಾಯಸೇ ಯಸ್ಮಾದ್ ಗಾಯತ್ರೀತ್ವಂ ತತಃ ಸ್ಮೃತಾ," ಜಪಮಾಡಿದವರನ್ನು ರಕ್ಷಿಸುವಳಾದ್ದರಿಂದ ನೀನು ಗಾಯತ್ರಿಯಾಗಿದ್ದೀಯೆ. ಇದೇ ಅರ್ಥದಲ್ಲಿ ಉಪನಿಷದ್ವಚನ.

"ಏವಂ ವೈಷಾಗಾಯೀತ್ರೀ ಅಧ್ಯಾತ್ಮಂ ಪ್ರತಿಷ್ಠಿತಾ ಸಾಹೈಷಾ ಗಯಾಽಸ್ತತ್ರೇ ಪ್ರಾಣಾ ವೈ ಗಯಾಃ ತದ್ಯದ್ ಗಯಾಽಸ್ತತ್ರೇ ತಸ್ಮಾದ್ ಗಾಯತ್ರೀ ನಾಮ" (ಬೃ.ಉ. ೫, ೧೪, ೪)

ಹೀಗೆ ಬೇರೆ ರೀತಿಯ ವ್ಯುತ್ಪತ್ತಿಯಿಂದಾಗಿ ಬೇರೆ ಅರ್ಥ, "ಗಾಯತ್ರೀ" ಎಂಬ ಹೆಸರು ತಾನೇ ಗಾನ ಮಾಡುತ್ತಾಳೆ. ಹಾಗೂ ರಕ್ಷಿಸುತ್ತಾಳೆ.

"ಗಾಯತ್ರೀ ಪಾ ಇದಂ ಸರ್ವಂ ಭೂತಂ ಯದಿದಂ ಕಿಂಚ, ವಾಗ್ ವೈ ಗಾಯತ್ರೀ, ವಾಗ್ ವಾ ಇದಂ ಸರ್ವಂ ಭೂತಂ ಗಾಯತಿ ತ್ರಾಯತೇ ಚ" (ಛಾಂ.ಉ. ೩, ೧೨, ೧)

ಇಲ್ಲಿ ಪ್ರತ್ಯಕ್ಷ ಬ್ರಹ್ಮರೂಪಿಯಾದ ವಾಚಕಶಕ್ತಿಯ ಈ ಸ್ವತಃಸಿದ್ಧವಾದ ಸಾಮರ್ಥ್ಯವು ಸರ್ವಭೂತಾರ್ಥಗಳನ್ನು ತಿಳಿಸುವಂಥಾದ್ದು. ಅದನ್ನು ಪ್ರಕಾಶಿಸುವದು ಅದನ್ನು ರಕ್ಷಿಸುವದು ಇದು ಸಾಮಾನ್ಯವಾಗಿ ಎಲ್ಲ ವಾಕ್ಕುಗಳಿಗೆ ಇರುವ ಶಕ್ತಿಯಾದರೆ, ಛಂದಸ್ಸ್ವತಿಯಾದ ಗಾಯತ್ರಿಯ ವೇದವಾಕ್ಕಿಗೆ ಇರುವ ವಿಶಿಷ್ಟ ಸಾಮರ್ಥ್ಯವನ್ನು ಅಂತಿಮ ಶ್ಲೋಕದಲ್ಲಿ ವಿವರಿಸಿದ್ದೇನೆ.

ಅದು ಹೀಗಿದೆ. ಗಾಯತ್ರೀಛಂದಸ್ಸಿನಿಂದ ಗುಪ್ತವಾದ ಆ ಪರಬ್ರಹ್ಮ ವಸ್ತುವನ್ನು ಈ ಗಾಯತ್ರೀ ತಾನೇ ಹೇಳುತ್ತಾಳೆ. ಹಾಗೆಯೇ ಬ್ರಹ್ಮೋಪದೇಶರೂಪವಾಗಿ ಬೋಧಿತವಾದ ಪ್ರಕಾಶನೆಗಾಗಿ ಶ್ರುತಿವೇತ್ತರಾದ ವಿದ್ವಾಂಸರಲ್ಲಿ ಅದನ್ನು ತಿಳಿದ ಅಭ್ಯುದಯವನ್ನು ತಿಳಿಸುವದೇ ಆರ್ಷೇಯತತ್ವವಾಗಿದೆ. ಅದನ್ನೇ ಉಪನಿಷತ್ತು–

"ಯಶ್ಛಂದಸಾಮೃಷಭೋ ವಿಶ್ವರೂಪಃ ಛಂದೋಭ್ಯೋಽಧ್ಯಮೃತಾತ್ ಸಂಬಭೂಮ ಸಮೇಂದ್ರೋಮೇಧಯಾ ಸ್ಪೃಣೋತು । ಅಮೃತಸ್ಯದೇವ ಧಾರಣೋಭೂಯಾಸಮ್ । ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿವಿಶ್ರುವಮ್ । ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ । ಶ್ರುತಂ ಮೇ ಗೋಪಾಯ ।" (ಶೀ.ಉ. ೪, ೧)

"ಓಂ ನಮೋಬ್ರಹ್ಮಣೇಧಾರಣಂ ಮೇ ಅಸ್ತ್ವನಿರಾಕರಣಂ ಧಾರಯಿತಾಭೂಯಾಸಂ ಕರ್ಣಯೋಃ ಶ್ರುತಂ ಮಾಚ್ಯೋಢ್ವಂ ಮಮಾಮುಷ್ಯ ಓಮ್" ಇತಿ (ನಾ.ಉ. ೭, ೬) ಆ ರಹಸ್ಯವನ್ನೇ ಈ ರೀತಿ ಹೇಳಿದೆ.

ಇಂದ್ರರೂಪೀ ಬ್ರಹ್ಮನಲ್ಲಿ, ಪ್ರಾರ್ಥನೆ, ಅಮೃತರೂಪಿಯಾದ ಜ್ಞಾನಧಾರಣೆ ಮಾಡಿದ್ದು ಸ್ಥಿರವಾಗಿ ನೆಲೆಸಲಿ. ನನ್ನ ಶರೀರ ದೃಢವಾಗಿರಲಿ. ಮಾತು ಜೇನಿನಂತೆ ಸವಿಯಿರಲಿ. ಬಹುವಾಗಿ ಕೇಳುವಂತಾಗಲಿ. ಕೇಳಿದ್ದು ಸ್ಥಿರವಾಗಿ ನೆಲೆಸುವಂತಾಗಲೀ ಈ ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಲ್ಲಿ ಬಿಡುವಂತಾಗದಿರಲಿ. ಅಂಥ ಧಾರಣಾಶಕ್ತಿಯನ್ನು ನೀಡು.

ಪ್ರಥಮಾಕಲಾ ಮುಗಿಯಿತು

॥ ದ್ವಿತೀಯಾಕಲಾ ॥ (ಎರಡನೆ ಕಲೆಯು)

॥ ಗಾಯತ್ರೀ-ಮಂತ್ರಾರ್ಥ-ಪ್ರಕಾಶಿಕಾ ॥

ಈಗ ಮೊದಲಿಗೆ ಅನ್ವಯಾನುಸಾರ ಗಾಯತ್ರೀ ಮಂತ್ರದ ಅರ್ಥವನ್ನು ತೋರಿಸಿದ್ದೇನೆ. ಯಃ, ನಃ, ಧಿಯಃ, ಪ್ರಚೋದಯಾತ್, ಸವಿತುಃ, ದೇವಸ್ಯ ತತ್, ವರೇಣ್ಯಂ, ಭರ್ಗಃ, ಧೀಮಹಿ ಈ ಹತ್ತುಪದಗಳಿಗೂ ಪ್ರತ್ಯೇಕವಾಗಿ ಅರ್ಥಸಮರ್ಥನೆ ಮಾಡಲಾಗಿದೆ. ಆಮೇಲೆ ಒಂದೇ ಶ್ಲೋಕದಲ್ಲಿ ಬರುವಂತೆ ಸಮಗ್ರ ಮಂತ್ರಾರ್ಥವನ್ನು ಹೇಳಿದೆ. ನಂತರ ಆಧಿಭೌತಿಕ ಆಧಿದೈವ, ಆಧ್ಯಾತ್ಮಿಕರೂಪ ತತ್ವತ್ರಯ ವಿಭಾಗದಿಂದ ವಿಶಿಷ್ಟವಾದ ವಿಮರ್ಶೆಯೊಡನೆ ಸಪ್ರಮಾಣವಾಗಿ ಆ ಮಂತ್ರಾರ್ಥವನ್ನು ಪ್ರತಿಪಾದಿಸಿದ್ದೇನೆ.

(೧) "ಯಃ" ಎಂಬುದಕ್ಕೆ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ಸಿದ್ಧನಾದ ಸವಿತೃದೇವತೆಯ ಹಾಗೂ ತದಂತರ್ಯಾಮಿ ಪುರುಷನ ಮತ್ತು ನಮ್ಮ ಅಂತರಾತ್ಮನನ್ನೂ ಬೋಧಿಸುವಂಥ ತತ್ವತ್ರಯಾನ್ವಿತವಾಗಿ ಸಮರ್ಥನೆಯನ್ನು ಒಂದೇ ಶಬ್ದದಿಂದ ಮೂರೂ ಅರ್ಥಗಳು ಬರುವಂತೆ ಮಾಡಿದೆ.

(೨) "ನಃ" ಎಂಬ ಈ ಪದಕ್ಕೆ ಷಷ್ಟೀ, ಚತುರ್ಥೀ, ದ್ವಿತೀಯಾ, (ನ, ಗೆ, ಅನ್ನು) ಎಂಬ ಮೂರೂ ವಿಭಕ್ತಿಯ ಅರ್ಥವನ್ನು ಸಂಗ್ರಹಿಸಿದೆ.

ಅಷ್ಟಾಧ್ಯಾಯೀ ಸೂತ್ರದಲ್ಲಿ ಈ ಬಗ್ಗೆ, "ಯುಷ್ಮದಸ್ಮದೋಃ ಷಷ್ಠೀಚತುರ್ಥೀ ದ್ವಿತೀಯಾಸ್ಥಯೋರ್ವಾಂ ನಾವೌ" (ಪಾ.ಸೂ. ೮, ೧, ೨೦)

"ಬಹುವಚನಸ್ಯ ವಸ್‌ನಸೌ" ಈ ಅರ್ಥದಲ್ಲಿ ಶಬ್ದಶಾಸ್ತ್ರಪ್ರಸಿದ್ಧವಾದ ಉದಾಹರಣೆ.

"ಸುಖಂ ವಾಂ ನೌ ದದಾತ್ವೀಶಃ ಪತಿರ್ವಾಮಪಿ ನೌ ಹರಿಃ ।
ಸೋಽವ್ಯಾದ್ ವೋ ನಃ ಶಿವಂ ವೋ ನೋ ದದ್ಯಾತ್ ಸೇವ್ಯೋಽತ್ರ ವಃ ಸ ನಃ ॥" (ಸಿ.ಕೌಮುದೀ)

ಅದರಂತೆ ಇಲ್ಲಿಯೂ ಕೂಡಾ "ನಃ," ಎಂಬ ಪದದಿಂದ ಆ ವಿಭಕ್ತಿತ್ರಯಗಳಿಂದ ಉಂಟಾಗುವ ಮೂರೂ ಅರ್ಥಗಳನ್ನು ಸಂಗ್ರಹಿಸಿದೆ. ಕಲ್ಪಲತೆಯ ತತ್ವತ್ರಯ ಸಮನ್ವಯದಿಂದ ವಾಚ್ಯಾರ್ಥ-ಲಕ್ಷ್ಯಾರ್ಥ, ಧ್ವನ್ಯಾರ್ಥ ಯೋಗದಿಂದಾಗಿ ಎಂಬುದು,

"ಪ್ರೇರಯೇನ್ನೋ ಧಿಯೋಽಸ್ಮಾಕಂ ಯೋಽಸ್ಮಾನ್ ಪ್ರತಿಧಿಯೋಽನುತಾಃ |
ಯೋಽಸ್ಮಭ್ಯಂ ಸರ್ವದೋಽಭೀಷ್ಟಃ ಸವಿತಾಽಸೌ ಚ ಸೋಽಪ್ಯಯಮ್ ||" ಇತಿ

"ಯಃ ನಃ ಅಸ್ಮಾಕಂ ಧಿಯಃ ಪ್ರೇರಯೇತ್," ಯಾವನು ನಮ್ಮ ಬುದ್ಧಿಯನ್ನು ಪ್ರೇರಿಸುವನೋ, ಎಂದು ಷಷ್ಠೀವಿಭಕ್ತಿಪರವಾದ ಅರ್ಥ. "ಯಃ ನಃ ಅಸ್ಮಾನ್ ಧಿಯಃ ಪ್ರತಿಪ್ರೇರಯೇತ್." ನಮ್ಮನ್ನು ಬುದ್ಧಿಯೆಡೆಗೆ ಪ್ರೇರಿಸಲಿ. ಬುದ್ಧಿಯ ವಿಷಯದಲ್ಲಿ ಪ್ರವೃತ್ತಿಯಾಗಲು ಅದರಂತೆ ಆ ಬುದ್ಧಿಗಳು ನಮ್ಮನ್ನು ಪ್ರತ್ಯಙ್ಮುಖವಾಗಿ ಮಾಡಲಿ. ವಿಷಯಗಳಿಂದ ನಿವೃತ್ತಿಯಾಗಲು ಎಂಬುದು ದ್ವಿತೀಯಾ ವಿಭಕ್ತಿಪರವಾದ ಇನ್ನೊಂದರ್ಥ "ಯಃ ನಃ ಅಸ್ಮಭ್ಯಂ ಇಷ್ಟಃ ಸರ್ವಾರ್ಥಸಿದ್ಧಿಕೃತೇ". ನಮಗೆ ಸರ್ವಾರ್ಥಸಿದ್ಧಿಗಾಗಿ ಪ್ರೇರಿಸಲಿ ಎಂಬುದು ಚತುರ್ಥೀವಿಭಕ್ತಿ ಪರವಾದ ಅರ್ಥ. ಈ ಮೂರೂ ಅರ್ಥಕ್ಕನುಗುಣವಾದ ಋಙ್ಮಂತ್ರಗಳನ್ನು ಅಂತ್ಯದಲ್ಲಿ ತೋರಿಸಿದೆ.

(೩) "ಧಿಯಃ" – ಇದು ದ್ವಿತೀಯಾ ಬಹುವಚನಾಂತ ಪದವು. "ಧೀಯಂತೇ ಆತ್ಮನಾ ಇತಿ ಧಿಯಃ," ತನ್ನಿಂದ ಧರಿಸಲ್ಪಡುತ್ತದೆ. "ಆತ್ಮಾನಂದಧತೇ ಇತಿ ಧಿಯಃ" ಆತನನ್ನು ಧರಿಸುತ್ತವೆ. "ವಿಷಯಾನ್ ವಾ ಆತ್ಮನಿ ದಧತಿ ಇತಿ ಧಿಯಃ," ವಿಷಯಗಳನ್ನು ತನ್ನಲ್ಲಿ ಧರಿಸುತ್ತವೆ. ಆಧೀಂದ್ರಿಯವು ಇಂದ್ರಾತ್ಮಬೋಧಕವಾದ್ದರಿಂದ ಇಂದ್ರಲಿಂಗತ್ವವನ್ನು ತೋರಿಸಿದೆ.

"ಇಂದ್ರಿಯಮಿಂದ್ರಲಿಂಗಮಿಂದ್ರದೃಷ್ಟಮಿಂದ್ರಸೃಷ್ಟಮಿಂದ್ರಜುಷ್ಟಮಿಂದ್ರದತ್ತಮಿತಿ ವಾ ||" (ಪಾ.ಸೂ. ೫, ೨, ೯೩)

ಇಂದ್ರರೂಪೀ ಆತ್ಮನ ಜ್ಞಾನಾದಿಗಳಿಗೆ ಸಾಧನವಾದ ಆಂತರ್ಯದ ಧೀ ಮೊದಲಾದ ಇಂದ್ರಿಯಗಳನ್ನು ಯಾರು ಪ್ರೇರಿಸುವರೋ ಎಂದರ್ಥ. ಇನ್ನೊಂದರ್ಥದಲ್ಲಿ "ಧೀಙ್ ಆಧಾರೇ" ಎಂಬ ದಿವಾದಿ ಆತ್ಮನೇ ಪದಿ ಧಾತುವಿನಿಂದಲೂ ಧೀ ಶಬ್ದ ನಿಷ್ಪನ್ನವಾಗುವದರಿಂದ ಆತ್ಮ ಬುದ್ಧಿಗಳ ಆಧಾರಾಧೇಯ ಭಾವತ್ವವು ತೋರುತ್ತದೆ. ಆತ್ಮವಸ್ತುರೂಪವಾದ ಚೇತನವೇ ಎಲ್ಲ ಧೀಗಳ ಆಧಾರಭೂತವಾದ ಆಂತರತಮವಾದ ಅಧಿಷ್ಠಾನವಾಗಿದೆ. ಅಂತೆಯೇ ಚೇತನಾತ್ಮನಿಗೆ ಸರ್ವವ್ಯವಹಾರಾಸ್ಪದೀ ಭೂತವಾದ ಆ ಧೀಗಳೇ ಸಾಧನಗಳಾಗಿವೆ.

(೪) "ಪ್ರಚೋದಯಾತ್" – ಪ್ರೇರಯೇತ್ "ಚುದ್ ಸಂಚೋದನೇ". ಚುರಾದಿಃ (೭೪) ಇಲ್ಲಿ ಆತ್ಮಚೇತನೆಯು ಬುದ್ಧಿಯ ಮೂರು ವಿಧವಾದ ವೃತ್ತಿಯನ್ನು ಪ್ರೇರಿಸುತ್ತದೆ. ಎಲ್ಲ ಜ್ಞಾನೇಂದ್ರಿಯಗಳಿಗೂ ಸ್ವಭಾವಸಿದ್ಧವಾದ ಪ್ರವೃತ್ತಿ-ನಿವೃತ್ತಿ-ನಿಷ್ಠಾರೂಪವಾದ ಮೂರು ವೃತ್ತಿಗಳಿವೆ. ಸತ್ಕರ್ಮದಲ್ಲಿ ಪ್ರವೃತ್ತಿ. ದುಷ್ಕರ್ಮದಿಂದ ನಿವೃತ್ತಿ. ಅತ್ಯಂತ ಹಿತನೂ,

ಅಂತರಾತ್ಮನೂ ಆದ ಪರಮಾತ್ಮನಲ್ಲಿ ನಿಷ್ಠೆ. ಇಲ್ಲಿ ಪ್ರಚೋದಯಾತ್ ಎಂಬ ಲಿಜಂತ ಕ್ರಿಯಾಪದಕ್ಕೆ ಪ್ರೇರಯೇತ್, ಪ್ರೇರಿಸಬೇಕೆಂಬುದೇ ಅರ್ಥ.

(೫) "ದೇವಸ್ಯ" – ಅಕಾರಾಂತ ಪುಲ್ಲಿಂಗ ದೇವ ಶಬ್ದದ ಷಷ್ಠೀ ಏಕವಚನಾಂತ ಪದ, "ದಿವ್" "ಕ್ರೀಡಾ ವಿಜಿಗೀಷಾ ವ್ಯವಹಾರ ದ್ಯುತಿಸ್ತುತಿ ಮೋದಸ್ವಪ್ನಕಾಂತಿಗತಿಷು, ದಿವಾದಿಃ ದೀವ್ಯತಿ" ಇತಿದೇವಃ, ದ್ಯುತ್, ದೀಪ್ತೌ ಭ್ವಾದಿಃ ದ್ಯೋತತೇ ಇತಿದೇವಃ ದ್ಯೋತಯತಿ ಇದರಿಂದ ಸ್ವಯಂ ಪ್ರಕಾಶನೂ ವಿಶ್ವಪ್ರಕಾಶಕನೂ ದೇವನು ಎಂದರ್ಥ. ಇದರಿಂದ ಜ್ಯೋತಿರ್ಮಯ ಯಾವುದೇ ಒಂದು ದಿವ್ಯವಿಭೂತಿಯಾಗಿದ್ದು ಮೂರು ವಿಧವಾದ ತತ್ವರೂಪ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ಸತ್ವವುಳ್ಳದ್ದಾಗಿ ಸವಿತೃಶಬ್ದಕ್ಕೆ ವಿಶೇಷಣವಾಗಿದೆ.

(೬) "ಸವಿತುಃ" ಸವಿತೃ ಎಂಬ ಋಕಾರಾಂತ ಶಬ್ದದ ಷಷ್ಠೀ ವಿಭಕ್ತಿಯ ಏಕವಚನಾಂತ ಪದ. "ಪೂಙ್ ಪ್ರಾಣಿಪ್ರಸವೇ", "ದಿವಾದಿ" ಹಾಗೂ "ಷೂಪ್ರೇರಣೇ ತುದಾಧಿ" ಈ ಎರಡು ಧಾತುಗಳ ಯೋಗದಿಂದ ಸರ್ವಭೂತಗಳ ಸ್ರಷ್ಟಾ ಹಾಗೂ ಪ್ರೇರಕನು ಸವಿತೃದೇವ. ಹೀಗೆ ಆತ ಉತ್ಪಾದಕನೂ ಪ್ರೇರಕನೂ ಆಗಿದ್ದಾನೆ. "ಅಂತತಃ", "ಬಾಹ್ಯತಃ", "ಪರತಃ" ಹೀಗೆ ಸವಿತೃ ಶಬ್ದಕ್ಕೂ ಮೂರು ಅರ್ಥ.

ಪ್ರತ್ಯಕ್ಷಸಿದ್ಧನಾದ ಭೌತಿಕವಾದ ಆಕಾಶದಲ್ಲಿ ಕಾಣುವ ಸೂರ್ಯ. ಅಲ್ಲಿಯೂ ಅಂತರ್ಗತನಾದ ಕೇವಲ ಚೇತನ ರೂಪನಾಗಿ ಅಧಿದೈವತ ತತ್ವದಿಂದ ಪರೋಕ್ಷಸಿದ್ಧನಾದ ದೇವತೆ ಒಂದು. ಹಾಗೂ ನಮ್ಮೆಲ್ಲರ ಅಂತರಂಗದಲ್ಲಿ ಪ್ರತ್ಯಗಾತ್ಮನಾಗಿದ್ದು ಎಲ್ಲ ಬುದ್ಧಿಗಳ ಪ್ರೇರಕ ಒಬ್ಬ.

"ಪ್ರತ್ಯಙ್‌ದೇವಾನಾಂ ವಿಶಃ ಪ್ರತ್ಯಙ್‌ಉದೇಷಿ ಮಾನುಷಾನ್ ।
ಪ್ರತ್ಯಙ್‌ವಿಶ್ವಂ ಸ್ವರ್ದೃಶೇ ॥"
"ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ" (ಋ.)
"ಯೋಽಸಾವಸೌ ಪುರುಷಃ ಸೋಽಹಮಸ್ಮಿ" (ಈ.ಉ. ೧೬)
"ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್" (ಶು.ಯ.ಸಂ. ೪೦, ೧೬)

(೭) "ತತ್" ಎಂಬುದು ಸರ್ವನಾಮಸಂಜ್ಞಕ. ನಪುಂಸಕಲಿಂಗದ ದ್ವಿತೀಯಾ. ಏಕವಚನಾಂತಪದವು. ಪರೋಕ್ಷದ ವಸ್ತುವನ್ನು ತೋರಿಸಲು "ತತ್" ಎಂದು ತೋರಿಸುತ್ತಾರೆ. "ತದಿತಿ ಪರೋಕ್ಷೇ ವಿಜಾನೀಯಾತ್," ಇದು ಪ್ರಸಿದ್ಧವಾಗಿದೆ.

"ತದಿದಾಸ ಭುವನೇಷು ಜ್ಯೇಷ್ಠಮ್". (ಋ. ೧೦, ೧೨೦, ೧)

"ತತ್ ಸವಿತುರ್ವೃಣೀಮಹೇಂ ಶ್ರೇಷ್ಠಂ ಸರ್ವಧಾತಮಮ್" (ಋ. ೫, ೮೨, ೧)

"ಓಂತತ್ ತದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ" ಎಂಬ ಗೀತಾವಚನವು ಸುಪ್ರಸಿದ್ಧವಾಗಿದೆ.

(೮) "ವರೇಣ್ಯಮ್" – ವರಿಸಲು ಯೋಗ್ಯವಾದದ್ದೆಂದರ್ಥ. "ವೃಞ್ ವರಣೇ" ಸ್ವಾದಿಃ, "ವೃಞ್ ಆವರಣೇ" ಚುರಾದಿಃ, ವಾರಯತಿ ಹೀಗೆ ಧಾತ್ವರ್ಥಯೋಗದಿಂದ ಉಭಯಾರ್ಥ ಸಿದ್ಧಿಯಾಗುತ್ತದೆ. ಇಲ್ಲಿಯೂ ಸಹ ತತ್ವತ್ರಯ ಯೋಗದಿಂದ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷಗಳ ಸ್ವರೂಪವನ್ನು ಅನುಸಂಧಾನ ಮಾಡಬೇಕು. ಆದಿತ್ಯಾದಿಗಳಲ್ಲಿ ನಮ್ಮ ಕಣ್ಣಿಗೆ ಗೋಚರಿಸುವದು ಪ್ರತ್ಯಕ್ಷ. ತದಂತರ್ಯಾಮಿಯಾಗಿರುವದು ಪರೋಕ್ಷ. ಹಾಗೂ ಅಪರೋಕ್ಷ ಅಂತರ್ಹಿತವಾಗಿ ಪ್ರತ್ಯಗಾತ್ಮಸಿದ್ಧ. ಹೀಗೆ ವರೇಣ್ಯಂ ಎಂಬ ಪದವು ತೇಜಸ್ಸಿಗೆ ವಿಶೇಷಣವಾಗಿದೆ. "ವರೇಣ್ಯಂ ಭರ್ಗಃ" ಎಂತ ಅನ್ವಯವಿರುವದರಿಂದ

(೯) "ಭರ್ಗಃ" – ಈ ಪದವು ಸಕಾರಾಂತ ನಪುಂಸಕ ದ್ವಿತೀಯಾ ಏಕವಚನಾಂತ ಪದವು. "ಭರ್ಗಸ್" ಎಂಬುದು ಆರ್ಷೇಯವಾದ ರೂಪ. "ಭ್ರಸ್ಜಪಾಕೇ ತುದಾದಿ ಗಣೇಯ," ಈ ಧಾತ್ವರ್ಥ ಯೋಗದಿಂದ ಪಾಕಸತ್ವವುಳ್ಳ ಸೂಕ್ಷ್ಮತಮ ಜ್ಯೋತಿರ್ವಾಚಕಪದ. ರುದ್ರನಿಗೆ ಭರ್ಗಃ ಎಂದಿದೆ. ಆದರೆ ಅದು ಅಕಾರಾಂತ ಪುಲ್ಲಿಂಗ "ಹರಃಸ್ಮರ ಹರೋ ಭರ್ಗಃ" ಎಂದು. ಆದರೂ ಇಲ್ಲಿ ದಿವ್ಯ ಹಾಗೂ ದೇವತಾಸತ್ವವುಳ್ಳ ಕಾಲಾಗ್ನಿರುದ್ರಾದಿ ಜ್ಯೋತಿಃಸ್ವರೂಪವು ಪರೋಕ್ಷಸಿದ್ಧವಾದದ್ದು. ವಿದ್ಯುತ್-ಅಗ್ನಿ-ಸೂರ್ಯಾದಿರೂಪ ಭೌತಿಕ ಶಕ್ತಿಯು ಪ್ರತ್ಯಕ್ಷ ವಾಗಿದೆ. ಆಂತರ್ಯದ ಆಧ್ಯಾತ್ಮಿಕ ಚೈತನ್ಯ ರೂಪವೇ ಆ ಭರ್ಗಃ ಅದೇ ಶ್ರೇಷ್ಠವಾದದ್ದು ಎಂಬುದೇ ಅರ್ಥ.

(೧೦) "ಧೀಮಹಿ" – ಇದು ಕ್ರಿಯಾಪದ. ಧ್ಯೈ ಚಿಂತಾಯಾಂ (ಭ್ವಾದಿ) ಧ್ಯಾನಾರ್ಥಕವಾಗಿ ಆತ್ಮನೇಪದ, ಲಿಙ್‌ಲಕಾರ ಉತ್ತಮಪುರುಷ ಬಹುವಚನಾಂತವಾದ ಪದ. ಇದು "ಆರ್ಷರೂಪ, ಧ್ಯಾಯೇಮಹಿ" ಎಂಬುದು.

"ಧ್ಯಾಯೇಮಹಿ ಪ್ರತೇವಯಂ" (ಋಕ್) ಆದ್ದರಿಂದ ಅದನ್ನು ವ್ಯಾಖ್ಯಾನಿಸುವಾಗ "ಧೀಮಹಿ ಧ್ಯಾಯಾಮಃ" (ಆ.ಗೃ.ಪರಿ.) ಸೂತ್ರದಲ್ಲಿ ನಿದರ್ಶನ ಕಂಡು ಬರುತ್ತದೆ. ಹಾಗೆಯೇ ಧೀಙ್, ಆಧಾರೇ ದಿವಾದಿ. ಆತ್ಮನೇಪದಿ ಆಧಾರಾರ್ಥಕ ಧೀಙ್ ಧಾತುವಿನ ಲಿಙ್‌ಲಕಾರ ಉತ್ತಮಪುರುಷ ಬಹುವಚನಾಂತ ಪದ. ಅಂತೆಯೇ ಧಾಞ್ ಧಾರಣಪೋಷಣಯೋಃ ಈ ಧಾತುವಿನ ರೂಪವೂ ಧೀಮಹಿ ಎಂದಾಗಬಹುದಾಗಿದೆ. "ಛದಿರಧಿನಿಧೀಯತೇ" (ಐ.ಬ್ರಾ...) ಆಗ ಸಂಸ್ಥಾಪನೆ ಎಂತಲೇ ಅದರ ಅರ್ಥವಾಗುತ್ತದೆ. ನಿಧಿರೂಪವಾಗಿ ಧನವನ್ನು ಇಡುತ್ತಾರೆ. ಸಮಾಧಿ ಎಂತಲೂ ಅರ್ಥ ಮಾಡಬಹುದು. "ಮನಃ ಸಮಾಧೀಯತಾಂ" ಎಂದಂತೆ ಯೋಗಶಾಸ್ತ್ರದಲ್ಲಿ ಪತಂಜಲಿ ಮಹರ್ಷಿಗಳು ಈ ಮೂರೂ ಅರ್ಥಗಳ ಯೋಗದಿಂದ ಬೇರೆಬೇರೆಯಾಗಿ ಅಭಿಧಾನ, ಅಭಿಧೇಯಗಳನ್ನು ತೋರಿಸಿದ್ದಾರೆ. ಧಾರಣಾ-ಧ್ಯಾನ-ಸಮಾಧಿ ಎಂದು.

"ದೇಶಬಂಧಶ್ಚಿತ್ತಸ್ಯಧಾರಣಾ," "ತತ್ರ ಪ್ರತ್ಯಯೈಕತಾನತಾಧ್ಯಾನಮ್, ತದೇವಾರ್ಥಮಾತ್ರ ನಿರ್ಭಾಸಂ ಸ್ವರೂಪಶೂನ್ಯಮಪಿ ಸಮಾಧಿಃ." "ಧಾಞ್" ಧಾತುವಿನಿಂದ, ಧಾರಣಾ, "ಧ್ಯೈ"

ಧಾತುವಿನಿಂದ ಧ್ಯಾನ. "ಧೀಜ್" ಧಾತುವಿನಿಂದ ಸಮಾಧಿ ಎಂದು ಮೂರೂ ಅರ್ಥಗಳೂ ಕಾಣುತ್ತವೆ. ಕಾರಣ "ಧೀಮಹಿ" ಎಂಬ ಒಂದೇ ಕ್ರಿಯಾಪದದಿಂದ ಮೂರೂ ಅರ್ಥಗಳನ್ನು ಕಾಣಿಸಿದ್ದು ಯುಕ್ತವಾಗಿದೆ. ಆ ಜ್ಯೋತಿಸ್ಸಿನ ಧ್ಯಾನ, ಅದರಲ್ಲಿ ನಿಷ್ಠೆ ಮತ್ತು ಅದರಲ್ಲಿಯೇ ವಿಲೀನವಾಗುವಿಕೆ, ಇವು ಸ್ವರೂಪಗಳು. ತತ್ವದೃಷ್ಟಿಯಿಂದ ಸಂಪನ್ನವಾದ ಲಕ್ಷಣಗಳು. ಹೀಗೆ "ಧೀಮಹಿ," ಎಂಬ ಕ್ರಿಯಾಪದದ ವಾಚ್ಯಾರ್ಥ-ಲಕ್ಷ್ಯಾರ್ಥ, ಧ್ವನ್ಯಾರ್ಥಾದಿ ತತ್ವಸಿದ್ಧವಾದ, ಸಾಂಕೇತಿಕ ಭಾಷಾನುವಿದ್ಧವಾದ ಅರ್ಥವು, ಹೀಗೆ ಸಂಕ್ಷೇಪವಾದ ಅದರ ಸಮರ್ಥನೆ. ೧೬ನೇ ಶ್ಲೋಕದಲ್ಲಿ ಮೊದಲು ಗಾಯತ್ರಿಯ ಅರ್ಥವನ್ನು ತಿಳಿಯಲು ಅನುಕೂಲವಾಗುವಂತೆ ಸಮಗ್ರ ಮಂತ್ರಾರ್ಥವನ್ನು ತಿಳಿಸಿದೆ. ಆಶ್ವಲಾಯನಗೃಹ್ಯ ಪರಿಶಿಷ್ಟ ಸೂತ್ರದಂತೆ,

ಯಃ ಸವಿತಾನಃ ಅಸ್ಮಾಕಂ ಧಿಯೋಧರ್ಮಾದಿ ವಿಷಯಬುದ್ಧೀಃ ಪ್ರಚೋದಯಾತ್ ಪ್ರೇರಯೇತ್, ತದ್ ವರೇಣ್ಯಂ ವರಣೀಯಂ ದೇವಸ್ಯ ಸವಿತುಃ ಭರ್ಗಃ ಪ್ರಾಜಾಪತ್ಯಂ ತೇಜೋಮಯಂ ರೂಪಂ ವಯಂ ಧೀಮಹಿ ಧ್ಯಾಯಾಮಃ ।

ಯಾವ ಸವಿತೃದೇವತೆಯು ನಮ್ಮ ಧರ್ಮಾದಿ ವಿಷಯಕ ಉತ್ತಮ ಬುದ್ಧಿಯನ್ನು ಪ್ರೇರಿಸುತ್ತದೋ ಆ ಶ್ರೇಷ್ಠವಾದ ಆತನ ತೇಜೋಮಯವಾದ ರೂಪವನ್ನು ನಾವು ಧ್ಯಾನಿಸುತ್ತೇವೆ. ಆಮೇಲೆ ಆಧಿಭೌತಿಕಾದಿತತ್ವತ್ರಯರೂಪವಾಗಿ ಇದರ ಅರ್ಥವನ್ನು ಬೇರೆಬೇರೆಯಾಗಿ ತೋರಿಸಿದೆ.

ಅಧಿಭೌತಿಕ :

ಆಧಿಭೌತಿಕತತ್ವದಂತೆ ಬಹಿರ್ಬ್ರಹ್ಮಾಂಡದಲ್ಲಿ ತೋರುತ್ತಿರುವ ಜ್ಯೋತಿರ್ಮಯನಾಗಿ ಪ್ರತ್ಯಕ್ಷವಾಗಿ ವಿಶ್ವಪ್ರಕಾಶಕನಾದ ಸೂರ್ಯನೇ ಸವಿತಾ. ಜ್ಯೋತಿ ಸ್ವರೂಪನಾದ ಈತನು ಎಲ್ಲ ಪ್ರಾಣಿಗಳ ಕಣ್ಣಿನಲ್ಲಿ ಪ್ರವೇಶಿಸಿ ಅಂತರಂಗದಲ್ಲಿ ಪ್ರಸುಪ್ತ ಹಾಗೂ ಜಾಗೃತವಾಗಿರುವ ಸ್ತಬ್ಧವಾದ ಎಲ್ಲ ಬುದ್ಧಿಗಳನ್ನು ಪ್ರೇರಿಸಿ ಹೊರಗಿನ ವಿಷಯಗಳಲ್ಲಿ ಪ್ರವರ್ತನೆ ಹಾಗೂ ಅವುಗಳಿಂದ ನಿವರ್ತನೆ ಮಾಡಿ ಅಭೀಷ್ಟವಾದ ವಸ್ತುವಿನ ವಿಷಯದಲ್ಲಿ ಆ ಬುದ್ಧಿಗಳನ್ನು ಸ್ಥಿರವಾಗಿ ನೆಲೆಸುತ್ತಾನೋ ಆ ಸವಿತೃದೇವತೆಯ ಶ್ರೇಷ್ಠವಾದ ಹಾಗೂ ಅನುಗ್ರಾಹಕವಾದ ದಿವ್ಯ ತೇಜಸ್ಸನ್ನು ಧ್ಯಾನಿಸುತ್ತೇವೆಂಬ ಮಂತ್ರಾರ್ಥಧ್ಯಾನದೊಂದಿಗೆ ಪ್ರತಿದಿನ ಸಂಧ್ಯೋಪಾಸನಾಕಾಲದಲ್ಲಿ ಗಾಯತ್ರೀಮಂತ್ರದ ಜಪಾನುಷ್ಠಾನ ಮಾಡಬೇಕು.

ಅಧಿದೈವತ :

ಅಧಿದೈವತ ವಿಷಯದಲ್ಲಿ ವಿದ್ವಾಂಸರು ಹೇಳುವಂತೆ ಸೂರ್ಯಮಂಡಲಾಂತರ್ಗತನಾದ ಸವಿತಾ ಕೇವಲ ಚೈತನ್ಯಸ್ವರೂಪನೂ ಪರೋಕ್ಷ ಸಿದ್ಧನೂ ಬಾಹ್ಯದೃಷ್ಟಿಗೆ ಅಗೋಚರನೂ ಪರಮಾತ್ಮ, ಪರಮಪುರುಷ, ಪರಬ್ರಹ್ಮನೆಂದು ವೇದಪ್ರತಿಪಾದ್ಯನಾದವನು. ಆತ ಸ್ವಯಂ ಪ್ರಕಾಶನೂ ವಿಶ್ವಪ್ರಕಾಶಕನೂ ಪರಮಪುರುಷನೂ ಇರುತ್ತಾನೆ. ಆತನ ಆ ಪರೋಕ್ಷವೂ

ವರ್ಣನೀಯವೂ ಶ್ರೇಷ್ಠವೂ ಆದ ಜ್ಯೋತಿಯನ್ನು ಪಡೆಯಲು ಅದನ್ನೇ ಅನುಲಕ್ಷಿಸಿ ಚಿಂತಿಸುತ್ತಾ ಆ ವಿಶ್ವಾಧಿಷ್ಠಾನರೂಪವಾದ ಪರಮಪದದಲ್ಲಿ ತನ್ನ ಎಲ್ಲ ಬುದ್ಧಿಗಳನ್ನು ಅಲ್ಲಿ ಸಮರ್ಪಿಸಿ ಹಾಗೆಯೇ ಅಲ್ಲಿಯೇ ವಿಲೀನನಾಗಿದ್ದೇನೆಂದು ಭಾವಿಸಿ ತಾದಾತ್ಮ್ಯ ಹೊಂದುವದು.

ಅಧ್ಯಾತ್ಮ :

ಅಧ್ಯಾತ್ಮ ತತ್ವದಲ್ಲಿ ನಮ್ಮ ಅಂತರಾತ್ಮನೇ ಸವಿತಾ. ಆತನೇ ಎಲ್ಲ ಬುದ್ಧಿಗಳನ್ನು ಕರ್ಮಗಳನ್ನು ಪ್ರೇರಿಸುತ್ತಾನೆ. ವಿಷಯಗಳಲ್ಲಿ ಪ್ರವರ್ತಿಸುತ್ತಾನೆ. ಹಾಗೆಯೇ ಆತ್ಮನಲ್ಲಿ ಆಕರ್ಷಿಸಿ ಪುನಃ ಪ್ರತಿಸಂಧಾನ ಮಾಡಿ ದಿವ್ಯರೂಪನೂ ಸಚೇತನನೂ ಎಲ್ಲ ಜ್ಞಾನೇಂದ್ರಿಯಗಳ ಪ್ರೇರಕನೂ ಆದ ಅಂತರಾತ್ಮನ ಆಂತರ್ಯ ಚೈತನ್ಯವನ್ನನುಲಕ್ಷಿಸಿ ಬಾಹ್ಯ ಚಕ್ಷುಸ್ಸಿನಿಂದ ಸೂರ್ಯನ ತೇಜಸ್ಸನ್ನು ನೋಡಿ ಪ್ರತ್ಯಗಾತ್ಮನನ್ನು ಅನುಚಿಂತಿಸಿ ಸ್ವಸ್ವರೂಪದಲ್ಲಿ ನಿಲ್ಲಿಸಬೇಕು.

ಹೀಗೆ ಇಲ್ಲಿ ಗಾಯತ್ರೀ ಮಂತ್ರಾರ್ಥವನ್ನು ತಿಳಿಸಿದ್ದರೂ ಇನ್ನೂ ಉಳಿದ ಅನೇಕ ವಿಷಯಗಳ ಪ್ರಮಾಣವನ್ನು ಆರು ಕಲೆಗಳಿಂದ ಪ್ರಕಟಿಸುತ್ತೇನೆ. ಈ ಮಂತ್ರದ ಅರ್ಥ ವಿಷಯದಲ್ಲಿ ಹಿಂದಿನ ಆಚಾರ್ಯರ ಹಾಗೂ ಈಗಿನ ವಿದ್ವಾಂಸರ ಅನೇಕ ವ್ಯಾಖ್ಯಾನಗಳಿಗೆ ಆ ಎಲ್ಲ ಅರ್ಥಗಳ ಸಮನ್ವಯವೇ ಈ ಕಲ್ಪಲತೆಯಾಗಿದೆ.

ಅಲ್ಲಿಯೂ ಜೈನಮತಾವಲಂಬಿಗಳಾದ ಜಿನೇಂದ್ರಸೂರಿಯವರ ಅನೇಕ ವಿಚಾರಗಳಿಂದ ಕೂಡಿ ಬಹುವಿಸ್ತಾರವಾದ, ಅಂತೆಯೇ ಪಾಶ್ಚಾತ್ಯ ವಿದ್ವಾಂಸರಾದ ಮ್ಯಾಕ್ಸಮುಲ್‌ರು, ಮೆಕಡಾನಲ್ ಮೊದಲಾದವರ ಗಾಯತ್ರೀ ಭಾಷ್ಯವೂ ಇದೆ. ಅವರು ತಮ್ಮ ತಮ್ಮ ಮತಕ್ಕನುಗುಣವಾಗಿ ತತ್ವಭೇದದೃಷ್ಟಿಯಿಂದ ಅರ್ಥವ್ಯಾಖ್ಯಾನಗಳು ಬೇರೆಬೇರೆಯಾಗಿದ್ದರೂ ಗಾಯತ್ರೀಮಂತ್ರ ಒಂದೇ ಆಗಿದೆ. ಕೆಲವರು ಕೇವಲ ತತ್ವಜ್ಞಾನಕ್ಕಾಗಿ, ಕೆಲವರು ಧ್ಯಾನಕ್ಕಾಗಿ, ಇನ್ನೂ ಕೆಲವರು ಸಂಧ್ಯೋಪಾಸನಾದಿಗಳಲ್ಲಿ ಜಪಗಳಲ್ಲಿ ಧೀಯೋಗಸಿದ್ಧಿಗಾಗಿ, ಅಂತೂ ಗಾಯತ್ರೀಮಂತ್ರ ಅವಲಂಬನ ಎಲ್ಲರಿಗೂ ಸಮಾನವಾದದ್ದೇ ಆಗಿದೆ.

ಹೀಗೆ ಮತಭೇದದಿಂದ ವ್ಯಾಖ್ಯಾನ ಮಾಡಿದ್ದರೂ ಪರಸ್ಪರ ವಿರೋಧಾಭಾಸವಿದ್ದ ಈ ವಿಷಯದಲ್ಲಿ ಕಲಹವಾಗಲಿ ಖಂಡನ-ಮಂಡನಾದಿ ಕೋಲಾಹಲವಾಗಲೀ ಇಲ್ಲ. ಕಲ್ಪವೃಕ್ಷವನ್ನು ಭಕ್ತಿಯಿಂದ, ಶಕ್ತಿಗನುಗುಣವಾಗಿ ಆಶ್ರಯಿಸಿದಾಗ ಸಮಾನವಾದ ಫಲವನ್ನು ಪಡೆಯು-ವಂತೆಯೂ ಜಗದ್ಭಾಸಕನಾದ ಸೂರ್ಯನು ಎಲ್ಲರಿಗೂ ಸಮಾನವಾದ ಪ್ರಕಾಶವನ್ನು ನೀಡುವಂತೆ ಬ್ರಹ್ಮಸಂವಿತ್ತತ್ವದಿಂದ ಉದಿತಳಾದ ಪ್ರತ್ಯಕ್ಷ ಬ್ರಹ್ಮಸ್ವರೂಪಿಯೂ ವೇದ ಮಾತೆಯೂ ಆದ ಗಾಯತ್ರಿಯು ನಮ್ಮೆಲ್ಲರನ್ನೂ ತಾಯಿಯಂತೆ ಸರ್ವಾತ್ಮನಾ ರಕ್ಷಿಸುತ್ತಾ ಸರ್ವಾರ್ಥಸಾಧಕಳಾಗಿದ್ದಾಳೆ. ಇವಳೇ ನಮ್ಮ ಭಾರತೀಯ ಸಂಸ್ಕೃತಿ ರಕ್ಷಣೆಗಾಗಿ ಹಾಗೂ ಭಾರತೀಯರ ಆರ್ಷೇಯ ದಿವ್ಯವೈದಿಕಸಂಸ್ಕೃತಿಯ ಅಭ್ಯುದಯಕ್ಕಾಗಿ ಇವಳೇ ಶರಣ್ಯಳೂ

ವರೇಣ್ಯಳೂ ಆಗಿದ್ದು ಸರ್ವಸಂಪತ್ಸಮೃದ್ಧಿಗೂ ಶ್ರೇಯಃ ಪ್ರೇಯಾದಿಗಳಿಗೂ ಅಮೃತತ್ವ ಪ್ರಾಪ್ತಿಗೂ ಕಾರಣಳಾಗಿದ್ದಾಳೆ.

ವಸ್ತುತಃ ಇವಳು ಕೇವಲ ಭಾರತೀಯರಿಗಷ್ಟೇ ತಾಯಿಯಲ್ಲ. ಎಲ್ಲ ಮಾನವರ, ಎಲ್ಲ ಜೀವಗಳ ದೇವದಾನವರಿಗೂ ಸಹ ಸದ್ಬುದ್ಧಿಯನ್ನು ನೀಡುವ ಬ್ರಹ್ಮಾತ್ಮಳಾದ ದಿವ್ಯ ವಿಭೂತಿಯಾಗಿದ್ದಾಳೆ. ಅಂತೆಯೇ ಈ ಕಲ್ಪಲತೆಯೂ ಕೂಡ ಎಲ್ಲರ ಸರ್ವಾರ್ಥಸಿದ್ಧಿಗೆ ಕಾರಣವಾಗಲಿ ಎಂದು ಆಶಿಸುತ್ತೇನೆ.

ಮೂರನೆಯ ಕಲೆ

ಗಾಯತ್ರಿಯ ತಾತ್ವಿಕವಾದ ಸ್ವರೂಪ :

ಹೀಗೆ ಸಮರ್ಥಿತವಾದ ಗಾಯತ್ರೀ ಮಂತ್ರಾರ್ಥದಲ್ಲಿ ಆವಾಚಕ ಶಕ್ತಿರೂಪಳಾದ ಛಂದಸ್ಸತೀ ಗಾಯತ್ರಿಯ ಸ್ವರೂಪತತ್ವವನ್ನು ತಿಳಿಸುವದಕ್ಕಾಗಿ ಈ ಕಲೆಯು ಇರುತ್ತದೆ. ವೇದದಲ್ಲಿ ಪರಮಪುರುಷನ ಜ್ಞಾನಪ್ರಧಾನವಾದ ವಾಕ್‌ತತ್ವರೂಪ ಜ್ಯೋತಿರ್ಮುಖದಿಂದ ಇಂದ್ರ ಮತ್ತು ಅಗ್ನಿಗಳ ಆವಿರ್ಭಾವ, ಅದೇ ಜ್ಯೋತಿರಾತ್ಮನಾದ ಅಗ್ನಿಯಿಂದ ವಾಗ್ರೂಪವಾದ ಗಾಯತ್ರಿಯ ಉತ್ಪತ್ತಿ. ಆ ಪ್ರತ್ಯಕ್ಷ ಬ್ರಹ್ಮರೂಪಳಾದ ಆ ಗಾಯತ್ರಿಯೇ ಎಲ್ಲ ಛಂದಸ್ಸುಗಳ ಜನನಿ ಆಗಿರುತ್ತಾಳೆ.

"ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ" (*ಋ. ೧೦, ೯೦, ೧೩*)

"ಮುಖಾದಗ್ನಿ ರಜಾಯತ" (*ಶು.ಯ.ಸಂ. ೩೦, ೧೩*)

"ಅಗ್ನೇರ್ಗಾಯತ್ರ್ಯಭವತ್ ಸಯುಗ್ವೋ" (*ಋ. ೧೦, ೧೩೦, ೪*)

"ಗಾಯತ್ರೀ, ಈಂ ಛಂದಸಾಂಮಾತಾಽಇದಂ ಬ್ರಹ್ಮಜುಷಸ್ವಮೇ ನಃ ಇತಿ ಚ" (ನಾ.ಉ. ೧೪)

ಇದರಿಂದ ಛಂದಸ್ಸತೀಗಾಯತ್ರಿಯ ವಾಚಕ ಶಕ್ತಿತತ್ವಸಿದ್ಧವಾದ ವಾಗ್ರೂಪತ್ವ ಅವಳೇ ಪ್ರತ್ಯಕ್ಷ ಬ್ರಹ್ಮರೂಪಳಾಗಿದ್ದಾಳೆ ಎಂಬುದಕ್ಕೆ ಉಪನಿಷದ್ ಬ್ರಾಹ್ಮಣ ವಚನವು ಸ್ಪಷ್ಟವಾಗಿ ತಿಳಿಸಿದೆ.

"ಗಾಯತ್ರೀ ವಾ ಇದಂ ಸರ್ವಂಭೂತಂ ಯದಿದಂ ಕಿಂಚ, ವಾಗ್ ವೈ ಗಾಯತ್ರೀ, ವಾಗ್ವಾಽಇದಂ ಸರ್ವಂಭೂತಂ ಗಾಯತಿ ತ್ರಾಯತೇ ಚ" ಇತಿ (ಛಾಂ.ಉ. ೩, ೧೨, ೧)

ಇಲ್ಲಿ ಸರ್ವಭೂತತತ್ವರೂಪದಿಂದ ನಾಮರೂಪಕವಾದ ವಾಚಕತ್ವದಿಂದ ವ್ಯಾಪ್ತವಾದುದರಿಂದ ಗಾಯತ್ರಿಗೆ ವಾಗ್ರೂಪವನ್ನೂ, ಗಾಯನ ಮತ್ತು ಸಂತ್ರಾಣದಿಂದ ಗಾಯತ್ರೀತ್ವವನ್ನು ಪ್ರತಿಪಾದಿಸಿದೆ.

ಅದರಂತೆ ಗಾಯತ್ರಿಯ ಪರಮತತ್ವ ಸ್ವರೂಪವನ್ನು ಸಹ, ಬೃಹದಾರಣ್ಯಕ ಉಪನಿಷತ್ತಿನಲ್ಲಿ "ತಸ್ಯಾ ಉಪಸ್ಥಾನಂ, ಗಾಯತ್ರ್ಯಸ್ಯೇಕಪದೀದ್ವಿಪದೀತ್ರಿಪದೀಚತುಷ್ಪದೀ, ಅಪದಸಿ

ನ ಹಿಪದ್ಯಸೇ, .ನಮಸ್ತೇ ತುರೀಯಾಯ ದರ್ಶತಾಯ ಪದಾಯ ಪರೋರಜಸೇ, ಅಸಾವದೋ ಮಾಪ್ರಾಪದ್, ಅಹಮದಃ ಪ್ರಾಪಮ್" (ಬೃ.ಉ. ೪, ೧೪, ೭)

ಗಾಯತ್ರ್ಯುಪಸ್ಥಾನರೂಪವಾದ ಶುಕ್ಲಯಜುರ್ವೇದ ಮಂತ್ರವು ಉಪನಿಷತ್ತಿನಲ್ಲಿ ಉಪದೇಶಿಸಿದ್ದು ಪ್ರಸಿದ್ಧವಾಗಿದೆ. ಅದರ ಒಂದು ಪಾದ ಚೈತನ್ಯ, ದ್ವಿಪಾದತ್ವವು ಚಿತ್ ಮತ್ತು ಅಚಿತ್ತುಗಳಿಂದ, ತ್ರಿಪಾತ್ತ್ವವು, ವ್ಯಾಹೃತಿಗಳು ೩ (ಭೂಃ ಭುವಃ ಸುವಃ), ಭುವನಗಳು ೩ (ಪೃಥಿವೀ ಅಂತರಿಕ್ಷಂದ್ಯೌಃ) ತ್ರಯೀ ೩ (ಋಕ್, ಯಜುಃ, ಸಾಮ), ಎಂಬ ರೂಪದಿಂದ ಚತುಷ್ಪಾತ್ತ್ವವು ವಾಕ್ಕಿನ, ಹಾಗೂ ಪುರುಷನ ೪ ಪಾದಗಳ ಸತ್ವದಿಂದ ಇವೆಲ್ಲವೂ ವಾಚಕಶಕ್ತಿ ಹಾಗೂ ವಾಚ್ಯವಸ್ತುರೂಪಗಳ ವಾಕ್ ಪುರುಷರ, ವಾಕ್ ಬ್ರಹ್ಮರ ವಾಕ್ ಆತ್ಮಗಳಿಬ್ಬರಿಗೂ ಸಮಾನವಾಗಿದೆ.

ವಾಕ್ಕಿನ ಚತುಷ್ಪಾತ್ತ್ವಂ=

"ಚತ್ವಾರಿ ವಾಕ್ ಪರಿಮಿತಾ ಪದಾನಿ" *(ಋ. ೧, ೧೬೪, ೪೫)*

"ಗೌರೀರ್ಮಿಮಾಯ ಸಲಿಲಾ ನಿತಕ್ಷತೀ, ಏಕಪದೀ-ದ್ವಿಪದೀ-ಸಾ ಚತುಷ್ಪದೀ"
(ಋ. ೧, ೧೬೪, ೪೧)

ಪರಮಪೂರುಷಸ್ಯಾಪಿ ಚತುಷ್ಪಾತ್ ಸ್ವರೂಪತ್ವಮ್–

"ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ" *(ಋ. ೧೦, ೯೦, ೩)*

"ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್" *(ಋ. ೧, ೨೨, ೧೭)*

"ತದ್ ವಿಷ್ಣೋಃ ಪರಮಂ ಪದಂ ಸದಾಪಶ್ಯಂತಿ ಸೂರಯಃ" *(ಋ. ೧, ೨೨, ೨೦)*

ಹೀಗೆ ಪರಮಪುರುಷನ ಮೂರುಪಾದಗಳಲ್ಲಿ ಎಲ್ಲ ಭೂತಗಳು ಹಾಗೂ ದ್ಯುಲೋಕದಲ್ಲಿ ಪರಮಪದ ಒಂದು. ಹೀಗೆ ವಾಕ್ ಮತ್ತು ಪುರುಷರ ಚತುಷ್ಪಾತ್ತ್ವವನ್ನು ನಿರೂಪಿಸಿದೆ. ವಾಸ್ತವಿಕವಾಗಿ ಪೂರ್ಣರೂಪಿಯಾದ ಆತ ಪಾದರಹಿತ, ಅಪಾತ್, ಎಂಬುದೂ ಸಿದ್ಧ. "ಅಪದಸಿ ನಹಿಪದ್ಯಸೇ" ನಾಮರೂಪ ಗುಣಧರ್ಮಾದಿಗಳ ಇಲ್ಲದಿರುವಿಕೆಯೇ ಅಪಾದ್ರೂಪತತ್ವವು. ಇದನ್ನು ಋಗ್ವೇದ,

"ಅಪಾದೇತಿ ಪ್ರಥಮಾ ಪದ್ವತೀನಾಮ್" *(ಋ. ೧, ೧೫೨, ೩)*

"ಅಪಾದಗ್ರೇ ಸಮಭವತ್ ಸೋ ಅಗ್ರೇ ಸ್ವತರಾಭವತ್" (ಆರ್ಥರ್ವಣೀಯೋ ಮಂತ್ರ)
(ಅ.ಸಂ.)

ಆ ಅಪಾದ್ರೂಪವೇ ಗಾಯತ್ರಿಯ ಚತುರ್ಥಪಾದವೆಂಬುದು ಮುಂದಿನ ಮಂತ್ರ ಶೇಷದಿಂದ ತಿಳಿಯುತ್ತದೆ.

"ಅಥಾಸ್ಯಾ ಏತದೇವ ತುರೀಯಂ ದರ್ಶತಂ ಪದಂ ಪರೋರಜಾಃ ಯ ಏಷ ತಪತಿ ।
ಯದ್ವೈ ಚತುರ್ಥಂ ತತ್ತುರೀಯಂ ದರ್ಶತಂ ಪದಮಿತಿ ॥
ದದೃಶ ಏವಹ್ಯೇಷ ಪರೋರಜಾ । ಇತಿ
ಸರ್ವಮುಹ್ಯೇವೈಷರಜ ಉಪರ್ಯುಪರಿತಪತಿ ಇತಿ ॥" (ಬೃ.ಉ. ೫, ೧೪, ೩)

ಇದರಿಂದ ಗಾಯತ್ರಿಯ ವಾಚ್ಯಾರ್ಥ ಲಕ್ಷ್ಯಾರ್ಥರೂಪನಾದ ಪರಮಪುರುಷನಾದ ಸವಿತೃವೆ, ನಾಲ್ಕನೆಯ ಪದವಾಗಿದ್ದಾನೆಂಬುದು ಸಿದ್ಧವಾದಂತೆ.

ಈ ಯಜುರ್ಮಂತ್ರದ ತುರೀಯ ಪದಾರ್ಥದಲ್ಲಿ ಸ್ವಲ್ಪ ರಹಸ್ಯವಿದೆ. ಅಲ್ಲಿ ಗಾಯತ್ರೀಮಂತ್ರದ ಚತುರ್ಥಪಾದ, "ಪರೋರಜಸೇऽಸಾವದೋಂ" ಹೇಳುತ್ತಾ ಇದು ಯತಿಗಳಿಗಾಗಿ ಎಂದು ತಿಳಿದು ಅನೇಕ ಯತಿಗಳು ಉಪಾಸಕರು ಜಪಿಸುತ್ತಾರೆ. ವಸ್ತುತಃ "ಪರೋರಜಸೇऽಸಾವದೋಂ," ಎಂಬಲ್ಲಿಗೆ ಮಂತ್ರ ಮುಗಿಯುವದಿಲ್ಲ.

"ನಮಸ್ತೇ ತುರೀಯಾಯ ದರ್ಶತಾಯ ಪದಾಯ ಪರೋರಜಸೇ ।
ಅಸಾವದೋಮಾ ಪ್ರಾಪದಹ ಪದಃ ಪ್ರಾಪಮ್ ॥"

ಹೀಗೆ ಆ ಮಂತ್ರದ ಪಾಠವಿದೆ. ಅದರ ಅರ್ಥಬೋಧ ಹೀಗಿದೆ, "ತಸ್ಮೈ ಪರೋರಜಸೇ ದರ್ಶತಾಯ ತುರೀಯಾಯ ಪದಾಯ ತೇ ನಮಃ" ಆ ಪರಲೋಕದಲ್ಲಿ ಪ್ರಕಾಶಿಸುತ್ತಿರುವ ತುರೀಯ ಪದರೂಪಿಯಾದ ನಿನಗೆ ನಮಸ್ಕಾರ. "ಅಸೌಪರೋರಜಾಃ ಸವಿತಾ ಅದಃ ತುರೀಯಂ ಪದಂ ಮಾಪ್ರಾಪತ್ ಅಹ ಪದಃ ಪ್ರಾಪಂ" ಈ ಸವಿತೃವು ತುರೀಯದಲ್ಲಿ ನನ್ನನ್ನು ಸೇರಿಸಲಿ. ನಾನು ಸೇರುವೆನು. ಇದೇ ಅರ್ಥದ ಋಙ್ಮಂತ್ರ–

"ಗೂಳ್ಹಂ ಸೂರ್ಯಂ ತಮಸಾಪವ್ರತೇನ ತುರೀಯೇಣ ಬ್ರಹ್ಮಣಾऽವಿಂದದತ್ರಿಃ" (ಋ.೫,೪೦)

ಆ ತುರೀಯ ಬ್ರಹ್ಮವೆಂಬುದು ಪರಬ್ರಹ್ಮವಾಚಕವಾದ ಪ್ರಣವವೇ ಸರಿ. ಅಥವಾ ಪ್ರಣವಾಂತ್ಯದಲ್ಲಿ ಉಚ್ಚರಿಸುವ ಒಂದು ರೂಪ. "ಅಮಾತ್ರಶ್ಚತುರ್ಥಃ" ಎಂದು ನಾಲ್ಕನೇ ಪದವನ್ನು ನಿರ್ದೇಶಿಸಿದ್ದಾರಷ್ಟೆ ?

ಛಂದೋದರ್ಶನದಲ್ಲಿ ಆ ತುರೀಯಪಾದ ಗಾಯತ್ರೀ ಮಂತ್ರ ಹೀಗಿದೆ.

"ತತ್ ತೇ ಸವಿತ ಸ್ತುರೀಯಂ ಪದಂ ಪಶ್ಯಾಮಿ ದರ್ಶತಂ ।
ಜ್ಯೋತಿರ್ವಿಶ್ವಸ್ಯ ದರ್ಶಯತ್ ॥" (ಛಂ.ದ. ೧, ೧, ೩)

ಅದರ ಅರ್ಥ– ಹೇ ಎಲೇ ಸವಿತಃ, ತೇ ನಿನ್ನ, ತುರೀಯಂ ನಾಲ್ಕನೇಯದಾದ, ದರ್ಶತಂ ಪದಂ ಸ್ಥಾನಂ ಪಶ್ಯಾಮಿ ನೋಡುತ್ತೇನೆ. ಆ ಪರಮಪದವೇ ವಿಶ್ವದ ದರ್ಶಯತ್ ಪ್ರಕಾಶಕವಾದ ಜ್ಯೋತಿಃ ಪರಂಜ್ಯೋತಿಯು.

ವಾಸಿಷ್ಠಾನ್ವಯ ಭಾಷ್ಯದಲ್ಲಿ ಈ ಮಂತ್ರಕ್ಕೆ ತುರೀಯಂ ಪದಂ ಎಂಬುದಕ್ಕೆ ಗಾಯತ್ರಿಯ ಮೂರು ಪಾದಗಳೇ ಸವಿತೃದೇವತೆಯ ಮೂರು ಪದಗಳು. ನಾಲ್ಕನೆಯದೇ ಸರ್ವರ ಆತ್ಮರೂಪಿಯಾದ ಕೊನೆಯ ಪದ. ಅದು ಉಚ್ಚಾರಣೀಯವಲ್ಲ. ಕೇವಲ ದರ್ಶನೀಯ.

॥ ಧೀಯೋಗಾಭ್ಯಾಸಪ್ರಕ್ರಿಯಾ ॥

ಗಾಯತ್ರೀ ಮಂತ್ರಾರ್ಥ ಪ್ರಸಂಗದಲ್ಲಿ "ಧೀಮಹಿ" ಎಂಬುದಕ್ಕೆ ಧಾರಣಾ, ಧ್ಯಾನ ಸಮಾಧಿರೂಪ ಸಾಧನದ ಅಭ್ಯಾಸ ಮಾಡುತ್ತೇನೆಂದು ಅರ್ಥ. ಅದು ಕೇವಲ ಗಾಯತ್ರೀ ಮಂತ್ರಾರ್ಥ ಜ್ಞಾನದಿಂದ ಸಿದ್ಧಿಸುವದಿಲ್ಲ. ಅಭ್ಯಾಸದಿಂದಲೇ ಶಕ್ಯ. ಅದನ್ನು ಋಕ್ ರೂಪವಾಗಿ,

"ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।
ಸ ಧೀನಾಂ ಯೋಗಮಿನ್ವತಿ ॥" (ಋ. ೧, ೧೮, ೭)

ಈ ಧೀಯೋಗವು ವೇದ-ಉಪನಿಷದಾದಿಗಳಲ್ಲಿ ಉಪದಿಷ್ಟವಾಗಿದ್ದು, ಉಪಾಸನಾದಿ ಅಭ್ಯಾಸಗಳಿಂದಲೇ ಸಾಧ್ಯವಾದದ್ದು.

"ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಮ್" (ಕಠೋ. ೨, ೩, ೧೧)

ಈ ಅಭ್ಯಾಸವೂ ಸಹ ಆಂತರ್ಯ್ಯಬುದ್ಧಿಯೆಂಬ ಇಂದ್ರಿಯದಿಂದಲೇ ಸಾಧ್ಯ.

"ದೇವಂ ನರಃ ಸವಿತಾರಂ ವಿಪ್ರಾ ಯಜ್ಞೈಃ ಸುವೃಕ್ತಿಭಿಃ । ನಮಸ್ಯಂತಿ ಧಿಯೇಷಿತಾಃ ॥"
(ಋ. ೩, ೬೨, ೧೨)

"ಉಪ ತ್ವಾಽಗ್ನೇ ದಿವೇದಿವೇ ದೋಷಾವಸ್ತರ್ಧಿಯಾ ವಯಮ್ ।
ನಮೋ ಭರಂತ ಏಮಸಿ ॥" (ಋ. ೧, ೧, ೭)

"ಅಹರಹಃ ಸಂಧ್ಯಾಮುಪಾಸೀತ," ಎಂದು ಅದರ ವಿಧಾನವನ್ನು ತಿಳಿಸಿದ್ದಾರೆ. ಅಲ್ಲಿಯೂ ಅಪ್ರಮಾದದಿಂದ ಸಾಧಿಸುವದು ಮೊದಲನೇ ಕರ್ತವ್ಯ.

"ಅಪ್ರಮತ್ತೇನ ವೇದ್ಧವ್ಯಮ್" (ಮುಂ. ೩, ೨, ೨, ೪) "ಅಪ್ರಮತ್ತಸ್ತದಾ ಭವತಿ" (ಕಠೋ. ೨,೩,೧೧) ಎಂದು ಮುಂತಾಗಿ ಉಪದೇಶಿಸಿದ್ದಾರೆ. ಆ ಅಪ್ರಮಾದತ್ವ ಸಿದ್ಧಿಗೆ ಜ್ಞಾನಪೂರ್ವಕ-ವಾದ ಜಾಗೃತಿಯೇ ಆವಶ್ಯಕ. ಅದಕ್ಕಾಗಿ ಜಾಗೃತಿ ಸತ್ವಸಂಪನ್ನರನ್ನು ಅವಲಂಬಿಸಬೇಕು. ಅದೂ ಬಾಹ್ಯ-ಆಭ್ಯಂತರ ಎಂದು ದ್ವಿವಿಧ. ಬಾಹ್ಯ ಎಂದರೆ ಅಭ್ಯಾಸಶಾಲಿಗಳೂ ಯೋಗ ಸತ್ವಶಾಲಿಗಳೂ ವಿದ್ವಾಂಸರೂ ಅದರ ಪರಿಶೀಲನದಿಂದ ಸಿದ್ಧರಾದವರೂ ಯೋಗನಿಷ್ಠರೂ ಆತ್ಮನಿಷ್ಠರೂ ಆದ ಗುರುಗಳಿಗೆ ಶರಣು ಹೋಗುವದೇ.

"ಅವಿದ್ವಾಂಸೋ ವಿದುಷ್ಟರಂ ಸಪೇಮ" (ಋ. ೬, ೧೫, ೧೦)

"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್" (ಮುಂ.ಉ. ೧, ೨, ೧೨) ಎಂದು ವಿಧಿಸಿದ್ದಾರೆ. ಅದು ಹೇಗೆಂದರೆ ಸರ್ಪ ಕಚ್ಚಿದಾಗ ಬಹು ಜಾಗರೂಕನಾಗಿ ಇನ್ನೊಬ್ಬ ಎಚ್ಚತ್ತಿದ್ದು, ಆತನಿಗೆ ನಿದ್ದೆ ಬರದಂತೆ ನೋಡಬೇಕಾದ್ದು ಕರ್ತವ್ಯ. ಅಲ್ಲಿ ತನಗಿಂತ ಬೇರೆಯವನನ್ನು ಅವಲಂಬಿಸಿದಂತೆ ಇಲ್ಲಿಯೂ ಪರಾವಲಂಬನವು ಸಹ್ಯವೇ.

"ಅವಿದ್ವಾಂಸೋ ವಿದುಷ್ಟರಂ ಸಪೇಮ" (ಋ. ೬, ೧೫, ೧೦)

"ಅಹಸ್ತಾಸೋ ಹಸ್ತವಂತಂ ಸಹಂತೇ" (ಋ. ೧೦, ೩೪, ೯)

ಆಂತರ್ಯ ವಿಧಾನದಲ್ಲಿ ಸದಾ ಜಾಗೃತವಾದ ಪ್ರಾಣವನ್ನೇ ಆಶ್ರಯಿಸಬೇಕಾದ್ದು ನಮ್ಮ ಶರೀರದಲ್ಲಿ ಪ್ರಾಣ ಸದಾ ಜಾಗೃತಿಶೀಲನು.

"ಪ್ರಾಣಾಗ್ನಯ ಏವೈತಸ್ಮಿನ್ಪುರೇ ಜಾಗ್ರತಿ" (ಪ್ರ.ಉ. ೪, ೩)

ಸದಾಜಾಗರಣ ಶೀಲನನ್ನೇ ಎಲ್ಲರೂ ಆಶ್ರಯಿಸುತ್ತಾರೆ.

"ಯೋ ಜಾಗಾರ ತಮೃಚಃ ಕಾಮಯಂತೇ" (ಋ. ೫, ೪೪, ೧೪)

"ಅಗ್ನಿರ್ಜಾಗಾರ ತಮೃಚಃ ಕಾಮಯಂತೇಽಗ್ನಿರ್ಜಾಗಾರ ತಮು ಸಾಮಾನಿ ಯಂತಿ ।
ಅಗ್ನಿರ್ಜಾಗಾರ ತಮಯಂ ಸೋಮ ಆಹ ತವಾಹಮಸ್ಮಿ ಸಖ್ಯೇ ನ್ಯೋಕಾಃ ॥"
(ಋ. ೫, ೪೪, ೧೫)

"ಜಾಗರ್ಷಿತ್ವಂ ಭುವನೇಜಾತವೇದಃ" (ಋ. ೫, ೪೪, ೧೬)

ಬ್ರಹ್ಮಾಂಡದಲ್ಲಿ ಜ್ಯೋತೀರೂಪನಾದ ಅಗ್ನಿಯೇ ಪಿಂಡಾಂಡದಲ್ಲಿ ಅಂತರಾತ್ಮ ಸ್ವರೂಪನೂ ಚೇತನನೂ ಆದ ವೈಶ್ವಾನರೋಗ್ನಿಃ ಚೇತನಾರೂಪೀ (ವಿಶ್ವೇಷು ನರೇಷು ಸ್ಥಿತಃ ವೈಶ್ವಾನರಃ)

"ವೈಶ್ವಾನರೋ ಜಾಯಮಾನೋನ ರಾಜಾಽವಾತಿರಜ್ಜ್ಯೋತಿಷಾಗ್ನಿಸ್ತಮಾಂಸಿ" (ಋ.)

ಈ ಪ್ರಾಣವು ನಮ್ಮ ಹೃದಯದಿಂದ ಉದಿತವಾಗಿ ಮುಖ ಹಾಗೂ ಮೂಗಿನಿಂದ ಪ್ರತಿಕ್ಷಣವೂ ಪ್ರಾಣಾಪಾನ ರೂಪದಿಂದ ಹೊರಗೂ ಒಳಗೂ ಸಂಚರಿಸುತ್ತಿರುತ್ತದೆ.

"ಅಂತಶ್ಚರತಿ ರೋಚನಾಽಸ್ಯ ಪ್ರಾಣಾದಪಾನತೀ" (ಋ. ೧೦, ೧೮೯, ೨)

"ಅಪಾಙ್ ಪ್ರಾಙೇ ತಿಸ್ವಧಯಾ ಗೃಭೀತೋಽಮರ್ತ್ಯೋಮರ್ತ್ಯೇನಾ ಸಯೋನಿಃ"
(ಋ. ೧, ೧೬೪, ೩೮)

"ಸೋಽಯೋಽಸ್ಯ ಪ್ರಾಙ್ ಸುಷಿಃ ಸ ಪ್ರಾಣಃ, ಯಃ ಪ್ರತ್ಯಙ್ ಸುಷಿಃ ಸೋಽಪಾನ" ಹೀಗೆ ಉಪನಿಷದ್ವಚನವಿದೆ. (ಛಾಂ. ೩, ೧೨, ೧೦೩)

ಈ ಪ್ರಾಣವು ಪ್ರಾಣ ಅಪಾನಾದಿ ಕ್ರಿಯಾಯೋಗದಿಂದಾಗಿ ಕ್ರಿಯಾಶಕ್ತಿ ಪ್ರಧಾನವಾದದ್ದು. ಈ ಪ್ರಾಣಕ್ಕಿಂತಲೂ ಇಚ್ಛಾಶಕ್ತಿಪ್ರಧಾನವಾಗಿ ಭಾವನಾಸಂಕಲ್ಪಾದಿ ಕರಣಗಳಿಂದ ಸೂಕ್ಷ್ಮವಾದ ಅಂತರಂಗಮನಃ ಎಂಬುದಾಗಿದೆ.

"ಕಾಮಸ್ತದಗ್ರೇ ಸಮವರ್ತತಾಧಿ ಮನಸೋ ರೇತಃ ಪ್ರಥಮಂ ಯದಾಸೀತ್"

(ಋ. ೧೦, ೩, ೧೨)

ಇಲ್ಲಿ ಪ್ರಾಣ ಹಾಗೂ ಮನ ಒಂದು ಮಿಥುನ ಜೋಡಿ.

"ಆತ್ಮನ ಏಷ ಪ್ರಾಣೋ ಜಾಯತೇ, ಯಥೈಷಾ ಪುರುಷೇ ಛಾಯೈತಸ್ಮಿನ್ನೇತದಾತತಂ ಮನೋಕೃತೇನಾಯಾತ್ಯಸ್ಮಿನ್‌ಛರೀರೇ" (ಪ್ರ. ೩, ೩)

ಈ ಮನಸ್ಸಿನ ಕಾಮ ಸಂಕಲ್ಪಾದಿ ಸಾಧನತ್ವದಿಂದ ಅಂತಃಕರಣ ರೂಪತ್ವವು ಸಿದ್ಧಿಸುತ್ತದೆ.

"ಅನ್ಯತ್ರ ಮನಾ ಅಭೂವಂ ನಾದರ್ಶಮ್, ಅನ್ಯತ್ರಮನಾ ಅಭೂವಂ ನಾಶ್ರೋಷಮಿತಿ ಮನಸ್ತ್ಯೇವ ಪಶ್ಯತಿ ಮನಸಾಶೃಣೋತಿ, ಕಾಯಃ ಸಂಕಲ್ಪೋವಿಚಿಕಿತ್ಸಾ ಶ್ರದ್ಧಾಽಶ್ರದ್ಧಾ ಧೃತಿರಧೃತಿರ್ಹೀರ್ಧೀರ್ಭೀರಿತ್ಯೇತ್ ಸರ್ವಂ ಮನ ಏವ" (ಬೃ.ಉ. ೧, ೪, ೪) ಇದರಿಂದಲೂ ಇಚ್ಛಾಶಕ್ತಿ ಪ್ರಧಾನತೆಯು ಮನಸ್ಸಿನದೇ ಎಂದು ಸಿದ್ಧಿಸುವದು. ಈ ಅರ್ಥದಲ್ಲಿ ಋಙ್ಮಂತ್ರ–

"ಇಚ್ಛಾಮೀದ್ಧೃದಾ ಮನಸಾ ಚಿದಿಂದ್ರಮ್" (ಋ. ೬, ೨೮, ೫೫)

ಇಷ್ಟಾದರೂ ಎಲ್ಲ ಇಂದ್ರಿಯಗಳಿಗೂ ಅಂತರತಮವಾದ ಪರಾವಾಕ್ಕೇ ಜ್ಞಾನಶಕ್ತಿ ಪ್ರಧಾನವಾದದ್ದು. ತ್ರಿಕರಣ ಪ್ರಸ್ತಾವದಲ್ಲಿ ಅರ್ಥಸತ್ವವುಳ್ಳದ್ದು.

"ತಸ್ಯಾಸತಋಷಯಃ ಸಪ್ತತೀರೇ ವಾಗಷ್ಟಮೀಬ್ರಹ್ಮಣಾ ಸಂವಿದಾನಾ" (ಬೃ.ಉ.)

ಹೀಗೆ ಹೇಳಿ ವಿವರಣೆ ಕೊಡುವಾಗ–

"ಪ್ರಾಣಾ ವಾ ಋಷಯಃ ಪ್ರಾಣಾನೇವೈತದಾಹ, ವಾಗಷ್ಟಮೀ ಬ್ರಹ್ಮಣಾ ಸಂವಿದಾನೇತಿ ವಾಗ್ಘಿ, ಅಷ್ಟಮೀ ಬ್ರಹ್ಮಣಾಸಂವಿತ್ತೇ" (ಬೃ.ಉ. ೨, ೨, ೩)

ಆದ್ದರಿಂದ ಶ್ರೋತ್ರ-ತ್ವಕ್-ಚಕ್ಷುಃ-ಜಿಹ್ವಾ-ಘ್ರಾಣ-ಮನಸ್ಸು-ಬುದ್ಧಿ ಈ ಏಳು ಜ್ಞಾನೇಂದ್ರಿಯಗಳಿಗಿಂತಲೂ ಶ್ರೇಷ್ಠವೂ ಸೂಕ್ಷ್ಮವೂ ವಾಕ್ಕೆಂಬುದು, ಇವೆಲ್ಲ ಇಂದ್ರಿಯಗಳೊಡನೆ ಅವುಗಳ ಅರ್ಥವನ್ನು ಪ್ರಕಾಶಗೊಳಿಸುವದಕ್ಕಾಗಿ ಜ್ಞಾನಶಕ್ತಿ ಪ್ರಧಾನವಾಗಿದೆ. ಕರ್ಮೇಂದ್ರಿಯಗಳಲ್ಲಿ ಸೇರಿದ ಈ ವಾಕ್ಕನ್ನು "ವೈಖರೀ" ಎಂದು ಕರೆಯುತ್ತಾರೆ. "ವಾಕ್ಚ ಮನಶ್ಚ" ಇದೊಂದು ಮಿಥುನ. ಒಂದರಲ್ಲೊಂದು ಸೇರಿದೆ.

"ವಾಙ್ಮೇ ಮನಸಿಪ್ರತಿಷ್ಠಿತಾ, ಮನೋ ಮೇ ವಾಚಿ ಪ್ರತಿಷ್ಠಿತಮ್" (ಐ.ಉ. ಶಾಂತಿ ಮಂತ್ರ:)

ಹಾಗೆಯೇ "ವಾಙ್ ಮಾತಾ ಮನಃ ಪಿತಾ"

ಅಂತೆಯೇ ವಾಕ್ ಮತ್ತು ಪ್ರಾಣ ಇದೊಂದು ಮಿಥುನ. ಈ ಮುಖ್ಯಪ್ರಾಣ ರೂಪಿಗೇ ಬೃಹಸ್ಪತಿ, ಬ್ರಹ್ಮಣಸ್ಪತಿ ಎಂದು ಹೆಸರು.

"ಏಷ ಉ ಏವ ಬ್ರಹ್ಮಣಸ್ಪತಿಃ ವಾಗ್ ವೈ ಬ್ರಹ್ಮ ತಸ್ಯಾ ಏಷ ಪತಿಸ್ತಸ್ಮಾದು ಬ್ರಹ್ಮಣಸ್ಪತಿಃ" (ಬೃ.ಉ. ೧, ೩, ೨೧)

"ಏಷ ಉ ಏವ ಬೃಹಸ್ಪತಿಃ ವಾಗ್ ವೈ ಬೃಹತೀ ತಸ್ಯಾ ಏಷ ಪತಿಸ್ತಸ್ಮಾದು ಬೃಹಸ್ಪತಿಃ" (ಬೃ.ಉ. ೧, ೩, ೨೦)

ಈ ಮೂರು ಕರಣಗಳೇ ಸಾಧನಗಳೇ ಅಂತರಾತ್ಮನಿಗೆ ಎಲ್ಲ ವಿಷಯಗಳಿಗೆ ಅವಲಂಬನ ವಾಗಿರುತ್ತವೆ.

"ತ್ರೀಣ್ಯಾತ್ಮನೇಽಕುರುತೇತಿ ಮನೋವಾಚಂ ಪ್ರಾಣಂ ತಾನ್ಯಾತ್ಮನೇಽಕುರುತೇತಿ," ಅನಂತರ ಚೇತನಾತ್ಮನ ತನ್ಮಯತ್ವವನ್ನೂ ಹೇಳಿದೆ.

"ಏತನ್ಮಯೋ ವಾ ಅಯಮಾತ್ಮಾ ವಾಙ್ಮಯೋ ಮನೋಮಯಃ ಪ್ರಾಣಮಯಃ" (ಬೃ.ಉ. ೧, ೪, ೩)

ಈ ತ್ರಿಕರಣವನ್ನೇ ತೇಜೋಮಯ ಅಮ್ಮಯ ಅನ್ನಮಯವನ್ನಾಗಿ ಹೇಳಿದ್ದಾರೆ.

"ಅನ್ನಮಯಂಹಿ ಸೋಮ್ಯಮನಃ ಆಪೋಮಯಃ ಪ್ರಾಣಃ ತೇಜೋಮಯೀ ವಾಕ್" (ಛಾಂ.ಉ. ೬, ೫, ೪)

ಇವನ್ನೇ ತ್ರಯೀಮಯವಾಗಿಯೂ ವರ್ಣಿಸಿದ್ದಾರೆ.

"ಋಚಂ ವಾಚಂ ಪ್ರಪದ್ಯೇ, ಮನೋ ಯಜುಃ ಪ್ರಪದ್ಯೇ, ಸಾಮ ಪ್ರಾಣಂ ಪ್ರಪದ್ಯೇ" (ಶು.ಯ.ಸಂ.)

ಅಂತೆಯೇ ಈ ಮೂರು ಕರಣಗಳಿಗೆ ಅಧಿಭೂತಾದಿ ತತ್ತ್ವಯೋಗದಿಂದ ಬಹುವಿಧವಾಗಿ ಪ್ರತಿಪಾದಿಸಿದ್ದಾರೆ.

"ತ್ರಯೋಲೋಕಾ ಏತ ಏವ ವಾಗೇವಾಯಂಲೋಕಃ ಮನೋಽಂತರಿಕ್ಷಲೋಕಃ ಪ್ರಾಣೋಽಸೌಲೋಕಃ" ಎಂದು ಮತ್ತು "ತ್ರಯೋವೇದಾ ಏತ ಏವ, ದೇವಾಃ ಪಿತರೋಮನುಷ್ಯಾ ಏತ ಏವ। ಮಾತಾ ಪಿತಾ ಪ್ರಜಾ ಏತ ಏವ ವಿಜ್ಞಾತಂ ವಿಜಿಜ್ಞಾಸ್ಯಂ ಅವಿಜ್ಞಾತಮೇತ ಏವ ||" (ಬೃ.ಉ. ೧, ೪, ೫-೧೩)

ಇವೆಲ್ಲವನ್ನೂ ಮೂಲತಃ ಋಗ್ವೇದದಲ್ಲಿ ಸೂಕ್ಷ್ಮದೃಷ್ಟಿಯಿಂದ ಹೇಳಿದ್ದಾರೆ.

"ಪತಂಗೋ ವಾಚಂ ಮನಸಾ ಬಿಭರ್ತಿ ತಾಂ ಗಂಧರ್ವೋಽವದದ್‌ಗರ್ಭೇ ಅಂತಃ"

(ಋ. ೧೦, ೧೭೭, ೨)

ಪತಂಗಃ ಚೇತನಾತ್ಮಾ, ಗಂಧರ್ವಃ ಪ್ರಾಣಃ,

"ಯಜ್ಜಾತವೇದ್ದೋ ಭುವನಸ್ಯ ಮೂರ್ಧನ್ನತಿಷ್ಠೋ ಅಗ್ನೇ ಸಹ ರೋಚನೇನ ।

ತಂ ತ್ವಾಹೇಮ ಮತಿಭಿರ್ಗೀರ್ಭಿರುಕ್ಥೈಃ ಸ ಯಜ್ಞಿಯೋ ಅಭವೋ ರೋದಾಸಿಪ್ರಾಃ ॥"

(ಋ. ೧೦, ೮೮, ೫)

"ಉಕ್ಥಂ ಪ್ರಾಣೋ ವಾ ಉಕ್ಥಂ ಪ್ರಾಣೋ ಹೀದಂ ಸರ್ವಮುತ್ಥಾಪಯತಿ" (ಬೃ.ಉ. ೫, ೧೩, ೧)

ತ್ರಿಕರಣಯೋಗ– ಈ ಮೂರೂ ಕರಣಗಳನ್ನು ಒಂದೆಡೆ ಸೇರಿಸಿ ಒಂದೇ ಲಕ್ಷ್ಯದಲ್ಲಿ ಕೂಡಿಸುವದರಿಂದ ತ್ರಿಕರಣಯೋಗವಾಗುತ್ತದೆ. ಪ್ರಾಣರೂಪವಾದ ಅಂತರಂಗದಲ್ಲಿರುವ ಮನಸ್ಸು, ಅದಕ್ಕಿಂತಲೂ ಆಂತರ್ಯದಲ್ಲಿ ಸೂಕ್ಷ್ಮವಾಗಿರುವ ಪರಾವಾಕ್, ಕೇವಲ ಚೇತನರೂಪವಾದದ್ದು. ಪ್ರತ್ಯಕ್ ಅಂತರಾತ್ಮನಲ್ಲಿ "ನಾನು" ಎಂಬ ಪದದಲ್ಲಿ ಆತ್ಮಪ್ರತ್ಯಯದೊಡನೆ ಸರ್ವದಾ ಚೇತನದಲ್ಲಿ ಸ್ಫುರಿಸುತ್ತದೆ. ವಾಕ್ಕಿನೊಡನೆ ಗಾಯತ್ರೀ ಮಂತ್ರಾಕ್ಷರಗಳನ್ನು ಕ್ರಮವಾಗಿ ಜೋಡಿಸಿ, ಸಪ್ರಣವ ವ್ಯಾಹೃತಿ ಪೂರ್ವಕವಾದ ಆ ಮಂತ್ರವನ್ನು ಅರ್ಥಪೂರ್ವಕವಾಗಿ ಚಿಂತಿಸಿ ಸಮಗ್ರ ಮಂತ್ರಾರ್ಥವನ್ನು ಜ್ಯೋತಿರೂಪವಾಗಿ ಕಂಡು ಪ್ರಾಣಶಕ್ತಿಯಿಂದ ಮಂತ್ರಾಕ್ಷರಗಳನ್ನು ಸುಸ್ವರ ಸ್ಪಷ್ಟೋಚ್ಚಾರಣೆಯಿಂದ ಪಠಿಸಬೇಕು. ಹೀಗೆ ಜಪಿಸುತ್ತಾ ಒಳಗೂ ಹೊರಗೂ ಒಂದೇ ಲಕ್ಷ್ಯವನ್ನಿಟ್ಟು ತ್ರಿಕರಣ ಯೋಗವಾಗುವದು. ಇದಕ್ಕಿಂತಲೂ ವಿಶಿಷ್ಟವಾದ ಯೋಗವನ್ನು ಮುಂದಿನ ಪಂಚಧೀಯೋಗದಲ್ಲಿ ತಿಳಿಸಲಾಗುವದು.

ಪಂಚಧೀಯೋಗ– ಇವೇ ಮೂರು ಕರಣಗಳೊಡನೆ ಶ್ರೋತ್ರ-ನೇತ್ರಗಳ ಸಂಯೋಗದಿಂದ ಪಂಚಧೀಯೋಗವು ಸಿದ್ಧಿಸುವದು. ಅದಕ್ಕೆ ಕಾರಣ ಇಷ್ಟೆ? ಎಲ್ಲ ಭೂತಜಾತಗಳೂ-ವಸ್ತುಸಮೂಹಗಳೂ ಆದಿಸೃಷ್ಟಿಯಲ್ಲಿ ಮೊದಲು ನಾಮರೂಪಗಳಿಂದ ಕೂಡಿಯೇ ಆವಿರ್ಭವಿಸಿದವು. ಆ ನಾಮರೂಪಗಳನ್ನು ತಿಳಿಯಲು ಜ್ಞಾನೇಂದ್ರಿಯಗಳಾದ ಶ್ರೋತ್ರ-ನೇತ್ರಗಳೇ ಅಂತರಾತ್ಮನಲ್ಲಿ ಪ್ರತಿಷ್ಠಿತವಾಗಿವೆ ಎನ್ನುವದು ಸರ್ವಾನುಭವಸಿದ್ಧ. ಆದ್ದರಿಂದ ಈ ಧೀಯೋಗದಲ್ಲಿ ತ್ರಿಕರಣಗಳೊಡನೆ ಶ್ರೋತ್ರ-ನೇತ್ರಗಳನ್ನು ಸೇರಿಸಿದೆ.

"ಋಚಂ ವಾಚಂ ಪ್ರಪದ್ಯೇ, ಮನೋಯಜುಃ ಪ್ರಪದ್ಯೇ, ಸಾಮಪ್ರಾಣಂ ಪ್ರಪದ್ಯೇ, ಚಕ್ಷುಃ ಶ್ರೋತ್ರಂ ಪ್ರಪದ್ಯೇ," ಈ ಯಜುರ್ಮಂತ್ರವೂ ಅದೇ ಅರ್ಥದಲ್ಲಿದೆ. ಅಂತೆಯೇ–

"ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿಯುಕ್ತಃ ।

ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋಯುನಕ್ತಿ ॥" (ಕೇ.ಉ.೧,೧)

ಈ ಪಂಚಧೀಂದ್ರಿಯ ಯೋಗವನ್ನು ಬಹುವಿಧವಾಗಿ ವೇದೋಪನಿಷತ್ತುಗಳಲ್ಲಿ ನೂರಾರು ಕಡೆ ಹೇಳಿದ್ದು ಕಂಡು ಬರುತ್ತಿದೆ. ಈ ಇಂದ್ರಿಯಗಳು ಒಂದೊಂದೇ ಇಂದ್ರಿಯಗಳ

ಸಾಧನೆಯಿಂದ ಸಾಧಕರು ಪ್ರತ್ಯೇಕವಾಗಿ ಆ ಆ ಇಂದ್ರಿಯಗಳನ್ನು ಸಾಧಿಸಬಹುದು. ಆದರೆ ಸಂಪೂರ್ಣ ಯೋಗಸಿದ್ಧಿಗೆ ಅದು ಅಪೂರ್ಣವೂ ಅಪರ್ಯಾಪ್ತವೂ ಆಗಿದೆ. ಅದಕ್ಕೆ ಉಪನಿಷತ್ತು ಹೀಗೆ ಹೇಳಿದೆ.

"ಪ್ರಾಣನ್ನೇವ ಪ್ರಾಣೋನಾಮಭವತಿ, ವದನ್ ವಾಕ್, ಪಶ್ಯಂಶ್ಚಕ್ಷುಃ– ಶೃಣ್ವಂಛೋತ್ರಮ್, ಮನ್ವಾನೋ ಮನಃ, ತಾನ್ಯೇತಾನಿಕರ್ಮನಾಮಾನ್ಯೇವ" । "ಸ ಯೋಽತ ಏಕೈಕಮುಪಾಸ್ತೇ ನ ಸ ವೇದ, ಅಕೃತ್ಸ್ನೋಹ್ಯೇಷಃ" (ಬೃ.ಉ. ೧, ೪, ೭)

"ಅತ್ರ ಏಕಕೇನ ಭವತಿ, ಓಮಿತ್ಯೇವೋಪಾಸೀತ, ಅತ್ರ ಹ್ಯೇತೇ ಸರ್ವ ಏಕಂ ಭವಂತಿ, ತದೇತತ್ ಪದನೀಯಮಸ್ಯ ಸರ್ವಸ್ಯ ಯದಯಮಾತ್ಮಾ, ಅನೇನ ಹಿ ಏತತ್ ಸರ್ವಂ ವೇದ," ಎಂದು ಓಂಕಾರ ಮಹಿಮೆಯನ್ನು ತಿಳಿಸಿದೆ.

ಈ ಧೀಯೋಗವು ಮೂರುವಿಧ – ಬಾಹ್ಯ, ಆಂತರ್ಯ, ಪರ ಎಂದು. ಸಮನ್ವಯ ದೃಷ್ಟಿಯಿಂದ ಬಾಹ್ಯ, ವ್ಯತಿರೇಕದಿಂದ ಆಂತರ್ಯ, ತಾಟಸ್ಥ್ಯಭಾವದಿಂದ ಪರ. ಈ ಮೂರೂ ಯೋಗಗಳು ಪ್ರವೃತ್ತಿ-ನಿವೃತ್ತಿ-ನಿಷ್ಠಾಗಳಿಂದ ಕೂಡಿರುವವು. ಇಲ್ಲಿ ಮೂರನೆಯದಾದ ನಿಷ್ಠಾ ಎಂಬುದು ಪ್ರವೃತ್ತಿ ನಿವೃತ್ತ್ಯುಭಯಾತ್ಮಕ ಹಾಗೂ ಪ್ರವೃತ್ತಿನಿವೃತ್ತ್ಯನುಭಯಾತ್ಮಕ ಎಂದು ಎರಡು ವಿಧ. ಅದು ಕೇವಲ ನಿಷ್ಠಾ ರೂಪ. ತಾಟಸ್ಥ್ಯ, ಔದಾಸೀನ್ಯ ಹಾಗೂ ಆತ್ಮಸ್ಥಿತಿ ರೂಪವಾದುದು.

ಇಲ್ಲಿ ಮೊದಲನೇ ಪ್ರವೃತ್ತಿರೂಪ ಧೀಯೋಗವೆಂದರೆ, ಬಾಹ್ಯದೃಷ್ಟಿಯಿಂದ ಐದೂ ಧೀಂದ್ರಿಯಗಳ ಸಮನ್ವಯದಿಂದ ಧ್ಯೇಯ ವಸ್ತುವನ್ನು ಬಾಹ್ಯದಲ್ಲಿ ತೋರುವ ಆದಿತ್ಯಾದಿ ಜ್ಯೋತಿಯನ್ನು ಏಕದೃಷ್ಟಿಯಿಂದ ನೋಡಿ ಅವುಗಳ ಚಿಂತನ. ಎರಡನೆಯ ನಿವೃತ್ತಿ ಎಂಬುದು ಬಾಹ್ಯ, ಶಬ್ದರೂಪಾದಿ ವಿಷಯಗಳಿಂದ ಪ್ರತಿನಿವೃತ್ತನಾಗಿ ವಾಗಾದಿ ಜ್ಞಾನೇಂದ್ರಿಯಗಳನ್ನು ಆಂತರ್ಯದಲ್ಲಿರುವ ನಿಜವಾದ ಪ್ರತ್ಯಗಾತ್ಮನೂ ಸರ್ವೇಂದ್ರಿಯಗಳೂ ಅಧಿಷ್ಠಾನನೂ ಸಾಕ್ಷೀಭೂತನೂ ಆದ ಆತ್ಮನ ಸದಾ ಚಿಂತನೆ.

ಮೂರನೇಯದು ಬಾಹ್ಯದ ಆದಿತ್ಯಾದಿ ಜ್ಯೋತಿಗಳಲ್ಲಿ ಧೀಂದ್ರಿಯವನ್ನಿಟ್ಟು ಆದಿತ್ಯ ಜ್ಯೋತಿ ಹಾಗೂ ಆತ್ಮಾ ಇವೆರಡನ್ನು ಕಾಣುತ್ತಾ ಇವಕ್ಕಿಂತಲೂ ಮುಖ್ಯವಾದ ಪರೋಕ್ಷ ಸಿದ್ಧವೂ ಪರತಮವೂ ಕೇವಲ ಚೈತನ್ಯರೂಪಿಯೂ ಆದ ಪರಮಾತ್ಮನಲ್ಲಿ ವಿಲೀನಗೊಳಿಸಿ ತನ್ನಿಷ್ಠರಾಗುವಿಕೆಯೇ ಪರಯೋಗದ ಲಕ್ಷಣ.

ಹಾಗೆಯೇ ಬಾಹ್ಯವಸ್ತುವಿನ ಆವಲಂಬನವಿಲ್ಲದೇ ಇಂದ್ರಿಯಗಳ ತಟಸ್ಥತೆಯಿಂದ ಕೇವಲ ಲಕ್ಷ್ಯದಲ್ಲಿ ದೃಷ್ಟಿಯನ್ನಿಟ್ಟಿರುವದೇ ನಿಷ್ಠಾಯೋಗವು. ಈ ವಿಷಯದಲ್ಲಿ ವೇದೋಪನಿಷದಾದಿ-ಗಳಲ್ಲಿ ಪ್ರಮಾಣವಚನಗಳು ಸಾಕಷ್ಟಿವೆ. ಅವುಗಳಲ್ಲಿ ಕೆಲವು ಮಾತ್ರ ದಿಗ್ದರ್ಶನ ಮಾಡಿದೆ.

"ಉದ್ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಮ್ ।
ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್ ॥" (ಋ. ೧, ೫೦, ೧೦)

"ಜೀವಾ ಜ್ಯೋತಿರಶೀಮಹಿ" (ಋ.)

"ಪ್ರಣವೋಧನುಃ ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್‌ತನ್ಮಯೋ ಭವೇತ್" (ಮುಂ.ಉ. ೨, ೨, ೪)

"ಓಮಿತ್ಯೇವಂ ಧ್ಯಾಯಥ ಆತ್ಮಾನಂ ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ ।"

(ಮುಂ.ಉ. ೨, ೨, ೬)

"ಯಃ ಪುನರೇತಂ ತ್ರಿಮಾತ್ರೇಣ ಓಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ । ಯಥಾ ಪಾದೋದರಸ್ತ್ವಚಾ ಪ್ರಮುಚ್ಯತೇ,
ಏವಂ ಹವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್"

(ಪ್ರ. ೫, ೫)

"ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂಹ್ಯುಪಾಸಾನಿಶಿತಂ ಸಂಧಯೀತ ।
ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೌಮ್ಯವಿದ್ಧಿ ॥"

(ಮುಂ.ಉ. ೨, ೨, ೩)

ಈ ಮೊದಲಾದ ವಚನಗಳು ಧೀಯೋಗ ಪರವಾಗಿಯೇ ಇವೆ. ಇಲ್ಲಿ ಪ್ರಣವಾಕ್ಷರಾವಲಂಬನವನ್ನಷ್ಟೇ ಹೇಳಿದೆ. ಈ ಸ್ಥಾನದಲ್ಲಿ ಸಪ್ರಣವ ಗಾಯತ್ರೀ ಮಂತ್ರಾವಲಂಬನವೆಂಬುದು ವಿಶೇಷ. ಇದಕ್ಕಿಂತಲೂ ಶ್ರೇಷ್ಠವಾದ ಯೋಗ ತಾಟಸ್ಥ್ಯ ನಿಷ್ಠಾರೂಪವಾದದ್ದು.

"ಯದಾಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸ ಹ ।
ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹುಃ ಪರಮಾಂ ಗತಿಮ್ ॥
ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣೌಮ್ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥" (ಕ.ಉ. ೨, ೩, ೧೦-೧೧)

ಈ ಪಂಚಧೀಂದ್ರಿಯ ಯೋಗವೇ ವಿದ್ವದ್ಯಜ್ಞವೆಂದು ಅಧ್ಯಾತ್ಮತತ್ವ ಪ್ರಧಾನವಾಗಿ ಹೇಳಲ್ಪಟ್ಟಿದೆ. ವಿದ್ವದ್ಯಜ್ಞದಲ್ಲಿ ಆತ್ಮನೇ ಯಜಮಾನ.

"ಆತ್ಮಾ ಯಜ್ಞಸ್ಯ ಪೂರ್ವ್ಯಃ" (ಋ. ೯, ೨, ೧೦)

ಪರಾಶ್ರದ್ಧೆಯೇ ಯಜ್ಞಪತ್ನೀ,

"ಶ್ರದ್ಧಾಂ ದೇವಾ ಯಜಮಾನಾ ವಾಯುಗೋಪಾ ಉಪಾಸತೇ ।
ಶ್ರದ್ಧಾಂ ಹೃದಯ್ಯಾಕೂತ್ಯಾ ಶ್ರದ್ಧಯಾ ವಿಂದತೇ ವಸು ॥" (ಋ. ೧೦,೧೫೧,೪)

"ಶ್ರದ್ಧಯಾ ಸತ್ಯಮಾಪ್ಯತೇ" (ಶು.ಯ.)

"ಶ್ರದಸ್ಮೈ ಧತ್ತ ಸ ಜನಾಸ ಇಂದ್ರಃ" (ಋ.ಮಂ. ೨, ೧೨, ೪)

"ಶ್ರದ್ಧಾಂ ಯಜ್ಞಮಾರಭೇ" (ತೈ.)

"ಶ್ರದ್ಧಾ ಮಯೋಽಯಂ ಪುರುಷೋ ಯೋಯಚ್ಛ್ರದ್ಧಃ ಸ ಏವ ಸಃ" (ಗೀ.)

ಈ ಯಜ್ಞದಲ್ಲಿ ವಾಗಾದಿ ಪಂಚಜ್ಞಾನೇಂದ್ರಿಯಗಳೇ ಋತ್ವಿಜರೂ, ಯೋಜಕರೂ, ಯಾಜಕರೂ, ಯಜ್ಞಕ್ಕೆ ಸಾಧನೀಭೂತರಾದ ಆ ಯೋಗಯಜ್ಞಪರಾಯಣರೂ ಇರುತ್ತಾರೆ.

"ವಾಗ್ಘೋತಾ, ಪ್ರಾಣ ಉದ್ಗಾತಾ, ಚಕ್ಷುರಧ್ವರ್ಯುಃ ಮನೋಬ್ರಹ್ಮಾ, ಶ್ರೋತ್ರಮಗ್ನೀತ್ । ಯಾವದ್ ಧ್ರಿಯತೇ ಸಾ ದೀಕ್ಷಾ ॥" (ನಾ.ಉ. ೨೪)

ಈ ಧೀಯಜ್ಞವು ಅಂತರ್ಯವಾಗಿದ್ದರೂ ಬಾಹ್ಯಶ್ರೌತಸೋಮಯಾಗಾದಿಗಳಂತೆ. ಯೇ ಎಂಬುದು ಋತ್ವಿಜ್‌ನಿದೇಶನದಿಂದ ತೋರುತ್ತದೆ.

ಇಲ್ಲಿ ಪ್ರಸ್ತುತವಾದ ಧೀಯೋಗದಲ್ಲಿ ಗಾಯತ್ರೀ ಜಪಾದಿಗಳಿಂದ ಅದರ ಉಪಾಸನೆಯ ಅಭ್ಯಾಸ ಪ್ರಕ್ರಿಯೆ ಹೀಗಿದೆ.

ಇಲ್ಲಿ ಪ್ರಾಣದ ಅವಲಂಬನೆ ಪ್ರಧಾನವಾದದ್ದು. "ಪ್ರಾಣಾಗ್ನಯ ಏವೈತಸ್ಮಿನ್ ಪುರೇ ಜಾಗ್ರತಿ" ಈ ಶರೀರದಲ್ಲಿ ಸರ್ವದಾ ಪ್ರಾಣಾಗ್ನಿಗಳು ಜಾಗ್ರತವಾಗಿರುತ್ತವೆ. (ಪ್ರ.ಉ. ೪, ೩) ಈ ಪ್ರಾಣವು ಶ್ವಾಸೋಚ್ಛ್ವಾಸ ರೂಪದಿಂದ ಒಳಗೂ ಹೊರಗೂ ತಿರುಗುತ್ತಿರುತ್ತದೆ. ಅದರ ಗತಿ ನಿರೀಕ್ಷಣವೇ ಮೊದಲನೆಯ ಸಾಧನ. ಹಾಗೆಯೇ ಅಂತರಾತ್ಮನಲ್ಲಿ ಅಹಂ ಪ್ರತ್ಯಯದಿಂದ ಸ್ಫುರಿಸುತ್ತಿರುವಾ ವಾಕ್ಕಿನೊಡನೆ ಗಾಯತ್ರೀ ಮಂತ್ರಾಕ್ಷರಗಳನ್ನು ಯಥಾಕ್ರಮವಾಗಿ ಜೋಡಿಸಿ ಮಂತ್ರಾರ್ಥಜ್ಞಾನ ಹಾಗೂ ಭಾವನೆಯಿಂದ ಸಮಗ್ರ ಮಂತ್ರಾರ್ಥವನ್ನು ಜ್ಯೋತೀರೂಪದಿಂದ ಚಿಂತನವೇ ತಪಸ್ಸು. ಪ್ರಾಣದೊಡನೆ ವೈಖರೀ ವಾಕ್ಕಿನಿಂದ ಉಚ್ಚಾರಣೆ ಶ್ರೋತ್ರದಿಂದ ಅದನ್ನು ಕೇಳುವದು. ಕಣ್ಣಿನಿಂದ ಆ ಜ್ಯೋತೀರೂಪದ ದರ್ಶನ. ಮನಸ್ಸಿನಿಂದ ಅರ್ಥಾನುಚಿಂತನ, ಹೀಗೆ ಪಂಚಧೀಂದ್ರಿಯಗಳಿಂದ ಗಾಯತ್ರೀ ಅನುಷ್ಠಾನ ಹಾಗೂ ಸೂಕ್ಷ್ಮತರವಾಗಿ ಅಂತರಂಗದಲ್ಲಿ ಮಾನಸಿಕ ಜಪ, ಅಂತಃ ಶ್ರೋತ್ರದಿಂದ ಶ್ರವಣ, ಅಂತಶ್ಚಕ್ಷುವಿನಿಂದ ಆ ಜ್ಯೋತಿಯ ದರ್ಶನ, ಹೀಗೆ ಅನುಸಂಧಾನ ಮಾಡಬೇಕು.

ಇದಕ್ಕೆಲ್ಲ ಅಪ್ರಮಾದ ಸ್ವಪ್ರಬೋಧಗಳನ್ನು ಜಾಗ್ರತನಾಗಿ ಜ್ಞಾನದಿಂದ ಸಾಧಿಸುವದೇ ಮುಖ್ಯ.

ಈ ಧೀಯೋಗದ ಮಹತ್ವವನ್ನು ಪೂರ್ವಪೀಠಿಕೆಯಲ್ಲಿಯೇ ಸಾಕಷ್ಟು ತಿಳಿಸಾಗಿದೆ ಮತ್ತು ವೇದೋಪನಿಷದಾದಿ ಪ್ರಮಾಣ ಪ್ರಕ್ರಿಯೆಗಳಿಂದಾಗಿ ಸಾಕ್ಷಾತ್ಕಾರ ಸುಧಾ, ಎಂಬ ಗ್ರಂಥದಲ್ಲಿ ವಿವರವಾಗಿ ವಿಸ್ತಾರವಾಗಿ ತಿಳಿಸಿದ್ದರಿಂದ ಇಲ್ಲಿ ಗ್ರಂಥವಿಸ್ತಾರ ಭಯದಿಂದ ಸಂಕ್ಷೇಪವಾಗಿ ತಿಳಿಸಿದ್ದೇನೆ.

ಚತುರ್ಥ ಕಲೆ

॥ ಮಂತ್ರಾರ್ಥಜ್ಞಾನ ಸಾಹಿತ್ಯ ॥

ಗಾಯತ್ರ್ಯಾದಿ ವೇದಮಂತ್ರಗಳನ್ನು ಸ್ವಾಧ್ಯಾಯ ಜಪಯಜ್ಞಾದಿಗಳಲ್ಲಿ ವಿನಿಯೋಗಿಸಲು ಸಸ್ವರ, ಶಾಸ್ತ್ರೀಯ, ಶುದ್ಧಪಾಠ, ಸ್ಪಷ್ಟವಾದ ಉಚ್ಚಾರ, ಹ್ಯಾಗೆ ಇವೆಲ್ಲಾ ಆವಶ್ಯಕವೋ ಹಾಗೆಯೇ ಆ ಮಂತ್ರಾರ್ಥಗಳನ್ನು ತಿಳಿಯುವದೂ ಅಷ್ಟೇ ಅವಶ್ಯ. ಅದಿಲ್ಲದಿದ್ದರೆ ಅದು ನಿರರ್ಥಕವೆಂದು ವೇದವೇ ತಿಳಿಸುತ್ತಿದೆ.

"ಯಸ್ತಿತ್ಯಾಜ ಸಚಿವಿದಂ ಸಖಾಯಂ ನ ತಸ್ಯ ವಾಚ್ಯಪಿ ಭಾಗೋ ಅಸ್ತಿ ।
ಯದೀಂ ಶೃಣೋತ್ಯಲಕಂ ಶೃಣೋತಿ ನಹಿ ಪ್ರವೇದ ಸುಕೃತಸ್ಯ ಪಂಥಾಮ್ ॥

(ಋ. ೧೦, ೭೧, ೬)

ಇದರರ್ಥವನ್ನು ಪೂರ್ವಪೀಠಿಕೆಯಲ್ಲಿ ತಿಳಿಸಿದೆ. ಅಂತೆಯೇ–

"ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯವೇದಂ ನ ವಿಜಾನಾತಿ ಯೋಽರ್ಥಮ್ ।
ಯೋಽರ್ಥಜ್ಞ ಇತ್ ಸಕಲಂ ಭದ್ರಮಶ್ನುತೇ ನಾಕಮೇತಿ ಜ್ಞಾನವಿಧೂತಪಾಪ್ಮಾ ॥"

ಇದು ಸ್ಪಷ್ಟಾರ್ಥವಾಗಿದೆ. ವೇದವನ್ನೋದಿ ಅದರ ಅರ್ಥ ತಿಳಿಯದಿದ್ದರೆ ಅವನ ಓದು ಸ್ತಂಭದಂತೆ ವ್ಯರ್ಥ. ಅರ್ಥವನ್ನು ತಿಳಿದಿದ್ದರೆ ಸಕಲ ಕಲ್ಯಾಣವನ್ನು ಹೊಂದಿ ಜ್ಞಾನದಿಂದಾಗಿ ಪಾಪವನ್ನು ಕಳೆದುಕೊಂಡು ಸ್ವರ್ಗವನ್ನು ಸೇರುತ್ತಾನೆ. ಶಾಸ್ತ್ರೀಯವಾದ ವಿಧಿಯೂ ಅರ್ಥಜ್ಞಾನದಿಂದಲೇ ವೇದಾಧ್ಯಯನದ ಸಾರ್ಥಕತೆಯನ್ನು ತಿಳಿಸುತ್ತದೆ.

"ತಸ್ಮಾದ್ ಬ್ರಾಹ್ಮಣೇನ ನಿಷ್ಕಾರಣೇನ ಷಡಂಗೋ ವೇದೋಽಧ್ಯೇಯೋ ಜ್ಞೇಯಶ್ಚ"

ಅಂತೆಯೇ ಬ್ರಹ್ಮ, ಆತ್ಮ ಇತ್ಯಾದಿ ಸತ್ಯ ವಸ್ತು ತತ್ವಜ್ಞಾನದಲ್ಲಿಯೂ ಅದು ಸಮಾನ.

"ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿವಿಶ್ವೇ ನಿಷೇದುಃ ।
ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ ತದ್ ವಿದುಸ್ತ ಇಮೇ ಸಮಾಸತೇ ॥"

(ಋ. ೧, ೧೬೪, ೩೯)

ಇದರ ಅರ್ಥವನ್ನು ಪೂರ್ವಪೀಠಿಕೆಯಲ್ಲಿ ತಿಳಿಸಿದೆ ಅಲ್ಲಿ ನೋಡಿ.

ವಸ್ತುತಃ ಮಂತ್ರಾರ್ಥಜ್ಞಾನೋದಯಕ್ಕಾಗಿಯೇ ಆ ಮಂತ್ರಗಳ ಜಪ ಉಪಾಸನಾದಿ ವಿಧಿ ಮತ್ತು ಅವುಗಳ ಅನುಷ್ಠಾನಾದಿಗಳಲ್ಲಿ ಪ್ರವೃತ್ತಿ. ಆದ್ದರಿಂದ ಮಂತ್ರಾರ್ಥಾದಿಗಳ ಜ್ಞಾನವಿಲ್ಲದಿದ್ದರೂ ಸಸ್ವರಾದಿ ಜಪಾದಿಗಳಿಂದ ಕರ್ಮೋಪಸನಾದಿ ಯೋಗದಿಂದ ಅವುಗಳ ಫಲಾದಿಗಳು ಸಿದ್ಧಿಸುತ್ತವೆ. ಫಲೋದಯವು ಕರ್ಮಾಧೀನವಾಗಿದೆಯಷ್ಟೆ ? ಆದ್ದರಿಂದ ಅರ್ಥಜ್ಞಾನವಿಲ್ಲದೇ ವೇದಮಂತ್ರಗಳ ಜಪೋಪಾಸನಾದಿಗಳು ವ್ಯರ್ಥವೆಂದು ಸರ್ವಾತ್ಮನು

ಹೇಳಲು ಬರುವದಿಲ್ಲ. ಅದು ಯೋಗ್ಯವಲ್ಲವೆಂದು ಬಿಡಲು ಬರುವದಿಲ್ಲ. ಅಲ್ಲಿ ಶಬ್ದಗಳಲ್ಲಿ ಒಂದು ವಿಚಿತ್ರತರ ಶಕ್ತಿ ಇದೆ. ಅದು ತನ್ನ ಅರ್ಥಜ್ಞಾನವನ್ನು ತಾನೇ ಮಾಡಲು ಸಮರ್ಥವಾದದ್ದು. ಅದಕ್ಕಿಂತ ಮಿಗಿಲಾದಶಕ್ತಿ ಮಂತ್ರಗಳಲ್ಲಿ ಋಷಿಗಳ ದಿವ್ಯ ಶಕ್ತಿಯೋಗದಿಂದ ತುಂಬಿದೆ. ಇದನ್ನು ಕವೀಂದ್ರ ಭವಭೂತಿಯು–

"ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ"

ವಚನಕ್ಕನುಗುಣವಾದ ಮಂತ್ರ ಋಗ್ವೇದದಲ್ಲಿ,

"ಅಮನ್ಯಮಾನಾಁ॒ಅಭಿಮನ್ಯ ಮಾನೈರ್ನಿರ್ಬ್ರಹ್ಮಭಿರಧಮೋ ದಸ್ಯುಮಿಂದ್ರ"

(ಋ. ೧, ೩೩, ೯)

ಅರ್ಥಜ್ಞಾನಶೂನ್ಯರೂ ಅಜ್ಞರೂ ಆದ ಮಂತ್ರೋಪಾಸಕರನ್ನು ತಮ್ಮದೆಯ ಅಭಿಮಾನದಿಂದ ಪ್ರತ್ಯಕ್ಷ ಬ್ರಹ್ಮರೂಪವಾದ ವೇದ ಮಂತ್ರಗಳಿಂದ ಹೇ ಇಂದ್ರ, "ದಸ್ಯುಂ" ಹಿಂಸಕರಾದವರನ್ನು ನಿರಧಮಃ, ದೂರಿಕರಿಸಿದ್ದೀಯೆ.

ಹೀಗೆಯೇ ತತ್ವಜ್ಞಾನ ವಿಷಯದಲ್ಲಿಯೂ ಸಹ ಸಾಮಾನ್ಯತಃ ಶಬ್ದಜ್ಞಾನವೂ ಕೂಡಾ ಅನುಭವಾನಂತರ ಸಾರ್ಥಕವಾಗುವದು. ಹಾಗೇ ತಿಳಿಯುತ್ತದೆ. ತಿರುಗಿ ತಿರುಗಿ ಪರಿಶೀಲಿಸಲ್ಪಟ್ಟಿದೆ.

"ಆವೃತ್ತಿರಸಕೃದುಪದೇಶಾತ್" (ಬ್ರ.ಸೂ.)

ಈ ನಿರ್ಣಯಕ್ಕನುಗುಣವಾಗಿ "ಅನುಭವ ಪರ್ಯಂತ ಜ್ಞಾನಂ ಸನ್ ವಾಚ್ಯಾಯಾ ಇಚ್ಛಾಯಾಃ ಕರ್ಮಫಲ ವಿಷಯತ್ವಾದಿಚ್ಛಾಯಾಃ ಶಾರೀರಕಂ ಭಾಷ್ಯಾನುವಚನಂ ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಬ್ರಹ್ಮಸೂತ್ರದ ಸಂಕ್ಷೇಪ.

"ಗಾಯತ್ರೀ ಮಂತ್ರಮುಖೇನ ಸಂಧ್ಯೋಪಾಸನಾದಿ ನಿತ್ಯಕರ್ಮಾನುಷ್ಠಾನಂ," ಬಟುವಿನ ಉಪನಯನದಲ್ಲಿ ಬ್ರಹ್ಮೋಪದೇಶದ ನಂತರ ಅದೇ ಮಂತ್ರದಿಂದ ನಿತ್ಯಾನುಷ್ಠಾನವನ್ನು ಸಂಧ್ಯೋಪಾಸನೆಯಲ್ಲಿ ಅನಿವಾರ್ಯತಯಾ ಹೇಳಿದೆ. ಸಂಧ್ಯಾವಂದನೆಯಲ್ಲಿ "ಅಹರಹಃ ಸಂಧ್ಯಾಮುಪಾಸೀತ," ಇದೇ ವಿಧಿಗೆ ಮೂಲಭೂತವಾದ ಋಙ್ಮಂತ್ರ ಗಾಯತ್ರೀಮಂತ್ರದೊಡನೆ ಮೂರು ಮಂತ್ರಗಳಲ್ಲಿ ವಿಶ್ವಾಮಿತ್ರ ಋಷಿಯ ದರ್ಶನದಲ್ಲಿಯೇ–

"ದೇವಂ ನರಃ ಸವಿತಾರಂ ವಿಪ್ರಾ ಯಜ್ಞೈಃ ಸುವೃಕ್ತಿಭಿಃ ।
ನಮಸ್ಯಂತಿ ಧಿಯೇಷಿತಾಃ ॥" (ಋ. ೩, ೬೨, ೧೨)

ಅದರರ್ಥ ಹೀಗಿದೆ. 'ವಿಪ್ರಾಃ' ದ್ವಿಜರಾದ ಜನರು, 'ಧಿಯಾ ಇಷಿತಾಃ' ಬುದ್ಧಿಯಿಂದ ಪ್ರೇರಿತರಾಗಿ, 'ಸುವೃಕ್ತಿಭಿಃ' ಸನ್ನಿಯಾಮಕವಾದ ಯಜ್ಞಗಳಿಂದ ಆ, 'ದೇವಂ ಸವಿತಾರಂ'

ದಿವ್ಯವಾದ ಸವಿತೃವನ್ನು, 'ನಮಸ್ಯಂತಿ' ವಂದಿಸುತ್ತಾರೆ. ಇದರಿಂದ ಸಂಧ್ಯೋಪಾಸನೆಗೆ ಸಂಧ್ಯಾವಂದನವೆಂಬ ರೂಢಿ ಬಂದಿದೆ. ಆದ್ದರಿಂದ ಈ ಸಂಧ್ಯೋಪಾಸನೆಯೂ ಒಂದು ಯಜ್ಞರೂಪವಾದ ಧೀಯೋಗದಿಂದಲೇ ಸಾಧ್ಯವೆಂದು ತೋರುತ್ತದೆ. ಆ ಸಂಧ್ಯೋಪಾಸನೆ-ಯೊಡನೆ ಅಗ್ನ್ಯಾರಾಧನೆಯನ್ನೂ ಪ್ರಾತಃಕಾಲ ಸಾಯಂಕಾಲಗಳಲ್ಲಿ ಮಾಡಲು ಹೇಳಿದ್ದರಿಂದ ಪ್ರತಿದಿನವೂ ಪ್ರತಿಸಂಧ್ಯಾಕಾಲಕ್ಕೂ ಅದು ವಿಹಿತವಾಗಿದೆ.

"ಉಪತ್ವಾಽಗ್ನೇದಿವೇ ದಿವೇದೋಷಾವಸ್ತರ್ಧಿಯಾ ವಯಮ್ ।
ನಮೋ ಭರಂತ ಏಮಸಿ ॥" (ಋ. ೧, ೧, ೭)

'ಹೇ ಅಗ್ನೇ- ದಿವೇ ದಿವೇ' ಪ್ರತಿನಿತ್ಯವೂ, 'ದೋಷಾವಸ್ತಃ' ಪ್ರಾತಃ-ಸಾಯಂಕಾಲಗಳಲ್ಲಿ, 'ವಯಂ' ನಾವು, 'ಧಿಯಾ' ಧೀಯೋಗದಿಂದ, 'ನಮಃ ಭರಂತಃ' ನಮಸ್ಕಾರವನ್ನು ಮಾಡುತ್ತ ಹವಿಷ್ಯಾನ್ನವನ್ನು ನೀಡುತ್ತ, 'ತ್ವಾಂ' ನಿನ್ನನ್ನು, 'ಉಪೈಮಸಿ' ನಿನ್ನ ಸಮೀಪಕ್ಕೆ ಬರುತ್ತೇವೆ.

ಇದು ಬ್ರಹ್ಮಚಾರಿಗಳಿಗೆ ಅಗ್ನಿಯಲ್ಲಿ ಸಮಿದಾಧಾನ, ಗೃಹಸ್ಥರಿಗೆ ಹವಿರ್ದಾನ, ಹೀಗೆ ಎಲ್ಲರಿಗೂ ಅಗ್ನಿಯ ಆರಾಧನೆ ವಿಹಿತವಾದದ್ದೆಂಬುದನ್ನು ತಿಳಿಸಿದೆ.

"ಯಃ ಸಮಿಧಾ ಯ ಆಹುತೀ ಯೋ ವೇದೇನ ದದಾಶ ಮರ್ತೋ ಅಗ್ನಯೇ ।
ಯೋ ನಮಸಾ ಸ್ವಧ್ವರಃ ॥" (ಋ. ೮, ೧೯, ೫)

ಇಲ್ಲಿ ಕೇವಲ ಸಮಿದಾಧಾನದಿಂದಾಗಿ ಬಟುಗಳಿಗೆ ನಿತ್ಯಾಗ್ನಿ ಕಾರ್ಯರೂಪ ಯಜ್ಞಸಿದ್ಧಿ, ಗೃಹಸ್ಥರಿಗೆ ನಿತ್ಯೌಪಾಸನೆ, ದರ್ಶಪೂರ್ಣಮಾಸಾದಿ ವ್ರತಹೋಮ, ಹಾಲು, ತುಪ್ಪ ತಂಡುಲಾದಿಗಳಿಂದ ಆಹುತಿ ಕೊಟ್ಟು ನಿತ್ಯ ಹೋಮ, ಕೇವಲ ವೇದದಿಂದ ಮಂತ್ರಪಠನ ಮಾತ್ರದಿಂದ ಬ್ರಹ್ಮಯಜ್ಞ, ನಮಸ್ಕಾರ ಮಾತ್ರದಿಂದ ಸತ್ಕಾರ. ಪರಿಚರ್ಯಾದಿಗಳು ಸಿದ್ಧಿಸುತ್ತವೆ. ಈ ವಿಧಾನ ಋಙ್ಮಂತ್ರಗಳಲ್ಲಿಯೇ ಹೇಳಿದೆ.

"ಸಮಿಧಾಽಗ್ನಿಂ ದುವಸ್ಯತ ಘೃತೈರ್ಬೋಧಯತಾತಿಥಿಮ್ ।
ಆಸ್ಮಿನ್ ಹವ್ಯಾ ಜುಹೋತನ ॥" (ಋ. ೮, ೪೪, ೧)
"ಬ್ರಹ್ಮಣಸ್ಪತಿಂ ಬ್ರಹ್ಮಣಾಸಂದುವಸ್ಯ" (ಛಂ.ದ. ೩, ೧, ೪)
"ನಮೋಭಿರ್ದೇವಮಸುರಂ ದುವಸ್ಯ" (ಋ. ೫, ೪೨, ೧೧)

ಹೀಗೆ ಮಂತ್ರವಿಧಾನಾದ್ಯನುಶಾಸನದಿಂದಾಗಿ ಅನುಷ್ಠಾನಗಳು ಉಪನಿಷತ್ತುಗಳಲ್ಲಿ ವಿಶೇಷವಾಗಿ ಹೇಳಿದ್ದು ಕಂಡು ಬರುತ್ತದೆ.

"ತದೇತತ್ ಸತ್ಯಂ ಮಂತ್ರೇಷು ಕರ್ಮಾಣಿ ಕವಯೋಯಾನ್ಯಪಶ್ಯಂ ಸ್ತಾನಿ ತ್ರೇತಾಯಾಂ ಬಹುಧಾ ಸಂತತಾನಿ ತಾನ್ಯಾಚರಥ ನಿಯತ ಸತ್ಯಕಾಮಾ ಏಷ ವಃ ಪಂಥಾಃ ಸುಕೃತಸ್ಯ ಲೋಕೇ ॥" (ಮುಂ.ಉ. ೧, ೨, ೧)

ಈ ಸಂಧ್ಯೋಪಾಸನೆಯು ಗಾಯತ್ರೀ ಮಂತ್ರಮುಖವಾಗಿ ವಿಧಿಸಲ್ಪಟ್ಟಿದೆ.

"ಜಪನ್ನಾಸೀತ ಸಾವಿತ್ರೀಂ ಪ್ರತ್ಯಗಾತಾರಕೋದಯಾತ್ ।
ಸಂಧ್ಯಾಂ ಪ್ರಾಕ್ ಪ್ರಾತರೇವಂ ಹಿ ತಿಷ್ಠೇದ್ಯಾಸೂರ್ಯದರ್ಶನಾತ್ ॥" (ಮನುಸ್ಮೃ. ೨)

ಹೀಗೆ ವೇದಶಾಸ್ತ್ರಾದಿ ಶಾಸನದಿಂದಾಗಿ ಫಲಾಪೇಕ್ಷೆಯಿಲ್ಲದೆ ಆವಶ್ಯಕವಾದ ಕರ್ತವ್ಯವನ್ನು ತಿಳಿದು ಆಚರಿಸಬೇಕು. ಎಲ್ಲ ಉಪನೀತರಿಗೆ ಅನಿವಾರ್ಯತಯಾ ವಿಹಿತವಾದ, ಎಲ್ಲಕ್ಕಿಂತಲೂ ಶ್ರೇಷ್ಠವಾದ ವೈದಿಕ ಯಜ್ಞರೂಪದಿಂದ ವಿಹಿತವಾದ ಬ್ರಹ್ಮಕರ್ಮ. ಇದು ನಿತ್ಯಕರ್ಮ-ರೂಪವಾದ ಬ್ರಹ್ಮಕರ್ಮದ ಪ್ರಧಾನ ಲಕ್ಷಣ. ನಿಷ್ಕಾಮಕರ್ಮಯೋಗಕ್ಕೂ ಇದೇ ಲಕ್ಷಣ. ನಿತ್ಯಕರ್ಮವೆಂದರೆ "ಯಸ್ಯಕರಣೇ ಫಲಾಭಾವಃ ಅಕರಣೇ ಪ್ರತ್ಯವಾಯಃ," ಮಾಡಿದರೆ ಫಲವಿಲ್ಲ. ಮಾಡದೇ ಇರುವದು ಸರಿಯಲ್ಲ. ಇಲ್ಲಿಯೂ ಮಂತ್ರಾರ್ಥ ಜ್ಞಾನವಿಲ್ಲದಿದ್ದರೆ ಆ ಕರ್ಮ ನಿರರ್ಥಕ. ಹಾಗೆಂತ ಈ ಕರ್ಮವನ್ನು ಬಿಡಲು ಎಲ್ಲಿಯೂ ಹೇಳಿಲ್ಲ. ಯಾವುದಾದರೂ ಯುಕ್ತಿಯಿಂದ ಕಲ್ಪನೆ ಮಾಡಲೂ ಶಕ್ಯವಿಲ್ಲ. ಇದು ಹೇಗೆ ? ಎಲ್ಲಿಂದ ? ಈ ಬಗ್ಗೆ ಎಂಟು ವರ್ಷದಲ್ಲಿ ಉಪನೀತ ಬಟು ಮಂತ್ರಾರ್ಥಜ್ಞಾನಪೂರ್ವಕ ಆದಿತ್ಯಜ್ಯೋತಿಯ ಧ್ಯಾನ ಮಾಡಿ ಜಪ ಮಾಡಲು ಹ್ಯಾಗೆ ಸಮರ್ಥನಾಗುತ್ತಾನೆ ? ವಿದ್ವಾಂಸರಿಗೂ ಸಹ ಅದು ಅಶಕ್ಯ. ಹೀಗಿರುವಾಗ ಅರ್ಥಜ್ಞಾನ ಧ್ಯಾನಾದಿ ಸತ್ವಗಳ ಪ್ರಾಪ್ತಿಗಾಗಿಯೇ ಈ ಗಾಯತ್ರೀ ಉಪಾಸನೆ ವಿಹಿತವೆಂಬುದು ಸರಿಯಾಗಿ ಕಾಣುತ್ತದೆ. ಅದು ಕೇವಲ ಶಬ್ದಾರ್ಥಜ್ಞಾನಕ್ಕಷ್ಟೇ ಅಲ್ಲ. ಸತ್ಯವಸ್ತುವಾದ ಬ್ರಹ್ಮಾತ್ಮನ ಅನುಭವಪೂರ್ಣವಾದ ತತ್ವಜ್ಞಾನವನ್ನು ನೀಡಲು ಈ ಗಾಯತ್ರೀ ಮಂತ್ರ ಸಮರ್ಥವಾಗಿದೆ. ಹಾಗೆ ಇದು ಉಪಾಸನಾ ಧೀಯೋಗ ಪ್ರಧಾನವಾದ ಮೊದಲನೆಯ ಪರಾಯೋಗ ವಿದ್ಯೆ. ಸಂವಿದ್-ಭಾವನಾ-ಕ್ರಿಯಾಯೋಗಾದಿಗಳಿಂದ ಸಾಧ್ಯ-ವಾದದ್ದು. ಇದನ್ನು ಸ್ಮೃತಿಮುಖದಿಂದ ವಿಧಿಸಿದೆ.

"ನ ಭಿನ್ನಾಂ ಪ್ರತಿಪದ್ಯೇತ ಗಾಯತ್ರೀಂ ಬ್ರಹ್ಮಣಾ ಸಹ ।
ಸೋಽಹಮಸ್ಮೀತ್ಯುಪಾಸೀತ ವಿಧಿನಾ ಯೇನ ಕೇನಚಿತ್ ॥"

ಇದೂ ವೇದೋಪನಿಷದಾದಿ ತತ್ವಾರ್ಥಕ್ಕೆ ಸಮಾನವಾಗಿಯೇ ಇದೆ.

"ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್" (ವಾ.ಸಂ. ೪೦, ೧೬)

"ಯೋಽಸಾವಸೌ ಪುರುಷಃ ಸೋಽಹಮಸ್ಮಿ" (ಈ.ಉ. ೧೬)

"ಸ ಯಶ್ಚಾಯಂ ಪುರುಷೋ ಯಶ್ಚಾ ಸಾವಾದಿತ್ಯೋ ಸ ಏಕಃ" (ತೈ.ಬ್ರ.ಉ. ೧೦, ೪)

ಇಲ್ಲಿ ರಹಸ್ಯ ಹೀಗಿದೆ. ಬಾಲ್ಯದಲ್ಲಿ ಬಟುವಿಗೆ ಬ್ರಹ್ಮೋಪದೇಶವಾಗಿ ಗಾಯತ್ರೀ ಮಂತ್ರವನ್ನು ಉಪದೇಶಿಸಿ ಧೀಯೋಗಾದಿ ಸಾಧನದಿಂದ ಸಾರ್ಥವಾಗಿ ಸೂರ್ಯನನ್ನು ಧ್ಯಾನಿಸುವ ನಿತ್ಯೋಪಾಸನೆ. ನಂತರ ಜ್ಞಾನಿಯಾದಾಗ ಕೇವಲ ಪ್ರಣವ (ಓಂಕಾರ) ಉಪದೇಶ, ಅದರ ಧ್ಯಾನ. ಇವೇ ವಿಶೇಷ.

ಬ್ರಹ್ಮಸೂತ್ರ ಯಜ್ಞೋಪವೀತ

ಬಟುಗಳ ಉಪನಯನದಲ್ಲಿ ದ್ವಿಜತ್ವಸಿದ್ಧಿಗಾಗಿ ಬ್ರಹ್ಮೋಪದೇಶಕ್ಕಿಂತ ಮೊದಲೇ, ಬ್ರಹ್ಮಸೂತ್ರ ಯಜ್ಞೋಪವೀತವನ್ನು ತೊಡಿಸುತ್ತಾರೆ. "ಯಜ್ಞೋಪವೀತಂ ಪರಮಂ ಪವಿತ್ರಂ" ಎಂಬ ಮಂತ್ರದಿಂದ, ದಿವ್ಯಸತ್ವವನ್ನುಂಟುಮಾಡುವಂಥ ಎರಡನೇ ಜನ್ಮವದು. ವೈದಿಕ ಆರ್ಷೇಯ ಬ್ರಹ್ಮವರ್ಚಸ್ಸು ಮೊದಲಾದ ಯೋಗ ಸಂಪಾದಕವಾದದ್ದೆಂಬುದು ಶಾಸ್ತ್ರೀಯ ವಸ್ತುಸಿದ್ಧ ತತ್ವ.

ಬಾಹ್ಯದೃಷ್ಟಿಯಿಂದ ಕೃತ್ರಿಮವಾದ ವೇಷಭೂಷಾದಿಗಳಂತೆ ಅಲಂಕಾರ ಮಾತ್ರವೆಂದು ತೋರುತ್ತದೆ. ಇದು ಕೇವಲ ಆಡಂಬರವೆಂದು ಕೆಲವರ ಅನಿಸಿಕೆ. ಅದರ ತತ್ವ ತಿಳಿಯದಿರು-ವಾಗ ಇದು ಸರಿ. ಇದು ಹೇಳಲಿಕ್ಕೂ ಕೇಳಲಿಕ್ಕೂ ನಿಷೇಧಿಸಲಿಕ್ಕೂ ಆಕ್ಷೇಪ ಮಾಡುವದಕ್ಕೂ ನಿಂದಿಸಲಿಕ್ಕೂ ಸುಲಭ. ಆದರೆ ವಿಮರ್ಶಿಸಿ ತತ್ವವನ್ನು ತಿಳಿಯಲಿಕ್ಕೂ ತಿಳಿಸಲಿಕ್ಕೂ ಕಠಿಣ-ವಾದದ್ದು. ಉಪನಿಷತ್ತಿನಲ್ಲಿ ಬ್ರಹ್ಮವಸ್ತುವನ್ನೇ ಸೂತ್ರಾತ್ಮಕವಾಗಿ ವಿಮರ್ಶಿಸಿ ಮೀಮಾಂಸಿಸಿ ಹೇಳಿದ್ದಾರೆ.

"ಸಹೋವಾಚವಾಯುರ್ವೈಗೌತಮ ತತ್ ಸೂತ್ರಮ್, ವಾಯುನಾ ವೈ ಗೌತಮಸೂತ್ರೇಣ ಅಯಂ ಚ ಲೋಕಃ ಪರಶ್ಚಲೋಕಃ ಸರ್ವಾಣಿ ಭೂತಾನಿ ಸಂದೃಬ್ಧಾನಿ ಭವಂತಿ," (ಬೃ.ಉ. ೩, ೭, ೧)

ಹಾಗೆಯೇ, "ಯೋವೈತತ್‌ಕಾಪ್ಯಸೂತ್ರಂವಿದ್ಯಾತ್ ತಂಚಾಂತರ್ಯಾಮಿಣಮಿತಿ ಸ ಬ್ರಹ್ಮವಿತ್ ಸ ಲೋಕವಿತ್ ಸ ದೇವವಿತ್ ಸ ವೇದವಿತ್ ಸ ಆತ್ಮವಿತ್ ಸ ಸರ್ವವಿದಿತಿ," ಹೀಗೆ ಸೂತ್ರಾತ್ಮ ವಿಜ್ಞಾನದಿಂದ ಬ್ರಹ್ಮಾತ್ಮ ತತ್ವವನ್ನು ತಿಳಿಸಿದ್ದಾರೆ. ಸರ್ವಾಂತರ್ಯಾಮಿ ಚೇತನಾತ್ಮನನ್ನು ಬೋಧಿಸುವ ಲಿಂಗ (ಚಿಹ್ನೆ) ವಾಯುರೂಪ ಪ್ರಾಣಾತ್ಮಕ ಶಕ್ತಿ ಪೂರ್ಣವಾದ ಸೂತ್ರವು ಸಂಚೇತನಾಶಕ್ತಿ ವಿಶಿಷ್ಟವಾದದ್ದು. ಅದೇ ಸೂಕ್ಷ್ಮತಮವಾದ ದಿವ್ಯಬ್ರಹ್ಮಾತ್ಮ ತತ್ವವನ್ನು ತಿಳಿಸಲು ಸಮರ್ಥವಾದದ್ದು ಈ ಬ್ರಹ್ಮಸೂತ್ರ. ಬ್ರಹ್ಮಾತ್ಮವಸ್ತು ಸಾಕ್ಷಾತ್ಕಾರ ಸಾಧನೆಯ ದೀಕ್ಷೆಯನ್ನು ಹೊಂದಿರುವವನಿಗೆ ಇದು ಲಕ್ಷಣ. ಇದರಂತೆ ತತ್ವತ್ರಯ ರೂಪವಾದದ್ದು ಮೌಂಜೀಬಂಧನ. ಯಜ್ಞೋಪವೀತವೆಂದರೆ ಯಜ್ಞಕ್ಕಾಗಿ ಧಾರಣ ಮಾಡಿದ್ದು. ಲೌಕಿಕ ವ್ಯವಹಾರದಲ್ಲಿಯೂ ವೀರ್ಯವತ್ತರವಾದ ಧ್ಯೇಯಸಿದ್ಧಿಗಾಗಿ ಕಂಕಣ ಬಂಧಾದಿಗಳಿದ್ದಂತೆ. (ಇಂದಿನ ಭಾಷೆಯಲ್ಲಿ ಯೂನಿಫಾರ್ಮ) ಈ ಬ್ರಹ್ಮಸೂತ್ರವು ಒಂದೇ ನೂಲಿನದಾಗಿದ್ದು ಬ್ರಹ್ಮವಸ್ತುವಿನಂತೆ. ಅದರ ತ್ರಿವೃತ್ಕರಣ ತ್ರಿಗುಣೀಕರಣದಿಂದ ಸಂಧಿಸಿ ತತ್ವತ್ರಯ, ಗುಣತ್ರಯ ಇದರಲ್ಲಿ ಕೂಡಿದೆ. ಬ್ರಹ್ಮವಸ್ತುವಿನಂತೆ ಮುಂದೆ ಪುನಃ ತ್ರಿಗುಣೀಕರಣದಿಂದ ನವತಂತು ರೂಪವನ್ನು ಕೊಟ್ಟು ಒಂದೇ ಸೂತ್ರದಲ್ಲಿ ತೇಜಸ್ಸು, ಜಲ, ಪೃಥಿವೀ ಎಂಬ ಮೂರು ಭೂತಗಳು ಹಾಗೂ ಅಗ್ನಿವಾಯು ಸೂರ್ಯರೂಪವಾದ ಮೂರು ಜ್ಯೋತಿಸ್ಸುಗಳು ದೇವತಾಸತ್ವಯುಕ್ತವಾದವು. ಮತ್ತು ಆಧ್ಯಾತ್ಮಿಕ ಅಂತರ್ಯ ವಾಕ್ ಪ್ರಾಣ-ಮನಸ್ಸು ಎಂಬ ಮೂರು ಕರಣಗಳು ಹೀಗೆ ನವತಂತುಗಳಲ್ಲಿ ಕಲ್ಪಿಸುವದು. ಹೀಗೆ ಒಂದೇ ಆದಿ-ಅಂತ್ಯವುಳ್ಳ

ಸೂತ್ರವನ್ನು ಎರಡುಬಾರಿ ತ್ರಿವೃತ್ಕರಣ ಮಾಡಿ ನವತಂತುಗಳನ್ನಾಗಿಸಿ ಧರಿಸಿದಂತೆ ಮೌಂಜಿಯನ್ನು ಅಂತೆಯೇ ಟೊಂಕದಲ್ಲಿ ಬಂಧಿಸಿ ಸಂವಿತ್-ಭಾವನಾ- ಕ್ರಿಯಾರೂಪವಾಗಿ ವೇದತ್ರಯಗಳಿಂದ ಕಟ್ಟಲ್ಪಟ್ಟೆನೆಂಬ ಭಾವನೆ ಮಾಡಬೇಕೆಂದಿದೆ. "ಸಂವಿದ್ ಭಾವನಾ ಕ್ರಿಯಾರೂಪೇಣ ವೇದತ್ರಯೇಣಾವೃತೋಽಹಂ.." ಮೌಂಜಿಯೂ ಯಜ್ಞೋಪವೀತದಂತೆಯೇ.

"ಮೌಂಜೀತ್ರಿವೃತ್ ಸಮಶ್ಲಕ್ಷ್ಣಾ"

ಹೀಗೆ ಮೂರಾಗಿ ಮಾಡಲ್ಪಟ್ಟು ಮೂರು ಶಕ್ತಿಗಳನ್ನು ಜೋಡಿಸಿ ಒಂದು ಬ್ರಹ್ಮ ಗ್ರಂಥಿಯನ್ನು ಹಾಕಿದಾಗ ಪವಿತ್ರವಾದ ಯಜ್ಞೋಪವೀತವು ಶ್ರೌತಸ್ಮಾರ್ತ ಕರ್ಮ-ರೂಪವಾದ ಯಜ್ಞಕ್ಕೆ ಧಾರಣದಿಂದ ಅರ್ಹವಾಗುತ್ತದೆ ಎಂಬುದು ಮಂತ್ರಾರ್ಥದಿಂದ ಸಿದ್ಧವಾಗುತ್ತದೆ.

"ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚಶುಭ್ರಂ ಯಜ್ಞೋಪವೀತಂ ಬಲಮಸ್ತುತೇಜಃ ॥"

ಇದು ಯಜ್ಞೋಪವೀತಧಾರಣಕ್ಕೆ ವಿನಿಯುಕ್ತವಾದ ಮಂತ್ರ. ಇಲ್ಲಿಯ ಎರಡನೇ ಪಾದದಲ್ಲಿ "ಪ್ರಜಾಪತೇರ್ಯತ್‌ಸಹಜಂ ಪುರಸ್ತಾತ್" ಎಂದು ಆದಿಸೃಷ್ಟಿಯಲ್ಲಿ ಬ್ರಹ್ಮಾತ್ಮನಾದ ಪ್ರಜಾಪತಿಯೊಡನೆ ಜನಿಸಿದ ಪವಿತ್ರವೂ ಶ್ರೇಷ್ಠವಾದ ಈ ಸೂತ್ರವು ತತ್ವತ್ರಯದಿಂದ ಮೂರಾಗಿ ಮಾಡಿ ಪುನಃ ತ್ರಿಗುಣೀಕರಣದಿಂದ ನವತಂತುಗಳುಳ್ಳದ್ದನ್ನು ಬ್ರಹ್ಮಗ್ರಂಥಿಯಿಂದ ಕೂಡಿಸಿದಾಗ ಬ್ರಹ್ಮವಸ್ತುಬೋಧಕವಾದ ಬ್ರಹ್ಮಸೂತ್ರವು ಬಾಹ್ಯಪ್ರತೀಕವಾದ ಚಿಹ್ನವಾಗಿದೆ.

ಆಕ್ಷೇಪ :

ಬ್ರಹ್ಮೋಪದೇಶದಲ್ಲಿ ಈ ಗಾಯತ್ರೀ ಮಂತ್ರವನ್ನು ಮಾಡುವ ವಿಷಯದಲ್ಲಿ ಬಹುಶಃ ಎಲ್ಲ ವಿದ್ವಾಂಸರ ಆಕ್ಷೇಪ ಹೀಗಿದೆ. ಬ್ರಹ್ಮೋಪದೇಶದಲ್ಲಿ ಬಟುವಿನ ಉಪನಯನಕ್ಕಾಗಿ ಗಾಯತ್ರೀ ಮಂತ್ರವು ವಿಹಿತವಾಗಿದೆ. "ಗಾಯತ್ರ್ಯಾ ಬ್ರಾಹ್ಮಣಮುಪನಯೀತ" ಎಂದು. ಋಗ್ವೇದಾದಿ ವೇದಗಳಲ್ಲಿ ಸಹಸ್ರಾರು ಗಾಯತ್ರೀ ಛಂದಸ್ಸಿನ ಮಂತ್ರಗಳಿರುವಾಗ ಅವುಗಳಲ್ಲಿ "ತತ್ಸವಿತುರ್ವರೇಣ್ಯಂ" ಎಂಬ ಮಂತ್ರವನ್ನೇ ಉಪದೇಶಿಸಬೇಕೆಂಬುದಕ್ಕೆ ಪ್ರಮಾಣವೆಲ್ಲಿ ? ಕಾರಣವೇನು ?

ಮಂತ್ರಬ್ರಾಹ್ಮಣೋಪನಿಷದಾದಿಗಳಲ್ಲಿಯಾಗಲೀ, ಕಲ್ಪಸೂತ್ರಗಳಲ್ಲಿಯಾಗಲೀ ಎಲ್ಲಿಯೂ ಸ್ಪಷ್ಟವಾಗಿ ಇದೇ ಮಂತ್ರವನ್ನೇ ಉಪದೇಶಿಸಬೇಕೆಂಬ ವಿಧಿ ಕಂಡು ಬರುವದಿಲ್ಲ. ಇದೇಕೆ ? ಈ ಮಂತ್ರ ಎಂಬುದೇ ಆಕ್ಷೇಪದ ಮೂಲ. ಅದಕ್ಕೆ ಸಮಾಧಾನವನ್ನು ಹೀಗೆ ಊಹಿಸಬಹುದು. ಅದರಲ್ಲಿ ತತ್ವ ಹೀಗಿದೆ. ಪರೋಕ್ಷ ವಸ್ತು ಸತ್ವಾರ್ಥಕವಾದ ವಾಚ್ಯಾರ್ಥಸಿದ್ಧ ಲಕ್ಷ್ಯಾರ್ಥಾವ-ಬೋಧಕ "ತತ್" ಎಂಬ ಪದ "ತತ್ ಸವಿತುರ್ವರೇಣ್ಯಂ" ಎಂಬಲ್ಲಿದೆ. ಅದು ಪರೋಕ್ಷಾರ್ಥ ಬೋಧಕವಾದದ್ದು. "ತದಿತಿ ಪರೋಕ್ಷೇ ವಿಜಾನೀಯಾತ್" ಎಂಬುದು ಪ್ರತ್ಯಕ್ಷವಾದ ಶಬ್ದ

ಶಾಸ್ತ್ರದ ನಿಯಮ. ಇದರಿಂದ "ತತ್" ಎಂಬ ಪದವು ಪರೋಕ್ಷಸಿದ್ಧವಾದ ಬ್ರಹ್ಮಾತ್ಮ ನಿದರ್ಶಕವೆಂಬುದು ಸಿದ್ಧವಾದಂತೆ. ಈ ಅರ್ಥದಲ್ಲಿ ಋಙ್ಮಂತ್ರಗಳಲ್ಲಿ ಉಪನಿಷತ್ತುಗಳಲ್ಲಿ ಬಹಳ ಪ್ರಮಾಣ ವಚನಗಳಿವೆ.

"ತದಿದಾಸ ಭುವನೇಷು ಜ್ಯೇಷ್ಠಮ್" (ಋ. ೧೦, ೧೨೦, ೧)

"ಆನೀದವಾತಂ ಸ್ವಧಯಾ ತದೇಕಮ್" (ಋ. ೧೦, ೧೨೯, ೨)

"ರೂಪಂ ರೂಪಂ ಪ್ರತಿರೂಪೋಬಭೂವ ತದಸ್ಯ ರೂಪಂ ಪ್ರತಿಚಕ್ಷಣಾಯ" (ಋ. ೬, ೭, ೧೮)

"ತದೇತತ್ ಬ್ರಹ್ಮಾಪೂರ್ವಮನಂತರಮಬಾಹ್ಯಮ್" (ಬೃ.ಉ. ೨, ೪, ೯೯)

"ಯದ್ವಾಚಾऽನಭ್ಯುದಿತಂ ಯೇನ ವಾಗಭ್ಯುದ್ಯತೇ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥" (ಕೇ.ಉ. ೧, ೪)

"ತದೇವಶುಕ್ರಂತದ್ಬ್ರಹ್ಮಾತದೇವಾಮೃತಮುಚ್ಯತೇ।
ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದುನಾತ್ಯೇತಿಕಶ್ಚನ ॥" (ಕಠೋ. ೨, ೨, ೮)

ಇತ್ಯಾದಿ ವಚನಗಳಿಂದ ಆ ಬ್ರಹ್ಮಾತ್ಮನಿಗೆ ಇಂದ್ರ ಶಬ್ದದಿಂದ ನಿರ್ದೇಶ, ಹಾಗೆಯೇ ತತ್ ಮತ್ತು ಸಃ ಎಂಬುದರಿಂದ ತಚ್ಛಬ್ದದ ನಿರ್ದೇಶವೂ ಆಗುತ್ತದೆ.

"ಇಂದ್ರೋ ಯಾತೋ ವಸಿತಸ್ಯ ರಾಜಾ ಸೇದು ರಾಜಾ ಕ್ಷಯತಿ ಚರ್ಷಣೀನಾಮ್" (ಋ. ೧, ೩೨, ೧೫)

"ಇಂದ್ರೋ ಬ್ರಹ್ಮೇಂದ್ರ ಋಷಿಃ" (ಋ. ೮,೧೬-೭) ಹೀಗೆ ಬ್ರಹ್ಮಾತ್ಮನ ಸಾಕ್ಷಾತ್ಕಾರದಿಂದ ಪ್ರಕಟವಾದ ಪರೋಕ್ಷತೆಯನ್ನು ಪರೋಕ್ಷ ದೃಷ್ಟಿಯಿಂದ ತೋರಿಸಲಾಗಿದೆ.

"ಸ ಏತಮೇವ ಪುರುಷಂ ಬ್ರಹ್ಮತತಮಸ್ಯದ್ಇದಮದರ್ಶಮಿತೀಇ ಇತಿಸ್ಮಾದಿದಂದ್ರೋಹ ವೈ ನಾಮ ತಮಿದಂದ್ರಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ" (ಐ.ಉ. ೧, ೩, ೧೪)

"ಓಂ ತತ್ ಸದಿತಿ ನಿರ್ದೇಶೋಬ್ರಹ್ಮಣಸ್ತ್ರಿವಿಧಃ ಸ್ಮೃತಃ" (ಸ್ಮೃತಿಃ)

"ಸವಿತುಃ ವರೇಣ್ಯಮ್ ಭರ್ಗಃ" ಈ ಪದತ್ರಯವೂ ಆ ಪರೋಕ್ಷ ತತ್ವ ಬೋಧಕವೇ ಆಗಿದೆ. ಸವಿತೃಶಬ್ದವು ವಿಶ್ವೋತ್ಪತ್ತಿಗೆ ಮೂಲಕಾರಣವಾದ ಸಾಕ್ಷಾದ್ ವಾಚ್ಯಾರ್ಥ ಸಂಬಂಧದಿಂದಾಗಿ ಸತ್ಯವಸ್ತುವಿನ ಬೋಧಕವಾಗಿದೆ.

"ದಿವಾದಿ ಷೂಙ್ ಪ್ರಾಣಿಪ್ರಸವೇ ತುದಾದಿ ಷೂಪ್ರೇರಣೇ" ಎಂಬ ಧಾತುಗಳಿಂದಾಗಿ ಪ್ರಸವ ಹಾಗೂ ಪ್ರೇರಣೆ ಎಂಬ ಅರ್ಥದಿಂದ ರೂಢಾರ್ಥವಾಚಕ ಶಕ್ತಿಯಿಂದಾಗಿ ಆಕಾಶದಲ್ಲಿ ಪ್ರತಿದಿನ ಉದಯಿಸುತ್ತಿರುವ ಪ್ರತ್ಯಕ್ಷ ಭೌತಿಕ ಜ್ಯೋತಿರ್ಮಯನಾದ ಸೂರ್ಯ ಹಾಗೂ ಲಕ್ಷ್ಯಾರ್ಥದಿಂದ ತದಂತರ್ಯಾಮಿ ಪುರುಷನನ್ನು ಬೋಧಿಸುತ್ತದೆ. ಹೀಗೆ ಸೂರ್ಯ ಶಬ್ದದಿಂದ ಉಪದಿಷ್ಟವಾದ ಒಂದೇ ಶಬ್ದ, ಪ್ರತ್ಯಕ್ಷ-ಪರೋಕ್ಷ-ಉಭಯಾರ್ಥವನ್ನೂ ತಿಳಿಸುತ್ತದೆ.

"ಸುಸ್ಸಂದೃಶಂ ತ್ವಾಂ ವಯಂ ಪ್ರತಿಪಶ್ಯೇಮಸೂರ್ಯಾ ವಿಪಶ್ಯೇಮನೃಚಕ್ಷಸಃ" (ಋ. ೧೦,)

ಇದರರ್ಥ, ಎಲೇ ಸೂರ್ಯನೇ ! ಉತ್ತಮ ದ್ರಷ್ಟಾರನಾದ ನಿನ್ನನ್ನು ನಾವು ತಿಳಿಯುತ್ತೇವೆ. ಹಾಗೂ ನಮ್ಮ ಕಣ್ಣಿನಿಂದ ಪ್ರತ್ಯಕ್ಷವಾಗಿ ನಿನ್ನನ್ನು ನೋಡುತ್ತೇವೆ. ಇಲ್ಲಿ ಪ್ರತ್ಯಕ್ಷವಾಗಿ ಕಾಣುವಂಥ ಸೂರ್ಯನು ವಾಚ್ಯಾರ್ಥ ಭೌತಿಕರೂಪ. ತದಂತರ್ಯಾಮಿಯಾದ ಪುರುಷ ಪರೋಕ್ಷಸಿದ್ಧನಾದ ಚೈತನ್ಯರೂಪ ಸೂರ್ಯ.

"ಯೋಸಾವಾದಿತ್ಯೇ ಪುರುಷಃ ಸೋಽಸಾವಹಮ್" (ಶು.ಯ.ಸಂ. ೪೦, ೧೭)

"ಸಯಶ್ಚಾಯಂ ಪುರುಷೋ ಯಶ್ಚಾಸಾವಾದಿತ್ಯೇ ಸ ಏಕಃ" (ತೈ.ಬ್ರ. ೧೦, ೪)

ಆ ಪರೋಕ್ಷನಾದವನು ಸೂರ್ಯನ ಅಂತರ್ಯಾಮಿಯಾಗಿದ್ದಾನೆಂದು ಸ್ಪಷ್ಟವಾಗಿ ಶ್ರುತಿ ಹೇಳಿದೆ.

"ಯಃ ಆದಿತ್ಯೇ ತಿಷ್ಠನ್ ಆದಿತ್ಯಾದಂತರೋ ಯಮಾದಿತ್ಯೋನ ವೇದ ಯಸ್ಯಾದಿತ್ಯಃ ಶರೀರಮ್ ।
ಯಃ ಆದಿತ್ಯಮಂತರೋ ಯಮಯತಿ ಏಷ ತ ಆತ್ಮಾಽಂತರ್ಯಾಮ್ಯಮೃತಃ ॥" (ಬೃ. ೩,೭,೯)

ಆ ಸೂರ್ಯಾಂತರ್ಯಾಮಿ ಸದ್ವಸ್ತುವನ್ನು ತೋರಿಸುವ ಪದ ಇದು.

"ಸವಿತುಃ ತತ್ ವರೇಣ್ಯಂ ಭರ್ಗಃ" ಎಂಬುದೆಲ್ಲ, "ವರೇಣ್ಯಂ," ವರಿಷ್ಠ ಶ್ರೇಷ್ಠ ಎಂಬುದು ವಿಶೇಷಣ. ತತ್ ಎಂಬುದು ವಿಶೇಷ್ಯ. "ಭರ್ಗಃ ಜ್ಯೋತಿಃ" ಎಂಬುದು ಅದರ ಸ್ವರೂಪವನ್ನು ತಿಳಿಸುತ್ತದೆ. ಇದು ಆದರ ಸಮನ್ವಯವಾದ ಅರ್ಥ.

"ಭರ್ಗಃ," ಭ್ರಸ್ಜಪಾಕೇ, ತುದಾದಿ ಧಾತುವಿನ ಅರ್ಥಯೋಗದಿಂದ ವಿಶ್ವಪರಿಪಾಕಕ್ಕೆ ಕಾರಣೀಭೂತವಾದ ಸೂಕ್ಷ್ಮತಮವಾದ ಕೇವಲ ಚೈತನ್ಯಜ್ಯೋತಿ. ಇದೇ ಕಾಲಾತ್ಮ ವಿದ್ಯುದ್ರೂಪ ಸತ್ವದಿಂದ ಕೂಡಿದ ಕಾಲಾಗ್ನಿ ರುದ್ರನೆಂಬ ಜ್ಯೋತಿ. ಆದ್ದರಿಂದಲೇ ಭರ್ಗ, ರುದ್ರ "ಭರ್ಗೋಹ ನಾಮೋ ತಯಸ್ಮದ್ದೇವಾಃ" (೧೦, ೬೧, ೧೪) "ಹರಃ ಸ್ಮರಹರೋಭರ್ಗ," ರುದ್ರನಾಮಗಳಲ್ಲಿ ಇದು ಪ್ರಸಿದ್ಧವಾಗಿದೆ. ಆದರೆ ಅದು ಪುಲ್ಲಿಂಗಾಂತ ಭರ್ಗ ಶಬ್ದ. ಆದರೆ ಇಲ್ಲಿ "ಭರ್ಗಸ್" ಎಂಬುದು ನಪುಂಸಕ ಶಬ್ದ. ಇದು "ತತ್" ಎಂಬುದಕ್ಕೆ ವಿಶೇಷಣ. ಅದ್ದರಿಂದ ತತ್ ಭರ್ಗಃ, ಪರಂಜ್ಯೋತಿ ರೂಪವಾದದ್ದೇ. ಎಲ್ಲಕ್ಕಿಂತ ಶ್ರೇಷ್ಠವಾದದ್ದು, ಉತ್ತಮವಾದದ್ದು. ಇಲ್ಲಿ ಪ್ರತ್ಯಕ್ಷವಾಗಿ ಆಕಾಶದಲ್ಲಿ ಕಾಣುವ ಆದಿತ್ಯನ ಶ್ರೇಷ್ಠತರ ಹಾಗೂ ಉತ್ತರವಾದ ತೇಜಸ್ಸೇ ಎಂಬುದೂ ಸ್ಪಷ್ಟವೆಂಬುದಕ್ಕೆ ಶ್ರುತಿವಾಕ್ಯ.

"ಉದ್ ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಮ್ ।
ದೇವಂ ದೇವತ್ರಾ ಸೂರ್ಯ ಮಗನ್ಮ ಜ್ಯೋತಿರುತ್ತಮಮ್ ॥" (ಋ. ೧,೫೦,೧೦)

ಇಲ್ಲಿ ಉತ್ಕೃಷ್ಟವಾದ ದ್ಯುಲೋಕಜ್ಯೋತಿರೂಪನಾದ ಸೂರ್ಯನನ್ನು ಪ್ರತ್ಯಕ್ಷವಾಗಿ ನೋಡುತ್ತಾ ಉತ್ತಮ ಜ್ಯೋತಿಯನ್ನು ಸೇರುತ್ತೇವೆ ಎಂಬುದಕ್ಕೆ ಸಮಾನಾರ್ಥಕ.

"ವಿಪಶ್ಯೇ ಮನ್ಯುಚಕ್ಷಸಃ" ಎಂಬುದು

"ಅಗನ್ಮ ಜ್ಯೋತಿರುತ್ತಮಮ್"

ಅದೇ ಅಂತರ್ಯಾಮಿಯಾದ ಪರಮಜ್ಯೋತಿ.

"ಸುಸಂದೃಶಂ ತ್ವಾ ವಯಂ ಪ್ರತಿ ಪಶ್ಯೇಮ ಸೂರ್ಯ" (ಋ. ೧೦, ೧೫೮, ೫)

ಇದರಿಂದ ಉಪದಿಷ್ಟವಾದದ್ದೇ ದ್ರಷ್ಟೃತ್ವ ಸತ್ವಪೂರ್ಣವಾದ ಆ ಸವಿತೃವಿನ ಗಾಯತ್ರಿಯ ನಾಲ್ಕನೇ ಪಾದ ಎಂಬುದನ್ನು ಉಪನಿಷತ್ತು,

"ಗಾಯತ್ರ್ಯಸ್ಯೇಕಪದೀದ್ವಿಪದೀತ್ರಿಪದೀ ಚತುಷ್ಪದೀ ಅಪದಸಿನಹಿ ಪದ್ಯಸೇ ನಮಸ್ತೇ ತುರೀಯಾಯ ದರ್ಶತಾಯಪದಾಯ ಪರೋರಜಸೇಽಸಾ ವದೋಮ್ ಪ್ರಾಪದಹಮದಃ ಪ್ರಾಪಮ್" (ಬೃ.ಉ. ೫, ೧೪, ೭)

ಆ ಪರೋಕ್ಷವಾದ ನಾಲ್ಕನೇ ಪಾದವನ್ನೇ "ತದ್ ವರೇಣ್ಯಂ ಭರ್ಗಃ" ಎಂಬ ಪದತ್ರಯದಿಂದ ನಿರ್ದೇಶಿಸಿದೆ.

"ಅಗ್ನೇ ರಾಯೇದಿದೀಹಿನಃ ಸುವೃಕ್ತಿಭಿರ್ವರೇಣ್ಯ" (ಋ.)

"ವರೇಣ್ಯಸ್ತತೇ ವಸಃಇಯಾನಾಸೋ ಅಮನ್ಮಹಿ" (ಋ.)

"ವರೇಣ್ಯಾಽನು ಪ್ರಯಾಣಮುಷಸೋ ವಿರಾಜತಿ" (ಋ.)

ಅಥವಾ "ಸವಿತುಃ ದೇವಸ್ಯ" ವಿಶೇಷ್ಯ ವಿಶೇಷಣ ರೂಪವಾದ ಎರಡೂ ಪದಗಳ ಕೂಡುವಿಕೆಯಿಂದ ಸವಿತೃ ಶಬ್ದವು ಸೂರ್ಯಾಂತರ್ಯಾಮಿ ವಾಚಕವೇ. ಅಂತೆಯೇ ದಿವ್ಯಾತ್ಮನೂ ಪರಮಾತ್ಮನೂ ಆದ ಪ್ರತ್ಯಕ್ಷವಾಗಿ ದರ್ಶಕವಾದ ಧ್ಯಾನಯೋಗ್ಯವಾದ ಸೂರ್ಯನ ತೇಜಸ್ಸೇ ಭರ್ಗಶಬ್ದ ವಾಚಕ, ಅಧಿಭೌತಿಕತತ್ವದಿಂದ ಪ್ರತ್ಯಕ್ಷ ದರ್ಶನೀಯವೆಂಬುದು ಸಿದ್ಧ.

ಇಲ್ಲಿ ಸವಿತಾ ತೇಜಸ್ಸು ಎಂಬುದು ರಾಹೋಃ ಶಿರವತ್ ರಾಹುವೇ ಶಿರವಾಗಿರುವಾಗ ಹೇಳುವಂತೆ ಅನನ್ಯ ಹಾಗೂ ತಾದಾತ್ಮ್ಯದಿಂದಿದೆ, ಹೀಗೆ ಶ್ರೀಮದಾದ್ಯ ಶಂಕರಾಚಾರ್ಯರ ಗಾಯತ್ರೀಭಾಷ್ಯದ ಸಂಕ್ಷಿಪ್ತ ವಿವರಣೆ,

"ಭರ್ಗೋದೇವಸ್ಯಧೀಮಹಿ"

ಹೀಗೆ ಎರಡನೇ ಪಾದದಿಂದ ಆ ಪರಮಾತ್ಮನ ಅಧಿಭೌತಿಕ ದಿವ್ಯತೇಜಸ್ಸಿ ರೂಪವನ್ನು ಧೀಮಹಿ, ಧ್ಯಾನದಿಂದಾಗಿ ಉಪಾಸನೆಯೋಗ್ಯವೆಂದು ತಿಳಿಸುತ್ತಾರೆ.

"ದೇವಂ ನರಃ ಸವಿತಾರಂ ವಿಪ್ರಾ ಯಜ್ಞೈಃ ಸುವೃಕ್ತಿಭಿಃ ।

ನಮಸ್ಯಂತಿ ಧಿಯೇಷಿತಾಃ ॥" (ಋ. ೩, ೬೨, ೧೨)

"ತಚ್ಚಕ್ಷುರ್ದೇವಹಿತಂ ಶುಕ್ರಮುಚ್ಚರತ್ ।
ಪಶ್ಯೇಮ ಶರದಃ ಶತಮ್ ॥" (ಋ. ೭, ೬೬, ೧೬)

ಆ ಪರಮಾತ್ಮನಾದ ಸವಿತೃವಿನ ಆಧ್ಯಾತ್ಮಿಕ ತತ್ವವು "ಧಿಯೋಯೋನಃ ಪ್ರಚೋದಯಾತ್," ಎಂಬ ಮೂರನೇ ಪಾದದಲ್ಲಿ ಅಂತರ್ಹಿತವಾಗಿದೆ.

ಈ ಅಪರೋಕ್ಷಸಿದ್ಧವಾದ ಸ್ವರೂಪ, ನಮ್ಮ ಬುದ್ಧಿಯನ್ನು ಪ್ರೇರಿಸಲಿ. ಈತನದೇ ದಿವ್ಯಭಾವದಿಂದ ಆ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಿಸೋಣ ಎಂದು ಅಂತರಾತ್ಮ ತೇಜಸ್ಸಿನ ಧ್ಯಾನವನ್ನು ಮಾಡುವದೆಂದು ತೋರುತ್ತದೆ.

"ಓಮಿತ್ಯೇವಂಧ್ಯಾಯಥ ಆತ್ಮಾನಮ್" (ಮುಂ.ಉ. ೨, ೨, ೬)

ಇಲ್ಲಿ ಪ್ರಣವ ಧ್ಯಾನದಂತೆ ಗಾಯತ್ರೀಮಂತ್ರಮುಖದಿಂದ ಧ್ಯಾನವನ್ನು ಹೇಳುತ್ತಾರೆ.

ಹೀಗೆ ಸರ್ವವೇದೋಪನಿಷತ್ತತ್ವ, ತತ್ವತ್ರಯಸಾಮರಸ್ಯಯೋಗ ಮುಂತಾದ ತಾತ್ವಿಕಾರ್ಥ ರಹಸ್ಯವು ಈ ಮಂತ್ರದಲ್ಲಿದೆ.

ಹಾಗೆಯೇ ಜ್ಞಾನ-ಕರ್ಮ-ಯೋಗಾದಿಗಳ ಸಮನ್ವಯೋಪದೇಶ, ಸರ್ವಾರ್ಥಸಾಧಕವಾದ ಧೀಯೋಗ. ಸಂವಿತ್-ಭಾವನಾ-ಕ್ರಿಯಾ ಇವುಗಳ ಪ್ರಧಾನತೆ. ಲೌಕಿಕ ಪ್ರಪಂಚದ ಶ್ರೇಯಸ್ಸನ್ನು ನೀಡುವ ಸಾಮರ್ಥ್ಯ. ಹಾಗೆಯೇ ಪಾರಮಾರ್ಥಿಕ ನಿಃಶ್ರೇಯಸರೂಪವಾದ ಅಮೃತತ್ವಸಿದ್ಧಿ. ಇವೆಲ್ಲ ಈ ಮಂತ್ರದಲ್ಲಿ ಕಂಡು ಈ ಗಾಯತ್ರೀಮಂತ್ರವನ್ನೇ ಬ್ರಹ್ಮೋಪದೇಶಕ್ಕೆ ವಿಧಿಸಿರಬೇಕೆಂದು ತೋರುತ್ತದೆ.

ಧೀಯೋಗವೈಶಿಷ್ಟ್ಯ :

ಆದರೂ ಈ ಗಾಯತ್ರೀಮಂತ್ರದಲ್ಲಿ ವೈದಿಕ ವಿಶಿಷ್ಟವಾದ ಧೀಯೋಗತತ್ವವು ಕಂಡುಬರುತ್ತದೆ. ಈ ಬಗ್ಗೆ ಋಗ್ವೇದದಲ್ಲಿ–

"ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।
ಸ ಧೀನಾಂ ಯೋಗಮಿನ್ವತಿ ॥" (ಋ ೧, ೮೮, ೭)

"ಯಸ್ಮಾತ್" ಈ ಮಂತ್ರಾರ್ಥ ಯಾವ ಬ್ರಹ್ಮನ ಸ್ವರೂಪ ಪರಮಪೂರುಷನಿಂದ "ಋತೇ" ಹೊರತಾಗಿ, "ವಿಪಶ್ಚಿತಃ", ಜ್ಞಾನಿಗಳ, ಯಜ್ಞವು ಸಿದ್ಧಿಸದೋ, "ಸಃ" ಆ ಪರಮಾತ್ಮನು, "ಧೀನಾಂ" ಎಲ್ಲ ಬುದ್ಧಿಗಳ, "ಯೋಗಂ", ಕೂಡುವಿಕೆಯಲ್ಲಿದ್ದು, "ಇನ್ವತಿ" ತಾನೇ ಪ್ರಕಾಶಿಸುತ್ತಾನೆ.

ಇಲ್ಲಿ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷ ತತ್ವತ್ರಯರೂಪವಾದ ಧೀಯೋಗದಿಂದಾಗಿ ವಿದ್ವದ್ಯಜ್ಞ, ಅಂದರೆ ಜ್ಞಾನಿಗಳ ಯಜ್ಞವು ಸಿದ್ಧಿಸುತ್ತದೆ. ಆ ರೀತಿಯ ಧೀಯೋಗವೇ ಗಾಯತ್ರೀ ಮಂತ್ರದಲ್ಲಿ ಉಪದಿಷ್ಟವಾಗಿದೆ. ಈ ಮಂತ್ರದ ಪ್ರತಿಪಾದದಲ್ಲಿ, ಪ್ರತಿಶಬ್ದದಲ್ಲಿ,

ಪ್ರತ್ಯಕ್ಷರದಲ್ಲಿಯೂ ಸೂಕ್ಷ್ಮರೂಪದಿಂದ ಆ ರೀತಿಯ ತತ್ವವು ಅಡಗಿದೆ. ಆದ್ದರಿಂದ ಪ್ರಾಚೀನ ಋಷಿಗಳು ಉಪನಯನ ಸಂಸ್ಕಾರದಲ್ಲಿ ಬ್ರಹ್ಮೋಪದೇಶಕ್ಕೆ ಇದು ಯೋಗ್ಯವೆಂದು ಸಂಗ್ರಹಿಸಿ ಶಾಸ್ತ್ರಮುಖದಿಂದ ವಿಧಿಸಿದ್ದಾಗಿ ಕಾಣುತ್ತದೆ.

ಆದ್ದರಿಂದ ಗಾಯತ್ರೀಮಂತ್ರಮುಖದಿಂದ ಉಪದೇಶಿಸಿದ್ದೇ ಬ್ರಹ್ಮೋಪದೇಶ, ವೇದವಿದ್ಯಾದಿ ಅಧಿಕಾರವನ್ನು ಉಂಟುಮಾಡುವಂಥಾದ್ದು. ಬ್ರಹ್ಮವರ್ಚಸ್ಸೆಂಬ ಸತ್ವವನ್ನು ನೀಡುವಂಥಾದ್ದು. ಬ್ರಹ್ಮವಸ್ತು ಆತ್ಮವಸ್ತುಗಳ ಸಾಕ್ಷಾತ್ ಕರಣವನ್ನು ಒದಗಿಸುವಂಥಾದ್ದು ಎಂಬುದು ನಿಶ್ಚಯ. ಆದ್ದರಿಂದಲೇ ಅಂತಿಮವಾದ ತುರೀಯಾಶ್ರಮದಲ್ಲಿ ಕೊನೆಗೆ ಈ ಗಾಯತ್ರೀ ಮಂತ್ರದಲ್ಲಿಯೇ ಪ್ರವೇಶವನ್ನು ಅದರಂತೆ ಸನ್ಯಾಸಗ್ರಹಣ ವಿಧಿಯಲ್ಲಿ ವಿರಜಾಹೋಮದ ನಂತರದ ಕಾರ್ಯ ಗಾಯತ್ರೀಪ್ರವೇಶವಾಗಿದೆ. ಯಾವ ಮಂತ್ರವು ಉಪನಯನದಲ್ಲಿ ವೇದಾದಿ ವಿದ್ಯಾಧಿಕಾರಾರ್ಥವಾಗಿ ವೈದಿಕ-ಯಜ್ಞ-ಧರ್ಮವೇ ಮೊದಲಾದ ಬ್ರಹ್ಮಕರ್ಮಗಳ ಅನುಷ್ಠಾನಕ್ಕಾಗಿ ಗುರುಮುಖದಿಂದ ಉಪದೇಶಿಸಲ್ಪಟ್ಟು ಪುನಃ ಪ್ರತಿದಿನ ತ್ರಿಕಾಲಸಂಧ್ಯಾವಂದನೆಯಲ್ಲಿ ಅನಿವಾರ್ಯವಾಗಿಯೂ ನಿಷ್ಕಾಮದಿಂದಲೂ ವೇದಶಾಸನದಂತೆ ನಿತ್ಯವೂ ಉಪಾಸನೀಯವಾಗಿದೆಯೋ ಅದೇ ಮಂತ್ರದಿಂದ ಪರಮಪುರುಷನು ಸೇವಿಸಲ್ಪಟ್ಟು ಬ್ರಹ್ಮಾತ್ಮ ಸಾಕ್ಷಾತ್ಕಾರಕ್ಕೆ ಅದೇ ಮಂತ್ರದಲ್ಲಿ ಪ್ರವೇಶವನ್ನು ಹೇಳಿದ್ದೂ ಬ್ರಹ್ಮೋಪದೇಶಕ್ಕೆ ಈ ಮಂತ್ರವೇ ಯೋಗ್ಯವಾದದ್ದೆಂಬುದು ಸರಿಯಾಗಿದೆ.

ಅದರಂತೆ ಆಚಾರ್ಯೇಂದ್ರರಾದ ಬೋಧಾಯನರು ಸನ್ಯಾಸವಿಧಿಯಲ್ಲಿ

"ಓಂಭೂಃ ತತ್ ಸವಿತುರ್ವರೇಣ್ಯಂ ಗಾಯತ್ರೀಂ ಪ್ರವಿಶಾಮಿ, ಓಂ ಭುವಃ ಭರ್ಗೋದೇವಸ್ಯ ಧೀಮಹಿ ಸಾವಿತ್ರೀಂ ಪ್ರವಿಶಾಮಿ, ಓಂ ಸುವಃ ಧಿಯೋಯೋನಃ ಪ್ರಚೋದಯಾತ್, ಸರಸ್ವತೀಂ ಪ್ರವಿಶಾಮಿ,"

ಹೀಗೆ ಯಥೋಪದೇಶದಂತೆ, ಅದರ ಅರ್ಥಸಿದ್ಧಿ ಹಾಗೂ ಕೃತಕೃತ್ಯತೆಯೇ ಮೊದಲಾದ ಸಮೃದ್ಧಿಯನ್ನೂ ಎಲ್ಲ ಪಂಡಿತರೂ ನಿರ್ವಿವಾದವಾಗಿ ತಿಳಿಯಬಹುದಾಗಿದೆ. ಇರಲಿ. ಇನ್ನೊಂದು ವಿಶೇಷ ವಿಷಯವೆಂದರೆ, ಸನ್ಯಾಸದಲ್ಲಿ ಬ್ರಹ್ಮಾತ್ಮ ತತ್ವವನ್ನು ತಿಳಿಸಲು ಉಪನಿಷತ್ತಿನಲ್ಲಿ ಉಪದಿಷ್ಟವಾದ "ತತ್ವಮಸಿ", "ಅಹಂಬ್ರಹ್ಮಾಸ್ಮಿ", "ಪ್ರಜ್ಞಾನಂಬ್ರಹ್ಮ, ಅಯಮಾತ್ಮಾಬ್ರಹ್ಮ" ಎಂಬ ಮಹಾವಾಕ್ಯಗಳ ರಹಸ್ಯ ತತ್ವವು ಈ ಗಾಯತ್ರೀಮಂತ್ರದಲ್ಲಿ ಗುಪ್ತವಾಗಿ ವಾಚ್ಯಾರ್ಥ-ಲಕ್ಷ್ಯಾರ್ಥ-ಧ್ವನ್ಯಾರ್ಥ ರೂಪಗಳಿಂದ ಸೂಕ್ಷ್ಮವಾಗಿ ಇದೆ. ಈ ಮಂತ್ರದಲ್ಲಿರುವ "ತತ್" ಎಂಬ ಮೊದಲನೇ ಶಬ್ದ. ಪರೋಕ್ಷವಾದ ಪರಬ್ರಹ್ಮ ವಸ್ತುವಿನ ತತ್ವವನ್ನು ತಿಳಿಸುವಂಥಾದ್ದು. "ತದಿತಿ ಪರೋಕ್ಷೇ ವಿಜಾನೀಯಾತ್, ಓಂ ತತ್ ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ," ಇತ್ಯಾದಿ ವಚನಗಳೇ ಸಾಕ್ಷಿಯಾಗಿವೆ.

"ಸವಿತುಃ," ಎಂಬ ಪದವೂ ಬ್ರಹ್ಮವಸ್ತುಬೋಧಕವೆಂಬುದೂ ಉಪನಿಷದ್ ವಚನಗಳಿಂದ ಸಿದ್ಧವಾಗಿದೆ.

"ಯತೋ ವಾ ಇಮಾನಿ ಭೂತಾನಿ ಜಾಯಂತೇ ।
ಯೇನ ಜಾತಾನಿ ಜೀವಂತಿ ॥
ಯತ್ ಪ್ರಯಂತ್ಯಭಿ ಸಂವಿಶಂತಿ ।
ತದ್ ವಿಜಿಜ್ಞಾಸಸ್ವತದ್ ಬ್ರಹ್ಮೇತಿ ॥" (ತೈ.ಬೃ.ಉ. ೧, ೧)

ಜಗತ್ತಿನ ಜನ್ಮಾದಿ ಕಾರಣದಿಂದ ಬ್ರಹ್ಮ ಎಂದು ನಿರ್ದೇಶಿಸಿದ ತತ್ವವು ಕೇವಲ ಸವಿತೃ ಶಬ್ದದಿಂದ ಹಾಗೂ "ತತ್, ಸವಿತುಃ, ವರೇಣ್ಯಂ ಭರ್ಗ" ಎಂಬ ಪದ ಚತುಷ್ಟಯದಿಂದಾಗಿ ಬ್ರಹ್ಮ ಮೀಮಾಂಸೆಯಲ್ಲಿಯ "ಅಥಾತೋ ಬ್ರಹ್ಮ ಜಿಜ್ಞಾಸಾ, ಜನ್ಮಾದ್ಯಸ್ಯಯತಃ," ಎಂಬುದು ಬ್ರಹ್ಮೋಪದೇಶದಂತೆ, ವಿಶಿಷ್ಟತೆಯಿಂದಲೂ ಸ್ವಷ್ಟಾರ್ಥದಿಂದಲೂ ತೋರುತ್ತದೆ.

ಆ ಅರ್ಥ ಇಲ್ಲಿಯೂ "ಸವಿತೃ" ಎಂಬ ಒಂದೇ ಪದದಿಂದ "ಪೂಜ್, ಪ್ರಾಣಿಪ್ರಸವೇ" ಎಂಬ ಧಾತ್ವರ್ಥ ಯೋಗದಿಂದ ಎಲ್ಲ ಪ್ರಾಣಿಗಳ ಪ್ರಸವಾದಿ ಕಾರಣನಾದ ಸವಿತಾ, ಆದ್ದರಿಂದ ಜಗತ್ತಿಗೆ ಕಾರಣೀಭೂತನೂ ಅವನೇ ಎಂಬುದು ಅರ್ಥಾತ್ ಸಿದ್ಧ. ಆತನೇ ಸೃಷ್ಟಿ-ಸ್ಥಿತಿ-ಲಯಗಳಿಗೂ ಕಾರಣ, ಉಪಾದಾನ ಕಾರಣದಲ್ಲಿ ಸುವರ್ಣ-ಮೃತ್ತಿಕಾದಿಗಳಲ್ಲಿ ಅವುಗಳ ಕಾರ್ಯರೂಪಗಳಾದ ಬಳೆ-ಕುಂಡಲ ಮೊದಲಾದವುಗಳೂ, ಕೊಡ, ಶರಾವಾದಿಗಳ ಪ್ರತ್ಯಕ್ಷ ದರ್ಶನದಿಂದ ಸಿದ್ಧವಾಗುತ್ತದೆ.

ಹೀಗೆಯೇ "ತತ್ವಮಸಿ" ಎಂಬ ಮಹಾವಾಕ್ಯದ ತಾತ್ವಿಕವಾದ ಸಮಗ್ರ ಅರ್ಥವೂ ಗಾಯತ್ರೀ ಮಂತ್ರದಲ್ಲಿ ಗರ್ಭಿತವಾಗಿದೆ. ಅದು ಹೇಗೆಂದರೆ "ತತ್" ಎಂಬ ಮೊದಲನೇ ಪದದಲ್ಲಿ ಸವಿತುಃ ವರೇಣ್ಯಂ, ಜ್ಯೋತಿಃ, ಸವಿತೃವಿನ ಶ್ರೇಷ್ಠವಾದ ಪ್ರಕಾಶರೂಪೀ ಸರ್ವರ ಉತ್ಪತ್ತಿಗೆ ಕಾರಣವಾದ ಬ್ರಹ್ಮವೇ ಅದು ಎಂಬುದು ತಿಳಿಸಿದೆ. "ತ್ವಂ" ಎಂಬ ಪದದ ಅರ್ಥವು "ಧಿಯೋಯೋನಃ ಪ್ರಚೋದಯಾತ್," ಎಂಬ ಮೂರನೇ ಪಾದದಿಂದ ತಿಳಿಯುತ್ತದೆ. "ಯಃ" ಯಾವ ನಮ್ಮೆಲ್ಲರ ಜ್ಞಾನೇಂದ್ರಿಯಗಳ ಪ್ರೇರಕನಾದ ಆ ಅಂತರಾತ್ಮನು ಜೀವರೂಪದಿಂದ ನಿರ್ದಿಷ್ಟನಾಗಿದ್ದಾನೆ. "ಯುಷ್ಮಚ್ಛಬ್ದ ಪ್ರತ್ಯಯಗಮ್ಯ ತತ್" ಎಂಬುದಾಗಿ ತಿಳಿಯುತ್ತದೆ. "ಅಸಿ" ಎಂಬ ಪದದ ಅರ್ಥವು ತತ್, ತ್ವಂ, ಎಂಬ ಎರಡು ಪದಾರ್ಥಗಳ ಸಮನ್ವಯವನ್ನು "ಭರ್ಗೋದೇವಸ್ಯ ಧೀಮಹಿ" ಎಂಬ ದ್ವಿತೀಯ ಪಾದವು ತಿಳಿಸುತ್ತದೆ. ಆ ಜ್ಯೋತಿಯ ಧ್ಯಾನದ ಅನುಸಂಧಾನ ಸಮಾಧಾನಗಳಲ್ಲಿ ಅವೆಲ್ಲವೂ ಒಂದೇ ಆಗಿದೆ ಎಂಬುದನ್ನು ಲಕ್ಷಿಸಬೇಕು.

"ನಭಿನ್ನಾಂ ಪ್ರತಿಪದ್ಯೇತ ಗಾಯತ್ರೀಂ ಬ್ರಹ್ಮಣಾಸಹ ।
ಸೋಽಹಮಸ್ಮೀತ್ಯುಪಾಸೀತ ವಿಧಿನಾಯೇನ ಕೇನ ಚಿತ್ ॥"

ಒಂದೇ ಆಗಿರುವ ಗಾಯತ್ರೀ ಹಾಗೂ ಬ್ರಹ್ಮಸ್ವರೂಪಿ ನಾನಾಗಿದ್ದೇನೆ ಎಂಬ ಧ್ಯಾನವನ್ನು ಯಾವುದೇ ವಿಧಿಯಿಂದ ಉಪಾಸಿಸಬೇಕು. ಅಲ್ಲಿ "ತತ್ವಮಸಿ" ಎಂಬುದರ ಛಾಯೆಯಂತಿದ್ದ ವಿಲೋಮರೂಪ "ಅಹಂ ಬ್ರಹ್ಮಾಸ್ಮಿ" ಎಂಬುದರ ತತ್ವವೂ ಇಲ್ಲಿ ಅಡಗಿದೆ.

ನೋಡಿ, ತತ್ತ್ವೋಪದೇಶಕನಾದ ಗುರುವು ಶಿಷ್ಯನಿಗೆ ಉಪದೇಶಿಸುವಾಗ ತತ್ತ್ವಮಸಿ, ಅದು ನೀನಾಗಿದ್ದೀಯೆ ಎಂಬುದು ಅದರ ಸ್ವರೂಪ, ಆ ಉಪದೇಶಕ್ಕನುಗುಣವಾಗಿ ಯಾವಾಗ ಶಿಷ್ಯನು ಸ್ವಯಂ ಅದನ್ನು ಗ್ರಹಿಸಿದಾಗ "ಅಹಂ ಬ್ರಹ್ಮಾಸ್ಮಿ" ಆ ಬ್ರಹ್ಮ ನಾನಾಗಿದ್ದೇನೆ ಎಂದು ತಿಳಿಯುತ್ತಾನೆ. ಅದು ಸರಿಯೇ, ಲಕ್ಷ್ಯಾರ್ಥದಂತೆ ಅದು ಸರಿಯಾಗಿದೆ. ವಾಚ್ಯಾರ್ಥದಂತೆ ತಿರುಗಿ "ತತ್ತ್ವಮಸಿ", ಅದು ನೀನಾಗಿದ್ದೀಯೇ ಶಬ್ದಾನುಗುಣವಾಗುವದಿಲ್ಲ. ಇದರಿಂದ "ಆವೃತ್ತಿ-ರಸಕೃದುಪದೇಶಾತ್" ಒಂದು ಬಾರಿ ಹೇಳಿದ್ದು ಆವೃತ್ತಿಯಲ್ಲ. ಒಂದು ಬಾರಿಯಲ್ಲದೇ ಎಷ್ಟೇ ಸಲ ಹೇಳಿದರೂ ಅದು ಆವೃತ್ತಿಯಾಗುತ್ತದೆ ಎಂಬಂತೆ ಅದು ನಾನಾಗಿದ್ದೇನೆ ಎಂಬುದೇ ಯುಕ್ತವಾಗುತ್ತದೆ. "ತತ್ತ್ವಮಸಿ ತತ್ತ್ವಮಸಿ" ಎಂದು ಆವೃತ್ತಿಯಾಗುವದಿಲ್ಲ. ಶಾಸ್ತ್ರವೂ ಹಾಗೆ ವಿಧಿಸುವದಿಲ್ಲ. ಆದ್ದರಿಂದ ಹೇಗೆ ಉಪದೇಶಿಸಿದರೂ ಅಧ್ಯಾತ್ಮತತ್ತ್ವವೆಲ್ಲವೂ ಅಪರೋಕ್ಷಾನು-ಭವದಿಂದಲೇ ಸಾರ್ಥಕವಾಗುತ್ತದೆಂದು ತಿಳಿಯಬೇಕು. ಈ ಅರ್ಥದಲ್ಲಿ ವೇದೋಪನಿಷ-ದ್ವಚನಗಳೂ ಬಹಳಷ್ಟಿವೆ.

"ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್" (ಶು.ಯ.ಸಂ. ೪೦, ೧೬)
"ಯೋಽಸಾವಸೌ ಪುರುಷಃ ಸೋಽಹಮಸ್ಮಿ" (ಈ.ಉ. ೧೬)

"ಅಹಂ ತದಸ್ಮಿ ತದಸಿತ್ವಮೇತತ್"

ಇವೆಲ್ಲ ಇದಕ್ಕೇ ಪುಷ್ಟಿಕೊಡುವ ವಚನಗಳು.

ಇದನ್ನೇ ರೂಪಾಂತರದಿಂದ "ಮದೋ ಮಾಪ್ರಾಪದ್ ಅಹಮದಃ ಪ್ರಾಪಮ್" (ಬೃ.ಉ.) ಅನ್ಯೋನ್ಯ ಭಾವ ಸಂಪತ್ತಿಯೋಗವನ್ನು ತಿಳಿಸುವ ವಚನವಿದು.

ಋಗ್ವೇದ ಮಂತ್ರಗಳಲ್ಲಿ ಅನ್ಯೋನ್ಯಾತ್ಮಕ ತತ್ತ್ವವನ್ನೂ ಜೀವೇಶತಾದಾತ್ಮ್ಯವನ್ನೂ ತಿಳಿಸುವ ಮಂತ್ರ.

"ಯದಗ್ನೇ ಸ್ಯಾಮಹಂ ತ್ವಂ ತ್ವಂ ವಾ ಘಾ ಸ್ಯಾ ಅಹಮ್ ।
ಸ್ಯುಷ್ಟೇ ಸತ್ಯಾ ಇಹಾಶಿಷಃ ॥" (ಋ.ಮಂ. ೮, ೪೪, ೨೩)

ನಾನು ನೀನಾಗಿ ನೀನು ನಾನಾಗಲಿ. ಈ ಇಚ್ಛೆ ಸತ್ಯವಾಗಲಿ. ಹೀಗೆ ಇಬ್ಬರ ಕೂಡುವಿಕೆ ಒಂದೇ ಆಗಿದೆ. ಇದೇ ಅರ್ಥದಲ್ಲಿ,

"ಅಹಂ ಚ ತ್ವಂ ಚ ವೃತ್ರಹನ್ ಸಂಯುಜ್ಯಾವ ಸನಿಭ್ಯ ಆ" (ಋ. ೮, ೬೨, ೧೧)

ಅಂತೆಯೇ ಬ್ರಹ್ಮಾತ್ಮ ಸಾಯುಜ್ಯ ಪ್ರಣವಾಕ್ಷರಯೋಗವೂ ಇದೇ ತತ್ತ್ವಾರ್ಥವನ್ನು ತಿಳಿಸುತ್ತದೆ.

"ಓಮಿತ್ಯೇಕಾಕ್ಷರಂ ಬ್ರಹ್ಮಾ ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್ ।
ಗಾಯತ್ರಂ ಛಂದಂ ಪರಮಾತ್ಮಂ ಸರೂಪಮ್ ।
ಸಾಯುಜ್ಯಂ ವಿನಿಯೋಗಮ್ ॥" (ನಾ.ಉ. ೧೫)

ಹೀಗೆಯೇ "ಪ್ರಜ್ಞಾನಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ", ಈ ಮೊದಲಾದವುಗಳ ಅರ್ಥ ತತ್ವವೂ ಈ ಗಾಯತ್ರೀಮಂತ್ರದಲ್ಲಿ ಅಡಗಿದೆಯೆಂದು ತಿಳಿಯುವದು. ಬುದ್ಧಿಪ್ರಚೋದಕವಾದ ಶಕ್ತಿ ಎಲ್ಲರ ಅಂತರಂಗದಲ್ಲಿರುವ ಪ್ರಜ್ಞಾನಾತ್ಮವೇ ಸರಿ. ಅದೇ ತಚ್ಛಬ್ದಯೋಗದಿಂದ ಪರೋಕ್ಷತ್ವವುಳ್ಳದ್ದಾಗಿದೆ. "ಸವಿತುಃ ವರೇಣ್ಯಂ, ಭರ್ಗ" ಎಂಬ ಶಬ್ದಾರ್ಥದಿಂದಲೂ ಬ್ರಹ್ಮವೇ ಗಮ್ಯ.

ಇದೇ ರೀತಿಯಿಂದ, ಈ ಆತ್ಮಚೇತನ ರೂಪನೇ ಬುಧ್ಯಾದಿಗಳಿಗೆ ಚೇತನನಾದ ಆ ಪರಬ್ರಹ್ಮ ಸವಿತೃವಿನ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಿಸುತ್ತೇನೆಂದು ಇಲ್ಲಿ ಕೆಲವರು ಹೀಗೆ ಹೇಳುತ್ತಾರೆ. ಈ ಮಂತ್ರದಲ್ಲಿ ಧ್ಯಾನಾದಿಗಳಿಗೆ ಸಾಧನವಾಗಿ ಪ್ರತ್ಯಕ್ಷನಾದ ಸೂರ್ಯರೂಪ ಬಾಹ್ಯವಸ್ತುವಿನ ವಿಶೇಷತೆಯೇ ಕಾಣುತ್ತದೆಯೇ ಹೊರತು ನಿರ್ಗುಣರೂಪ ಪರಮಾತ್ಮನ ಉಚ್ಚತರ ಸ್ವರೂಪವನ್ನು ತಿಳಿಯಲು ಶಕ್ಯವಿಲ್ಲ. ಹಾಗಾಗಿ ಆ ಉಚ್ಚತಮ ಬ್ರಹ್ಮಾತ್ಮ ತತ್ವವನ್ನು ತಿಳಿಯಲು ಉಪಯುಕ್ತ ಮಂತ್ರವಿದಲ್ಲ. ಕೇವಲ ಕರ್ಮಕಾಂಡಾದಿ ಪರವಾಗಿದ್ದು ಉಪನಿಷತ್ ಪ್ರತಿಪಾದಿತವಾದ ಪರಮ ವಸ್ತುಬೋಧಕವೂ ಅಲ್ಲ.

ಅದಕ್ಕೆ ಸಮಾಧಾನವೆಂದರೆ, ಜ್ಞಾನೇಂದ್ರಿಯ ಪ್ರೇರಕವಾದ ಶಕ್ತಿ ಅದಕ್ಕಿಂತ ಪರವಾಗಿರಬೇಕಷ್ಟೆ. ಅಂಥ ಶಕ್ತಿ ಚೇತನಾಸ್ವರೂಪವಾಗಿದ್ದು ಅಂತರಂಗದಲ್ಲಿ ಹುದುಗಿದೆಯೆಂಬುದು ನಿರ್ವಿವಾದ. ಈ ಅಂತರಾತ್ಮನೇ ಇಂದ್ರ. ಬುಧ್ಯಾದಿ ಎಲ್ಲ ಇಂದ್ರಿಯಗಳಿಗೆ ಅಧಿಷ್ಠಾತೃವಾಗಿದ್ದು ಚೇತನಾತ್ಮಾ ಇಂದ್ರಿಯಾಧೀಶ ಆತನೇ.

"ಇಂದ್ರಿಯಮಿಂದ್ರಲಿಂಗಮಿಂದ್ರದೃಷ್ಟಮಿಂದ್ರಜುಷ್ಟಮಿಂದ್ರಸೃಷ್ಟಮಿಂದ್ರದತ್ತಮಿತಿ ವಾ"
(ಪಾ.ಸೂ. ೫, ೨, ೯೩)

ಇಂದ್ರಿಯ ಎಂಬ ಶಬ್ದಕ್ಕೆ ಪಾಣಿನಿ, ಇಂದ್ರಚಿಹ್ನೆಯಿದ್ದ-ಇಂದ್ರನಿಂದ ದೃಷ್ಟ, ಇಂದ್ರನಿಂದ ಸೃಷ್ಟ, ಇಂದ್ರನಿಂದ ಸೇವಿತ ಇಂದ್ರನಿಂದ ದತ್ತವಾದದ್ದು ಎಂತ ಹೇಳಿದ್ದಾನೆ.

ಅಂತೆಯೇ "ಸವಿತುಃ, ದೇವಸ್ಯ, ವರೇಣ್ಯಂ, ಭರ್ಗಃ" ಈ ಪದಗಳಿಂದಲೂ ಮನೋನೇತ್ರಾದಿ ಇಂದ್ರಿಯಗಳಿಗೆ ಪ್ರೇರಕನಾದ ಈ ಸವಿತ್ರಂತರ್ಗತ ಪರಂಜ್ಯೋತಿಯೇ ಅವನು. "ತತ್" ಎಂಬ ಪದವೂ ಪರೋಕ್ಷ ಬ್ರಹ್ಮನನ್ನೇ ತಿಳಿಸುತ್ತಿದೆಯೆಂಬುದೂ ನಿರ್ವಿವಾದ. "ಧೀಮಹಿ," ಎಂಬ ಆಖ್ಯಾತವೂ ಕೂಡಾ ಕೇವಲ ಬಾಹ್ಯವಸ್ತು. ಧ್ಯಾನಕ್ಕಷ್ಟೇ ಪರ್ಯವಸಾನವಾಗಿಲ್ಲ. ಸಮಾಧಿಪರ್ಯಂತವಾದ ಅರ್ಥಬೋಧಕವಾಗಿದೆ. "ಧಾರಣ" ಎಂಬ ಅರ್ಥವುಳ್ಳ "ಧಾಞ ಧಾರಣ ಪೋಷಣಯೋಃ" ಎಂಬ "ಧಾ" ಧಾತುವಿನ ಹಾಗೂ "ಧೀಙ್ ಆಧಾರೇ" ಎಂಬ ಆತ್ಮನೇಪದಿಯಾದ ದಿವಾದಿಗಣೀಯ ಆಧಾರ ಎಂಬರ್ಥವುಳ್ಳದ್ದರಿಂದ ಧಾರಣಾ ಧ್ಯಾನ

ಸಮಾಧಿರೂಪ- ತತ್ವತ್ರಯವನ್ನು ತತ್ತರ್ಧ್ಯೇಯಾದಿಲಕ್ಷ್ಯಾರ್ಥಾನುಸಾರವಾಗಿ ಅದೊಂದೇ ಕ್ರಿಯಾಪದದಿಂದ ಗ್ರಹಿಸಬಹುದಾಗಿದೆ.

ಸವಿತೃದೇವನ ಅಂತರ್ಯಾಮಿ ಸತ್ವದಿಂದ ಕೂಡಿದ ತತ್ವತ್ರಯ ಯೋಗದಿಂದ ಎಲ್ಲ ಪರಮಾತ್ಮ ತತ್ವವೂ ಧೀಯೋಗದಲ್ಲಿ ಅಡಕವಾಗಿದೆ. ಅದೇ ಧೀಯೋಗವು ಪೂರ್ಣಾತ್ಮ ತತ್ವಜ್ಞಾನಪೂರ್ಣ, ಆಧ್ಯಾತ್ಮ ತತ್ವಪ್ರಧಾನ, ಹಾಗೂ ವಿದ್ವದ್ಯಜ್ಞಾದ್ಯನುವಿಧಾನದಿಂದ ಕೂಡಿದ್ದು, "ತಸ್ಯೈವಂ ವಿದುಷೋಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾಪತ್ನೀ" ಇತ್ಯಾದಿಗಳಿಂದ ಅದನ್ನು ತಿಳಿಸಲಾಗಿದೆ. ಆ ವಿದ್ವದ್ಯಜ್ಞದಲ್ಲಿ ಆತ್ಮವೇ ಯಜಮಾನ. ಅದರ ಆಂತರ್ಯ ವಸ್ತುನಿಷ್ಠವಾದ ಏಕನಿಷ್ಠೆಯೇ ಶ್ರದ್ಧೆ. ಅವಳೇ ಯಜ್ಞಪತ್ನಿ. ಆ ಯಜ್ಞವು ಆಧ್ಯಾತ್ಮತತ್ವ ಪೂರ್ವಕವಾದ "ವಾಕ್‌ಪ್ರಾಣಚಕ್ಷುಃಮನಃಶ್ರೋತ್ರ"ವೆಂಬ ಹೋತ್ರಾದಿ ಐದು ಋತ್ವಿಜರ ಸಹಯೋಗದಿಂದ ಜ್ಞಾನೇಂದ್ರಿಯ ಸಾಧ್ಯವಾದ ಅಂತರಂಗದಲ್ಲಿಯೇ ಮಾಡಲು ಯೋಗ್ಯವಾದ ಜ್ಞಾನಭಾವನಾಕರ್ಮಯೋಗದಿಂದ ಸಾಧಿಸಲು ಶಕ್ಯ. ಈ ಯಜ್ಞವು ಜ್ಞಾನಯಜ್ಞಾದಿ ಎಲ್ಲ ಯಜ್ಞಗಳ ಫಲವನ್ನು ನೀಡುತ್ತದೆ. ಅಲ್ಲಿಯೂ ಕೂಡಾ ಪ್ರಥಮೋಪದೇಶದಿಂದ ಲಬ್ಧವಾದ ಗಾಯತ್ರೀಮಂತ್ರದಿಂದಲೇ ಪ್ರತಿದಿನವೂ ಉಪಾಸನೆಗೆ ಯೋಗ್ಯವಾದ ಚೆನ್ನಾಗಿ ಉಪಾಸಿತವಾದದ್ದಾದ ಈ ಧೀಯೋಗವು ಉಪನಯನ ದಿನದಿಂದ ಇಂದಿನವರೆಗೂ ಆಚರಿಸಿ ಸುದೃಢವಾದ ದಿವ್ಯಭೂಮಿಕೆಯನ್ನು ಹೊಂದಿ ಆ ಪರಬ್ರಹ್ಮ ಸಾಕ್ಷಾತ್ಕಾರಕ್ಕೆ ಅರ್ಹನಾಗುತ್ತಾನೆ.

"ಸತು ದೀರ್ಘಕಾಲನ್ಯೆರಂತರ್ಯ ಸತ್ಕಾರಸೇವಿತೋ ದೃಢಭೂಮಿಃ" (ಯೋ.ಸೂ.)

ಅದರ ವಿಧಾನವು ಯೋಗಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ.

ಆ ರೀತಿಯ ಮಹತ್ತರವಾದ ಸಾಧನೆಯಿಂದಾಗಿ ನಮ್ಮೆಲ್ಲರಿಗೆ ಉಪನಯನ ದಿಂದಾರಂಭಿಸಿ ಮರಣಪರ್ಯಂತವಾದ ದೀರ್ಘಕಾಲವೂ ನಿತ್ಯಮಾಡಲೇಬೇಕಾದ ಉಪಾಸನೆಗೆ ಉಪದಿಷ್ಟವಾದದ್ದು ಈ ಗಾಯತ್ರೀಮಂತ್ರ ಒಂದೇ ಆಗಿದೆ. ಅಂತೆಯೇ ನಿತ್ಯಕರ್ಮರೂಪವಾದ ಬ್ರಹ್ಮಕರ್ಮದಲ್ಲಿ ನಿಷ್ಕಾಮಕರ್ಮಯೋಗಕ್ಕೆ ಬ್ರಹ್ಮಾತ್ಮತತ್ವ ಜ್ಞಾನೋದಯಕ್ಕೂ ಅದರ ಸಾಕ್ಷಾತ್ಕಾರಕ್ಕೂ ಸಮರ್ಥವಾದದ್ದೂ ಇದೇ ಆಗಿದೆ. "ಗಾಯತ್ರೀಮಾತ್ರಸಾರೋಽಪಿ ವರಂ ವಿಪ್ರಃ ಸುಯಂತ್ರಿತಃ ಜಪ್ಯೇನೈವ ತು ಸಂಸಿಧ್ಯೇದ್ ಬ್ರಹ್ಮಣ್ಯೇನಾತ್ರ ಸಂಶಯಃ, ಕುರ್ಯಾದನ್ಯನ್ನ-ವಾಕುರ್ಯಾನ್ ಮೈತ್ರೋ ಬ್ರಾಹ್ಮಣ ಉಚ್ಯತೇ, ಮನುಃ".

ಬ್ರಾಹ್ಮಣನು ಗಾಯತ್ರಿಯನ್ನೊಂದೇ ತಿಳಿದಿದ್ದರೂ ಪೂಜ್ಯ. ಕೇವಲ ಜಪಮಾತ್ರದಿಂದ ಬ್ರಾಹ್ಮಣತ್ವ ಸಿದ್ಧಿ. ಬೇರೆ ಅನುಷ್ಠಾನಗಳನ್ನು ಮಾಡಲಿ, ಯಾ ಬಿಡಲಿ. ಬ್ರಾಹ್ಮಣನು ಸೂರ್ಯಪ್ರಿಯನೇ ಸರಿ.

ಈ ಎಲ್ಲ ಕಾರಣಗಳಿಂದ ಎಲ್ಲಕ್ಕೂ ಪ್ರಧಾನವಾದದ್ದು ಸರ್ವಾರ್ಥಸಿದ್ಧಿ, ಸಮೃದ್ಧಿ, ಹಾಗೂ ಅಭ್ಯುದಯಗಳಿಗೆ ಕಾರಣೀಭೂತವಾದದ್ದು ಗಾಯತ್ರೀ.

ನಮ್ಮೆಲ್ಲ ಭಾರತೀಯರಿಗೆ ಭಾರತೀಯ ಆರ್ಷೇಯ ವೈದಿಕ ದಿವ್ಯ ಸಂಸ್ಕೃತಿಯ ಮೂಲಬೀಜರೂಪವಾದ, ಸರ್ವವಿದ್ಯಾಜ್ಞಾನ ನಿಧಿರೂಪವಾದದ್ದಾಗಿದೆ. ಎಲ್ಲ ಇಂದ್ರಿಯಗಳ ಸಂಯಮನಕ್ಕೂ ದೃಢವಾಗಿ ನಿಲ್ಲಿಸಲೂ ಆ ವಿಷಯಗಳಲ್ಲಿ ಪ್ರವರ್ತಿಸಲೂ ಸಾತ್ವಿಕ ವೃತ್ತಿಯನ್ನು ಹೊಂದಲೂ "ಸದ್ವಿದ್ಯಾಸಂವಿತ್" ಮೊದಲಾದವುಗಳನ್ನು ಹೊಂದಲೂ ಈ ಗಾಯತ್ರೀ ಮಂತ್ರವೇ ಶರಣ್ಯವೂ, ವರೇಣ್ಯವೂ ಆಗಿದೆ. ಆದ್ದರಿಂದ ಈ ಮಂತ್ರಮುಖದಿಂದ ದಿವ್ಯದೇವತಾತ್ಮೋಪಾಸನೆಗೆ ಪ್ರಧಾನ ಸಾಧನವೂ ಸರ್ವಾರ್ಥಸಿದ್ಧಿಗೆ ಸಾಧನವೂ ಇದಾಗಿದೆ.

ಹಾಗೆಯೇ ಬಹುಜನರನ್ನು ಒಂದೇ ಧ್ಯೇಯದಲ್ಲಿ ಸೇರಿಸಲು ಲೌಕಿಕವೈದಿಕ ಧ್ಯೇಯವನ್ನು ಸಿದ್ಧಿಸಲೂ ಐಕಮತ್ಯ ಸ್ಥಿರೀಕರಣಕ್ಕಾಗಿ ಒಂದೇ ಸಾಧನ ವಿಶೇಷದಲ್ಲಿ ಪ್ರೇರಿಸಲೂ ಈ ಗಾಯತ್ರೀ ಮಂತ್ರ, ಸಂಜೀವನೀ ಮಾತ್ರೆಯಂತೆ ಇದೆ. ಪ್ರತ್ಯಕ್ಷ ಸಿದ್ಧವೆಂದು ಸಾಧಾರವಾಗಿ ಹೇಳಬಹುದು.

ಭಾರತದಲ್ಲಿಯೂ ಈ ಭೂಮಂಡಲ ಹಾಗೂ ಸಮಗ್ರ ಪ್ರಪಂಚದಲ್ಲಿ ಇಂಥದೊಂದು ಅಲೌಕಿಕವಾದ ದಿವ್ಯವೂ ಆರ್ಷೇಯವೂ ವೈದಿಕವೂ ಆದ ಸಾಧನ ಬೇರೊಂದಿಲ್ಲ. ಇರಲಿಕ್ಕೂ ಸಾಧ್ಯವಿಲ್ಲ.

ವೈದಿಕ ಋಷಿಕಾಲದಿಂದ ಈವರೆಗೂ ದಿವ್ಯ ಹಾಗೂ ಸೂಕ್ಷ್ಮತಮ ಸತ್ವವು ಗಾಯತ್ರೀಮಂತ್ರದಿಂದ ಹೊರಟು ಎಲ್ಲರಿಂದ ತಿಳಿಯಲು ಅವಶ್ಯವೂ ಪರಮಧ್ಯೇಯವೂ ಸಾಧ್ಯಸಾಧನರೂಪವಾದದ್ದಾಗಿ, ಸದ್ವಿದ್ಯಾಶಿಕ್ಷಣಪರ ಆಚರಣವಾದ ಪರಂಪರೆಯಿಂದ ಬಂದು ಭಾರತೀಯರ ಹೃದಯದಲ್ಲಿ ಸೂಕ್ಷ್ಮರೂಪವಾಗಿದೆ. ತನ್ನ ದಿವ್ಯಬ್ರಾಹ್ಮ ಸಾಮರ್ಥ್ಯದಿಂದ ಹಾಗೂ ಪ್ರತೀಚೀನವಾದ ಆಧ್ಯಾತ್ಮಿಕ ತತ್ವದಿಂದ ಜನರನ್ನು ಪ್ರತಿಬೋಧಿಸಲು ಸಮರ್ಥವಾಗಿದೆಯೆಂಬುದನ್ನು ಮರೆಯುವಂತಿಲ್ಲ. ಹಾಗೆ ಪಡೆಯಲು ತಪ್ಪಬಾರದೆಂದು ಸಮೃದ್ಧವಾದ ದೃಢಭಾವನೆಯಿಂದ ಜನತಾ ಜಗದೀಶ ಸನ್ನಿಧಿಯಲ್ಲಿ ಸವಿನಯ ಪ್ರಾರ್ಥಿಸುತ್ತೇನೆ. ಈ ವಿಷಯದಲ್ಲಿ ನನಗಂತೂ ಆತ್ಮವಿಶ್ವಾಸವಿದೆ. ವೇದವಿದ್ಯಾ ಸಂವಿದ್ವಿಕಾಸತತ್ವವೂ ವೈದಿಕಧೀಯೋಗಶಕ್ತಿ ವಿಕೀರ್ಣವೂ ತತ್ವತ್ರಯಸಾಮರಸ್ಯ ಸತ್ವಪೂರ್ಣವೂ ಆದ ಪರಮಧ್ಯೇಯ ವಸ್ತುವನ್ನು ಸರ್ವದಾ ಚಿಂತಿಸುತ್ತೇನೆ.

ಆದ್ದರಿಂದ ಸರ್ವದಿವ್ಯ ಸಾಮರ್ಥ್ಯ ಸರ್ವಸ್ವದಿಂದ ತುಂಬಿದ ಗಾಯತ್ರೀಮಂತ್ರವೇ ಬ್ರಹ್ಮೋಪದೇಶಕ್ಕೆ ಗೃಹೀತವಾಯಿತೆಂದು ತಿಳಿಸಲು ನನಗೆ ಅತ್ಯಂತ ಹರ್ಷವಾಗುತ್ತದೆ. ಈ ವಿಷಯವು ಶ್ರೀಕಾಶೀ ಕ್ಷೇತ್ರದಲ್ಲಿ ಹಿಂದೂ ವಿಶ್ವವಿದ್ಯಾಲಯದಲ್ಲಿ ೧೯೬೭ನೇ ಇಸವಿಯಲ್ಲಿ ವೇದವೇತ್ತರೂ, ಸಂಸ್ಕೃತವಿದ್ಯಾವಿಶಾರದರೂ ಮೀಮಾಂಸಾ ವೇದಾಂತಾದಿ ಶಾಸ್ತ್ರಪಂಡಿತರ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ನೀಡಲು ವೇದ ಉಪನಿಷತ್ ಪ್ರಮಾಣ ಪುರಃಸರವಾಗಿ ವಿಸ್ತಾರವಾದ ನಾಲ್ಕಾರು ಉಪನ್ಯಾಸಗಳ ಸಂಗ್ರಹವಿದಾಗಿದೆ. ಇವೆಲ್ಲವೂ ದೈವರಾತೀಯ ವ್ಯಾಖ್ಯಾನ ಮಾಲೆಯಲ್ಲಿಯೂ ಆತ್ಮಕಥೆಯಲ್ಲಿಯೂ ಸಮರ್ಥಿತವಾಗಿದೆ.

ಗ್ರಂಥವಿಸ್ತಾರ ಭೀತಿಯಿಂದ ಇಷ್ಟಕ್ಕೇ ಮುಗಿಸಿದೆ.

ಎಲ್ಲ ವಿದ್ವಾಂಸರಿಗೂ ನಮಿಸುತ್ತೇನೆ. ಗಾಯತ್ರೀಮಂತ್ರ ತತ್ವಾರ್ಥವರ್ಣನೆಗೆ ಅವಕಾಶ ಮಾಡಿಕೊಟ್ಟಂಥವರಿಗೆಲ್ಲರಿಗೂ ಧನ್ಯವಾದ ಸಮರ್ಪಣ ಪೂರ್ವಕ ಎಲ್ಲ ವೇದವೇತ್ತರಿಗೂ ನಮಿಸುತ್ತೇನೆ.

ಪಂಚಮೀಕಲಾ

॥ ಗಾಯತ್ರೀಮೀಮಾಂಸ ॥

ಇಲ್ಲಿ ಈವರೆಗೆ ತಿಳಿಸಿದ ಸರ್ವತತ್ವವೂ ಬ್ರಹ್ಮಮೀಮಾಂಸೆಯಲ್ಲಿ ಉಪನಿಷತ್ತತ್ವ-ದಲ್ಲಿಯೂ ಸಮನ್ವಿತವಾದದ್ದೇ ಆಗಿದೆ. ಅದನ್ನೇ ಮೀಮಾಂಸಾಮುಖದಿಂದ ಸ್ಪಷ್ಟವಾಗಿ ತಿಳಿಸುತ್ತೇನೆ. ನಾಲ್ಕೂ ವೇದಗಳಲ್ಲಿ ಸುಪ್ರಸಿದ್ಧವಾದ ಪುರುಷಸೂಕ್ತದ ಮೂರನೇ ಮಂತ್ರ

"ಏತಾವಾನಸ್ಯ ಮಹಿಮಾಽತೋಜ್ಯಾಯಾꣳಶ್ಚ ಪೂರುಷಃ" *(ಋ. ೧೦, ೯೦, ೩)*

"ತಾವಾನಸ್ಯ ಮಹಿಮಾ ತತೋ ಜ್ಯಾಯಾꣳಶ್ಚ ಪೂರುಷಃ" *(ಸಾಮ. ೬೨೦,)*

"ತಾವಂತೋ ಅಸ್ಯ ಮಹಿಮಾನಸ್ತತೋ ಜ್ಯಾಯಾꣳಶ್ಚ ಪೂರುಷಃ"

(ಅಥರ್ವ. ೧೯, ೬, ೩)

ಈ ಮಂತ್ರಗಳ ವ್ಯಾಖ್ಯಾನರೂಪವಾದ ಔಪನಿಷದ್ ಬ್ರಾಹ್ಮಣವಚನ ಹೀಗಿದೆ.

ಗಾಯತ್ರಿಯ ಮಹಿಮೆ ಇಷ್ಟೆ, ಇದಕ್ಕಿಂತ ಹಿರಿಯವನು ಪುರುಷನು.

"ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ, ವಾಗ್ವೈ ಗಾಯತ್ರೀ, ವಾಗ್ವಾ ಇದಂ ಸರ್ವಂ ಭೂತಂ ಗಾಯತಿ ತ್ರಾಯತೇ," ಕಾಣುವಂಥದೆಲ್ಲವೂ ಗಾಯತ್ರೀ ವಾಕ್ಕೂ ಗಾಯತ್ರೀ ವಾಕ್ಕೂ ಎಲ್ಲ ಭೂತಗಳೇ. ಗಾಯತಿ ಗಾನ ಮಾಡಿ ರಕ್ಷಿಸುತ್ತವೆ.

ಈ ಗಾಯತ್ರೀ ನಾಲ್ಕು ಪಾದಗಳುಳ್ಳದ್ದಾಗಿದೆ. ಹಾಗೂ ಆರು ವಿಧವಾಗಿದೆ, ಎಂಬುದನ್ನು ಸಾಮವೇದ ಮಂತ್ರ ಸಮರ್ಥಿಸುತ್ತದೆ.

"ತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥" *(ಸಾಮ. ೬೨೦)*

ಇದು ಸಾಮವೇದದ ವಿಶಿಷ್ಟವಾದ ಪಾಠ. (ಛಾಂ.ಉ. ೩, ೧೨, ೧-೬)

ಈ ಪ್ರಕರಣವು ಇಲ್ಲಿಂದ ಆರಂಭವಾಗಿ ಎರಡು ಖಂಡಗಳಿಂದ ಮುಗಿದಿದೆ. ಈ ಸಮಗ್ರ ಪ್ರಕರಣದ ನಿರ್ಣೀತವಾದ ತಾತ್ವಿಕಾರ್ಥವು ಬ್ರಹ್ಮ ಮೀಮಾಂಸಾದ "ಜ್ಯೋತಿಶ್ಚರಣಾಭಿ-ಧಾನಾತ್", ಜ್ಯೋತಿರಧಿಕರಣದಲ್ಲಿ (ಬ್ರ.ಸೂ. ೧, ೧)

ಅಲ್ಲಿ ಈ ಪ್ರಕರಣದ ಉಪಸಂಹಾರದ ಕೊನೆಯಲ್ಲಿ,

"ಅಥ ಯದತಃ ಪರೋದಿವೋಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಅನುತ್ತಮೇ-ಷೂತ್ತಮೇಷು ಲೋಕೇಷು ಇದಂ ವಾವ ತದ್ ಯದಿದಮಂತಃ ಪುರುಷೇ ಜ್ಯೋತಿಃ" (ಛಾಂ.ಉ. ೩, ೧೩, ೭)

ಇಲ್ಲಿ ಜ್ಯೋತಿಃ ಶಬ್ದದಿಂದ ಆ ಪರಮಪುರುಷ ಬ್ರಹ್ಮಾತ್ಮನೇ ಚರಣಾಭಿಧಾನಾತ್ ಎಂಬುದರಿಂದ ಚತುಷ್ಪಾತ್ವ ನಿರ್ದೇಶಿಸಿದೆಯೆಂಬುದು ಸೂತ್ರಾರ್ಥ. ಇದರ ಉಪವ್ಯಾಖ್ಯಾನಕ್ಕೆ ಮೂಲ ಋಗ್ವೇದದಲ್ಲಿದೆ ಎಂಬುದನ್ನೇ "ಋಚಾಭ್ಯುಕ್ತಂ" ಎಂತ ಹೇಳಿದ್ದು, "ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ," ಎಂಬ ಉತ್ತರಾರ್ಧರ್ಚದಲ್ಲಿ ಪುರುಷನ ಚತುಷ್ಪಾದ್ವಿ ಭೂತಿಯೋಗವು ವರ್ಣಿತವಾಗಿದೆ. ಆರಂಭದಲ್ಲಿ "ಗಾಯತ್ರೀವಾ ಇದಂ ಸರ್ವಂ" ಎಂದು ಹೇಳಿದ್ದರಿಂದ ಇದು ಗಾಯತ್ರೀ ಛಂದಸ್ಸಿನ ವಿಷಯವೇ ಹೊರತು ಬ್ರಹ್ಮನ ವಿಷಯವಲ್ಲ. ಎಂದರೆ ಅದಕ್ಕೆ ಸಮಾಧಾನ ಅಲ್ಲಿಯೇ ಇದೆ.

"ಛಂದೋಽಭಿಧಾನಾನ್ನೇತಿ ಚೇತ್ ನ ತಥಾ ಚೇತೋಽರ್ಪಣನಿಗದಾತ್ ತಥಾಹಿ ದರ್ಶನಾತ್ ||"

ಇಲ್ಲಿ ಛಂದೋರೂಪಿಯಾದ ಗಾಯತ್ರಿಯ ಹಾಗೂ ಅದರ ವಾಕ್ಕಿನ ಅವಲಂಬನೆಯಿಂದ ಸಿದ್ಧವಾದ ಚತುಷ್ಪಾದ ತತ್ವಗಳಿಂದ ಕೂಡಿದ ಬ್ರಹ್ಮವಸ್ತುತ್ವಾನು ಸಂಧಾನಕ್ಕಾಗಿ ಮನಸ್ಸಿಗೆ ಸಮಾಧಾನ ಹೇಳಿದೆ. ಅಲ್ಲಿಯೂ–

"ಪಾದೋಽಸ್ಯಸರ್ವಾ ಭೂತಾನಿ"

ಸರ್ವಭೂತಗಳೂ ಒಂದು ಪಾದವೆಂದು ಬ್ರಹ್ಮ ವಸ್ತುವಿನ ರೂಪವನ್ನೇ ಹೇಳಿದೆ. "ಭೂತಾದಿ ಪಾದ ವ್ಯಪದೇಶೋಪಪತ್ತೇಶ್ಚೈವಂ".

ಇನ್ನು ಪ್ರಕಾರಾಂತರವಾಗಿ ಮತ್ತು ಕಾರಣಾಂತರವಾಗಿ ಆಕ್ಷೇಪ ಸಮಾಧಾನವನ್ನು ಹೇಳಲಾಗುತ್ತಿದೆ.

"ಉಪದೇಶ ಭೇದಾನ್ನೇತಿಚೇತ್ ನ ಉಭಯಸ್ಮಿನ್ನಪಿ ಅವಿಜ್ಞೇಯಾತ್ । ಉಪದೇಶಭೇದಾತ್" ಹಿಂದೆ ಹೇಳಿದ ಋಙ್ಮಂತ್ರದಲ್ಲಿ– "ತ್ರಿಪಾದಸ್ಯಾಮೃತಂ ದಿವಿ," ಎಂಬಲ್ಲಿ "ದ್ಯು" ಶಬ್ದದ ಸಪ್ತಮ್ಯಂತ ಪದವಿದೆ. ಅವರಿಂದ ದ್ಯುಲೋಕದಲ್ಲಿ ತ್ರಿಪಾತ್ತತ್ವವು ಪ್ರತಿಷ್ಠಿತವಾಗಿದೆ-ಯೆಂದಾಯಿತು. ಉಪನಿಷತ್ತಿನಲ್ಲಿ– "ಅಥಯತದ್ಯತೇಃ ಪರೋದಿವೋ ಜ್ಯೋತಿರ್ದೀಪ್ಯತೇ," ಇಲ್ಲಿ "ದಿವಃ" ಎಂಬುದು ಷಷ್ಠ್ಯಂತ ಪದವಾಗಿದೆ. ಇದರಿಂದ ದ್ಯುಲೋಕದ ಹೊರತಾಗಿ ತ್ರಿಪಾತ್ತತ್ವವಿದೆ ಎಂದು ಅರ್ಥವಾಗುತ್ತದೆ. ಇಲ್ಲಿ ಎರಡೂ ಸ್ಥಾನಗಳಲ್ಲಿ ಭಿನ್ನ ಭಿನ್ನ ಅರ್ಥವನ್ನು ಹೇಳಿದ್ದರಿಂದ ಎರಡೂ ಸಮಾನಾರ್ಥವೆಂಬುದೇ ಆಕ್ಷೇಪ. ಅದಕ್ಕೆ ಸಮಾಧಾನವಿದೆ. ಲಕ್ಷ್ಯಾರ್ಥಬೋಧದಲ್ಲಿ ಅವೆರಡೂ ಸರಿಯಾಗುವದರಿಂದ ಎರಡರಲ್ಲಿಯೂ ವಿರೋಧವಿಲ್ಲ.

ಈ ಅರ್ಥವನ್ನು ಶಾರೀರಕ ಭಾಷ್ಯದಲ್ಲಿ ಸಮರ್ಥಿಸಿದ್ದಾರೆ. "ವೃಕ್ಷಾಗ್ರೇಶ್ಯೇನಃ, ವೃಕ್ಷಾಗ್ರಾತ್ ಪರತಃಶ್ಯೇನಃ," ಇದರಿಂದ ವಿಭಕ್ತಿಭೇದ ಕಂಡರೂ ವಸ್ತುಭೇದವಿಲ್ಲ, ಹಾಗಾಗಿ ರೂಪಾಂತರ-ದಿಂದಲಾದರೂ ಆ ಅರ್ಥವನ್ನು ಯೋಜಿಸಬಹುದಾಗಿದೆ.

ಅದು ಸರಿ. ಉಪನಿಷತ್ತಿನಲ್ಲಿ ಉಪಕ್ರಮ ಮಾಡುವಾಗ "ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ, ವಾಗ್ವೈ ಗಾಯತ್ರೀ, ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ," ಹೀಗೆ ಗಾಯತ್ರೀ ರೂಪವಾದ ವಾಕ್ಕಿಗೆ, ಚತುಷ್ಪಾತ್ತತ್ವವನ್ನು ಹೇಳಿದೆ.

ಇದನ್ನು ಋಕ್ಕಿನಲ್ಲಿ ಹೇಳಿದ್ದು ಉದಾಹರಣರೂಪವಾದ ಮಂತ್ರವಚನಗಳು ಇಂತಿವೆ.

"ತತೋ ಜ್ಯಾಯಾಂಶ್ಚ ಪೂರುಷಃ । ಪಾದೋಽಸ್ಯ ಸರ್ವಾ ಭೂತಾನಿ ॥"

ಹೀಗೆ ಪುರುಷನ ತ್ರಿಪಾತ್ತತ್ವವನ್ನು ಹೇಳಿದ್ದಾರೆ. ಉಪಸಂಹಾರದಲ್ಲಿಯೂ ಪುನಃ ಉಪನಿಷದ್ವಚನದಲ್ಲಿ– "ಅಥಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ" ಎಂಬಲ್ಲಿ "ಜ್ಯೋತಿಃ" ಶಬ್ದದಿಂದ ಯಾವುದೋ ಮೂರನೆಯದಾದ ವಸ್ತುವನ್ನೇ ನಿರ್ದೇಶಿಸಿದಂತೆ ತೋರುತ್ತದೆ. ಅದರ ಮೀಮಾಂಸೆಯಲ್ಲಿ ಕೊನೆಗೆ ಜ್ಯೋತಿಃ ಶಬ್ದವನ್ನೇ ಸಂಗ್ರಹಿಸಿ ಹಿಂದೆ ಹೇಳಿದ ಗಾಯತ್ರೀ ಹಾಗೂ ಪುರುಷರ ಚತುಷ್ಪಾತ್ತತ್ವವನ್ನೇ ಹಿಡಿದು ಆ ಬ್ರಹ್ಮತ್ವಪರವಾದ ಪರಮವಸ್ತು ತತ್ವವನ್ನೇ ನಿರ್ಣಯಿಸಿದ್ದಾರೆ. ಅಲ್ಲಿ ಮುಖ್ಯವಾದ ಆಕ್ಷೇಪವೆಂದರೆ ಇಲ್ಲಿ ಮೂರು ವಿಧವಾದ ಉಪದೇಶವಿದೆ. ಆದ್ದರಿಂದ ಗಾಯತ್ರೀ, ಪುರುಷ, ಜ್ಯೋತಿ ಮೂರು ವಸ್ತುಗಳು ಬೇರೆಬೇರೆಯಾಗಿವೆ. ಆದ್ದರಿಂದ ಮೂರು ವಸ್ತುಗಳ ಸಮನ್ವಯದಿಂದ ಬ್ರಹ್ಮತ್ವವನ್ನು ನಿರ್ಣಯಿಸುವದು ಸರಿಯಲ್ಲ.

ಇನ್ನೊಂದು ಅವಾಂತರ ಆಕ್ಷೇಪವೆಂದರೆ "ಜ್ಯೋತಿಶ್ಚರಣಾಭಿಧಾನಾತ್" ಎಂಬುದನ್ನು ಇಲ್ಲಿ ಹೇಳಿದ್ದೇ ಅಸಂಗತವೆಂದು ಕಾಣುತ್ತದೆ. ಯಾಕೆಂದರೆ "ಅಥ ಯದತಃ ಪರೋ ಜ್ಯೋತಿರ್ದೀಪ್ಯತೇ," ಇಲ್ಲಿ "ಜ್ಯೋತಿಃ" ಎಂಬುದಕ್ಕೆ ಚತುಷ್ಪಾದ ನಿರ್ದೇಶ ತೋರುವದಿಲ್ಲ. ಅದರ ಅನುವಾದ ಮಾಡಿ ಬ್ರಹ್ಮತ್ವ ನಿರ್ಣಯ ಮಾಡಿದ್ದು ಸರಿಯಲ್ಲ. ಅದಕ್ಕೆ ಸಮಾಧಾನವೆಂದರೆ ಜ್ಯೋತಿರಾತ್ಮವಾದ ಬ್ರಹ್ಮದ ಚತುಷ್ಪಾತ್ ಸ್ವರೂಪ ತತ್ವವನ್ನು ಬೇರೆಡೆ ಉಪದೇಶಿಸಿದ್ದಿದೆ.

"ತಥಾಹಿ ಸತ್ಯಕಾಮಾಯ ಜಾಬಾಲಾಯ ಬ್ರಹ್ಮವಸ್ತುತತ್ತ್ವೋಪದೇಶೇ ನಿರ್ದಿಷ್ಟಂ ತಚ್ಚತುಷ್ಪಾತ್ ತತ್ತ್ವಂ ದೃಶ್ಯತೇ, ತೇ ಚ ಬ್ರಹ್ಮಣಃ ಚತ್ವಾರಃ ಪಾದಾಃ ಪ್ರತ್ಯೇಕಶಃ ಚತುಷ್ಕಲಾಸಮನ್ವಿತಾಃ, ಷೋಡಶಕಲಾತತ್ವಪೂರ್ಣಾಃ"

ಬ್ರಹ್ಮದ ನಾಲ್ಕು ಪಾದಗಳು ಪ್ರತಿ ಒಂದಕ್ಕೆ ನಾಲ್ಕು ಕಲೆಗಳೆಂದು ಒಟ್ಟಿಗೆ ಹದಿನಾರು ಷೋಡಶ ಕಲಾತತ್ವಪೂರ್ಣ ಎಂದು ಸತ್ಯಕಾಮ ಜಾಬಾಲನಿಗೆ ಬ್ರಹ್ಮವಸ್ತುತತ್ವವನ್ನು ತಿಳಿಸುವಾಗ ಹೇಳಿದ್ದಿದೆ.

ಬ್ರಹ್ಮದ ಮೊದಲನೇ ಪಾದ. ಪ್ರಾಚೀ-ಪ್ರತೀಚೀ-ದಕ್ಷಿಣಾ-ಉದೀಚೀ ನಾಲ್ಕು ದಿಕ್ಕುಗಳಿಂದ ಕಲ್ಪಿತವಾದದ್ದು "ಪ್ರಕಾಯವಾನ್" ಎಂಬ ಪ್ರಥಮಪಾದ, "ಪೃಥಿವೀ-ಅಂತರಿಕ್ಷ-ದ್ಯಾಃ-ಸಮುದ್ರ" ನಾಲ್ಕು ಭುವನಾತ್ಮಿಕವಾದ ಕಲೆಗಳಿಂದ ಕೂಡಿದ್ದು "ಅನಂತವಾನ್" ಎಂಬ ಎರಡನೇಪಾದ. "ಅಗ್ನಿ-ಸೂರ್ಯ-ಚಂದ್ರ- ವಿದ್ಯುತ್" ಎಂಬ ನಾಲ್ಕು ಕಲೆಗಳಿಂದ ಕೂಡಿದ್ದು "ಜ್ಯೋತಿಷ್ಮಾನ್" ಎಂಬ ಮೂರನೇ ಪಾದ. ಪ್ರಾಣ-ಚಕ್ಷುಃ-ಶ್ರೋತ್ರಂ-ಮನಃ, ಎಂಬ ನಾಲ್ಕು ಕಲೆಗಳಿಂದ ಕೂಡಿದ ಆಂತರಂಗಿಕ ಆಧ್ಯಾತ್ಮಿಕವಾದ "ಆಯತನವಾನ್" ಎಂಬ ನಾಲ್ಕನೇ ಪಾದ. ಹೀಗೆ ನಾಲ್ಕು ಪಾದಗಳ ನಾಲ್ಕು ಭಾಗಗಳಿಂದ ಕೂಡಿ ಷೋಡಶ ಕಲಾ ಪರಿಪೂರ್ಣನಾದ ಪರಮವರ್ಣ ಬ್ರಹ್ಮಸ್ವರೂಪ ಜ್ಯೋತಿ ಎಂಬುದೇ ನಿರ್ಗಲಿತವಾದ ಅರ್ಥ. (ಛಾಂ.ಉ. ೪,೫,೮)

ಅದರಂತೆ ಗಾಯತ್ರೀವಾಕ್ಕಿನ ಹಾಗೂ ಪುರುಷನ ದಿವ್ಯಜ್ಯೋತಿರೂಪವೂ ಸಿದ್ಧವಾಯಿತೆಂಬುದು ಉಪನಿಷತ್ತತ್ವ.

"ಅಸ್ತಮಿತ ಆದಿತ್ಯೇ ಯಾಜ್ಞವಲ್ಕ್ಯ! ಚಂದ್ರಮಸ್ಯಸ್ತಮಿತೇ ಶಾಂತೇಽಗ್ನೌ ಕಿಂಜ್ಯೋತಿರೇವ ವಾಯಂ ಪುರುಷಃ ಇತಿ ವಾಗೇವಾಸ್ಯ ಜ್ಯೋತಿ ರ್ಭವತಿನ ಚೈವಾಯಂ ಜ್ಯೋತಿಷಾಽಽಸ್ತೇಪಲ್ಕತೇ ಕರ್ಮ ಕುರುತೇ ವಿಪಲಯೇತೀತಿ" (ಬೃ.ಉ. ೪, ೩, ೪) "ತೇಜೋಮಯೀವಾಕ್" (ಛಾಂ.ಉ. ೩, ೬, ೫, ೪)

ಹೀಗೆ ಇಲ್ಲಿ ಗಾಯತ್ರೀ ಬ್ರಹ್ಮರ, ವಾಗ್ ವಸ್ತು ಸ್ವರೂಪಗಳು ವಾಚಕ ವಾಚ್ಯ ಸತ್ವಗಳ ಸಮಾನವಾದ ನಾಮ ರೂಪ, ಗುಣಧರ್ಮಾದಿಯೋಗದಿಂದ ಸಮಾನ ಭಾವವಿದೆಯೆಂಬುದು ತಿಳಿಯುತ್ತದೆ. ಹಾಗಾಗಿ ಗಾಯತ್ರೀವಾಕ್ಕಿನ, ಪುರುಷನ ಚತುಷ್ಪಾತ್ವಾದಿ ರೂಪದಿಂದ ಹಾಗೂ ಜ್ಯೋತಿಃ ಸ್ವರೂಪದಿಂದ ಸಾಮರಸ್ಯವಾಗಿ ಬ್ರಹ್ಮಾತ್ಮತಾ ಕಂಡುಬರುತ್ತದೆ.

ಹೀಗೆ ಈ ಎಲ್ಲ ತತ್ವ ವಾಚ್ಯಾರ್ಥ ಲಕ್ಷ್ಯಾರ್ಥಗಳಿಂದ ಈ ಗಾಯತ್ರೀ ಮಂತ್ರದಲ್ಲೇ ನೆಲೆಸಿದೆ ಎಂಬುದು ನಿರ್ಣೀತವಾದ ಅರ್ಥ.

ಗಾಯತ್ರೀಯಂತ್ರ :

ಇಲ್ಲಿ ಪ್ರಸಂಗೋಪಾತ್ತವಾಗಿ ತತ್ವತ್ರಯ ಸಮನ್ವಿತವಾದ ಗಾಯತ್ರೀಯಂತ್ರವನ್ನು ತಿಳಿಸಿದೆ. ಈ ಯಂತ್ರದಲ್ಲಿಯೂ ಸಾಂಕೇತಿಕವಾಗಿ ಬ್ರಹ್ಮಾತ್ಮ ತತ್ವವಡಗಿದೆ. ಯಜ್ಞೋಪವೀತ ಬ್ರಹ್ಮಸೂತ್ರದಂತೆ ತಾತ್ವಿಕಾರ್ಥಯೋಗದಿಂದ ಸಮರ್ಥಿಸಿದೆ. ಈ ಗಾಯತ್ರೀಯಂತ್ರದಲ್ಲಿ ಬಿಂದು, ತ್ರಿಕೋಣ, ಷಟ್ಕೋಣ, ಅಷ್ಟದಲಕಮಲ (ಕೆಲವರ ಮತದಂತೆ ೨೪ ದಲಕಮಲ) ಹಾಗೆಯೇ ಭೂಪುರಂ, ಹೀಗೆ ರೇಖೆಯಿಂದ ಬರೆದ ಚಕ್ರವಿದೆ. ಈ ಯಂತ್ರವು ಗಾಯತ್ರೀವಾಕ್ಕಿನ ಹಾಗೂ ಬ್ರಹ್ಮಾತ್ಮ ಪುರುಷನ ತತ್ವತ್ರಯಯೋಗದಿಂದ ಪರಿಕಲ್ಪಿತವಾದ ಪ್ರತ್ಯಕ್ಷ ರೂಪವಾಗಿದೆ. ಪರೋಕ್ಷ ದಿವ್ಯಸೂಕ್ಷ್ಮತಮ ತತ್ವಾದಿಬೋಧಾರ್ಹವಾದ ಅದರ ಅನುಧ್ಯಾನಾದ್ಯವಲಂಬನೆಗೆ ಯೋಗ್ಯವಾದ ದಿವ್ಯದೇವತಾಭಾವನೆಯಿಂದ ಅರ್ಚನ ಉಪಾಸನಾದಿ ಆರಾಧನೆಗೆ ಯೋಗ್ಯವಾದ ವೈದಿಕ ತತ್ಕೋಪಕಲ್ಪಿತವಾದ ಸಾತ್ವಿಕ ಸತ್ವದಿಂದ

ಕೂಡಿದ್ದಾಗಿದೆ. ಇದನ್ನು ಸಪ್ರಮಾಣವಾಗಿ ವೇದೋಪನಿಷದ್ವಚನ ಪುರಃ ಸರಪ್ರತಿಪಾದಿಸುತ್ತೇನೆ. ಇಲ್ಲಿ ಬಿಂದು ಹಾಗೂ ತ್ರಿಕೋಣವೆಂಬುದು ಪ್ರತ್ಯಕ್ಷವಾಗಿ ಬ್ರಹ್ಮರೂಪೀ ಗಾಯತ್ರೀ ವಾಕ್ಕಿನ ಹಾಗೂ ಪರಬ್ರಹ್ಮ ಪರಮಪುರುಷ ವಿಶ್ವರೂಪೀಸರ್ವಾಂತರಾತ್ಮನ ಚತುಷ್ಪಾತ್ತತ್ತ್ವ ಪೂರ್ಣವಾದ ಸಾಂಕೇತಿಕ ಚಕ್ರರೂಪಚಿಹ್ನವಾಗುತ್ತದೆ.

"ಬಿಂದುತತ್ತ್ವ" :

ಇಲ್ಲಿ ಬಿಂದು ತತ್ತ್ವವೆಂಬುದು ಮೊದಲನೆಯ ವಿಶ್ವಾಧಿಷ್ಠಾನ ರೂಪವಾದ ಒಂದು ಸದ್ವಸ್ತು ಬೋಧಕವಾದ ಅಂತಿಮ ಪೂರ್ಣವಿರಾಮಾತ್ಮಕವೇ. ಯಾವುದಕ್ಕೆ ಪೂರ್ಣಬಿಂದುವೆಂದೂ ಪರಮಾಣುವೆಂದೂ ಲೌಕಿಕ ಹಾಗೂ ವೈದಿಕ ಶಾಸ್ತ್ರಗಳಲ್ಲಿಯೂ ವ್ಯವಹಾರದಲ್ಲಿಯೂ ಸುಪ್ರಸಿದ್ಧವಾಗಿ ಹೆಸರಿಸುತ್ತಾರೋ, ಅದಕ್ಕೆ ಹೆಚ್ಚು ಕಡಿಮೆ ಮಾಡುವದಾಗಲೀ, ಹೆಚ್ಚು ಕಡಿಮೆ ಭಾವಿಸಲಿಕ್ಕಾಗಲೀ ಶಕ್ಯವಿಲ್ಲ. ಇದೇ ಬಿಂದುವಿನ ಲಕ್ಷಣವೆಂಬುದೂ ಪ್ರಸಿದ್ಧ. ಈ ವಿಷಯದಲ್ಲಿ ಪ್ರಾಚ್ಯ ಪ್ರತೀಚ್ಯ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಬಿಂದುವಿಗೆ ಆಶ್ರಯೀಭೂತವಾದದ್ದು ಯಾವುದೋ ಇದೆ ಎಂಬುದು ಬಾಹ್ಯಭೌತಿಕ ದೃಷ್ಟಿಯುಳ್ಳ ಪಾಶ್ಚಾತ್ಯರಲ್ಲಿ ಇಷ್ಟುಮಾತ್ರ ಭೇದ ಹಾಗೂ ಅದಕ್ಕೆ ವಿರೋಧಾನುವಾದವೂ ಇದೆ. ಆದರೆ ಆ ಪೂರ್ಣಬಿಂದುವೇ ಸರ್ವಾಧಿಷ್ಠಾನ ರೂಪವಾದದ್ದೆಂಬ ವಿಷಯದಲ್ಲಿ ಭೇದವಿಲ್ಲ. ಈ ವಿಷಯದಲ್ಲಿ ವೈದಿಕತತ್ತ್ವದಂತೆ ಅದು ಶ್ರೇಷ್ಠವಾದದ್ದು ಹಾಗೂ ಅಣುತಮವಾದದ್ದಷ್ಟೇ ಅಲ್ಲ, ಎಲ್ಲಕ್ಕೂ ಮಹತ್ತಮವಾದದ್ದೂ ಆಗಿದೆ ಎಂಬುದು "ಅಣೋರಣೀಯಾನ್ ಮಹತೋಮಹೀಯಾನ್" (ಕ. ೩, ೧, ೨, ೩೦) "ಕಿಂಸ್ವಿದಾಸೀದಧಿಷ್ಠಾನಮಾರಂಭಣಂ ಕತಮಃ ಸ್ವಿತ್‌ಕಥಾऽऽಸೀತ್," ಋಙ್ಮಂತ್ರದಲ್ಲಿ ವರ್ಣಿತವಾಗಿದೆ.

ಈ ಯಂತ್ರದ ಮಧ್ಯದಲ್ಲಿ ಬಿಂದುವಿದೆ. ಅದೇ ಪರಮದೇವತೆ ಗಾಯತ್ರೀವಾಕ್ಕಿನ ಚತುರ್ಥಪಾದರೂಪವಾಗಿದೆ. ಅಂತೆಯೇ ಪರಬ್ರಹ್ಮ ಪುರುಷರೂಪಿ ಅಂತರಾತ್ಮನ ಸಮಾನವಾದ ಅಮಾತ್ರ ಅಪಾತ್ ಸಂಜ್ಞಕವಾದ ಅಪಾತ್ತ್ವರೂಪವಾಗಿದೆ.

"ಅಪದಸಿ ನಹಿ ಪದ್ಯಸೇ, ನಮಸ್ತೇ ತುರೀಯಾಯದರ್ಶತಾಯ ಪದಾಯ" (ಬೃ.ಉ.) "ಅಮಾತ್ರಶ್ಚತುರ್ಥ," (ಮಾಂ.ಉ.) ಹೀಗೆ ಗಾಯತ್ರೀವಾಕ್ಕಿನ ತುರೀಯಪದದ ವರ್ಣನೆ ಇದೆ. ಅದು ಪುರುಷನಿಗೂ ಸಮಾನವಾಗಿದೆ.

"ಅಪಾದೇತಿ ಪ್ರಥಮಾ ಪದ್ವತೀನಾಮ್" (ಋ. ೧, ೧೫೨, ೩)

"ಅಪಾದಗ್ರೇ ಸಮ ಭವತ್" (ಅ.ಸಂ.)

"ಅಮಾತ್ರಂ ತ್ವಾ ಧಿಷಣಾತಿತ್ವಿಷೇಮಹಿ" (ಋ)

"ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವ ಶ್ನುವಂತಿ" (ಋ ೭,೯೯,೧)

ಈ ಮೊದಲಾದವು ಪುರುಷನ ಅಪಾತ್ತತ್ತ್ವವನ್ನು ತಿಳಿಸುವವು.

ತ್ರಿಕೋಣತತ್ತ್ವ:

ತ್ರಿಕೋಣವೆಂಬುದು ತ್ರಿಪದಾ ಗಾಯತ್ರೀವಾಕ್ಕಿನ ಹಾಗೂ ಪರಮಪುರುಷನ ತ್ರಿಪಾತ್ತತ್ತ್ವ ಬೋಧಕ ಚಿಹ್ನ. ಹಾಗೂ ಅಧಿಭೂತ-ಅಧಿದೈವತ-ಅಧ್ಯಾತ್ಮವೆಂದು ಪ್ರಸಿದ್ಧವಾದ ಪ್ರತ್ಯಕ್ಷ-ಪರೋಕ್ಷ-ಅಪರೋಕ್ಷಸತ್ವದ ತತ್ವತ್ರಯ ಲಕ್ಷ್ಯವಾದ ಸಾಂಕೇತಿಕ ಅಂಗವಾಗಿದೆ. ಆದ್ದರಿಂದ ಈ ತ್ರಿಕೋಣದಲ್ಲಿಯೇ ಮೂರುವೇದಗಳು, ಮೂರು ವ್ಯಾಹೃತಿಗಳು, ಮೂರು ಭುವನಗಳು ಜ್ಯೋತಿರಾತ್ಮನ ಮೂರು ದೇವತೆಗಳು, ಮೂರು ಕರಣಗಳು, ಮೂರು ಶಕ್ತಿಗಳೂ ಅಂತರ್ಹಿತವಾಗಿವೆ.

ಆದ್ದರಿಂದ ಬಿಂದುಸ್ಥಾನದಲ್ಲಿ ಪ್ರಣವಾಕ್ಷರ ರೂಪವಾದ ಓಂಕಾರ. ಮೂರು ಕೋಣಗಳಲ್ಲಿ ಮೂರು ವ್ಯಾಹೃತಿಗಳು ಭೂಃ, ಭುವಃ, ಸುವಃ ಇವುಗಳನ್ನು ಬರೆಯುವದು. ಇದು ಮೊದಲನೇ ಅಧಿದೈವತ ತ್ರಿಕೋಣ. ಇದರಂತೆ ತ್ರಿಕೋಣದ್ವಯ ಸಂಯೋಗದಿಂದ ಷಟ್‌ಕೋಣವಾಗುತ್ತದೆ. ಅದರಲ್ಲಿ ಪ್ರಾಗಗ್ರವಾಗಿರುವದು ಅಧಿಭೂತ ತ್ರಿಕೋಣ, ಪ್ರತ್ಯಗ್ರ ತ್ರಿಕೋಣ, ಅಧ್ಯಾತ್ಮಕ, ಹೀಗೆ ಷಟ್ಕೋಣದಲ್ಲಿ ಅಧಿದೈವತ ಅಧ್ಯಾತ್ಮಕವೆಂಬ ಎರಡು ಅಥವಾ ಆಧಿಭೌತಿಕ ಅಧಿದೈವತ ಎಂಬೆರಡು, ಎಂದೂ ಭಾವಿಸಬಹುದಾಗಿದೆ. ಆಗ ಅಂತರ್ಯಾ ತ್ರಿಕೋಣ ಆಧ್ಯಾತ್ಮಿಕವಾಗಿದೆ.

ಆಮೇಲೆ "ಗಾಯತ್ರೀ ಚತುರ್ವಿಂಶತ್ಯಕ್ಷರಾ ತ್ರಿಪದಾ, ಷಟ್‌ಕುಕ್ಷಿಃ," ಈ ಷಟ್‌ಕೋಣಗಳಲ್ಲಿ ಗಾಯತ್ರಿಯ ಷಟ್‌ಕುಕ್ಷಿಗಳನ್ನು ಕಲ್ಪಿಸಿದ್ದು ಕಂಡುಬರುತ್ತದೆ. ಅದೂ ದಿಕ್‌ಸಂಸ್ಥಿಗನುಗುಣವಾಗಿ "ತಿರ್ಯಗೂರ್ಧ್ವಾಧರ ದಿಕ್ ಷಟ್ ಕುಕ್ಷಿಂ," ಅಂದರೆ ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯ, ಊರ್ಧ್ವ (ಮೇಲೆ) ಅಧರ (ಕೆಳಗೆ) ಎಂದು ಆರು ಕೋಣಗಳ ದಿಕ್ಕುಗಳನ್ನು ಕಲ್ಪಿಸಬೇಕು. ಇಲ್ಲಿ "ಕುಕ್ಷಿ" ಎಂಬುದು ಉದರಪರವಾಗಿಯೂ ಅವಾಂತರಂಗ ಪರವಾಗಿಯೂ ಇದೆ. ಇಲ್ಲಿ ಆರುಕೋಣಗಳಲ್ಲಿ ಗಾಯತ್ರೀಮಂತ್ರದ ಷಡಂಗನ್ಯಾಸಾನು ಸಾರವಾಗಿದೆ. ಅದರ ಕ್ರಮ ಹೀಗೆ– "ತತ್ಸವಿತುಃ ಹೃದಯಾಯ ನಮಃ (೧), ವರೇಣ್ಯಂ ಶಿರಸೇ ಸ್ವಾಹಾ (೨), ಭರ್ಗೋದೇವಸ್ಯ ಶಿಖಾಯೈ ವೌಷಟ್ (೩), ಧೀಮಹಿ ಕವಚಾಯಹುಂ (೪), ಧಿಯೋಯೋನಃ ನೇತ್ರತ್ರಯಾಯ ವೌಷಟ್ (೫), ಪ್ರಚೋದಯಾತ್ ಅಸ್ತ್ರಾಯಫಟ್, (೬), (ಆ.ಗೃ.ಪರಿ.ಸೂತ್ರಂ)

ಅಷ್ಟದಲಕಮಲ :

ಷಟ್‌ಕೋಣದ ಹೊರಗೆ ಅಷ್ಟದಲಕಮಲ ಅಷ್ಟ ದಿಕ್ಕುಗಳಿಗೆ ಅದು ಅಷ್ಟಾಪದೀಯ ವಾಕ್ಕಿನ ಹಾಗೂ ಪುರುಷನ ಅಷ್ಟಮೂರ್ತಿ ತತ್ವವನ್ನು ಪ್ರತಿನಿಧಿಸುತ್ತದೆ.

"ವಾಚಮಷ್ಟಾಪದೀಮಹಂ ನವಸ್ರಕ್ತಿಮೃತಸ್ಪೃಶಮ್" *(ಋ. ೮, ೭೬, ೧೨)*

"ಗೌರೀಮಿಮಾಯಂ ಅಷ್ಟಾಪದೀ ನವಪದೀ ಬಭೂವುಷೀ" *(ಋ. ೧, ೧೬೪, ೪೧)*

ಇದು ಪ್ರಮಾಣ ಭಗವಾನ್ ರುದ್ರನ ಅಷ್ಟಮೂರ್ತಿತ್ವವು ಪ್ರಸಿದ್ಧವಾಗಿದೆ. ಆಕಾಶಾದಿ ಪಂಚಭೂತಗಳು, ಸೂರ್ಯ, ಚಂದ್ರ, ಜೀವ, ಇವರ ಕೂಡುವಿಕೆಯಿಂದ ಎಂಟಾಗಿದೆ. ಮಧ್ಯದ ಬಿಂದು ಒಂಭತ್ತು ಪದಗಳ ಪರಿಕಲ್ಪನೆ. ಅಷ್ಟದಲಗಳ ತ್ರಿಗುಣೀಕರಣದಿಂದ ೨೪ ದಲಗಳ ಕಲ್ಪನೆ ಮಾಡಬಹುದು. ಇಲ್ಲಿ ೨೪ ಮಂತ್ರಾಕ್ಷರಗಳ ವಿನ್ಯಾಸ ಮಾಡಬಹುದು. ಅದು ಯೋಗ್ಯವೇ. ಚತುರ್ವಿಂಶತಿ ದಲಗಳಲ್ಲಿ ಒಂದೊಂದರಂತೆ ೨೪ ಅಕ್ಷರಗಳನ್ನು ಇಡಬಹುದು.

ಭೂಪುರಂ :

ಈ ಭೂಪುರವು ಅಷ್ಟದಿಕ್ಕುಗಳುಳ್ಳ ಚತುರ್ದ್ವಾರ. ಅದರ ಹೊರಗೆ ನಾಲ್ಕು ರೇಖೆಗಳ ಮಧ್ಯದಲ್ಲಿ ಮೂರು ಪಟ್ಟಿಕೆಗಳು ರಕ್ತ ಶ್ವೇತ, (ಬಿಳಿ) ಕಪ್ಪು ಬಣ್ಣಗಳಿಂದ ತುಂಬಿದ ತ್ರಿಗುಣ ಸಂಕೇತವಾದವುಗಳು. ಅಷ್ಟದಿಕ್ಕುಗಳಲ್ಲಿ ಇಂದ್ರಾದಿ ಅಷ್ಟದಿಕ್ಪಾಲಕರು. ಅಷ್ಟಮಾತೃಕೆಗಳು ೫೦ ಮಾತೃಕಾ ಬೀಜಾಕ್ಷರಗಳಿಂದ ಭೂಪುರವೇಷ್ಟನ ಮಾಡಬಹುದು. ಅದು ಹೀಗೆ. ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ನಾಲ್ಕುನಾಲ್ಕು ಅಕ್ಷರಗಳಂತೆ ಅಕಾರದಿಂದ ವಿಸರ್ಗದವರೆಗಿನ ೧೬ ಅಕ್ಷರಗಳನ್ನು ಅದರಂತೆ ಕಕಾರದಿಂದ ಕ್ಷಕಾರದ ವರೆಗಿನ ಅಕ್ಷರಗಳನ್ನು ಎಂಟು ದಿಕ್ಕುಗಳಲ್ಲಿ ವಿನ್ಯಾಸ ಮಾಡುವದು.

ತಾತ್ವಿಕ ವಿಶಿಷ್ಟ ಗಾಯತ್ರೀಯಂತ್ರ (ಚತುಷ್ಪಾತ್ ತತ್ವಂ) :

ಇಲ್ಲಿಯೂ ಪೂರ್ವೋಕ್ತ ಅರ್ಚನಾದಿಗಳಿಗೆ ಉಪಯುಕ್ತವಾದ ಯಂತ್ರವನ್ನು ವಿಶಿಷ್ಟವಾದ ತತ್ವದಿಂದಕೂಡಿ ಪರಿಕಲ್ಪಿಸಲಾಗಿದೆ. ಅದೆಂದರೆ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದಲ, ಮಧ್ಯಬಿಂದು ದಲದಿಂದ ಕೂಡಿ ಪಂಚಾರಚಕ್ರರೂಪವಾದ ಪಂಚಪಾದಾತ್ಮಕ ಪಂಚಶೀರ್ಷಾತ್ಮಕ ಚಕ್ರ.

"ಗಾಯತ್ರೀ ತ್ರಿಪದಾ ಷಟ್‌ಕುಕ್ಷಿಃ ಪಂಚಶೀರ್ಷಾ," (ನಾ.ಉ. ೧೫) ಇಲ್ಲಿ ಚತುರ್ದಲ ಕಮಲವೆಂಬುದು ತತ್ವತಃ ಚತುಷ್ಪಾದಾತ್ಮಕವೂ, ಚತುರ್ಮುಖಾತ್ಮಕವೂ ಆಗಬಹುದು. ಅದು ವಾಗ್ರೂಪಗಾಯತ್ರಿಯ ಹಾಗೂ ಬ್ರಹ್ಮಪುರುಷನ, ಹಾಗೂ ಚತುರ್ಮುಖಬ್ರಹ್ಮನ ತತ್ವಾರ್ಥವಾಗುತ್ತದೆ.

"ಚತ್ವಾರಿ ವಾಕ್ ಪರಿಮಿತಾ ಪದಾನಿ" (ಋ. ೧, ೧೬೪, ೪೫)
"ಗೌರೀರ್ಮಿಮಾಯಸಾ ಚತುಷ್ಪದೀ" (ಋ. ೧, ೧೬೪, ೪೧)
"ಗಾಯತ್ರ್ಯಸ್ಯೇಕ ಪದೀ ದ್ವಿಪದೀ ತ್ರಿಪದೀ ಚತುಷ್ಪದೀ" (ಬೃ.ಉ. ೧೦, ೯೦, ೨)
ಇವೆಲ್ಲ ವಾಗ್ರೂಪ ಗಾಯತ್ರಿಯ ಚತುಷ್ಪಾತ್ತತ್ವ ಬೋಧಕ ವಚನಗಳು,

"ಸ್ಯೆಷಾ, ಚತುಷ್ಪದಾ ಷಡ್‌ವಿಧ್ಯಾ ಗಾಯತ್ರೀ |
ಪಾದೋऽಸ್ಯವಿಶ್ವಾ ಭೂತಾನಿ ತ್ರಿಪಾದಸ್ಯಾ ಮೃತಂ ದಿವಿ ||" (ಋ.)

ಎಂಬುದು ಪುರುಷನ ಚತುಷ್ಪಾತ್ತತ್ವ ಬೋಧಕ.

"ತದೇತತ್ ಚತುಷ್ಪಾತ್ ಸಕಲಂ ಬ್ರಹ್ಮ" ಎಂಬುದು ಬ್ರಹ್ಮನ,

"ತಚ್ಚ ಚತುಷ್ಕಲಾಯುಕ್ತೈಃ ಚತುರ್ಭಿಃ ಪಾದೈಃ ಪೂರ್ಣಮ್" (ಛಾಂ.ಉ. ೪)

ಬ್ರಹ್ಮನಿಗೆ ವೇದಾತ್ಮಕವಾದ ನಾಲ್ಕು ಮುಖಗಳು ಪ್ರಸಿದ್ಧವಷ್ಟೇ, "ಸೋಽಯ ಮಾತ್ಮಾ ಚತುಷ್ಪಾತ್ ಸೋಽಯಮಾತ್ಮಾಧ್ಯಕ್ಷರಮೋಂಕಾರೋಧಿಮಾತ್ರಂ ಪಾದಾ ಮಾತ್ರಾ ಮಾತ್ರಾಶ್ಚಪಾದಾಃ ಅಕಾರ ಉಕಾರೋಮಕಾರ" ಇತಿ, ಅಮಾತ್ರಶ್ಚತುರ್ಥಃ, ಹೀಗೆ ವಾಗ್ರೂಪವಾದ ವಾಚಕ ಸ್ವರೂಪವಾದ ಪ್ರಣವಾಕ್ಷರರೂಪಿ ಓಂಕಾರದ, ಹಾಗೂ ತದರ್ಥ ಬ್ರಹ್ಮವಸ್ತುವಿನ ಚತುಷ್ಪಾತ್ತತ್ವವಾಗಿದೆ. (ಮಾಂ.ಉ.)

ಬ್ರಹ್ಮದೇವನ ಚತುರ್ವೇದ ಸ್ವರೂಪವಾದ ನಾಲ್ಕುಮುಖಗಳು ನಾಲ್ಕು ದಿಕ್ಕುಗಳಲ್ಲಿವೆ-ಯೆಂಬುದು ಪ್ರಸಿದ್ಧ. "ಋಚಾಂ ಪ್ರಾಚೀಮಹತೀದಿಗುಚ್ಯತೇ, ಯಜುಷಾಂದಕ್ಷಿಣಾ, ಸಾಮ್ನಾಮುದೀಚೀ, ಅಥರ್ವಾಂಗಿರಸಾಂಪ್ರತೀಚೀ" (ತೈ.ಯ.)

ಪಂಚಪಾತ್ ತತ್ವಂ :

ಬಿಂದು ಹಾಗೂ ಚತುರ್ದಲ ಕೂಡಿ ಪಂಚಪಾದವೆಂದು ತಿಳಿಸಿದೆ. ಈ ತತ್ವವೂ ಕೂಡಾ ವಾಕ್, ಪುರುಷ ಕಾಲಾತ್ಮರಿಗೆ ಸಮಾನವಾಗಿದೆ.

"ಪಂಚಪಾದಂ ಪ್ರಿತರಂ ದ್ವಾದಶಾ ಕೃತಿಂ," (ಋ. ೧, ೧೬೪, ೧೨)

"ಪಂಚಾರೇಚಕ್ರೇ ಪರಿವರ್ತ ಮಾನೇ ತಸ್ಮಿನ್ನಾತಸ್ಥುರ್ಭುವನಾನಿ ವಿಶ್ವಾ"

(ಋ. ೧, ೧೬೪, ೧೩)

ಕಾಲಾತ್ಮನ ಋತುಚಕ್ರ ಸ್ವರೂಪವನ್ನೂ ಹೇಮಂತ ಶಿಶಿರ ಋತುಗಳನ್ನೊಂದಾಗಿಸಿ ಐದು ಹೇಳಿದ್ದಾರೆ. "ಹೇಮಂತ ಶಿಶಿರಯೋಃಸಮಾಸೇನ," ಎಂದು. ಹೀಗೆ ಐದಾಗಿರುವ ಬ್ರಹ್ಮಚಕ್ರ ಸ್ವರೂಪವನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿ– "ಪಂಚಸ್ರೋಮತಂ ಪಂಚಯೋ-ನ್ಯುಗ್ರವಕ್ರಾಂ ಪಂಚಪ್ರಾಣೋರ್ಮಿಂ ಪಂಚಬುಧ್ಯಾದಿಮೂಲಾಮ್ ಪಂಚಾವರ್ತಾಂ ಪಂಚದುಃಖೌಘವೇಗಾಂ ಪಂಚಾಶದ್‌ಭೇದಾಂ ಪಂಚಪರ್ವಾಮಧೀಮಃ" (ಶ್ವೇ.ಉ. ೧, ೪)

ಹಾಗೆಯೇ, "ಸರ್ವಾಜೀವೇ ಸರ್ವಸಂಸ್ಥೇ ಬೃಹಂತೇ ತಸ್ಮಿನ್ ಹಂಸೋ ಭ್ರಾಮ್ಯತೇ ಬ್ರಹ್ಮಚಕ್ರೇ," ಪಂಚಪರ್ವಾದಿಗಳುಳ್ಳ ಬ್ರಹ್ಮಚಕ್ರತ್ವವನ್ನು ಇಲ್ಲಿ ತಿಳಿಸಿದೆ.

ಇದೇ ಗಾಯತ್ರಿಯ ಪಂಚಶೀರ್ಷತತ್ವವೂ ಆಗುತ್ತದೆ. "ಗಾಯತ್ರೀ ತ್ರಿಪದಾ ಷಟ್‌ಕುಕ್ಷಿಃ ಪಂಚಶೀರ್ಷಾ" ಇತಿ (ನಾ.ಉ. ೧೫)

ಇದು ಪ್ರಾಣಾತ್ಮಕನಾದ ಪಂಚಬ್ರಹ್ಮರೂಪ ಪಂಚಮುಖವುಳ್ಳ ರುದ್ರನಿಗೂ ಸಮಾನವಾಗಿದೆ. ಆತನಿಗೂ ನಾಲ್ಕು ದಿಕ್ಕುಗಳಲ್ಲಿ ಹಾಗೂ ಊರ್ಧ್ವದಲ್ಲಿ ಐದು ಮುಖವನ್ನು ರುದ್ರಾಧ್ಯಾಯ ಯಜುರ್ವೇದದ ೧೧ನೆಯ ಅನುವಾದಲ್ಲಿ ತಿಳಿಸಿದ್ದಾರೆ.

"ನಮೋ ರುದ್ರೇಭ್ಯಃ ತೇಭ್ಯೋ ದಶ ಪ್ರಾಚೀರ್ದಶದಕ್ಷಿಣಾದಶಪ್ರತೀಚೀರ್ದಶೋ-ದೀಚೀರ್ದಶೋರ್ಧ್ವಾಸ್ತೇಭ್ಯೋನಮಃ"

ಛಾಂದೋಗ್ಯ ಉಪನಿಷತ್ತಿನಲ್ಲಿಯೂ ಕೂಡಾ–

"ತಸ್ಯ ವಾರಾತಸ್ಯ ಹೃದಯಸ್ಯ ಪಂಚದೇವಸುಷಯಃ ಸಯೋಽಸ್ಯ ಪ್ರಾಙ್‌ಸುಷಿಃ ಪ್ರಾಣಃ, ಯೋಽಸ್ಯ ದಕ್ಷಿಣಃ ಸುಷಿಃ ಸ ವ್ಯಾನಃ, ಯೋಽಸ್ಯಪ್ರತ್ಯಙ್‌ಸುಷಿಃ ಸೋಽಪಾನಃ, ಯೋಸ್ಯೋ-ದಙ್‌ಸುಷಿಃ ಸ ಸಮಾನಃ, ಯೋಽಸ್ಯೋರ್ಧ್ವಃ ಸುಷಿಃ ಸ ಉದಾನಃ," ಹೀಗೆ ಪಂಚಪ್ರಾಣಗಳ ಉಪವರ್ಣನವನ್ನು ದಿಗ್ದರ್ಶನ ಮಾಡಿಯೇ ಹೇಳಿದ್ದಾರೆ. ಈ ಪ್ರಾಣರುದ್ರ ರೂಪರಿಗೆ ಪಂಚಬ್ರಹ್ಮಸಂಜ್ಞೆಯೂ ಇದೆ.

"ತೇವಾ ಏತೇ ಪಂಚಬ್ರಹ್ಮಪುರುಷಾಃ ಸ್ವರ್ಗಸ್ಯಲೋಕಸ್ಯದ್ವಾರಪಾಃ" (ಛಾಂ.ಉ. ೩, ೧೬) ಇದು ಪಂಚಮುಖನಾದ ಪಶುಪತಿಗೂ ಸಮಾನವಾಗಿದೆ. ಅವನ ಐದು ಮುಖಗಳು "ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ" ಎಂದು ಪ್ರಸಿದ್ಧವಾಗಿವೆ. ಪಶ್ಚಿಮಮುಖ ಸದ್ಯೋಜಾತ, ಉತ್ತರ ವಾಮದೇವ, ದಕ್ಷಿಣೇ ಅಘೋರ, ಪೂರ್ವದಲ್ಲಿ ತತ್ಪುರುಷ, ಊರ್ಧ್ವಮುಖ ಈಶಾನ, ಇದಕ್ಕೆ ಮಂತ್ರಗಳೂ ಭಿನ್ನಭಿನ್ನವಾಗಿವೆ. "ಸದ್ಯೋಜಾತಂಪ್ರಪದ್ಯಾಮಿಂ, ವಾಮದೇವಾಯ ನಮೋಂ, ಅಘೋರೇಭ್ಯೋಽಥಘೋರೇಭ್ಯಃ, ತತ್ಪುರುಷಾಯವಿದ್ಮಹೇ, ಈಶಾನಃ ಸರ್ವವಿದ್ಯಾನಾಂ." (ನಾ.ಉ. ೧೭, ೧-೪)

ಈ ರೀತಿಯ ಪ್ರತ್ಯಕ್ಷರೂಪ, ನೇಪಾಳದ ಪಶುಪತೇಶ್ವರನಲ್ಲಿ ಕಾಣುತ್ತದೆ. ಪಶುಪತಿಯು ಹಿಮಾಲಯದ ಕೇದಾರನಾಥ ಜ್ಯೋತಿರ್ಲಿಂಗದ ಶಿರೋರೂಪವೆಂದೂ ಪ್ರಸಿದ್ಧಿಯಿದೆ. ಈ ರೀತಿಯ ಪ್ರತೀಕವು ಉದಯಪುರದಲ್ಲಿಯೂ ಕಾಶೀಕ್ಷೇತ್ರದ ಕೆಲವೆಡೆಯೂ ಕಂಡುಬರುತ್ತಿದೆ. ಪಶುಪತಿಯಲ್ಲಿ ನಾಲ್ಕುದಿಕ್ಕುಗಳಲ್ಲಿ ನಾಲ್ಕು ಮುಖಗಳಷ್ಟೇ ಇವೆ. ಮೇಲ್ಗಡೆ ಲಿಂಗರೂಪವಷ್ಟೇ ಇದೆ. ಆದ್ದರಿಂದ ಅದನ್ನೇ ಬಿಂದುವೆಂದು ಕಲ್ಪಿಸಬಹುದಾಗಿದೆ.

ಕೆಲವರು ಪಂಚಮುಖತತ್ವವನ್ನು ಪಂಚಶೀರ್ಷಳಾದ ಗಾಯತ್ರಿಗೆ ಶಕ್ತಿರೂಪವನ್ನು ಕೊಟ್ಟು ಪಂಚಸ್ತ್ರೀಮುಖಗಳನ್ನು ಮಾಡಿ ಅದನ್ನೂ ದಿಕ್ಕುಗಳಲ್ಲಿ ಮೂಡಿಸದೇ ಸ್ವಾಭಿಮುಖ-ವಾಗಿಯೇ ಐದೂ ಮುಖಗಳುಳ್ಳದ್ದಾಗಿ ನಿರ್ಮಿಸುತ್ತಾರೆ. ಅದು ಯಂತ್ರಶಾಸ್ತ್ರದೃಷ್ಟಿಯಿಂದ ಅಸಂಗತವೇ ಸರಿ. ಷಟ್ಕೋಣದಲ್ಲಿ ದಿಕ್ ಸಂಸ್ಥಾಕ್ರಮದಿಂದಲೇ ಷಟ್‌ಕುಕ್ಷಿಯನ್ನು ರೂಪಿಸಿದ್ದಾರೆ. "ತಿರ್ಯಗೂರ್ಧ್ವಾಧರದಿಕ್ ಷಟ್‌ಕುಕ್ಷಿಂ" ಎಂದು ಮೇಲೆ ಕೆಳಗೆ ೨ ಹಾಗೂ ದಿಙ್ಮೂರ್ತಿಗಳು ನಾಲ್ಕು ಹೀಗೆ ಆರು. ವಸ್ತುತಃ ಗಾಯತ್ರಿಗೂ ಕೂಡಾ ಪಶುಪತಿಯ ಮುಖದಂತೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮೇಲೆ ಒಂದು ಹೀಗೆ ವೈದಿಕ ಯಂತ್ರಶಾಸ್ತ್ರ ತತ್ವದ ಯೋಗಪೂರ್ಣತೆಗಾಗಿ ರಚಿಸುವದು ಯೋಗ್ಯವೆನ್ನಿಸುತ್ತದೆ.

ಈ ಚತುರ್ದಲ ಯಂತ್ರ ಕಲ್ಪದ ವಿಶಿಷ್ಟತೆ :

"ಏಕಪಾದ್ಭೂಯೋ ದ್ವಿಪದೋ ವಿ ಚಕ್ರಮೇ ದ್ವಿಪಾತ್ ತ್ರಿಪಾದಮಭ್ಯೇತಿ ಪಶ್ಚಾತ್ ।
ಚತುಷ್ಪಾದೇತಿ ದ್ವಿಪದಾಮಭಿಸ್ವರೇ ಸಂಪಶ್ಯನ್ ಪಂಕ್ತೀರುಪತಿಷ್ಠಮಾನಃ ॥"

ಇದು ಪುರುಷನ *(ಋ. ೧೦, ೧೧೭, ೮)*

"ಗೌರೀರ್ಮಿಮಾಯ ಸಲಿಲಾನಿ ತಕ್ಷತೀ ಏಕಪದೀ ದ್ವಿಪದೀ ಸಾ ಚತುಷ್ಪದೀ"

ಇದು ವಾಕ್ಕಿನ *(ಋ. ೧, ೧೬೪, ೪೧)*

"ಗಾಯತ್ರ್ಯಸ್ಯೇಕಪದೀ ದ್ವಿಪದೀತ್ರಿಪದೀಚತುಷ್ಪದೀ" (ಬೃ.) ಇದು ಗಾಯತ್ರಿಯ,

"ಅಪಾದಗ್ರೇ ಸಮಭವತ್ ಸೋ ಅಗ್ರೇಸ್ವಃಕಿರಾಭರತ್ ।
ಚತುಷ್ಪಾದ್ ಭೂತ್ವಾಭೋಗ್ಯಃ ಸರ್ವ ಮಾದತ್ತ ಭೋಜನಮ್ ॥"

ಇದು ಆತ್ಮನಃ *(ಅ.ಸಂ.)*

ಈ ವಚನಗಳಲ್ಲಿ ಒಂದರಿಂದ ನಾಲ್ಕರವರೆಗಿನ ಪಾದಗಳು ಪಂಕ್ತಿ ರೂಪವಾಗಿವೆ. ಅದು ತ್ರಿಕೋಣಾನಂತರದ ನಾಲ್ಕು ದಲಗಳಿಂದಲೇ ಸಿದ್ಧಿಸುತ್ತದೆ. ಬಿಂದುವೂ ಸೇರಿ ತ್ರಿಕೋಣದಿಂದ ನಾಲ್ಕು ಸಂಖ್ಯೆ ಸಿದ್ಧಿಸುತ್ತಿದೆಯಾದರೂ ಐದು ಸಂಖ್ಯೆಯನ್ನು ಗ್ರಹಣ ಮಾಡಲು ಈ ಯಂತ್ರದಲ್ಲಿ ಬೇರೇನೂ ಚಿಹ್ನವು ಕಾಣುವದಿಲ್ಲ. ಹಾಗಾಗಿ ಪಂಚಮುಖ ಪಂಚಪಾತ್, ಪಂಚಚಕ್ರಾದಿ ತತ್ತ್ವಗಳನ್ನು ತಿಳಿಸಲು ಚತುರ್ದಲವಿಲ್ಲದೇ ಶಕ್ಯವಿಲ್ಲವೆಂಬುದೇ ವಿಶೇಷ.

ಹೀಗೆಯೇ ಷಟ್‌ಕೋಣದ ನಂತರ ಸಪ್ತಚಕ್ರವೂ ಕೂಡಾ ಬಿಂದುವಿನಿಂದಲೇ ಸಂಪತ್ತಿಯಾಗುತ್ತದೆ. ಅಂತೆಯೇ ಅಷ್ಟದಲದ ನಂತರವೂ ಬಿಂದುವಿನಿಂದಲೇ ನವಪದ ವೆಂಬುದೂ ಸಿದ್ಧಿಸುತ್ತದೆ. ಅಂತೆಯೇ ಮುಂದೆಯೂ ಕೂಡ ಏಕಾದಶ ಮೊದಲಾದ ವಿಷಮ ಸಂಖ್ಯಾತ್ಮಕ ಸರ್ವಯಂತ್ರಗಳನ್ನೂ ಚಕ್ರಗಳನ್ನೂ ಬಿಂದುವಿನಿಂದಾಗಿಯೇ ಸರಿಸಂಖ್ಯೆಯನ್ನಾಗಿ ಕಲ್ಪಿಸುವದು ಯುಕ್ತವಾಗುತ್ತದೆ. ಆದ್ದರಿಂದ ಈ ಯಂತ್ರಶಾಸ್ತ್ರದಲ್ಲಿ ತ್ರಿಕೋಣವೊಂದೇ ವಿಷಮಾಂಕ ಚಕ್ರವಾಗುತ್ತದೆಂಬುದು ಸಿದ್ಧ.

"ತ್ರಿನಾಭಿ ಚಕ್ರಮಜರಮನರ್ವಮ್" *(ಋ. ೧, ೧೬೪, ೨)*

"ತ್ರೀಣಿ ಪದಾ ವಿ ಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ"

(ಋ. ೧, ೨೨, ೧೮) ಇವು ತ್ರಿಚಕ್ರಪರ,

"ಪಂಚಾರೇ ಚಕ್ರೇ ಪರಿವರ್ತಮಾನೇ" (೧೩)

"ಪಂಚಪಾದಂ ಪಿತರಂ" *(ಋ. ೧, ೧೬೪, ೧೨)*

"ಸಪ್ತಚಕ್ರೇ ಷಳರ ಆಹುರರ್ಪಿತಮ್" (ಋ. ೧, ೧೬೪, ೧೨)

"ಸಪ್ತ ದಿಶೋ ನಾನಾಸೂರ್ಯಾಃ" (ಋ. ೯, ೧೧೪, ೩)

ಕಾಲಚಕ್ರದಲ್ಲಿ ಆರು ಋತುಗಳು ಪ್ರಸಿದ್ಧವಾಗಿವೆ. ಅವೇ ಷಟ್‌ಚಕ್ರ ಷಟ್‌ಕೋಣಾದಿ ರೂಪಗಳು. "ಸಪ್ತಮೋಧ್ವರ್ಧ ಋತುಃ" ತೈತ್ತರೀಯ ವಚನದಿಂದ ಸಪ್ತಋತು ಕಲ್ಪನೆ. ಅದೂ ಸಹ ಇಲ್ಲಿ ಬಿಂದುವಿನಿಂದಲೇ ಊಹಿಸುವದು.

"ಅಷ್ಟಾಪದೀ ನವಪದೀ ಬಭೂವುಷೀ" (ಋ. ೧, ೧೬೪, ೪೧)

"ವಾಚಮಷ್ಟಾಪದೀಮಹಂ ನವಸ್ರಕ್ತಿಮೃತಸ್ಪೃಶಮ್" (ಋ. ೮, ೭೬, ೧೨)

ಈ ಗಾಯತ್ರೀ ಮಂತ್ರದೊಡನೆ ಋಗ್ವೇದದಲ್ಲಿ ಇನ್ನೂ ಎರಡು ಮಂತ್ರಗಳನ್ನು ಹೇಳಿದ್ದಾರೆ. ವಿಶಿಷ್ಟವಾದ ಅರ್ಥಸೂಚಕವಾಗಿ ಅವು ಹೀಗಿವೆ,

"ದೇವಂ ನರಃ ಸವಿತಾರಂ ನಮಸ್ಯಂತಿ ಧಿಯೋಷಿತಾಃ" (ಋ. ೩, ೬೨, ೧೨)

ಇದು ಅದರ ಉಪಾಸನಾಬೋಧಕವಾಗಿದೆಯೆಂಬುದೇ ವಿಶೇಷ.

ಷಷ್ಠೀ ಕಲಾ

(ಹಿಂದಿನ ಕಲ್ಪದಲ್ಲಿ ಸ್ತ್ರೀಯರಿಗೆ ಗಾಯತ್ರೀಮಂತ್ರೋಪದೇಶ)

ಈ ಲೋಕದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನಾರ್ಧಾಂಗಿಗಳಾಗಿ ದಂಪತಿಗಳೆಂದು ಹೇಳಿಸಿಕೊಳ್ಳುತ್ತಾರೆ. ದೇವತೆಗಳಲ್ಲೂ ಶಕ್ತಿ-ಶಿವ, ವಾಣೀ- ಬ್ರಹ್ಮಾ, ವಾಕ್-ಪುರುಷ, ವಾಕ್-ಆತ್ಮ, ವಾಕ್-ಬ್ರಹ್ಮ, ಶಚೀ-ಇಂದ್ರ, ಗೌರೀ-ಹರ, ಲಕ್ಷ್ಮೀ-ನಾರಾಯಣ ದಂಪತೀ ಸತ್ವಪೂರ್ಣರಾಗಿ ಕ್ಷೇತ್ರಬೀಜಪ್ರಧಾನವಾದವು ಪ್ರಸಿದ್ಧವಾಗಿವೆ. ಅದರೊಳಗೆ ಸ್ತ್ರೀ, ವಾಮಾರ್ಧರೂಪಾ, ವಾಮನಯನಾ, ಸೋಮಸತ್ವವುಳ್ಳ ರಸಪ್ರಧಾನಳಾಗಿ ಕ್ಷೇತ್ರಾತ್ಮಿಕಳಾದ ರಸಭೂಮಿಯಾಗಿ ಪ್ರಜೆಗಳನ್ನು ಪ್ರಸವಿಸುವ ಧರ್ಮವುಳ್ಳವಳೂ ಗರ್ಭಧಾರಣ ಸಮರ್ಥಳೂ ಎನ್ನುವದು ಪ್ರಸಿದ್ಧವಷ್ಟೆ ?

ಪುರುಷನು ದಕ್ಷಿಣಾಂಗ ಪ್ರಧಾನನೂ ತೇಜಃಸತ್ವವುಳ್ಳ ಸೂರ್ಯಾತ್ಮಕನೂ ದಕ್ಷನಯನ ಬೀಜಾತ್ಮಕನಾದವನೆಂದು ಪ್ರಸಿದ್ಧ. "ಇಂಧೋಹ ವೈ ನಾಮೈಷ ಯೋಽಯಂ ದಕ್ಷಿಣೇಽಕ್ಷನ್ ಪುರುಷಃ, ಅಥೈತದ್ ವಾಮೇಽಕ್ಷಿಣಿ ಪುರುಷರೂಪಮೇಷಾಽಸ್ಯ ಪತ್ನೀವಿರಾಟ್" (ಬೃ.ಉ. ೪, ೨, ೨) ಎಂಬ ಉಪನಿಷದ್ವಚನವು ಇಲ್ಲಿ ಪ್ರಮಾಣವಾಗಿದೆ. ಹೀಗೆ ವಾಮಾ-ಸ್ತ್ರೀ. ಪುರುಷ-ದಕ್ಷಃ ಎಡಗಡೆ ಸೋಮ ಬಲಗಡೆ ಸೂರ್ಯ ಎಂಬುದು ಸಿದ್ಧ. ಹೀಗಾಗಿ ಸಮಾನ ಸತ್ವರಾದ ಸ್ತ್ರೀಪುರುಷರಿಗೆ ದ್ವಿಜತ್ವಸಿದ್ಧಿಗಾಗಿ ಗರ್ಭಾಧಾನಾದಿ ವೈದಿಕ ಸಂಸ್ಕಾರಪೂರ್ವಕ ಸಜಾತ್ಯ-ವನ್ನುಂಟುಮಾಡಿ ವೈದಿಕ ಧರ್ಮಯಜ್ಞಾದಿ ಬ್ರಹ್ಮಕರ್ಮಗಳಲ್ಲಿ ಅಧಿಕಾರ ಪ್ರಾಪ್ತಿಗಾಗಿ

ಉಪನಯನ, ಬ್ರಾಹ್ಮೀವಿವಾಹಾದಿ ವ್ರತಾದಿ ನಿಯಮದಿಂದ ಧರ್ಮಪ್ರಜಾಸಿದ್ಧಿಗಾಗಿ ಎಲ್ಲ ವೈದಿಕ ಸಂಸ್ಕಾರಗಳೂ ನಡೆಯುತ್ತವೆ ಹಾಗೂ ಅದರಿಂದಾಗಿ ಪ್ರಾಪಂಚಿಕ, ಪಾರಮಾರ್ಥಿಕ ಸಕಲ ಸುಖ ಸಂಪತ್ತುಗಳನ್ನು ದಿವ್ಯ ಫಲವನ್ನೂ ಸರ್ವರೂ ಪಡೆಯುವರೆಂಬುದು ಸರ್ವಸಮ್ಮತವಾದ ಲೌಕಿಕ ವೈದಿಕ ತತ್ವವಾಗಿದೆ. "ಬ್ರಹ್ಮವಾದಿನೀ," ಬ್ರಹ್ಮವಾದಿನಿಯ ಲಕ್ಷಣವನ್ನು ಪರಾಶರ ಸ್ಮೃತಿಯ ಮಾಧವ ಸಂಹಿತೆಯಲ್ಲಿ "ಯಾ ಉಪನಯನಂಕೃತ್ವಾ ವೇದಮಧೀತ್ಯ ಪಶ್ಚಾದ್ವಿವಾಹಂ ಕರೋತಿ ಸಾ ಬ್ರಹ್ಮವಾದಿನೀ," ಯಾವಳು ಉಪನಯನಾನಂತರ ವೇದವನ್ನು ಓದಿ ವಿವಾಹವಾಗುತ್ತಾಳೋ ಅವಳು ಬ್ರಹ್ಮವಾದಿನೀ, "ಸದ್ಯೋವಧೂಃ=ಯಾಪ್ರಥಮತಃ ಉಪನಯನಂ ಕೃತ್ವಾ ಸದ್ಯ ಏವ ವಿವಾಹಂ ವಿಧಾಯ ತತಃ ವೇದಮಧೀತೇ ಸಾಸದ್ಯೋವಧೂಃ," ಯಾವಳು ಮೊದಲು ಉಪನಯನ ಮಾಡಿಕೊಂಡು ವಿವಾಹ ಮಾಡಿಕೊಂಡು ವೇದಾಧ್ಯಯನ ಮಾಡುತ್ತಾಳೋ ಅವಳು ಸದ್ಯೋವಧೂಃ.

ಈ ವಿಷಯದಲ್ಲಿ ಆಕ್ಷೇಪ– ಈ ವಿಷಯದಲ್ಲಿ ಕೆಲವರು ಹೀಗೆ ಹೇಳುತ್ತಾರೆ. ಈಗ ಪ್ರಪಂಚದ ವ್ಯವಹಾರದ ಅದರಂತೆ ಶಾಸ್ತ್ರಾದಿ ವಿಧಿವಚನ ಕಲ್ಪನೆಯಿಂದಾಗಿ ಸ್ತ್ರೀಯರಿಗೆ ಉಪನಯನ-ವೇದಾಧ್ಯಯನ ವೈದಿಕ ಸಂಸ್ಕಾರ ದೇವಯಜನಾದಿಗಳಿಗೆ ಅಧಿಕಾರವಿಲ್ಲ. "ಸ್ತ್ರೀ ಶೂದ್ರದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ," ಹೀಗೆ ಸ್ತ್ರೀಯರಿಗೆ ವೇದಶ್ರವಣಕ್ಕೂ ಅಧಿಕಾರವಿಲ್ಲವೆಂದಿದ್ದಾರೆ. ಅವರಿಗೆ ಪತಿಸೇವೆಯೇ ಮುಖ್ಯ, "ಸ್ತ್ರೀಭಿರ್ಭರ್ತೃವಚಃ ಕಾರ್ಯ. ಏಷ ಧರ್ಮಃ ಸನಾತನಃ," ಇರಲಿ, ಪತಿಸೇವೆಯನ್ನು ವಿಧಿಸಿದ ಮಾತ್ರದಿಂದ ವೈದಿಕ ಸಂಸ್ಕಾರಾದಿಗಳ ಅಧಿಕಾರವಿಲ್ಲೆಂಬುದು ವಿಚಾರಾಸ್ಪದವೇ ಸರಿ.

ಮೊದಲು ಸ್ತ್ರೀಪುರುಷರಿಬ್ಬರಿಗೂ ಉಪನಯನ ಸಂಸ್ಕಾರದಿಂದಾಗಿ ದ್ವಿಜತ್ವಸಿದ್ಧಿಯಾದ ಮೇಲೆಯೇ ವಿವಾಹ. ಇಬ್ಬರೂ ಕೂಡಿದಾಗ ದಂಪತಿತ್ವ ಸಿದ್ಧಿ. ಆಮೇಲೆ ಅವಳಿಗೆ ಪತಿಸೇವೆಯೇ ಗತಿ ಎನ್ನುವದು ಯುಕ್ತವಾಗಿದೆ. ಸ್ತ್ರೀಯರಿಗೂ ಉಪನಯನ ಸಂಸ್ಕಾರವಿದೆ. ಅವರಿಗೂ ದ್ವಿಜತ್ವಸಿದ್ಧಿ ಆವಶ್ಯಕವೆಂದಾಯಿತು.

"ಪುರಾಕಲ್ಪೇ ತು ನಾರೀಣಾಂ ಮೌಂಜೀಬಂಧನಮಿಷ್ಯತೇ ।
ಅಧ್ಯಾಪನಂ ಚ ವೇದಾನಾಂ ಗಾಯತ್ರೀವಚನಂ ತಥಾ ॥"

ಹೀಗೆ ವಿಧಿ. ಇಲ್ಲಿ "ವಚನಾತ್ ಪ್ರವೃತ್ತಿಃ ವಚನಾನ್ನಿವೃತ್ತಿಃ" ಎಂಬ ನ್ಯಾಯದಂತೆ ಸ್ತ್ರೀಯರಿಗೂ ಪುರುಷರಂತೆ ಉಪನಯನ, ಗಾಯತ್ರೀಮಂತ್ರೋಪದೇಶ, ವೇದಾಧ್ಯಯನವೂ ವಿಹಿತವಾಗಿದೆಯೆಂದಾಯಿತು.

ಅಲ್ಲಿಯೂ "ಇಷ್ಯತೇ" ಎಂಬ ವರ್ತಮಾನ ಕಾಲಿಕ ಕ್ರಿಯೆಯ ಸಾಮರ್ಥ್ಯದಿಂದಾಗಿ ಇದು ಸಾರ್ವಕಾಲಿಕವೆಂದು ಕಾಣುತ್ತದೆ. ವೈದಿಕ ಸಂಸ್ಕಾರದಿಂದ ಗುಣೋದಯವು ಪ್ರತ್ಯಕ್ಷ ಸಿದ್ಧವಾಗಿದೆ. ಶಾಸ್ತ್ರದಲ್ಲಿ ಉಪದೇಶಿಸಿದೆ. ಹೀಗಿರುವಾಗ ಸಂಸ್ಕಾರಾದಿಗಳನ್ನು ಅವರಿಗೆ ಮಾಡದಿರುವದರಿಂದ ಅವರಿಗೆ ಗುಣಾಧಾನವಾಗುತ್ತದೆಂಬುದು ಹೇಗೆ ಸರಿ ?

ಹೀಗೆ ಶಾಸ್ತ್ರವಿಧಾನವಿದ್ದರೂ ಪಂಡಿತರು, ತಿಳಿದವರು, ಅವರಿಗೆ ಉಪನಯನಾದಿ ವೈದಿಕ ಸಂಸ್ಕಾರವನ್ನು ಮಾಡಲು ಹಾಗೂ ಮಾಡಿಸಲು ಅನುಮೋದಿಸುವದಿಲ್ಲವೆಂಬುದು ಶೋಚನೀಯವಾಗಿದೆ. ಈ ಧರ್ಮವು ಸನಾತನವೂ, ಶ್ರೌತವೂ, ಆರ್ಷೇಯವೂ, ಶಾಸ್ತ್ರೀಯವೂ ಆಗಿದೆ. "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ," (ಭ.ಗೀ.) ಹೀಗೆ ಶಾಸ್ತ್ರಪ್ರಮಾಣದಿಂದಲೂ ಅದು ಸರಿಯಾಗಿದೆ. ಇದು ಈಗಲೇ ಹೊಸದಾಗಿ ಕಲ್ಪಿಸಿದ್ದಲ್ಲ. ಸ್ತ್ರೀಯರಿಗೂ ಶಾಸ್ತ್ರ ದೃಷ್ಟಿಯಿಂದ ಯುಕ್ತವಾದದ್ದು. ಉಪನಯನಾದಿಗಳಿಂದ ಸದ್ವಿದ್ಯಾಯೋಗ್ಯತೆಯನ್ನು ಹೊಂದಿ ಸದ್ಧರ್ಮಾಚರಣೆ ದೇವಯಜ್ಞಾದಿಗಳಲ್ಲಿ ಅಧಿಕಾರ, ಬ್ರಾಹ್ಮೀಶರೀರಾದಿ ಸಂಪತ್ತಿ, ಸುವೀರ್ಯವತ್ತರ ಧರ್ಮ ಪ್ರಜಾಸಿದ್ಧಿಗಾಗಿ ನಿರ್ವಿವಾದವಾಗಿ ಇದು ಅನಿವಾರ್ಯವೆಂದು ತಿಳಿಯಬೇಕು. ಅಥವಾ ಮೌನದಿಂದ ಅದನ್ನು ಅನುಮೋದಿಸ-ಬೇಕು. ಕೊನೆಗೂ ಸುಮ್ಮನಿರಬೇಕಾಗಿದೆ.

ವಸ್ತುತಃ ಈ ವಿಷಯದಲ್ಲಿ ಒಂದು ಸಮಾಧಾನವಿದೆ. ಪುರಾಕಲ್ಪವೆಂದರೆ ಪ್ರಾಚೀನವಾದ "ಶ್ರೌತಕಲ್ಪ ಶಿಕ್ಷಾಕಲ್ಪೋವ್ಯಾಕರಣಂ". ಇಲ್ಲಿ ಕಲ್ಪವೆಂದರೆ ವೇದಾಂಗರೂಪವಾದದ್ದು.

ಶ್ರೌತಕಲ್ಪದಲ್ಲಿ ಸ್ತ್ರೀಯರಿಗೆ ಉಪನಯನಾದಿ ವಿಹಿತವಾದದ್ದು ಸರಿ. ಶ್ರೌತದಲ್ಲಿ ಯಜ್ಞಾದಿ ಕಲ್ಪದಲ್ಲಿ ದಂಪತಿಗಳಿಗೆ ಸಮಾನಾಧಿಕಾರವಿರುವದರಿಂದ ಇಂದೂ ಹೀಗೆಯೇ ಅನುಷ್ಠಾನವಿರುವದರಿಂದ ಎಲ್ಲ ವಿದ್ವಾಂಸರ ಸಮ್ಮತಿ ಇದೆ. ಸ್ತ್ರೀಯರಿಗೂ ವೈದಿಕ ಧರ್ಮಕರ್ಮಗಳಲ್ಲಿ ಅಧಿಕಾರವಿದೆಯೆಂಬುದು ಶಾಸ್ತ್ರನಿರ್ಣೀತ ವಿಷಯವಾಗಿದೆ.

ಈ ಪುರಾಕಲ್ಪವೆಂಬುದು ಕಲ್ಪಾಂತರಗಳಲ್ಲಿ ಬೇರೆ ಬೇರೆ ಹಿಂದಿನ ಯುಗಗಳಲ್ಲಿ ಸತ್ಯಯುಗಾದಿ ಬೋಧಕವೆನ್ನುವವರಿಗೂ ಇದು ಸಮಾನವಾಗಿದೆ. ಆಗ ಅವರಿಗೆ ಉಪನಯನಾದಿಗಳು ಇತ್ತು ಎನ್ನುವದಾದರೆ ಆಮೇಲೆ ಯಾವ ಮುನಿ ಯಾವ ಆಧಾರದಿಂದ ಯಾವ ಶಾಸ್ತ್ರ ಪ್ರಮಾಣದಿಂದ ಇದನ್ನು ನಿಷೇಧಿಸಿದ ಎನ್ನುವದೂ ವಿಚಾರಾಸ್ಪದವೇ ಆಗಿದೆ. ಮುಂದೆ ಅವರಿಗೆ ಸಾಮರ್ಥ್ಯ ಕಡಿಮೆಯಾದ್ದರಿಂದ ಸ್ಮಾರ್ತಕಲ್ಪದಲ್ಲಿ ನಿಷೇಧಿಸಿದೆ ಎಂಬುದೂ ಅಪ್ರಾಮಾಣಿಕವೇ ಸರಿ. ಸ್ಮೃತ್ಯಾದಿ ಗ್ರಂಥಗಳಲ್ಲಿಯೂ ಈ ಬಗ್ಗೆ ಪ್ರಮಾಣಗಳು ಸಿಗುವದಿಲ್ಲ. ಉಪನಯನಾದಿ ವಿಷಯಗಳುಳ್ಳ ಗೃಹ್ಯಸೂತ್ರಾದಿಗಳಲ್ಲಾಗಲೀ, ಬ್ರಹ್ಮಕರ್ಮಾನುಷ್ಠಾನ ವಿಷಯಕ ಶಾಸ್ತ್ರೀಯ ಗ್ರಂಥಗಳಲ್ಲಿಯಾಗಲೀ ಈ ವಿಷಯದ ನಿಷೇಧ ವಚನವನ್ನು ಹುಡುಕಬೇಕು. ಕಲಿನಿಷಿದ್ಧ ಕರ್ಮಗಳಲ್ಲಿ ಸ್ತ್ರೀಯರಿಗೆ ಉಪನಯನವನ್ನಷ್ಟೇ ನಿಷೇಧಿಸಿದ್ದಾರೆಂಬುದೂ ಇಲ್ಲ. ಇಲ್ಲಿಯವರೆಗೂ ಎಲ್ಲಿಯೂ ಕಂಡುಬಂದಿಲ್ಲ. ಇನ್ನು ಕೆಲವರು ಸ್ತ್ರೀಯರಿಗೆ ರಜಸ್ವಲೆಯರಾದಾಗ ಮತ್ತು ಗರ್ಭಧಾರಣಾದಿ ವಿಶಿಷ್ಟಕಾಲದಲ್ಲಿ, ಪ್ರಸವಕಾಲದಲ್ಲಿ, ಎಲ್ಲ ಅಶುಚಿತ್ವವಿರುತ್ತವಾದ್ದರಿಂದ ಆಪತ್ಕಾಲದಲ್ಲಿ ವೈದಿಕ ಕರ್ಮಾನುಷ್ಠಾನ ಮಾಡುವದು ಅಶಕ್ಯ ಹಾಗೂ ಅಯೋಗ್ಯವಾದ್ದರಿಂದ ಹಾಗೂ ಅದು ಉಚಿತವೂ ಅಲ್ಲದ್ದರಿಂದ ನಿಷೇಧಿಸಿರಬೇಕು ಎನ್ನುತ್ತಾರೆ. ಇದೂ ಸಹ ಪ್ರಮಾಣಸಿದ್ಧವೂ

ಯುಕ್ತಿಸಹವೂ ಅಲ್ಲ. ಇದು ಆ ಕಾಲಕ್ಕೂ ಸಮಾನವಾಗಿತ್ತೆಂಬುದನ್ನು ತಿಳಿದವರೂ ತಿಳಿಯದವರೂ ಒಪ್ಪಲೇಬೇಕಾಗಿದೆ. ಆದ್ದರಿಂದ ಈಗಿನವರು ಹೊಸದಾಗಿ ಇದೊಂದು ಕಲ್ಪನೆ ತಂದು ಪ್ರಚಾರದಲ್ಲಿ ತಂದರು. ಲೌಕಿಕರೂ ವ್ಯವಹಾರದಲ್ಲಿ ತಂದರು ಎಂಬುದೂ ಸರಿಯಲ್ಲ. ಹಿಂದಿನಿಂದಲೂ ವೈದಿಕ ಸಂಸ್ಕಾರಾದಿಗಳಲ್ಲಿ ಈ ಲೋಕದಲ್ಲಿ ಆರ್ಷೇಯ ಜನತೆಯಲ್ಲಿಯೂ ನಿತ್ಯವೂ ಅಪ್ರತಿಹತವಾಗಿ ಪ್ರಚಲಿತದಲ್ಲಿತ್ತು. ಈಗ ಯಾರು ಹ್ಯಾಗೆ ಈ ಹೊಸವಿಷಯ ತಂದರೆಂಬುದು ತಿಳಿಯದಾಗಿದೆ.

ಹೀಗೆಯೇ ಗರ್ಭಾಧಾನಾದಿ ಅಂತ್ಯೇಷ್ಟಿ ಪರ್ಯಂತವಾದ ಷೋಡಶಸಂಸ್ಕಾರಗಳಲ್ಲಿ ಸರ್ವಪ್ರಧಾನವಾದದ್ದು ಉಪನಯನ ಒಂದೇ ಹ್ಯಾಗೆ ಅಕಸ್ಮಾತ್ ನಿಷೇಧ ಹೊಂದುತ್ತದೆ. ಅದರಿಂದ ಬಾಧಕವೇನು ? ಅದು ಮಾಡಿದ ಅಪರಾಧವೇನು ? ಮೊದಲಿನಿಂದ ವೈದಿಕ ಸಂಸ್ಕಾರ ವಿರಹಿತರಾದ ಸ್ತ್ರೀಯರು ಮುಂದೆ ಗೃಹಿಣೀಧರ್ಮಕ್ಕೆ ಸೇರಿದ ಕೂಡಲೇ ನಿತ್ಯಹೋಮಾದಿ ಧರ್ಮಕಾರ್ಯಗಳಿಗೆ ಯಜ್ಞಾದಿಗಳಿಗೂ ಹ್ಯಾಗೆ ಅಧಿಕಾರಿಗಳಾದರು ಎಂಬುದೂ ಚಿಂತ್ಯವೇ ?

ಅಲ್ಲವೇ ಎಲ್ಲ ಪುರುಷರಿಗೂ ಸ್ವಾಭೀಷ್ಟಾರ್ಥವನ್ನು ಪಡೆಯಲು ಪ್ರಾಪಂಚಿಕವಾದ ಎಲ್ಲ ಕಾರ್ಯಗಳಿಗೂ ಅರ್ಧಾಂಗಿಯಾಗಿ ಪ್ರೀತಿಪಾತ್ರಳಾಗಿ ಗೃಹಕೃತ್ಯನಿರ್ವಹಣೆಗಾಗಿ ಯಜ್ಞಾದಿ ವೈದಿಕ ಕರ್ಮನಿರ್ವಹಣೆಗೆ ಸಹಕಾರಿಣಿ ಸಹಧರ್ಮಚಾರಿಣಿಯಾಗಿ ಗೃಹಿಣಿ ಬೇಕೇಬೇಕು. ಅದರಂತೆ ಸತ್ಸಂತಾನವನ್ನು ಪಡೆಯುವದಕ್ಕಾಗಿ ವಿಶಿಷ್ಟತರ ಅನೇಕ ರಸಮಯ ವಿವಿಧ ಸುಖಭೋಗಾದಿಗಳಿಗೂ ಸರ್ವಾತ್ಮನಾ ಸ್ತ್ರೀಗೆ ಸಮಾಶ್ರಯಣವು ಪ್ರತ್ಯಕ್ಷ ಸಿದ್ಧವೆಂಬುದನ್ನು ಬೇರೆ ಹೇಳಬೇಕಿಲ್ಲ.

ಮೂಲತಃ ಅಸಂಸ್ಕೃತಳಾದ ಈ ನಾರೀಮಣಿಯು ಜಾಯಾಪದವನ್ನು ಹೊಂದಲು ಹಾಗೂ ಪುರುಷನ ಸರ್ವಾಭೀಷ್ಟವನ್ನು ನಡೆಸಲು ಎಲ್ಲ ಧ್ಯೇಯವನ್ನು ಸಾಧಿಸಲು ಸಮರ್ಥಳಾಗುವದು ಹೇಗೆ ? "ಗೃಹಿಣೀಗೃಹಮುಚ್ಯತೇ" ಎಂಬುದು ಪ್ರಸಿದ್ಧವೇ ಇದೆ. "ಯಾಂತ್ಯೇವಂ ಗೃಹಿಣೀಪದಂ ಯುವತಯೋ ಧನ್ಯೋಗೃಹಸ್ಥಾಶ್ರಮಃ," ಕವೀಂದ್ರನು ಹೇಳಿದ ಈ ಮಾತು ಸತ್ಯವೂ ತತ್ವಾರ್ಥಕವೂ ಆಗಿದೆ. ಆದ್ದರಿಂದ ಇದು ಲೌಕಿಕವಾದರೂ ಶಾಸ್ತ್ರೀಯವೇ ಎಂಬುದು ನಿರ್ವಿವಾದವಾದದ್ದೂ ಸರ್ವವಿದ್ವನ್ಮತವೆಂಬುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅವಳಿಂದ ಸತ್ಸಂತಾನವನ್ನು ಪಡೆಯಲಿಚ್ಛಿಸುವ ಪುರುಷನು ಸಂಸ್ಕಾರರಹಿತಳಾದವಳಿಂದ ಸತ್ಸಂತಾನವನ್ನು ಪಡೆಯುವ ಬಗೆ ಹೇಗೆ ? ಎಂಬುದೂ ವಿಚಾರಾಸ್ಪದವೇ. ಅದು ಬರೇ ಮನೋರಥವಾದೀತು. ಅಂತೆಯೇ ಸ್ತ್ರೀಯಳ ಆಯುರಾರೋಗ್ಯಬಲ ವೀರ್ಯಾದಿ ವಿಷಯದಲ್ಲಿ ಒಳ್ಳೇ ಸಂಸ್ಕಾರವನ್ನು ಇಚ್ಛಿಸುವ ಪುರುಷನು ಆಂತರಂಗಿಕವಾದ ದಿವ್ಯ ವೈದಿಕ ಸಂಸ್ಕಾರದಿಂದ ಸುವೀರ್ಯತ್ವಾದಿ ಬ್ರಾಹ್ಮೀಶರೀರ ಸಂಪತ್ತಿಯನ್ನು ಇಚ್ಛಿಸುತ್ತಿಲ್ಲ. ಅದನ್ನುಂಟು ಮಾಡುವದಕ್ಕಾಗಲಿ ಮಾಡಿಸುವದಕ್ಕಾಗಲೀ ಪ್ರವೃತ್ತನಾಗುವದಿಲ್ಲವೆಂಬುದೇ ವಿಚಿತ್ರವಾಗಿದೆ.

ವೇದದಲ್ಲಿ ಜಾಯಾಪದದ ಗೌರವ :

ವೇದೋಪನಿಷದಾದಿಗಳಲ್ಲಿ ಜಾಯಾಪದದ ಗೌರವ ಶ್ರೇಷ್ಠತೆ ಹಾಗೂ ವಸ್ತುಸಿದ್ಧವಾದ ಮಹತ್ವ. ಶಾಸ್ತ್ರೀಯವಾದ ವಿಶಿಷ್ಟ ತತ್ವವನ್ನು ಗಂಭೀರಾರ್ಥದಿಂದಾಗಿ ಸಾವಿರಾರು ಕಡೆ ವರ್ಣಿಸಿದ್ದಾರೆ. ಈ ಬಗ್ಗೆ ಪರಾಶರ ಋಷಿಯ ಮಂತ್ರದರ್ಶನದಲ್ಲಿ–

"ಜಾಯೇವ ಯೋ ನಾವರಂ ವಿಶ್ವಸ್ಮೈ" (ಋ. ೧, ೬೬, ೫)

ಅದರ ಅರ್ಥ – ಹ್ಯಾಗೆ "ಜಾಯಾ ?" ಸ್ತ್ರೀಯು ಈ ಪ್ರಪಂಚದಲ್ಲಿ "ಯೋನೌ", ಯೋನಿಸಂಬಂಧವಾದ ಸಂತಾನಾದಿ ವಿಷಯದಲ್ಲಿ, ವಿಶಿಷ್ಟವಾದ ಪ್ರೇಮರಸಭೋಗ ಆನಂದಾದಿ ವಿಷಯದಲ್ಲಿಯೂ ಬಾಹ್ಯವಾದ ಗೃಹಾದಿ ವಿಷಯದಲ್ಲಿಯೂ "ವಿಶ್ವಸ್ಮೈ" ಎಲ್ಲ ಪ್ರಯೋಜನಗಳಿಗೂ ಸರ್ವಾಭೀಷ್ಟಾರ್ಥಸಿದ್ಧಿ ಫಲೋದಯಕ್ಕಾಗಿಯೂ "ಅರಂ", ಸಮರ್ಥಳಾಗುತ್ತಾಳೋ ಅಂತೆಯೇ ಗೃಹಪತಿರೂಪವಾಗಿ ಪ್ರತಿಷ್ಠಿಸಿದ ಈ ಅಗ್ನಿಯೂ ಎಲ್ಲ ಫಲವನ್ನು ಕೊಡಲು ಸಮರ್ಥನಾಗಿದ್ದಾನೆ.

ಇದನ್ನೇ ಉಪನಿಷತ್ತುಗಳಲ್ಲಿ–

"ಪ್ರಜಾಪತಿರಮೃತಮಾನಂದ ಇತ್ಯುಪಸ್ಥೇ" (ತೈ.ಬೃ.ಉ. ೧೦, ೩)
"ಸರ್ವೇಷಾಮಾನಂದಾನಾಮುಪಸ್ಥ ಏಕಾಯನಮ್" (ಬೃ.ಉ. ೪, ೫, ೧೨)

ಈ ಉಪನಿಷದ್ವಚನಗಳು ಪ್ರಸಿದ್ಧವಾಗಿವೆ. "ಉಪಸ್ಥಶ್ಚ ಆನಂದಯಿತವ್ಯಂ ಚ" (ಪ್ರ.ಉ. ೪-೮)

ಹೀಗೆ ಸ್ತ್ರೀದ್ವಾರಾ ಪುರುಷನು ಪುತ್ರ ಪೌತ್ರಾದಿರೂಪದಿಂದ ಆವಿರ್ಭವಿಸುವನು. ಆ ಸಂತತಿ ಮುಖದಿಂದ ಆಸಂತತಿಯೇ ಅವಿಚ್ಛೇದವೇ ಅಮೃತತ್ವವು ಮನುಷ್ಯನಿಗೆ– "ಪ್ರಜಾಭಿರಗ್ನೇ ಅಮೃತತ್ವಮಶ್ಯಾಂ" (ಋ. ವಸುಶ್ರುತಃ). ಹೀಗೆ ವಿಶ್ವಚಕ್ರದ್ದೂ ಕೂಡಾ ಸಂತತಗತಿತ್ವ-ವಿದೆಯೆಂಬುದು ವೈದಿಕ ತತ್ವವಾಗಿದೆ. ಇದು ಲೌಕಿಕವಾಗಿಯೂ ವಿಶ್ವವ್ಯವಹಾರಪ್ರಸಿದ್ಧವೂ ಪ್ರತ್ಯಕ್ಷಸಿದ್ಧವೂ ಆಗಿದೆಯೆಂಬುದು ನಿರ್ವಿವಾದವಾದ ವಿಷಯ.

"ಪುರುಷೇಹವಾ ಅಯಮಾದಿತೋಗರ್ಭೋಭವತಿ ಯದೇತದ್‌ರೇತಃ, ತದ್‌ಯದಾಸ್ತ್ರಿಯಾಂ ಸಿಂಚತಿ ಅಥೈನಂಜನಯತಿ, ಸಾಽಸ್ಯೈತಮಾತ್ಮಾನಮತ್ರಗತಂ ಭಾವಯತಿ । ಸಾ ಭಾವಯಿತ್ರೀ-ಭವಯಿತವ್ಯಾ ಭವತಿ, ತಂಸ್ತ್ರೀಗರ್ಭಂಬಿಭರ್ತಿ, ಸ ಯತ್ಕುಮಾರಂ ಜನ್ಮನೋಽಗ್ರೇಧಿಭಾವಯತಿ ಆತ್ಮಾನಮೇವತದ್ಭಾವಯತಿ, ಏಷಾಂ ಲೋಕಾನಾಂ ಸಂತತ್ಯೈ, ಏವಂ ಸಂತತಾಹೀಮೇಲೋಕಾಃ," ಅರ್ಥ ಸ್ಪಷ್ಟವಿದೆ. (ಐ.ಉ. ೨, ೪, ೧-೩)

ಮೊದಲು ರೇತೋರೂಪದಿಂದ ಪುರುಷನಲ್ಲಿದ್ದ ಗರ್ಭವು ರೇತೋರೂಪದಿಂದ ಸ್ತ್ರೀ ಯೋನಿಯಲ್ಲಿ ಸೇಚನವಾಗಿ ಅದನ್ನು ಹುಟ್ಟಿಸುತ್ತದೆ. ಅವಳು ತನ್ನಲ್ಲಿ ಆತ್ಮ ಬಂದಿದೆಯೆಂದು

ತಿಳಿಯುತ್ತಾಳೆ. ಅವಳು ಗರ್ಭವನ್ನು ಧರಿಸಿ ಮಗುವನ್ನು ಹಡೆದು ತನ್ನನ್ನೇ ಅದರಲ್ಲಿ ಭಾವಿಸುತ್ತಾಳೆ. ಈ ಲೋಕದ ಸಂತತಿಗಾಗಿ, ಹೀಗೆ ಈ ಲೋಕ ಸಂತತವಾಗಿದೆ.

ಪುತ್ರಪ್ರಸವಾನಂತರ ಆ ಪುತ್ರನ ತಾಯಿಯನ್ನು ತನ್ನ ಸಂತಾನಾಭಿವೃದ್ಧಿಗಾಗಿ ತನ್ನ ಅಭೀಷ್ಟವನ್ನು ಸಿದ್ಧಿಸಿದ್ದಾಳೆಂಬ ಆನಂದದಿಂದ ಪಿತೃಸ್ಥಾನೀಯನಾದ ಪುರುಷನು ಅವಳನ್ನು ಅಭಿಮಂತ್ರಿಸುತ್ತಾನೆ.

"ಅಥಾಸ್ಯ ಮಾತರಮಭಿಮಂತ್ರಯಂತೇ, ।
ಇಳಾಽಸಿಮೈತ್ರಾವರುಣೇವೀರೇವೀರಮಜೀಜನತ್ ।
ಸಾ ತ್ವಂ ವೀರವತೀ ಭವ ಯಾಽಸ್ಮಾನ್ ವೀರವತೋಽಕರದಿತಿ ।।" (ಬೃ.ಉ. ೬, ೪, ೨೮)

ಹೇ ಜಾಯೇ, ನೀನು ಪೃಥಿವೀರೂಪಳಾಗಿದ್ದೀಯೇ. ಮೈತ್ರಾವರುಣಾತ್ಮಕ ತೇಜೋರಸ ಯುಕ್ತಳಾಗಿದ್ದೀಯೆ. ಹೇ ವೀರೇ, ನೀನು ವೀರನಾದ ಪುತ್ರನಿಗೆ ಜನ್ಮ ಕೊಟ್ಟಿದ್ದೀಯೆ. ನೀನು ವೀರವತಿಯಾಗು. ಈ ವೀರಪುತ್ರನನ್ನು ಹಡೆದು ನಮ್ಮನ್ನೂ ವೀರವಂತರನ್ನಾಗಿಸಿದ್ದೀಯೆ. ಈ ಪುತ್ರನನ್ನು ಹಡೆದ ನೀನು ಧನ್ಯಳು. ಈಗ ನೀನು ಜಾಯೆಯಾದೆ. ಯಾಕೆಂದರೆ ಗಂಡನನ್ನೇ ಪುತ್ರರೂಪದಲ್ಲಿ ಪ್ರಸವಿಸಿದ್ದೀಯೆ.

"ತಜ್ಜಾಯಾ ಜಾಯಾಭವತಿ (ಯದ್) ತದಸ್ಯಾಂ ಜಾಯತೇ ಪುನಃ ।
ಆಭೂತಿರೇಷಾ ಭೂತಿರ್ಬೀಜಮೇತನ್ನಿಧೀಯತೇ ।।" (ಐ.ಬ್ರಾ. ೩೦, ೭)

ಇವಳಲ್ಲಿ ಪುರುಷಪತಿಯು ರೇತೋರೂಪದಿಂದ ಪ್ರವೇಶಿಸಿ ಅಂತರಾತ್ಮಸತ್ವದಿಂದ ತಾನೇ ಹುಟ್ಟಿ ಬರುತ್ತಾನೆ. ಆದ್ದರಿಂದ ಇವಳಿಗೆ ಜಾಯೆಯೆಂದು ಹೇಳುತ್ತಾರೆ. ಇವಳಲ್ಲಿ ತನ್ನನ್ನೇ ತಾನು ಸ್ಥಾಪಿಸುತ್ತಾನೆ. ಆದ್ದರಿಂದ "ಆತ್ಮಾವೈ ಪುತ್ರನಾಮಾಽಸಿ" ಎಂಬುದೂ ಪ್ರಸಿದ್ಧವಾಗಿದೆ. ಇದನ್ನೇ ಉಪನಿಷತ್ತು ಸ್ಪಷ್ಟಾರ್ಥವಾಗಿ ಹೇಳಿದೆ.

"ಪುರುಷೇಹವಾ ಅಯಮಾದಿತೋಗರ್ಭೋಭವತಿಯದೇತದ್‌ರೇತಃ ತದೇತತ್ ಸರ್ವೇಭ್ಯೋಽಂಗೇಭ್ಯಸ್ತೇಜಃ ಸಮ್ಭೂತಮಾತ್ಮನ್ಯೇವಾತ್ಮಾನಂ ಬಿಭರ್ತಿ । ತದ್‌ಯದಾಸ್ತ್ರಿಯಾಂ ಸಿಂಚತಿ ಅಥೈನಂಜನಯತಿ, ತದಸ್ಯಪ್ರಥಮಂ ಜನ್ಮ ।।" (ಐ.ಉ. ೨, ೪, ೧)

ಆದ್ದರಿಂದಲೇ ವಿವಾಹದಲ್ಲಿ ವಧೂವರರ ಆಶೀರ್ವಾದ ಮಂತ್ರದಲ್ಲಿ ವಧುವಿಗೆ ವೀರಪುತ್ರರನ್ನು ಹಡೆಯುವಂತೆ,

"ವೀರಸೂರ್ದೇವ ಕಾಮಾ ಸ್ಯೋ ನಾಶಂನೋ ಭವದ್ವಿಪದೇಶಂ ಚತುಷ್ಪದೇ"

(೧೦, ೮೫, ೪೪)

ಇದನ್ನೇ ಯಾಜ್ಞವಲ್ಕ್ಯರು ಸ್ಪಷ್ಟವಾಗಿ ಮುಕ್ತಕಂಠದಿಂದ ಹೇಳಿದ್ದಾರೆ.

"ತತ್ರಾಯಂ ಜಾಯತೇಸ್ವಯಮ್ ಇತಿ ಜಾಯಾಶಬ್ದನಿರ್ವಚನಾರ್ಥಮ್," ಆ ಶ್ಲೋಕ ಹೀಗಿದೆ–

"ಯದುಚ್ಯತೇ ದ್ವಿಜಾತೀನಾಂ ಶೂದ್ರಾದ್‌ದಾರೋಪಸಂಗ್ರಹಃ ।
ನೈತನ್ಮಮಮತಂ ಯಸ್ಮಾತ್ ತತ್ರಾಯಂ ಜಾಯತೇಸ್ವಯಮ್ ।।" (ಯಾ.ಸ್ಮೃ.)

ವೈದಿಕ ಸಂಸ್ಕಾರದಿಂದ ಸಂಸ್ಕೃತಳಾದ ದ್ವಿಜಸ್ತ್ರೀಯಲ್ಲಿಯೇ ದ್ವಿಜಜಾತಿಯ ಪ್ರಜೆಗಳು ಹುಟ್ಟುತ್ತಾರೆ. ಅಸಂಸ್ಕೃತಳಾದವಳಿಂದ ದ್ವಿಜತ್ವಸತ್ವಯುಕ್ತ ಸತ್ಪ್ರಜೆಗಳು ಹುಟ್ಟುವದು ಶಕ್ಯವಿಲ್ಲ. ಯಾಜ್ಞವಲ್ಕ್ಯರ ಅಭಿಪ್ರಾಯವೂ ಇದೇ. ಸ್ತ್ರೀಯರಿಗೆ ದ್ವಿಜತ್ವ ಸಿದ್ಧಿಯಿಂದಲೇ ದ್ವಿಜಾತೀಯ ಸಂತತ್ಯುತ್ಪತ್ತಿಯೆಂಬುದು ಸರಿ. ಇದು ಉಪನಿಷದ್ವಚನದಿಂದಲೂ ಸರಿಯಾಗಿ ಕಾಣುತ್ತದೆ.

"ಅಥ ಹ ಯಾಜ್ಞವಲ್ಕ್ಯಸ್ಯ ದ್ವೇಭಾರ್ಯೇ ಬಭೂವತುಃ ಮೈತ್ರೇಯೀಚ ಕಾತ್ಯಾಯನೀ ಚ ತಯೋರ್ಹ ಮೈತ್ರೇಯೀ ಬ್ರಹ್ಮವಾದಿನೀ ಬಭೂವ,".

ಯಾಜ್ಞವಲ್ಕ್ಯರಿಗೆ ಇಬ್ಬರು ಪತ್ನಿಯರು, ಮೈತ್ರೇಯೀ, ಕಾತ್ಯಾಯನಿಯರೆಂದು. ಅವರಲ್ಲಿ ಮೈತ್ರೇಯಿಯು ಬ್ರಹ್ಮವಾದಿನಿಯಾಗಿದ್ದಳು.

ಧರ್ಮಶಾಸ್ತ್ರೋಕ್ತವಾದ ಬ್ರಹ್ಮವಾದಿನಿಯ ಲಕ್ಷಣವನ್ನು ಹಿಂದೆ ತಿಳಿಸಿದೆ. ಉಪನಯನಾನಂತರ ವೇದಾಧ್ಯಯನ ಮಾಡಿ ವಿವಾಹವಾಗುವವಳು ಬ್ರಹ್ಮವಾದಿನಿ ಎಂದು. ಇದು ಅವಳಿಗೆ ಅನುರೂಪವಾದ ಅನುಗುಣವಾದ ಸಂಜ್ಞೆ. ಬ್ರಹ್ಮವೆಂದರೆ ವೇದ. ವೇದಾಧ್ಯಯನ ಮಾಡಿದ್ದರಿಂದ ಬ್ರಹ್ಮವಾದಿನೀ. ಮೈತ್ರೇಯಿಯಲ್ಲಿ ಇದಕ್ಕಿಂತಲೂ ವಿಶಿಷ್ಟವಾದ ಸತ್ವವಿತ್ತು. ಅವಳಿಗೆ ಬ್ರಹ್ಮಾತ್ಮಜ್ಞಾನವನ್ನೂ ತಿಳಿಯುವ ಇಚ್ಛೆ ಇತ್ತು. ಅವಳು ತಾನು ಅಮೃತತ್ವವನ್ನು ಹೊಂದುವದು ಹೇಗೆ. ತಿಳಿದವನಾದ ನೀನು ಇದನ್ನು ತಿಳಿಸು ಎಂದು ಪತಿಯಾದ ಯಾಜ್ಞವಲ್ಕ್ಯನಲ್ಲಿ ಕೇಳಿದ್ದಾಳೆ. "ಸಾಹೋವಾಚ, ಮೈತ್ರೇಯೀಯೇನಾಹಂ ನಾಮೃತಾಸ್ಯಾಂ, ಕಿಮಹಂ ತೇನ ಕುರ್ಯಾಂ, ಇತಿ, ಯದೇವ ಭಗವಾನ್ ವೇದ ತದೇವ ಮೇ ಬ್ರೂಹೀತಿ, ತದನುವಚನಾತ್" (ಬೃ. ೪, ೫, ೪) ಮುಂದೆ ಅವಳಿಗೆ ತತ್ವದರ್ಶನ ಮಾಡಿಸಿದ್ದಾರೆ.

"ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತ್ರವ್ಯೋ ನಿದಿಧ್ಯಾಸಿತವ್ಯಃ ।
ಮೈತ್ರೇಯಿ ಆತ್ಮನಿ ಖಲ್ವರೇ ದೃಷ್ಟೇ ಶ್ರುತೇ ಮತೇ ಸರ್ವಮಿದಂ ವಿದಿತಮ್ ।।" (ಬೃ.ಉ.೪,೫,೬)

ಸ್ತ್ರೀಯರ ಮಾತೃತ್ವ :

ಸ್ತ್ರೀಯರಿಗಾಗಿಯೇ ನಿಸರ್ಗತಃ ಪ್ರಾಪ್ತವಾದ ಮಾತೃಪದವು ಎಲ್ಲಕ್ಕಿಂತ ಶ್ರೇಷ್ಠ-ವಾದದ್ದು. ಅದು ಸ್ವತಃ ಸಿದ್ಧವಾಗಿದ್ದರೂ ಸತ್ಪುತ್ರಾದಿಗಳಿಗೆ ಜನ್ಮ ಕೊಟ್ಟಾಗ ಸಾರ್ಥಕ-ವಾಗುತ್ತದೆ. ಈ ಪ್ರಪಂಚದಲ್ಲಿ ಮಹಾಗೌರವಸ್ಥಾನವಾದ ಅದು ಗುರುತ್ವ, ದೇವತ್ವ, ಗೃಹಿಣೀತ್ವ ಹಾಗೂ ಜಾಯಾತ್ವಾದಿಗಳಿಂದ ಪ್ರಥಮಸ್ಥಾನವನ್ನು ಹೊಂದಿದೆ. "ಮಾತೃದೇವೋ ಭವ, ಪಿತೃದೇವೋಭವ" (ತೈ.) ಶ್ರುತಿಶಾಸನ ಮುಖದಿಂದ ಉಪದೇಶಿಸಿದೆ. "ಏಭ್ಯೋ ಮಾತಾ ಗರೀಯಸೀ" (ಯಾ.ಸ್ಮೃ.) "ಮಾತಾ ಗೌರವೇಣಾತಿ ರಿಚ್ಯತೇ" (ಮನು.) "ಜನನೀ ಜನ್ಮ

ಭೂಮಿಶ್ಚ ಸ್ವರ್ಗಾದಪಿ ಗರೀಯಸೀ, ನ ಮಾತುಃ ಪರದೈವತಮ್, ಮಾತಾ ಪ್ರತ್ಯಕ್ಷ ದೇವತಾ" ಇತ್ಯಾದಿ ವಚನಗಳು ಸಮಾನವಾಗಿ ಪ್ರಸಿದ್ಧವಾಗಿವೆ.

ಪುರಾಕಲ್ಪ ಶಬ್ದಕ್ಕೆ ವಾಸ್ತವಿಕ ಅರ್ಥವೇ ಬೇರೆ :

ಪುರಾಕಲ್ಪ ಶಬ್ದಕ್ಕೆ ವಾಸ್ತವಿಕವಾಗಿ ಬೇರೆ ಅರ್ಥವಿದೆ. ಅದು ಶಾಸ್ತ್ರೀಯವೂ ವೈದಿಕತತ್ತ್ವ ಪ್ರಧಾನವೂ ಆಗಿರುವುದರಿಂದ ಹಾಗೂ ಉಪನಯನಾದಿ ವೈದಿಕ ಸಂಸ್ಕಾರಾದಿ ಪ್ರಕರಣದ ಸಾಮರ್ಥ್ಯದಿಂದ ಯುಕ್ತತರವಾಗಿದೆ.

ಕಲ್ಪವೆಂದರೆ ವೇದಾಂಗಗಳಲ್ಲಿ ಪ್ರಸಿದ್ಧವಾಗಿದೆ. ಉಪನಿಷತ್ತಿನಲ್ಲಿ ಅಪರಾ ವಿದ್ಯೆಯನ್ನು ಹೇಳುವಾಗ "ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾಕಲ್ಪೋವ್ಯಾಕರಣಂ ನಿರುಕ್ತಂ ಛಂದೋಜ್ಯೋತಿಷಮಿತಿ," (ಮುಂ.ಉ.)

"ಛಂದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋಽಥ ಪಠ್ಯತೇ," ಅದಕ್ಕೆ ವೇದಾಂಗತ್ವವು, ಶ್ರೌತಾದಿಸೂತ್ರಗಳಿಗೂ ಕಲ್ಪವೆಂದು ಪ್ರಸಿದ್ಧಿಯಿದೆ. "ಅಥಾತಃ ಪಶುಕಲ್ಪಃ" (ಬೌ.ಶ್ರೌ.ಸೂ.) ಎಂದು ಮುಂತಾಗಿ ನಿರ್ದೇಶಿಸಿದ್ದಾರೆ. ಗೃಹ್ಯಸೂತ್ರಾದಿಗಳಿಗೂ ಕಲ್ಪತ್ವವಿದೆ. "ಉಕ್ತಾನಿ-ವೈತಾನಿಕಾನಿ ಗೃಹ್ಯಾಣಿ ವಕ್ಷ್ಯಾಮಃ" (ಆ.ಗೃ. ೧, ೧) ಇವೆರಡೂ ಕಲ್ಪಗಳಿಗೆ ಮೂಲಭೂತವಾದದ್ದು ಬ್ರಾಹ್ಮಣಕಲ್ಪ. ಅದು ಮೂಲತಃ ವೇದದಲ್ಲಿ ಹೇಳಿದ ಮಂತ್ರಗಳಿಗೆ ಯಜ್ಞಗಳಲ್ಲಿ ವಿನಿಯೋಗವನ್ನು ತಿಳಿಸಲು ಹೊರಟಿದೆ. ಯಜ್ಞೀಯ ಸಂಸ್ಥೆಗಳನ್ನು ಕಲ್ಪಿಸುವ ಅದೂ ಶ್ರೌತಕಲ್ಪವೇ, ಅದರ ಆಶ್ರಯದಿಂದ ಎಲ್ಲ ಕಲ್ಪಗಳೂ ಬಂದವು. ಆದ್ದರಿಂದ ಎಲ್ಲಕ್ಕಿಂತ ಪುರಾತನಕಲ್ಪವೆಂಬುದು ಶ್ರೌತಕಲ್ಪವೇ. ಆ ಪುರಾತನ ಕಲ್ಪದಲ್ಲಿ ಸ್ತ್ರೀಯರಿಗೆ ಉಪನಯನಾದಿ ವೈದಿಕಸಂಸ್ಕಾರ ವಿಧಾನವು ಕಾಣುತ್ತದೆ. ಅದು ಈಗಲೂ ಅಪ್ರತಿಷಿದ್ಧವಾಗಿ ಅಗ್ನಿಹೋತ್ರವೇ ಮೊದಲಾದ ಯಜ್ಞಿಯ ಶ್ರೌತಕರ್ಮಗಳಲ್ಲಿ ಪೂರ್ವಾಚಾರ್ಯ ಪರಂಪರೆಯಿಂದ ನಡೆದು ಬಂದಿದೆ. ಅಲ್ಲಿ ಸ್ತ್ರೀಯರ ಮುಖದಿಂದ ವೇದಪಠನ, ಹೋಮಾದ್ಯನುಷ್ಠಾನವೂ ಪ್ರಚಲಿತವಿದೆ. ಹೀಗೆ ಶ್ರೌತ ವೈದಿಕ ಯಜ್ಞಾದಿಗಳಲ್ಲಿ ಸ್ತ್ರೀಯರ ಸ್ಥಾನವು ಪ್ರಸಿದ್ಧವಾಗಿದೆ. ಪತಿಯ ಅಸನ್ನಿಧಾನದಲ್ಲಿ ದೇಶಾಂತರಕ್ಕೆ ಹೋದಾಗ ಪತ್ನಿಗೆ ನಿತ್ಯ ಹೋಮಾದಿಗಳನ್ನು ನಡೆಸಲು ಶಾಸ್ತ್ರ ವಿಧಿಸುತ್ತದೆ. "ಪತ್ನೀ ಕುಮಾರೀ, ಕುಮಾರಃ ಅಂತೇವಾಸೀ ಋತ್ವಿಜಃ" (ಆ.ಗೃ.ಪ.ಸೂ.) ಇವರು ಕ್ರಮವಾಗಿ ಅಧಿಕಾರಿಗಳು ಹಿಂದಿನಂತೆ ಇಂದೂ ಹಾಗೇ ನಡೆಯುತ್ತಿದೆ.

ದರ್ಶಪೂರ್ಣಮಾಸಾದಿ ಇಷ್ಟಿ ವಿಶೇಷಗಳಲ್ಲಿಯೂ ಶ್ರೌತಯಜ್ಞಾದಿಗಳಲ್ಲಿಯೂ ವ್ರತಾದಿ ಹವನಗಳು ಪತಿ ಪತ್ನಿಯರಿಗೆ ಸಮಾನವಾಗಿವೆ. ಪತಿಯು ಸನ್ನಿಹಿತನಾಗಿಲ್ಲದಿರುವಾಗ ಪತ್ನಿ ಏಕಾಕಿನಿ-ಯಾಗಿಯೂ ಈ ಹವನಗಳನ್ನು ಮಾಡುವದು, ಆಜ್ಯಾವೇಕ್ಷಣಾದಿಗಳಲ್ಲಿ ಕಂಡುಬರುತ್ತದೆ.

ವ್ರತ ಹೋಮದಲ್ಲಿ "ಅಗ್ನೇವ್ರತಪತೇ ವ್ರತಂ ಚರಿಷ್ಯಾಮಿ," ಇತ್ಯಾದಿ ನಾಲ್ಕು ಮಂತ್ರಗಳಿಂದ ಸಮಿಧಾಧಾನವೂ ಪತ್ನಿಗೂ ವಿಹಿತವಾಗಿದೆ. ಕೊನೆಯ ಪ್ರಮಾಣವೆಂದರೆ ಈ ಮುಂದಿನ ಮಂತ್ರವನ್ನು ಅವಳೇ ಹೇಳುತ್ತಾಳೆ.

"ಸುಪ್ರಜಸಸ್ತ್ವಾವಯಂ ಸುಪತ್ನೀರೂಪ ಸೇದಿಮರು ಅಗ್ನೇ ಸಪತ್ನ ದಂಭನ-
ಮದಬ್ಧಾಸೋ ಅದಾಭ್ಯಮ್ ಇಂದ್ರಾಣೀವಾವಿಧವಾ
ಭೂಯಾಸಮ್ । ಅದಿತಿರಿವ ಸುಪುತ್ರಾ ।
ಅಸ್ಥೂರಿ ತ್ವಾ ಗಾರ್ಹಪತ್ಯ ಉಪನಿಷದೇ ಸುಪ್ರಜಾಸ್ತ್ವಾಯ ॥" (ತೈ.ಸಂ.)

ಈ ಮಂತ್ರವು ಯಜ್ಞಪತ್ನಿಗಷ್ಟೇ ವಿನಿಯುಕ್ತವಾಗಿದೆ.

ಇನ್ನು ಕೆಲವರು ಈ ಮಂತ್ರಪಠನ ಯಜ್ಞದಲ್ಲಿ ಹೋಮಾದಿಕರಣ, ಇವೆಲ್ಲ ಅಷ್ಟುಮಾತ್ರಕ್ಕೇ ಸೀಮಿತವಾಗಿ ಅಧಿಕಾರವೇ ಹೊರತೂ ಇತರ ಮಂತ್ರಗಳಿಗೆ ಸ್ತ್ರೀಯರಿಗೆ ಅಧಿಕಾರವಿಲ್ಲವೆಂಬುದೂ ಶಾಸ್ತ್ರೀಯವಾಗಿ ಸಮಾಧಾನಕರವಲ್ಲ.

ಅದು ಹೇಗೆಂದರೆ– ಉಪನಯನದಲ್ಲಿ ಗಾಯತ್ರೀ ಮಂತ್ರೋಪದೇಶದ ನಂತರವೇ ಯಾರಿಗೂ ಯಾವ ಮಂತ್ರಕ್ಕೂ ಉಚ್ಚಾರಣೆಗೂ ಸಹ ಪುರುಷರಂತೆ ಅವರಿಗೂ ಅಧಿಕಾರವಿಲ್ಲ. ಇನ್ನು ಕೆಲವರು ಯಜ್ಞಾದಿಗಳಲ್ಲಿ ಪತಿಯೊಡನೆ ಮಾತ್ರ ಅವಳಿಗೆ ಅಧಿಕಾರವಿದೆಯೇ ಹೊರತು ಸ್ವತಂತ್ರವಾಗಿ ಅಧಿಕಾರವಿಲ್ಲವೆನ್ನುತ್ತಾರೆ. ಅದು ಸರ್ವಥಾ ಯುಕ್ತತರವಾಗಿದೆ. ಯಾಕೆಂದರೆ ಕೇವಲ ವೈದಿಕ ಮಂತ್ರದಲ್ಲಿ ಯಜ್ಞಕರ್ಮಗಳಲ್ಲಷ್ಟೇ ಅಧಿಕಾರವಲ್ಲ. ಜಾಯಾತ್ವ, ದಂಪತೀತ್ವ, ಲೌಕಿಕ ವಿಷಯ ಹಾಗೂ ಧರ್ಮ ಪ್ರಜಾಸಿದ್ಧಿ ಇವುಗಳಲ್ಲೆಲ್ಲ ಪತಿಯೊಡನೆ ಅಧಿಕಾರವಿದೆ. ಏಕಾಕಿಯಾಗಿ ಈ ಮೇಲಿನ ವಿಷಯದಲ್ಲಿ ಅವಳಿಗೆ ಅಧಿಕಾರವಿಲ್ಲವೆಂಬುದು ಸುಪ್ರಸಿದ್ಧವೇ ಆಗಿದೆ. ಇದನ್ನು ಉಪನಿಷದ್ವಚನವೂ ಸಮರ್ಥಿಸುತ್ತದೆ. "ಉದಪಾತ್ರಂ ಪೂರಯಿತ್ವಾ ತೇನೈನಾಮಭ್ಯುಕ್ಷತಿ" ಉತ್ತಿಷ್ಠಾತೋ ವಿಶ್ವಾವಸೋಽನ್ಯಾಮಿಚ್ಛಪ್ರಪೂರ್ವ್ಯಾಂ ಸಂಜಾಯಾಂ ಪತ್ಯಾ ಸಹೇತಿ, "ಅಥೈನಾಮಭಿಪದ್ಯತೇ" "ಅಮೋಽಹಮಸ್ಮಿ ಸಾತ್ವಂ ಸಾತ್ವಮಸ್ಯಮೋಽಹಂ ಸಾಮಾಹ-ಮಸ್ಮಿಋಕ್ತ್ವಂ ದ್ಯೌರಹಂ ಪೃಥಿವೀತ್ವಂ ತಾವೇಹಸಂರಭಾವಹೈ ಸಹರೇತೋದಧಾವಹೈ ಪುಂಸೇ ಪುತ್ರಾಯವಿತ್ತಯೇ" (ಬೃ.ಉ. ೬, ೪, ೧೯-೨೦)

"ಅಮ" ನಾನು, "ಸಾ" ನೀನು, "ಸಾಮ" ನಾನು, "ಋಕ್" ನೀನು, "ದ್ಯೌಃ" ನಾನು, "ಪೃಥಿವೀ" ನೀನು, ಜೀವನದಲ್ಲಿ ಸುಖವಾಗಿ ಬಾಳೋಣ ಉತ್ತಮ ಪುತ್ರರನ್ನು ಪಡೆಯೋಣ, ಹೀಗೆ ಪತಿಪತ್ನಿಯಿಬ್ಬರನ್ನೂ ಸೇರಿಸಿಯೇ ಮಂತ್ರವಿಧಾನವಿದೆ.

ಇರಲಿ. ಶ್ರೌತಕಲ್ಪದಲ್ಲಿ ಯುಕ್ತತರವೂ ಯುಕ್ತಿಸಹವೂ ಆಗಿದೆ ಎಂದು ಹೇಳಲಿ. ಸ್ಮಾರ್ತಕಲ್ಪದಲ್ಲಂತೂ ಸ್ತ್ರೀಯರ ಉಪನಯನವನ್ನು ನಿಷೇಧಿಸಿದ್ದಾರೆ.

"ಗರ್ಭಾಧಾನಮೃತೌಪುಂಸಃ ಸವನಂ ಸ್ಪಂದನಾತ್ ಪುರಾ ।
ಷಷ್ಠೋಽನ್ನಪ್ರಾಶನಂ ಮಾಸಿ ಚೂಡಾ ಕಾರ್ಯಾಯಥಾಕುಲಮ್ ।
ತೂಷ್ಣೀಮೇತಾಃ ಕ್ರಿಯಾಸ್ತ್ರೀಣಾಂ ವಿವಾಹಸ್ತು ಸಮಂತ್ರಕಃ ॥" (ಯಾ.ಸ್ಮೃ. ೨)

ಇಲ್ಲಿ ಗರ್ಭಾಧಾನಾದಿಗಳನ್ನು ಸ್ತ್ರೀಯರಿಗೆ ಅಮಂತ್ರಕವಾಗಿ ಮಾಡಿ ವಿವಾಹವನ್ನು ಮಾತ್ರ ಸಮಂತ್ರಕವಾಗಿ ವಿಧಿಸಿದ್ದಾರೆ. ಇಲ್ಲಿ ಚೂಡಾಕರ್ಮದವರೆಗೆ ಹೇಳಿ ನಂತರ ಉಪನಯನವನ್ನು ಹೇಳದೇ ವಿವಾಹವನ್ನಷ್ಟೇ ಹೇಳಿದ್ದು ಉಪನಯನವು ಅವರಿಗೆ ಇಲ್ಲವೆಂದು ಕಾಣುತ್ತದೆ. ಅಥವಾ ಗರ್ಭಾಧಾನಾದಿಗಳಂತೆ ಉಪನಯವೂ ಅಮಂತ್ರಕವೆಂದು ಊಹಿಸ ಬಹುದಾಗಿದೆ. ಆದ್ದರಿಂದಲೇ "ವೈವಾಹಿಕೋ ವಿಧಿಸ್ತ್ರೀಣಾಮೌಪನಾಯನಿಕಃ ಸ್ಮೃತಃ" (ಮ.ಸ್ಮೃ. ೨) ಈ ಮನುವಚನದಿಂದ ಅವರಿಗೆ ವಿವಾಹವೇ ಉಪನಯನ ಸ್ಥಾನೀಯವೆಂದು ಸಮಾಧಾನ ಪಟ್ಟುಕೊಳ್ಳಬಹುದು.

ಹೀಗೆ ಸ್ತ್ರೀಯರಿಗೆ ಉಪನಯನವೂ ಅಮಂತ್ರಕವೇ ಇರಲಿ. ಇಲ್ಲವೆಂದು ನಿಷೇಧ ಮುಖದಿಂದ ಹೇಳುವ ಯಾಜ್ಞವಲ್ಕ್ಯನೇ ತನ್ನ ಪತ್ನಿಯಾದ ಮೈತ್ರೇಯಿಗೆ ಉಪನಿಷದ್ವಚನ-ದಿಂದಾಗಿ ಸರ್ವವೇದ ತತ್ತ್ವಾರ್ಥ ಮೂಲಭೂತವಾದ ಆತ್ಮದರ್ಶನವನ್ನೇ ಉಪದೇಶಿಸಿದ್ದಾನೆ. "ಆತ್ಮಾ ವಾ ಅರೇ ದ್ರಷ್ಟವ್ಯಃ ಮೈತ್ರೇಯಿ ಆತ್ಮನಿ ಖಲ್ವರೇ ದೃಷ್ಟೇ ಶ್ರುತೇ ಮತೇ ಸರ್ವಮಪಿ ವಿದಿತಮಿತಿ" (ಬೃ.ಉ. ೪, ೪, ೬) ಇದು ಹೇಗೆ ಸರಿಯೆಂಬುದು ಚಿಂತ್ಯವೇ.

ಇರಲಿ. ಪ್ರಿಯೆಗೆ ಪ್ರೇಮವಶನಾಗಿ ಯಾಜ್ಞವಲ್ಕ್ಯನು ಈ ಉಪದೇಶ ಮಾಡಿದನೆಂದು ತಿಳಿಯೋಣ. "ಸಹೋವಾಚ ಯಾಜ್ಞವಲ್ಕ್ಯಃ ಪ್ರಿಯಾವೈಖಲುನೋ ಭವತೀ ಸತೀ ಪ್ರಿಯಮವೃಧದ್ ಹಂತ ತರ್ಹಿ ಭವತಿ ಏತದ್ವ್ಯಾಖ್ಯಾಸ್ಯಾಮಿ ತೇ ವ್ಯಾಚಕ್ಷಾಣಸ್ಯತು ಮೇನಿದಿಧ್ಯಾಸಸ್ವೇತಿ."

ನೀನು ನನ್ನ ಪ್ರೀತಿಪಾತ್ರಳಾದ್ದರಿಂದ ನಿನಗೆ ನಾನು ಹೇಳುತ್ತೇನೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಅವಳು ಸ್ವಯಂ ಬ್ರಹ್ಮಚಾರಿಣೀ ಎಂಬುದು ಸುಪ್ರಸಿದ್ಧವಾಗಿದೆ. ಸತೀ ಗಾರ್ಗಿಯು ರಾಜರ್ಷಿ ಜನಕನ ಸಭೆಯಲ್ಲಿ ಅನೇಕ ಬ್ರಹ್ಮವೇತ್ತರ ಸಮಕ್ಷದಲ್ಲಿ ಯಾಜ್ಞವಲ್ಕ್ಯನೊಡನೆ ಪ್ರತಿಸ್ಪರ್ಧಿಸುತ್ತಾ ಉಪನಿಷದ್ವಚನ ಮುಖದಿಂದ ಪ್ರಶ್ನಿಸಿ ಬ್ರಹ್ಮಾತ್ಮತತ್ತ್ವ ವಿಜ್ಞಾನವನ್ನು ತಿಳಿದಳು. "ಅಥ ಹ ವಾಚಕ್ನವೀ ಉವಾಚ ಬ್ರಾಹ್ಮಣಾಃ ಭಗವಂತಃ ! ಹಂತಾಹಮಿಮಂ ದ್ವೌ ಪ್ರಶ್ನೌ ಪೃಚ್ಛಾಮಿ ನೋಚೇನ್ ಮೇ ವಕ್ಷ್ಯತಿ ನವೈಜಾತು ಯುಷ್ಮಾಕಮಿಮಂ ಕಶ್ಚಿದ್ಬ್ರಹ್ಮೋದ್ಯಂಜೇತೇತಿ, ಪೃಚ್ಛ ಗಾರ್ಗೀತಿ" (ಬೃ.ಉ. ೩, ೮, ೧)

ಬ್ರಹ್ಮ ನಿಷ್ಠತ್ವವನ್ನು ಪರೀಕ್ಷಿಸಲು ಯಾಜ್ಞವಲ್ಕ್ಯನ ಪರೀಕ್ಷೆಗಾಗಿ ಬ್ರಾಹ್ಮಣರಿಂದ ಅಭ್ಯನುಜ್ಞಾತಳಾಗಿ ಗಾರ್ಗಿಯು ಸ್ವಯಂ ಪ್ರಶ್ನಿಸಿದ್ದಾಳೆ. ಅದೇ ಯಾಜ್ಞವಲ್ಕ್ಯನು ವೇದವಾಚನಕ್ಕೆ ನಾರಿಯು ಅನಧಿಕೃತಳೆಂದು ತಿಳಿಸಿದ್ದು ಈಗ ಅವಳ ಸಮ್ಮುಖದಲ್ಲಿಯೇ ವೇದವಿಷಯಕ ವಿವಾದಕ್ಕಾಗಿ ಪ್ರತಿಪಕ್ಷಿರೂಪಿಯಾಗಿ ನಿಂತಿದ್ದು ವಿಶಿಷ್ಟವಾದ ನಿದರ್ಶನ-ವಾಗಿದೆ. ಹಾಗೂ ಆಶ್ಚರ್ಯಕರವಾಗಿದೆ.

ನೋಡಿ– "ಸಾಹೋವಾಚ-ಅಹಂವೈತ್ವಾಯಾಜ್ಞವಲ್ಕ್ಯ ! ಯಥಾ ಕಾಶ್ಯೋವಾವೈದೇಹೋವಾ ಉಗ್ರಪುತ್ರಃ ಉಜ್ಯಂಧನುರಧಿಜ್ಯಂ ಕೃತ್ವಾ ದ್ವೌ ಬಾಣವಂತೋ ಸಪತ್ನಾತಿವ್ಯಾಧಿನೌ ಹಸ್ತೇ ಕೃತ್ವಾ

ಉಪೋತ್ತಿಷ್ಠೇದ್. ಏವ ಮೇವಾಹಂತ್ವಾಂದ್ವಾಭ್ಯಾಂ ಪ್ರಶ್ನಾಭ್ಯಾಮುಪೋದಸ್ಥಾಮ್ ತೌ ಮೇ ಬ್ರೂಹೀತಿ, ಪೃಚ್ಛ ಗಾರ್ಗೀತಿ" (ಬೃ.ಉ. ೩, ೮, ೨-೧೨), ವೀರರು ಶತ್ರುಗಳನ್ನುದ್ದೇಶಿಸಿ, ಬಾಣಗಳೆರಡನ್ನು ಬಿಡುವಂತೆ ನಾನು ನಿಮಗೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ ಉತ್ತರಿಸಿ.

ಅದಕ್ಕೆ ಯಾಜ್ಞವಲ್ಕ್ಯನು, "ವಾಚ್ಯೆತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ- ಅಸ್ಥೂಲ-ಮನಣುಂ" – "ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಸೂರ್ಯಾಚಂದ್ರಮಸೌವಿಧೃತೌತಿಷ್ಠತಃಂ", ಹೀಗೆ ಬ್ರಹ್ಮವಿಷಯಕವಾದ ವಾದವಿವಾದವು ಪ್ರಸಿದ್ಧವಿದೆ. ಅದರಲ್ಲಿ ನಿರ್ಣೀತವಾದ ಗಾರ್ಗಿಯ ಮಾತಿದು, "ಸಾಹೋವಾಚ ಬ್ರಾಹ್ಮಣಾಃ ಭಗವಂತಃ ತದೇವಬಹುಮನ್ಯೇಧ್ವಂ ಯದಸ್ಮಾನ್ ನಮಸ್ಕಾರೇಣ ಮುಚ್ಯೇಧ್ವಮ್, ನ ವೈ ಜಾತು ಯುಷ್ಮಾಕಮಿಮಂ ಕಶ್ಚಿದ್ಬ್ರಹ್ಮೋದ್ಯಂ ಜೇತೇತಿ, ನತೋಹವಾಚಕ್ನವೀ ಉಪರರಾಮ ||" (ಬೃ.ಉ. ೩, ೮, ೧೨)

ದೊಡ್ಡ ವೇದವಿದ್ವಾಂಸರ ಸಭೆಯಲ್ಲಿ ಬ್ರಹ್ಮನಿಷ್ಠರ ಪರೀಕ್ಷೆಗೆ ನಾರೀಮಣಿ ಕುಮಾರಿ- ಯೊಬ್ಬಳು ಸಮರ್ಥಳಾದಳೆಂಬುದು ಮಹದಾಶ್ಚರ್ಯಕರವಾಗಿದೆ. ಅದಕ್ಕಿಂತಲೂ ಮಹರ್ಷಿ ವಸಿಷ್ಠ ವಾಮದೇವಾದಿಗಳಂತೆ ಋಷಿತ್ವವನ್ನು ಹೊಂದಿದ ಋಷಿಕೆಯರು ಋಗ್ವೇದದಲ್ಲಿ ಪ್ರಸಿದ್ಧರಾಗಿದ್ದಾರೆಂಬುದು ಕಾತ್ಯಾಯನರ ಸರ್ವಾನುಕ್ರಮ ಸೂತ್ರದಿಂದಾಗಿ ತಿಳಿಯುತ್ತದೆ.

"ಅಹಮಷ್ಟೌ ವಾಗಾಂಭೃಣ್ಯಾತ್ಮಾನಂ ತುಷ್ಟಾವ" (ಋ. ೧೦, ೧೨೫, ೧-೮)
"ಉದಸೌಷಟ್‌ಪೌಲೋಮೀಶಚ್ಯಾತ್ಮಾನಂ ತುಷ್ಟಾವ" (ಋ. ೧೦, ೧೫೯, ೧-೬)
"ಶ್ರದ್ಧಯಾಶ್ರದ್ಧಾಕಾಮಾಯಿನೀ ಶ್ರಾದ್ಧಮಾನುಷ್ಟುಭಮ್" (ಋ. ೧೦, ೧೫೧, ೧-೫)
"ಆಯಂ ಗೌಃ ಸಾರ್ಪರಾಜ್ಞೀ ಆತ್ಮದೇವತಮ್" (ಋ. ೧೦, ೧೮೯, ೧-೩)

ಈ ಎಲ್ಲ ಬ್ರಹ್ಮವಾದಿಯರನ್ನು ಪರಿಭಾಷಾಸೂತ್ರದಲ್ಲಿ,

"ಗೋಧಾಘೋಷಾ ವಿಶ್ವವಾರಾಽಪಾಲೋಪನಿಷನ್ ನಿಷತ್ |
ಬ್ರಹ್ಮಜಾಯಾಜುಹೂರ್ನಾಮಾ ಅಗಸ್ತ್ಯಸ್ಯ ಸ್ವಸಾಽದಿತಿಃ |
ಇಂದ್ರಾಣೀಚೇಂದ್ರಮಾತಾ ಚ ಸರಮಾ ರೋಮಶೋರ್ವಶೀ |
ಲೋಪಾಮುದ್ರಾ ಚ ನದ್ಯಶ್ಚ ಯಮೀನಾರೀ ಚ ಶಶ್ವತೀ |
ಶ್ರೀರ್ಲಾಕ್ಷಾಸಾರ್ಪರಾಜ್ಞೀವಾಕ್ ಶ್ರದ್ಧಾಮೇಧಾ ಚ ದಕ್ಷಿಣಾ |
ರಾತ್ರೀ ಸೂರ್ಯಾ ಚ ಸಾವಿತ್ರೀ ಬ್ರಹ್ಮವಾದಿನ್ಯ ಈರಿತಾಃ ||" (ಋ. ಪರಿಭಾಷಾ.ಸೂ.)

ಹೀಗೆ ಬ್ರಹ್ಮವಾದಿನಿಯರ ಹೆಸರುಗಳನ್ನೂ ತಿಳಿಸಿದ್ದಾರೆ.

ಅಲ್ಲದೇ ಉಪನಿಷತ್ತುಗಳಲ್ಲಿಯೂ ಬ್ರಹ್ಮವಾದಿನಿಯರು ಪ್ರಸಿದ್ಧವಾದ ಬ್ರಹ್ಮತ್ವವನ್ನು ಉಪದೇಶಿಸಲು ಸಮರ್ಥರಾದವರಿದ್ದಾರೆ. ಸಂಕ್ಷೇಪವಾದ ಉದಾಹರಣೆಗೆ ಕೇನೋಪನಿಷತ್ತಿನಲ್ಲಿ ಹೈಮವತೀ ಉಮಾ–

"ಮತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮಬಹುಶೋಭಮಾನಾಮುಮಾಃಹೈಮವತೀಂ ತಾಃ ಹೋವಾಚ ಕಿಮೇತದ್ ಯಕ್ಷಮಿತಿ" (ಕೇ.ಉ. ೩, ೧೨) "ಸಾಬ್ರಹ್ಮೇತಿಹೋವಾಚ ಬ್ರಹ್ಮಣೋ ವಾ

ಏತದ್ವಿಜಯೇ ಮಹೀಯಧ್ವಮಿತಿ ತತೋ ಹೈವ ವಿದಾಂಚಕಾರ ಬ್ರಹ್ಮೇತಿ" (ಕೇ.ಉ. ೪-೧) ಸಂಕ್ಷೇಪವಾಗಿ ಹೇಳಿದೆ.

ಹೀಗೆ ಸ್ತ್ರೀಯರು ಕಂಡ ಮಂತ್ರಗಳನ್ನೂ ವಸಿಷ್ಠ ವಾಮದೇವಾದಿ ದರ್ಶನದಂತೆ ಸಮಾನ ಗೌರವದಿಂದ ನೋಡುತ್ತಾರೆ. ಅಷ್ಟೇ ಅಲ್ಲ, ಯಾಜ್ಞಿಕರು ಕರ್ಮಗಳಲ್ಲಿ ಹವನಾದಿಗಳನ್ನೆಸಗುತ್ತಾರೆ. ಇಷ್ಟಾದರೂ ಅವಾಂತರವಾದ ಕೆಲವು ಆಕ್ಷೇಪಗಳಿವೆ. "ಅಷ್ಟವರ್ಷಂ ಬ್ರಾಹ್ಮಣಮುಪನಯೀತ" ಎಂಬಲ್ಲಿ ಪುಲ್ಲಿಂಗ ನಿರ್ದೇಶವಿರುವದರಿಂದಲೇ ಸ್ತ್ರೀಯರಿಗೆ ಪ್ರತಿಷೇಧ ಮಾಡಿದ್ದಾರೆಂಬುದು ಸ್ಪಷ್ಟ. ಆಗಲಿ, ಹಾಗಿದ್ದರೆ, ಪುರಾಕಲ್ಪದಲ್ಲಿ ಆ ನಿಷಿದ್ಧಾಚರಣವನ್ನು ಹ್ಯಾಗೆ ಆಚರಿಸಿದ್ದರೆಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಇಂಥಲ್ಲಿ ಪುಲ್ಲಿಂಗಾದಿಗಳು ಸಬಲಕಾರಣಗಳಾಗಲಾರವು. ಪುರುಷಶಬ್ದದಿಂದ ವಿಧಿಸಿದ್ದು ಸ್ತ್ರೀಪುರುಷ ಸಾಮಾನ್ಯ ನಿರ್ದೇಶವೆಂಬುದು ನ್ಯಾಯವಾಗಿದೆ. ಹೇಗೆಂದರೆ,

"ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾನ್ ಜಾಯತೇ" ಇತಿ "ಬ್ರಹ್ಮಚರ್ಯೇಣ ಋಷಿಭ್ಯಃ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ" ಇತಿ ಚ

ಬ್ರಾಹ್ಮಣನು ಜನಿಸುವಾಗ ಮೂರು ಋಣಗಳಿಂದೊಡನೆಯೇ ಹುಟ್ಟುವನು. ದೇವ ಋಣ, ಋಷಿಋಣ, ಪಿತೃಋಣ. ಸ್ವಾಧ್ಯಾಯದಿಂದ ಋಷಿಋಣ, ಯಜ್ಞದಿಂದ ದೇವಋಣ, ಸಂತಾನದಿಂದ ಪಿತೃಋಣ ದೂರವಾಗುವದೆಂದಿದೆ. ಇದು ಶ್ರುತಿ ಸ್ಮೃತಿ ಪ್ರಸಿದ್ಧವಾಗಿದೆ. ದೇವಋಣ ತೀರಿಸಲು ಮಾಡುವ ಯಜ್ಞ, ಪಿತೃಋಣ ತೀರಿಸಲು ಮಾಡುವ ಧರ್ಮಪ್ರಜಾಸಿದ್ಧಿ ಇವು ಕೇವಲ ಪುರುಷನಿಂದಷ್ಟೇ ಸಾಧ್ಯವಿಲ್ಲವೆಂಬುದು ನಿರ್ವಿವಾದ. ಅದರಂತೆ "ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್‌ದ್ವಿಜ ಉಚ್ಯತೇ," ಇಲ್ಲಿಯೂ ಕೂಡ ಪುಲ್ಲಿಂಗ ನಿರ್ದೇಶವು ಸ್ತ್ರೀಪುರುಷ ಸಾಮಾನ್ಯವಾಗಿದೆ. ಪುರುಷನಿಗಷ್ಟೇ ಅದು ಸೀಮಿತವೆಂದಾದರೆ ಸ್ತ್ರೀಯರಿಗೆ ಜನ್ಮತ ಏವ ದ್ವಿಜತ್ವವಿದೆಯೆಂದ ಹಾಗಾಯಿತು. ಅಥವಾ ಶೂದ್ರಿಣಿಯಂತೆ ಅಸಂಸ್ಕೃತಳಾದ ಅವಳು ದ್ವಿಜನಿಗೆ ವಿವಾಹ ಯೋಗ್ಯಳು ಹೇಗೆ ? ಎಂಬುದೂ ವಿಚಾರಾರ್ಹವಾಗುತ್ತದೆ.

ಇನ್ನು ಸ್ತ್ರೀಯರಿಗೆ ಮಂತ್ರೋಪದೇಶ ಮಾಡಿದರೆ ಆ ಮಂತ್ರದ ಶಕ್ತಿಯೇ ಹೋಗುತ್ತದೆಯಲ್ಲ ? ಮಂತ್ರೋಪದೇಶ ಮಾಡಿದವನೂ ಪಾಪಿಯಾಗುತ್ತಾನೆ ಎಂಬುದಕ್ಕೆ ದೇವಯಾನಿ ಹಾಗೂ ಕಚ ಸಾಕ್ಷಿಯಾಗಿದ್ದಾರೆ. ದೇವಯಾನಿಗೆ ಮಂತ್ರೋಪದೇಶದಿಂದ ಸಂಜೀವನೀ ಮಂತ್ರದ ಶಕ್ತಿ ಹೋಯಿತು. ಸರ್ವತಂತ್ರ ಸ್ವತಂತ್ರರೂ ಸರ್ವೇಷ್ಟ ಸಾಧನ ಸಮರ್ಥರೂ ಆದ ಶುಕ್ರಾಚಾರ್ಯರು ಆಗಲೇ ಹತವೀರ್ಯರಾದರು ಎಂದು ಕೇಳುತ್ತೇವೆ.

ಇದಕ್ಕಿಂತಲೂ ವಿಶಿಷ್ಟವಾದದ್ದು ಮಹದನಿಷ್ಟವನ್ನು ತಂದೊಡ್ಡುವದೂ ಸರ್ವಾರಿಷ್ಟಕ್ಕೆ ಕಾರಣ ನರಕಪತನಾದಿ ದುರಿಷ್ಟ ದುರಂತ ಫಲವನ್ನು ಕೊಡುವಂಥಾದ್ದು ಸ್ತ್ರೀಯರಿಗೆ ಗಾಯತ್ರೀ ಉಪದೇಶವೆಂಬುದು. ನರಸಿಂಹತಾಪಿನೀ ಉಪನಿಷತ್ತಿನಲ್ಲಿ ಸ್ತ್ರೀಯರಿಗೆ ವೇದೋಪದೇಶಕನು ಘೋರತರ ನರಕದಲ್ಲಿ ಬೀಳುವನೆಂದಿದೆ. ಉಪನಿಷತ್ತಿನಲ್ಲಿ ಹೇಳಿದ್ದರಿಂದ ಅದೂ ಶ್ರೇಷ್ಠವಾದ

ಪ್ರಮಾಣವೇ. · ಅಲ್ಲದೇ "ಸ್ತ್ರೀಶೂದ್ರ ದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ" ಎಂಬುವದರಿಂದ ಅವರಿಗೆ ಮಂತ್ರಗಳನ್ನು ಕೇಳಲೂ ಅಧಿಕಾರವಿಲ್ಲದಿರುವಾಗ ವೇದಪಠನವೆಲ್ಲಿ ಬಂತು ? ಇವೆಲ್ಲಾ ಪ್ರತ್ಯುಕ್ತಿಗಳಾಗಿ ಕಾಣುತ್ತವೆ. ಯಾಕೆಂದರೆ, ಸ್ತ್ರೀಯರಿಗೆ ಉಪನಯನಾದಿಗಳು ಪ್ರತ್ಯಕ್ಷವಾಗಿ ನಡೆಯುತ್ತಿದ್ದಾಗ ಈ ವಚನಗಳಿಗೆ ಏನು ? ಅದು ಹೇಗೆ ? ಸಂಗತವಾಗಿತ್ತು. "ಪುರಾಕಲ್ಪೇತು ನಾರೀಣಾಂ ಮೌಂಜೀಬಂಧನಮಿಷ್ಯತೇ," ಇದರಿಂದಲೇ ಗತಾರ್ಥತೆಯಾದಂತೆ. ಅಥವಾ ಬೇರೆ ಕಾಮ್ಯ, ಪೌರಾಣಿಕ, ತಾಂತ್ರಿಕ ಮಂತ್ರಗಳ ಉಪದೇಶವನ್ನಷ್ಟೇ ನಿಷೇಧಿಸಿದೆಯೆಂದು ತಿಳಿಯಬೇಕೇ ಹೊರತು ದ್ವಿಜತ್ವಸಿದ್ಧಿಗೂ ನಿತ್ಯಕರ್ಮಾನುಷ್ಠಾನಕ್ಕೆ ಉಪಯುಕ್ತವಾದ ಮಂತ್ರಗಳಿಗೆ ನಿಷೇಧ ಪರವಲ್ಲವೆಂದು ತಿಳಿಯಬೇಕು.

ಇನ್ನೊಂದೆಂದರೆ ತಮ್ಮ ಸಂತಾನಕ್ಕೆ ದ್ವಿಜತ್ವವನ್ನು ಇಚ್ಛಿಸುವ ಪುರುಷರು ಶೂದ್ರರಂತೆ ಅಸಂಸ್ಕೃತರಾದ ಶೂದ್ರಸಮಾನಳಾದ ಸ್ತ್ರೀಯಿಂದ ಬ್ರಾಹ್ಮಣಾದಿಧರ್ಮ ಪ್ರಜಾಭ್ಯುದಯವನ್ನು ಪಡೆಯಲು ಸಮರ್ಥರಾದಾರೆಂದು ಕೇಳಬೇಕಾಗಿದೆ. ಯಾಕೆಂದರೆ ಸಜಾತೀಯ ದಂಪತಿಗಳಿಂದಲೇ ಸಜಾತೀಯಧರ್ಮ ಪ್ರಜಾ ನಿಯಮದಂತೆ, "ಬ್ರಾಹ್ಮಣ್ಯಾಂ ಜಾತೋ ಬ್ರಾಹ್ಮಣೋ ಭವತಿ," ಹೀಗೆ ಮನ್ವಾದಿಶಾಸ್ತ್ರ ವಿಧಾನವಿದೆ. ಇಲ್ಲದೇ ಇದ್ದರೆ ವಿಜಾತೀಯ ಜಾತಿ ಸಂಕರವಾಗುತ್ತದೆ. ಅಂಥವರನ್ನು ಚಾತುರ್ವರ್ಣ್ಯದಲ್ಲಿಯೂ ಸೇರಿಸದೆ, ನಿಷಾದ ಪಾರಶವ ಮೊದಲಾದ ಸಂಜ್ಞೆಗಳಿಂದ ಪೃಥಕ್ಕಾಗಿ ನಿರ್ದೇಶ ಮಾಡಿದ್ದಾರೆ. ಯಾಜ್ಞವಲ್ಕ್ಯರಿಗೂ ಇದು ಸಮ್ಮತವಿರಲಿಲ್ಲವೆಂಬುದು ಅವರ ಮಾತಿನಿಂದ ತಿಳಿಯುತ್ತದೆ.

"ಯದುಚ್ಯತೇ ದ್ವಿಜಾತೀನಾಂ ಶೂದ್ರಾದ್‌ದಾರೋಪಸಂಗ್ರಹಃ ನೈತನ್ಮಮ ಮತಂ ಯಸ್ಮಾತ್ ತತ್ರಾಯಂ ಜಾಯತೇ ಸ್ವಯಮ್"

ದ್ವಿಜಾತಿಯು ಶೂದ್ರಳನ್ನು ಮದುವೆಯಾಗಬಹುದೆಂಬುದಕ್ಕೆ ನನ್ನ ಮತವಿಲ್ಲ ಯಾಕೆಂದರೆ ಅಲ್ಲಿ ತಾನೇ ಹುಟ್ಟುತ್ತಾನೆ. ಮತ್ತು ಜಾತಕರ್ಮಾದಿ ಸಂಸ್ಕಾರವಿಧಾಯಕವಾದ ಆಶ್ವಲಾಯನಾದಿ ಗೃಹ್ಯ ಸೂತ್ರಗಳಲ್ಲಿ "ಆವೃತ್ಯೈವ ಕುಮಾರ್ಯಾಃ" ಎಂದು ಸೂತ್ರದಲ್ಲಿ ಬಹುಬಾರಿ ಪ್ರತ್ಯೇಕ ಸಂಸ್ಕಾರಗಳಿಗೆ ಹೀಗೆ ಹೇಳಿದ್ದು ಕಂಡುಬರುತ್ತಿದೆ. ಸುಮ್ಮನೆ ಅಮಂತ್ರಕವಾಗಿ ಸ್ತ್ರೀಯರಿಗೆ ಆ ಸಂಸ್ಕಾರಗಳನ್ನು ಮಾಡಬೇಕೆಂಬುದು ಅದರರ್ಥ. ಇದು "ತೂಷ್ಣೀಮೇತಾಃ ಕ್ರಿಯಾ ಸ್ತ್ರೀಣಾಂ," ಸ್ತ್ರೀಯರಿಗೆ ಈ ಎಲ್ಲ ಸಂಸ್ಕಾರಗಳೂ ಸುಮ್ಮನೆ ಮಾಡತಕ್ಕವು. ಮಂತ್ರಾದಿಗಳನ್ನು ಉಚ್ಚರಿಸತಕ್ಕದ್ದಲ್ಲವೆಂಬುದಕ್ಕೆ ಸಮಾನವಾಗಿದೆ.

ಕುಮಾರಿಯರಿಗೆ ಜಾತಕರ್ಮಾದಿಗಳನ್ನು ಅಮಂತ್ರಕವಾಗಿ ವಿಧಿಸಿದ್ದರಿಂದ ಉಪನಯನವೂ ಹಾಗೆಯೇ ಎಂತ ಹಲವರು. ಆದರೆ ಹಾಗೆ ಕಲ್ಪನೆ ಮಾಡುವದೂ ಸರಿಯಲ್ಲ. ಜಾತಕರ್ಮಾದಿ ಚೌಲಾಂತ ಸಂಸ್ಕಾರಗಳಿಗೆ ಪ್ರತ್ಯೇಕವಾಗಿ "ಆ ವೃತ್ಯೈವ ಕುಮಾರ್ಯಾಃ" ಎಂಬಂತೆ, ಉಪನಯನ ವಿವಾಹಾದಿಗಳಿಗೆ ಹೇಳಿಲ್ಲ. ಆದ್ದರಿಂದ ಅವರಿಗೆ ಉಪನಯನವನ್ನು ಅಮಂತ್ರಕವಾಗಿ ಮಾಡುವದು ಆಶ್ವಲಾಯನರಿಗೆ ಸಮ್ಮತವಲ್ಲ.

ಇನ್ನು ಕೆಲವರು ಹಿಂದಿನ ಸಂಸ್ಕಾರಗಳಿಗೆ "ಆ ವೃತ್ಯೆವ ಕುಮಾರ್ಯಾಃ" ಎಂದು ಹೇಳಿದ್ದು ಉಪನಯನಕ್ಕೂ ಅನುವೃತ್ತವಾಗಿ ಆ ಸಂಸ್ಕಾರವೂ ಅಮಂತ್ರಕವೆಂದು ಹೇಳಿದರೆ ಆ ನ್ಯಾಯ ಮುಂದಿನ ವಿವಾಹಾದಿ ಸಂಸ್ಕಾರಗಳಿಗೂ ಅನುವೃತ್ತವಾಗಿ ವಿವಾಹವೂ ಅಮಂತ್ರಕವಾದರೆ ಯಾಜ್ಞವಲ್ಕ್ಯರ "ವಿವಾಹಸ್ತು ಸಮಂತ್ರಕಃ" ಎಂಬ ಮಾತಿಗೆ ವಿರುದ್ಧವಾಗುತ್ತದೆ. ಈಗ ಪ್ರಚಲಿತ ಸಮಂತ್ರಕ ವಿವಾಹಗಳಿಗೂ ಆ ವಚನವು ನಿರರ್ಥಕವಾಗುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ವಸ್ತುತಃ ಪ್ರಚಲಿತ ವಿವಾಹಗಳಲ್ಲಿ ಸದ್ಯೋವಧೂತ್ವ ಸಿದ್ಧಿಗಾಗಿ ಸ್ತ್ರೀ ಸಂಸ್ಕಾರವೆಂದು ಒಂದು ಸಂಸ್ಕಾರವನ್ನು ಮಾಡುತ್ತಾರೆ. ಕರ್ಮಕಾಂಡಿಗಳಾದ ವೈದಿಕ ಪುರೋಹಿತರು ಮಾಡಿಸುತ್ತಾರೆ. ಅಲ್ಲಿ ಅತೀತವಾದ ಜಾತಕರ್ಮ ಸಂಸ್ಕಾರಾದಿಗಳ ಲೋಪ ಪ್ರಾಯಶ್ಚಿತ್ತಕ್ಕಾಗಿ ಕೃಚ್ಛ್ರಾದಿಗಳಿಂದ, ಏಕತಂತ್ರದಿಂದ ಆ ಎಲ್ಲ ಸಂಸ್ಕಾರಗಳೂ ಸಂಪನ್ನವಾದವೆಂದು ಭಾವಿಸುತ್ತಾರೆ. ಆಗಲೇ ಉಪನಯನ ಸಂಸ್ಕಾರವನ್ನೂ ಅಮಂತ್ರಕವಾಗಿ ಮುಗಿಸುತ್ತಾರೆ. ಕೆಲವರು ಕೇವಲ ಮಂತ್ರಪಠನದಿಂದ ಆ ಉಪನಯನವನ್ನು ಮಾಡಿಸುತ್ತಾರೆ. ಇನ್ನು ಹಲವರು ಬಟುಗಳಿಗೆ ತೊಡಿಸಿದಂತೆ ಕಚ್ಛಕಟಿಸೂತ್ರಕಂಕಣಾದಿಗಳನ್ನು ....ಸೂತ್ರವನ್ನೂ ಸದ್ಯೋವಧೂ ಕುಮಾರಿಯರಿಗೆ ತೊಡಿಸುತ್ತಾರೆ, ಸಂಪ್ರದಾಯದಂತೆ. ಅದಕ್ಕೆ "ಜನಪದ ಧರ್ಮಾನ್ ಗ್ರಾಮಧರ್ಮಾಂಶ್ಚ ತಾನ್ ವಿವಾಹೇಪ್ರತೀಯಾತ್" ಎಂದು ಆಶ್ವಲಾಯನ ಸೂತ್ರದಲ್ಲಿ ಹೇಳಿದ್ದು ಸರಿಯಾಗಿದೆ. ಹೀಗೆ .... ಸಂಸ್ಕಾರವೆಂಬುದು ಉಪನಯನ ಸ್ಥಾನೀಯವೇ ಆಗಿದೆ.

"ವೈವಾಹಿಕೋವಿಧಿ ಸ್ತ್ರೀಣಾಮೌಪನಾಯನಿಕಃ ಸ್ಮೃತಃ" ವಿವಾಹವಿಧಿಯೇ ಸ್ತ್ರೀಯರಿಗೆ ಉಪನಯನವೆಂಬ ಮನುವಚನವೂ ಇದನ್ನೇ ಸಮರ್ಥಿಸುತ್ತದೆ. ಕೆಲವರು ಉಪನಯನ ಸಂಸ್ಕಾರವೂ ವಿವಾಹದಲ್ಲೇ ಸೇರುತ್ತದೆಯೆಂದು ಹೇಳುತ್ತಾರೆ. ಅದರಿಂದ ಉಪನಯನ-ವಾಯಿತೆಂದು ಭಾವಿಸುತ್ತಾರೆ. ಉಪನಯನದ ಅಭಾವವನ್ನು ಒಪ್ಪುವದಿಲ್ಲ. ಇದು ಸ್ವಲ್ಪ ಸಮಾಧಾನಕ್ಕೆ ಕಾರಣವಾಗಿದೆ. ವಸ್ತುತಃ ಆ ಸ್ತ್ರೀ ಸಂಸ್ಕಾರದಲ್ಲಿಯೇ ಉಪನಯನಾನುಷ್ಠಾನ ಮಾಡುವದು ಯುಕ್ತತರವಾಗಿದೆ.

ಚೌಲಸಂಸ್ಕಾರದಲ್ಲಿ ಕುಮಾರಕರಿಗೆ ಕೇಶಕರ್ತನ ಹಾಗೂ ಕೆಲವೆಡೆ ಮುಂಡನವೂ ಶಾಸ್ತ್ರವಿಹಿತವಾಗಿದೆ. "ಚೂಡಾಕಾರ್ಯಾ ಯಥಾಕುಲಂ" ಎಂಬುದರಿಂದ ಅದಕ್ಕೆ "ಯತ್ರಬಾಣಾಃ ಸಂಪತಂತಿ ಕುಮಾರಾ ವಿಶಿಖಾ ಇವ" ಎಂಬುದು ಅದಕ್ಕೆ ಶ್ರುತಿ, ಅದರಂತೆ ಕುಮಾರಿಯರಿಗೂ ಶಾಸ್ತ್ರದಲ್ಲಿ ಹೇಳಿದ್ದರೂ ಕೆಲವರು ಕನ್ಯೆಯರಿಗೆ ಕುರೂಪವಾಗುತ್ತದೆಯೆಂದೂ ಅಶ್ಲೀಲಾದಿಭಾವನೆಯಿಂದಲೂ ಮಾಡುವದಿಲ್ಲ. ಹಾಗಿದ್ದರೂ ಅಮಂತ್ರಕವಾಗಿ ಮಂತ್ರಪಠನ ಮಾತ್ರದಿಂದಾಗಲೀ ಅದು ಆಯಿತೆಂದು ತಿಳಿಯುತ್ತಾರೆ. ಇದೆಲ್ಲ ಕರ್ಮಕಾಂಡೀಯ ವಿದ್ವತ್ ಪುರೋಹಿತರ ಮಾರ್ಗದರ್ಶನದಂತೆ ನಡೆಯುತ್ತಿದೆಯೆಂಬುದು ವಿಶೇಷ.

ಆದ್ದರಿಂದ ಸರ್ವಾತ್ಮನಾ ಸ್ತ್ರೀಯರಿಗೆ ಉಪನಯನ ಸಂಸ್ಕಾರವು ಶಾಸ್ತ್ರದಲ್ಲಿ ಉಪದಿಷ್ಟವಾಗಿದೆಯೆಂಬುದು ಸಿದ್ಧವಾಗುವದಿಲ್ಲ. ಹೇಗಾದರೂ ಆ ಸಂಸ್ಕಾರ ಸಿದ್ಧಿಯನ್ನು

ಭಾವಿಸುವಂತಾಗಿದೆ. "ಅಕರಣಾದಪಿ ಮಂದಕರಣಂ ಶ್ರೇಯಃ," ಹಾಗಿದ್ದರೂ ಆ ಸ್ತ್ರೀಸಂಸ್ಕಾರದಲ್ಲಿಯಾಗಲೀ ವಿವಾಹಸಂಸ್ಕಾರದಲ್ಲಿಯಾಗಲೀ ಉಪನಯನ ಸ್ಥಾನೀಯ ಸಂಸ್ಕಾರವೆಂದು ಆ ಸದ್ಯೋವಧುಗಳಿಗೆ ಗಾಯತ್ರೀಮಂತ್ರೋಪದೇಶವನ್ನೂ ಮಾಡುವದಿಲ್ಲ. ವೇದಾಧ್ಯಯನಾದಿಗಳನ್ನೂ ಮಾಡಿಸುವದಿಲ್ಲ.

ವಸ್ತುತಃ "ಅಷ್ಟವರ್ಷಾ ಭವೇತ್ ಕನ್ಯಾ" ಎಂಬ ವಚನದಿಂದ ಎಂಟು ವರ್ಷದವಳ ವಿವಾಹವೇ ಉಪನಯನ ಸ್ಥಾನೀಯವಾಗಿದೆ. "ಅಷ್ಟವರ್ಷಂ ಬ್ರಾಹ್ಮಣಮುಪನಯೀತ," ಎಂದು ಬಟುಗಳಿಗೆ ಎಂಟು ವರ್ಷಕ್ಕೇ ಉಪನಯನ ಸಂಸ್ಕಾರವನ್ನು ವಿಧಿಸಿದ್ದಾರೆ.

ಸ್ತ್ರೀಯರಿಗೂ ಅನೇ ವರ್ಷದಲ್ಲಿ ಉಪನಯನದಿಂದಾಗಿ ಹಾಗೂ ಉಪನಯನ ಸ್ಥಾನೀಯವಾದ ಸ್ತ್ರೀಸಂಸ್ಕಾರದಿಂದಾಗಿ ಸದ್ಯೋವಧೂತ್ವ ಸಿದ್ಧಿಯಿಂದ ಅವಳ ವಿವಾಹ ಮಾಡುವದು ಪೂರ್ವಾಚಾರ ಪರಂಪರಾಪ್ರಾಪ್ತವಾಗಿದೆ. ಅವರಿಗೆ ಅನೇ ವರ್ಷದಲ್ಲಿ ವಿವಾಹವಿಧಿ ಶಾಸ್ತ್ರ ವಿಹಿತವಲ್ಲ. ಆದರೆ ಉಪನಯನ ಸ್ಥಾನೀಯವಾಗಿ ವಿವಾಹವೂ ಪ್ರಾಪ್ತವಾಗುತ್ತದೆ. ಸದ್ಯೋವಧೂತ್ವ ಸಿದ್ಧಿಗಾಗಿ ಹಾಗೆ ಅನುಷ್ಠಾನ ಬಂದಿದೆಯೆಂದು ತಿಳಿಯಬಹುದಾಗಿದೆ.

ಹಾಗೂ ಉಪನಯನದಲ್ಲಿ ಬಟುವಿಗೆ ದೀಕ್ಷಾವ್ರತಬಂಧಾದಿ ಸ್ಥಾನೀಯವಾಗಿ ಮೌಂಜೀಬಂಧನ ಕಟಿಸೂತ್ರಾದಿಗಳು ವಿಧಿಸಲ್ಪಟ್ಟಂತೆ, ಸ್ತ್ರೀಯರಿಗೂ ಅದು ಇತ್ತು ಎಂದು ಅನುಮಾನಿಸಬಹುದಾಗಿದೆ. ಅವರಿಗೂ ಮುಂದೆ ದರ್ಶಾದಿ ಇಷ್ಟಿಗಳ ಸಮಯದಲ್ಲಿ ಯೋಕ್ತ್ರ ಬಂಧನವಿದ್ದದ್ದು ಸರಿಯಾಗಿದೆ.

ಅದರಂತೆ ಅವರಿಗೆ ಮಂಗಲಸೂತ್ರದಿಂದ ಹೊರತಾದ ಆಗಲೇ ಧರಿಸಿದ ಕಂಠಸೂತ್ರ ಯಜ್ಞೋಪವೀತ ಸ್ಥಾನೀಯವಾಗಿದೆ. ಇದಕ್ಕಿಂತಲೂ ಹೆಚ್ಚಿನದಾದ ಇನ್ನೊಂದು ಪ್ರಮಾಣವೆಂದರೆ ಅಪುತ್ರಿಕಳಾದ ವಿಧವೆಯು ಪತಿಯ ಶ್ರಾದ್ಧಾದಿಗಳನ್ನು ಮಾಡುವಾಗ ಅವಳಿಗೊಂದು ವಸ್ತ್ರಾದಿ ನಿರ್ಮಿತವಾದ ಪಾಥೇಯವನ್ನು ಉತ್ತರೀಯದಂತೆ ಧರಿಸಲು ಹೇಳಿದ್ದಾರೆ. ಅದು ತಿಲತರ್ಪಣ, ಪಿಂಡಪ್ರದಾನಾದಿ ಸಮಯದಲ್ಲಿ ಸವ್ಯಾಪಸವ್ಯಾದಿ ಕ್ರಿಯೆಗಳಿಗೆ ಅನುಕೂಲವಾಗಿರುತ್ತದೆ. ಪುರುಷರು ಯಜ್ಞೋಪವೀತವನ್ನು ಉಪಯೋಗಿಸುವಂತೆ, ಕರ್ಮಕಾಂಡೀಯ ಪುರೋಹಿತರು ಈ ವಿಷಯವನ್ನು ತಿಳಿದವರಾಗಿ ಅದರಂತೆ ಈಗಲೂ ಮಾಡಿಸುವದು ಪ್ರತ್ಯಕ್ಷವಾಗಿದೆ. ಆ ಪಾಥೇಯ ವಸ್ತ್ರವೇ ಯಜ್ಞೋಪವೀತದಂತೆ ಇರುತ್ತದೆ. ಕೇವಲ ವಸ್ತ್ರವನ್ನು ಸವ್ಯಾಪಸವ್ಯ ಮಾಡಲು ಬರುವದಿಲ್ಲ. ಅದು ಸರಿಯೂ ಅಲ್ಲ. ಮಹಾರಾಷ್ಟ್ರಾದಿ ಪ್ರದೇಶಗಳಲ್ಲಿ ಈಗಲೂ ಸವ್ಯಾಪಸವ್ಯಕರಣಕ್ಕೆ ಅಪುತ್ರವಿಧವೆಯರಿಗೆ ಅದರಂತೆ ಮಾಡಿಸುವದು ವ್ಯವಾಟಿಯಲ್ಲಿದೆ. ಆದ್ದರಿಂದ ಅದು ಅವರಿಗೆ ಯಜ್ಞೋಪವೀತಸ್ಥಾನೀಯವಾಗಿದೆ.

ಪತಿಮರಣಾನಂತರ ಕೇಶವಪನ ಮಾಡಿಸಿ ಕಂಠಸೂತ್ರ ಮಂಗಲಸೂತ್ರಗಳ ಪರಿತ್ಯಾಗ, ಕಂಕಣಾದಿಗಳ ವಿಸರ್ಜನ ಹಾಗೂ ಮಾಂಗಲ್ಯವಾದ ಕುಂಕುಮಾದಿಗಳನ್ನು ಅಳಸಿ ಸನ್ಯಾಸಿಯಂತಿರುವ ಅವರಿಗೆ ತಿರುಗಿ ಪಾಥೇಯ ವಸ್ತ್ರವನ್ನು ಕೊಟ್ಟು ಶ್ರಾದ್ಧಾದಿಗಳನ್ನು ಮಾಡಿಸುವದನ್ನು ನೋಡಿದರೆ ಪೂರ್ವಾಶ್ರಮದಲ್ಲಿ ಅಂದರೆ ಗಾರ್ಹಸ್ಥ್ಯದಲ್ಲಿಯೂ ಅವರಿಗೆ ಯಜ್ಞೋಪವೀತಾದಿಗಳನ್ನು ತೋರಿಸುತ್ತಿದ್ದರೆಂಬುದು ತಿಳಿಯುತ್ತದೆ. ಇನ್ನೊಂದು ಅತ್ಯಂತ ಪ್ರಮಾಣವೆಂದರೆ ಅವರಿಗೆ ವೈದಿಕ ಸಂಸ್ಕಾರತೆಯಲ್ಲಿ ಸಮಾನತೆ, ಅವರ ಅಂತ್ಯೇಷ್ಟಿ ವಿಧಾನ, ಅದನ್ನು ವೈದಿಕ ಮಂತ್ರ ಮುಖವಾಗಿ ನಡೆಸುತ್ತಾರೆ. ಅದು ವಿಧವೆಗಾದರೂ ಸಮಾನವಾದ ತಂತ್ರದಿಂದಲೇ ನಡೆಯುತ್ತದೆ. ಅದರಂತೆ ಇಂದೂ ನಡೆಯುತ್ತಿದೆಯೆಂಬುದು ಪ್ರತ್ಯಕ್ಷ ಸಿದ್ಧವಾಗಿ "ಅಸೌಸ್ವರ್ಗಾಯ ಲೋಕಾಯ ಸ್ವಾಹಾ" ಎಂದು ಮುಂತಾದ ಮಂತ್ರಗಳಿಂದ,

ಅವಳ ಶರೀರಹವನದಿಂದಲೂ ಯಜ್ಞವನ್ನು ಭಾವಿಸಬೇಕೆಂಬುದೂ ಶಾಸ್ತ್ರವಿಹಿತ-ವಾಗಿದೆ. ಪುರುಷರ ಅಂತ್ಯೇಷ್ಠಿಗೆ ಸಮಾನವಾಗಿಯೇ ಇದು ಇರುತ್ತದೆಯೆಂದಿಲ್ಲ. ಆ ಅಂತ್ಯೇಷ್ಟಿ ಯಜ್ಞದಲ್ಲಿ ಅವಳ ಶರೀರ ಹವನಾದಿಗಳಿಗೆ ವೇದಮಂತ್ರಗಳನ್ನೇ ಹೇಳುತ್ತಾರೆ. ನಿರ್ಜೀವ ಶವದಹನದಲ್ಲಿ ಯಜ್ಞಸಿಧ್ಯರ್ಥವಾಗಿ ವೇದಮಂತ್ರಗಳನ್ನೇ ಹೇಳುತ್ತಿದ್ದು, ಜೀವಿಸಿರುವಾಗ ಅದೇ ವೇದಮಂತ್ರಗಳ ಶ್ರವಣಕ್ಕೂ ಉಚ್ಚಾರಣೆಗೂ ಅವಳಿಗೆ ಅಧಿಕಾರವಿಲ್ಲವೆಂಬುದು ಶೋಚನೀಯವೂ ಚಿರಚಿಂತನೀಯ ವಿಷಯವೂ ಆಗಿದೆ. ಇವೆಲ್ಲಕ್ಕೆ ನಮ್ಮ ದೌರ್ಭಾಗ್ಯ ಹಾಗೂ ನಮ್ಮವರ ದೌರ್ಬಲ್ಯ ಹಾಗೂ ದೌರ್ಮನಸ್ಸೇ ಕಾರಣವೆಂದು ಹೇಳಲು ನನಗೆ ನಾಚಿಕೆಯೆನಿಸುತ್ತದೆ. ಮತ್ತು ಹೆದರಿಕೆಯಾಗುತ್ತಿದೆ. ಯಾಕೆಂದರೆ ಲೋಕವಿದನ್ನು ಕೇಳಿ ಸಿಟ್ಟಾದಾರು ಖಿನ್ನರಾದಾರು ಎಂದು ಮುಂತಾಗಿ ಬಹುವಿಧ ಭಾವನಾ ತರಂಗಗಳೇಳುತ್ತವೆ. ಇವೆಲ್ಲವನ್ನು ತಿಳಿದೂ ಈ ವಿಷಯದಲ್ಲಿ ಲೋಕೈಷಿಣಿಗಳಾದ ವಿದ್ವಾಂಸರು ವೃಥಾಭಿಮಾನ-ವನ್ನೇ ತೋರಿಸುತ್ತಾರೆ. ಆದ್ದರಿಂದ ಈಗಲೂ ಸ್ತ್ರೀಯರಿಗೆ ಉಪನಯನಾದಿಗಳನ್ನು ಒಪ್ಪುವದಿಲ್ಲ. ಮಾಡಲು ಮಾಡಿಸಲೂ ಒಪ್ಪುವದಿಲ್ಲ. ಅವರಿಗೆ ವೈದಿಕ ವಿದ್ಯೆಯಲ್ಲಿ ಪ್ರವೃತ್ತಿಯನ್ನಾಗಲೀ ಸಮುನ್ನತಿಯನ್ನಾಗಲೀ ಇಚ್ಛಿಸುವದಿಲ್ಲ. ಒಪ್ಪುವದೂ ಇಲ್ಲ. ಪುರುಷರಾದ ಅವರ ಮಕ್ಕಳೇ ತಮ್ಮ ತಾಯಿಯರಾದ ಸ್ತ್ರೀಯರಿಗೆ ತಮ್ಮ ಹೆಣ್ಣು ಮಕ್ಕಳಿಗೆ ತಂಗಿಯರಿಗೆ ಶೂದ್ರಪಂಕ್ತಿಯಲ್ಲೇ ಸೇರಿಸುತ್ತಾರೆ. ಇಲ್ಲಿಯವರೆಗೂ ಶೂದ್ರರಂತೆ ಭಾವಿಸುತ್ತಾ ಬಂದಿದ್ದಾರೆ. ತಿರುಗಿ ಅಸಂಸ್ಕೃತರೂ ಶೂದ್ರಿಯಂತಿರುವವರೂ ಅಜ್ಞರೂ ಅಬಲೆಯರೂ ದುರ್ಬಲ ದೇಹವುಳ್ಳವರೂ ದುರ್ದೈವದಿಂದ ಅಪಹೃತ ಹೃದಯವುಳ್ಳವರೂ ವಿದ್ಯಾದಿ ವಿರಹದಿಂದ ರೂಕ್ಷಹೃದಯದವರಿಂದ ಸುವೀರ್ಯವುಳ್ಳವರೂ ವಿದ್ವಾಂಸರೂ ವೀರರೂ ಸ್ವತಂತ್ರ ಹೃದಯರೂ ಆದ ಪುತ್ರಪೌತ್ರರನ್ನು ಅವರ ಸರ್ವಾಭ್ಯುದಯವನ್ನು ಹ್ಯಾಗೆ ಕಾಣುತ್ತಾರೋ ಏನೋ, ಇದೆಲ್ಲ ಕೇವಲ ಮನೋರಥ ಮಾತ್ರವೋ ಏನೋ ? ಎಂಬುದು ಚಿಂತನೀಯ. ನಾವು ಭಾರತೀಯರು. ಆ ಆರ್ಷೇಯ ವೈದಿಕ ಸಂಸ್ಕೃತಿ ಪವಿತ್ರವಾದ ಬೀಜಕ್ಷೇತ್ರಗಳಿಂದ ಪರಂಪರೆಯುಳ್ಳ ದಿವ್ಯವೂ, ಭವ್ಯವೂ ಎಂದು ತಿಳಿದು, ಹೋದ ಹೋದಲ್ಲಿ

ಸಭೆಗಳಲ್ಲಿ ಅದರ ಗಾಂಭೀರ್ಯವನ್ನು ತಿಳಿಸುತ್ತ ವರ್ಣಿಸುತ್ತಾ ಇದ್ದೇವೆ. ಇದರ ಬೀಜರೂಪವಾಗಿ ಹೇಳುತ್ತಿರುವದು ಕ್ಷೇತ್ರಶುದ್ಧಿಗಾಗಿಯೇ ಎಂಬುದು ಪ್ರತ್ಯಕ್ಷ. ಆದ್ದರಿಂದ ರೈತರು ಬೀಜವನ್ನು ಹಾಕುವಾಗ ಮೊದಲು ಕ್ಷೇತ್ರವನ್ನು ಗೋಮೂತ್ರ ಗೋಮಯಾದಿ ಗೊಬ್ಬರಗಳಿಂದ ಪವಿತ್ರ ದ್ರವ್ಯ ವಿಶೇಷದಿಂದ ಸಂಸ್ಕರಿಸಿ ನಂತರ ಸಂಸ್ಕೃತವಾದ ಪವಿತ್ರವಾದ ಗದ್ದೆಯಲ್ಲಿ ಬೀಜಗಳನ್ನು ನೆಟ್ಟಾಗ ಅದು ಹೆಚ್ಚಿನ ಫಲಕಾರಿಯಾಗಬಲ್ಲುದು. ಆ ಫಲವನ್ನು ಪೂರ್ಣವಾಗಿ ಅನುಭವಿಸುವರು. ಅದರಂತೆ ಧರ್ಮಪ್ರಜೆಯನ್ನೂ ಸತ್ಸಂತತಿಯನ್ನು ಪಡೆಯಲು ಸ್ತ್ರೀಯರಿಗೂ ಬ್ರಾಹ್ಮೀಶರೀರ ಸಂಪತ್ತಿಗಾಗಿ ಗರ್ಭದಿಂದಲೇ ವೈದಿಕ ಲೌಕಿಕ ಸಂಸ್ಕಾರಗಳು ಶಾಸ್ತ್ರವಿಹಿತವಾಗಿದ್ದು ಪ್ರಸಿದ್ಧವಾಗಿದೆ.

"ಗಾರ್ಭೈರ್ಹೋಮೈರ್ಜಾತಕರ್ಮ ಚೌಲಮೌಂಜೀನಿಬಂಧನೈಃ ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥" (ಮನು.ಸ್ಮೃ. ೨)

ಗರ್ಭಾಧಾನ, ಜಾತಕರ್ಮ, ಚೌಲ, ಮುಂಜಿ, ಮಹಾಯಜ್ಞ, ಯಜ್ಞಾದಿಗಳಿಂದ ಈ ಶರೀರವು ಬ್ರಾಹ್ಮೀ ಶರೀರವಾಗಿ ಪರಿಣಮಿಸುತ್ತದೆ. ಇಂಥ ಶ್ಲೋಕಾದಿಗಳ ಶ್ರವಣ ಮಾತ್ರದಿಂದ ಸಂತುಷ್ಟರಾದ ವಿದ್ವಾಂಸರೂ ಕೂಡಾ ಆ ಅನುಷ್ಠಾನ ಮಾಡಲು ಕಾರ್ಯ ಪ್ರವೃತ್ತರಾಗುವದಿಲ್ಲ. ಆ ಇಚ್ಛೆಯನ್ನೂ ಮಾಡುವದಿಲ್ಲವೆಂಬುದು ವಿಷಾದಾಸ್ಪದವಾಗಿದೆ. ಯಾವ ಕಾರಣಕ್ಕಾಗಿ ಪ್ರಧಾನ ಸಂಸ್ಕಾರವಾದ ಉಪನಯನದಿಂದ ಸತ್ಕ್ಷೇತ್ರಭೂತರಾದ ಎಲ್ಲ ಸ್ತ್ರೀಯರು ವಂಚಿತರಾಗಿ ಅಸತ್ಕೃತರೂ ಅಸದ್ಭಾವಿಕರೂ ಆದರೋ ತಿಳಿಯದು. ಆದ್ದರಿಂದಲೇ ಅಂಥ ಅಸಂಸ್ಕೃತ ಅವೈದಿಕ ಸತ್ವಯುಕ್ತರಾದ ಸ್ತ್ರೀಯರ ಶರೀರದಿಂದ ಹುಟ್ಟಿದ ನಾವೆಲ್ಲರೂ ಅದರಂತೆ ಅಸಂಸ್ಕೃತರೂ ವೈದಿಕ ಸತ್ವಹೀನರೂ ಆಗಿದ್ದೇವೆ. ಅದಕ್ಕಾಗಿಯೇ ಈ ಶ್ಲೋಕ ಹುಟ್ಟಿದ್ದು ಸತ್ಯವಾಗಿದೆ.

"ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್‌ದ್ವಿಜ ಉಚ್ಯತೇ" ಎಂದು ಹುಟ್ಟುವಾಗ ಶೂದ್ರನಾಗಿದ್ದು ಸಂಸ್ಕಾರದಿಂದಾ ದ್ವಿಜನೆಂದು ಹೇಳಲ್ಪಡುತ್ತಾನೆ ಎಂದಿರುವದರಿಂದ ನಂತರ ಜಾತಕರ್ಮಾದಿ ಸಂಸ್ಕಾರಗಳಿಂದಲೂ ಉಪನಯನಾದಿಗಳಿಂದಲೂ ದ್ವಿಜತ್ವ ಸಿದ್ಧಿಯುಂಟಾಗಿ ದಿವ್ಯಭಾವೋದಯವುಂಟಾಯಿತೆಂದು ತಿಳಿಯುತ್ತಾರೆ. ಸಾಮಾನ್ಯವಾಗಿ ಈ ಮಾತನ್ನು ಹೇಳಿದ್ದರಿಂದ ಸಾರ್ವಜನೀನವೆಂದು ತಿಳಿದು ಸ್ತ್ರೀಯರಿಗೂ ಇದು ಸಮಾನವೇ ಸರಿ.

ಕೆಲವರು ಈ ಆಕ್ಷೇಪಕ್ಕೆ ಅವಕಾಶವೇ ಇಲ್ಲವೆನ್ನುತ್ತ "ಜನ್ಮನಾ ಜಾಯತೇ ಶೂದ್ರಃ" ಎಂಬ ವಚನವೇ ಧರ್ಮಶಾಸ್ತ್ರದಲ್ಲಿಲ್ಲವೆಂದು ಹೇಳುತ್ತಾರೆ. ಇರಲಿ, ಅದರಿಂದ ಹಾನಿಯೇನು? ಆ ವಚನವಿಲ್ಲದಿದ್ದರೂ ಕೂಡಾ ಆ ವಿಷಯದ ಅಸ್ತಿತ್ವವನ್ನೂ, ಯಥಾರ್ಥತೆಯನ್ನೂ ಯಾರಿಂದ ದೂರ ಮಾಡಲು ಶಕ್ಯ? ಅದು ವಸ್ತುಸಿದ್ಧವಾದ ವಿಷಯ. ಹುಟ್ಟಿದ ಎಲ್ಲರಿಗೂ ಸಮಾನವಾದ ಅಸಂಸ್ಕೃತತ್ವ, ಅದ್ವಿಜತ್ವವಿದೆ. ಅಂದಮೇಲೆ ವೈದಿಕ ಸಂಸ್ಕಾರವನ್ನು ಮಾಡಲು ದ್ವಿಜತ್ವಸಿದ್ಧಿಯಿಲ್ಲದಿರುವದರಿಂದ ಅವರಿಗೆ ದ್ವಿಜರೊಡನೆ ವಿವಾಹ ಯೋಗ್ಯತೆಯೂ

ಉಂಟಾಗುವದಿಲ್ಲ ಎಂಬುದೂ ವಸ್ತುಸಿದ್ಧವೇ. ವೈದಿಕ ಸಂಸ್ಕಾರ ರಹಿತರಾದ ಕನ್ಯೆಯರಿಗೆ ದ್ವಿಜತ್ವಾಭಾವದಿಂದಾಗಿ ಅವರು ವಿವಾಹಕ್ಕೂ ಶಾಸ್ತ್ರದೃಷ್ಟಿಯಿಂದ ಅನರ್ಹರು. ಹಾಗೆಯೇ ಮುಂದೆಯೂ ಕೂಡಾ ವೈದಿಕಯಜ್ಞಾದಿ ಧರ್ಮಕರ್ಮಗಳಲ್ಲಿ ಹಾಗೂ ಧರ್ಮಪ್ರಜಾದಿಸಿದ್ಧಿಗೂ ಯೋಗ್ಯತೆಯಿಲ್ಲದಿರುವದೂ ಸ್ವತಃಸಿದ್ಧ. ಆದ್ದರಿಂದ ಬ್ರಾಹ್ಮೀವಿವಾಹಾದಿಗಳಿಂದಾಗಿ ಆ ಯೋಗ್ಯತೆಯನ್ನು ಸಂಪಾದಿಸಬೇಕಾದ್ದು. ಅದರಿಂದ ಅವಳು ತನ್ನ ಸಂತತಿಗೂ ಬ್ರಾಹ್ಮೀ ಶರೀರೋದಯಕ್ಕೆ ಕಾರಣೀಭೂತಳಾಗುತ್ತಾಳೆ. ಕ್ಷೇತ್ರ ಸಂಸ್ಕೃತಿಯಾಗಿ ಬೀಜದ ಪವಿತ್ರೀಕರಣಕ್ಕೆ ಸಮರ್ಥಳೂ ಸುವೀರ್ಯತ್ವಾದಿ ಸತ್ವಸಂಪಾದನ ಯೋಗ್ಯಳೂ ಆಗುತ್ತಾಳೆ. ಆದ್ದರಿಂದಲೇ "ಬ್ರಾಹ್ಮೀಯಂ ಕ್ರಿಯತೇ ತನುಃ" ಈ ಶರೀರವು ಬ್ರಹ್ಮರೂಪವಾಗುತ್ತದೆಂದಿದ್ದು.

ಆದ್ದರಿಂದ ಈ ಎಲ್ಲ ದೋಷಗಳನ್ನು ತೊಲಗಿಸಿ ದ್ವಿಜತ್ವಾದಿಯೋಗ ಸತ್ವಸಿದ್ಧಿಗಾಗಿ ಮಾತೃವರ್ಗಗಳಿಗೂ ಉಪನಯನಾದಿ ಸಂಸ್ಕಾರ ಪೂರ್ವಕ ವೈದಿಕವಿದ್ಯಾವಲಂಬನ, ಯಜ್ಞಾದಿ ಸತ್‌ಕ್ರಿಯೆಗಳಲ್ಲಿ ಸೇರುವಿಕೆ ಸದ್ಧರ್ಮಾಚರಣವೂ ಅವರಿಗೆ ಅವಶ್ಯವೆಂದು ನಿರ್ಣಯಿಸ-ಲಾಗಿದೆ.


ಇಲ್ಲಿ ದಿವ್ಯಸತ್ವಪೂರ್ಣವಾದ ಪರಮ ಪವಿತ್ರವಾದ ಸರ್ವತಂತ್ರಸ್ವತಂತ್ರವಾದ ಗಾಯತ್ರೀಮಂತ್ರಾತ್ಮಿಕವೇ ಸರ್ವವೈದಿಕ ಸಂಸ್ಕೃತಿಗಳಿಗೆ ಮೂಲವಾಗಿ ಸರ್ವಾರ್ಥಸಿದ್ಧಿಗೆ ಕಾರಣೀಭೂತವೆಂಬುದು ವೇದೋಪನಿಷದಾದಿ ಸರ್ವಶಾಸ್ತ್ರಸಿದ್ಧಾಂತವಾಗಿದೆ. ಹಾಗಾಗಿ ಸದ್ಯೋವಧೂತ್ವ ಸಂಪತ್ತಿಗಾಗಿ ಉಪನಯನ ಸಂಸ್ಕಾರ ಪೂರ್ವಕ ವಿವಾಹವನ್ನು ಮಾಡಿ ವೇದವಿದ್ಯಾವಿಜ್ಞಾನ ಸಂಗ್ರಹಣಕ್ಕೆ ಪ್ರಯತ್ನಿಸುವದು ಅಥವಾ ಬ್ರಹ್ಮವಾದಿನೀತ್ವಕ್ಕಾಗಿ ಉಪನಯನದ ನಂತರ ವೇದವಿದ್ಯಾದಿಗಳನ್ನು ಮುಗಿಸಿ ವಿವಾಹಮಾಡಿ ಗೃಹಸ್ಥಧರ್ಮವನ್ನು ಆಶ್ರಯಿಸಿ ಸರ್ವಾಭೀಷ್ಟವನ್ನು ಸಾಧಿಸುವದು ಉತ್ತಮ. ಆದ್ದರಿಂದ ಭಾರತೀಯ ಸಂಸ್ಕೃತಿಯಲ್ಲಿ ಎಲ್ಲಕ್ಕಿಂತ ಪ್ರಧಾನವಾದದ್ದು ಗಾಯತ್ರೀಮಂತ್ರ ಮುಖೇನ ವೈದಿಕ ಸಂಸ್ಕೃತಿಯ ಉಪನಯನಾದಿ ರೂಪವೇ ಮೂಲಭೂತವಾದದ್ದೆಂದು ತಿಳಿಯುವದು.

ಅದೇ ನಷ್ಟವಾದರೆ ಪ್ರಧಾನ ಸಂಸ್ಕಾರದಲ್ಲಿ ಆ ದಿವ್ಯವೂ ಸೂಕ್ಷ್ಮತಮವೂ ಆದ ವೈದಿಕೀ ಆರ್ಷೇಯ ಸಂಸ್ಕೃತಿಯು ಉಳಿಯಲಿಕ್ಕಿಲ್ಲ. "ಛಿನ್ನೇ ಮೂಲೇ ನೈವ ಪತ್ರಂ ನ ಶಾಖಾಃ", ಬೇರನ್ನೇ ಕಡಿದರೆ ಎಲೆಗಳಾಗಲೀ ಟೊಂಗೆಗಳಾಗಲೀ ಎಲ್ಲಿರುತ್ತವೆ ? ಎಂಬಂತೆ.

ಹಾಗಾಗಿ ಆ ಗಾಯತ್ರೀಮಂತ್ರವೇ ನಮ್ಮೆಲ್ಲರ ಕಲ್ಯಾಣಕ್ಕೂ ಉದ್ಧಾರಕ್ಕೂ ಶ್ರೇಯಸ್ಸು ಹಾಗೂ ನಿಃಶ್ರೇಯಸ್ಸಿನ ಸಿದ್ಧಿಗೂ ಮೂಲಭೂತವಾದದ್ದೆಂಬುದನ್ನು ಹೇಳುತ್ತಾ ಆರನೇ ಕಲೆಯನ್ನು ಮುಗಿಸಲಾಗಿದೆ.

– ಶ್ರೀಗುರುದೈವರಾತಾರ್ಪಣಮಸ್ತು –

ಇದು ಬ್ರಹ್ಮರ್ಷಿ ದೈವರಾತರ ದೇವನಾಗರೀ ಹಸ್ತಾಕ್ಷರ



श्री वे. साम्बदीक्षित दामोदरोपाध्यायानाम्
करकमलाब्जयोः समर्पणम्।
अर्चितावते अनन्तचतुर्दशी दिने

विरोधिकृत् संवत्सरे
दैवरातः
दि. ३-९-१९७१

ದೈವರಾತಮೃಷಿಶ್ರೇಷ್ಠಂ ವಿಶ್ವಾಮಿತ್ರಕುಲೋದ್ಭವಮ್।
ಮಂತ್ರಾಣಾಂ ವಿವಿಧಾನರ್ಥಾನ್ ಬೋಧಯಂತಂ ಗುರು ಭಜೇ॥

ಬ್ರಹ್ಮರ್ಷಿ ದೈವರಾತರು ಪರಂಪರೆಯಿಂದ ಬಂದ ಶ್ರೀಮದನಂತ ಚತುರ್ದಶೀ ವ್ರತವನ್ನು ಆಚರಿಸುತ್ತಿದ್ದರು. ವಿರೋಧಿಕೃತ್ ಸಂವತ್ಸರ 3.9.1971 ಅನಂತ ಚತುರ್ದಶೀ ದಿನ ಪುರೋಹಿತನಾದ ನನಗೆ ತಮ್ಮ ಹಸ್ತಾಕ್ಷರವನ್ನಿತ್ತು 'ವೇದಾರ್ಥಕಲ್ಪಲತಾ' ಗ್ರಂಥವನ್ನು ಅನುಗ್ರಹಿಸಿದ್ದರು.

ಅದೇಕೆಂಬುದು ನನಗೆ ಈಗ ಅರ್ಥವಾಗಿದೆ. **'कार्यात् कारणमुन्नेयम्'** ಎಂಬಂತೆ ಈಗ ಕೆಲವು ದಿನಗಳ ಹಿಂದೆ ಮಾನ್ಯ ಡಾ. ಡಿ. ಎನ್. ಶಾನಭಾಗರವರ ಪ್ರೇರಣೆಯಿಂದ ನನ್ನ ಅಲ್ಪಮತಿಗೆ ತಿಳಿದಂತೆ ಗಂಭೀರ ಗೀರ್ವಾಣ ಸರಸ್ವತಿಯ ಕನ್ನಡ ಅನುವಾದವನ್ನು ಮಾಡುವ ಭಾಗ್ಯ ನನಗೆ ಒದಗಿ ಬಂದಿತು.

ಪೂರ್ಣಗ್ರಂಥ ಮೊದಲು ಪೂರ್ವಪೀಠಿಕೆ, ಆರು ಕಲೆಗಳ ಗದ್ಯರೂಪವಿದೆ. ಮುಂದೆ ಎಲ್ಲ ೩೨ ಕಲೆಗಳ ಪದ್ಯರೂಪ, ಹಾಗೂ ಮಂತ್ರಾರ್ಥರೂಪ ಪದ್ಯಗಳು ಅಡಕವಾಗಿವೆ. ಈಗ ಪೂರ್ವಪೀಠಿಕಾಸಹಿತ ಗದ್ಯರೂಪವಾದ ಆರು ಕಲೆಗಳಿಗೆ ಮಾತ್ರ ಕನ್ನಡದಲ್ಲಿ ಪರಿವರ್ತನೆ ಆಗಿದೆ. ಮುಂದಿನವು ಅವರಿಗತಿಪ್ರಿಯವಾದ ಶಾರ್ದೂಲ–ವಿಕ್ರೀಡಿತ ವೃತ್ತದಲ್ಲಿ ಸುಲಭ ಸಂಸ್ಕೃತ ಶೈಲಿಯಲ್ಲಿದೆ. ಉದಾ :

ಸರ್ವೇಷಾಂ ಶ್ರುತಮಸ್ತು ತತ್ರಭವತಾಂ ನಮ್ರಂ ಸಮಭ್ಯರ್ಥನಂ
ಪ್ರಾಜ್ಞಾನಾಂ ಪರಿತೋಷದಂ ಶ್ರುತಿಮತಾಂ ಭೂಯಃ ಪ್ರಸಾದಾರ್ಜನಮ್।
ವೇದರ್ಥೈಕ ಸಮರ್ಥನಂ ಸಮದೃಶಾಂ ತತ್ ಸ್ವಾನುಭಾವಾರ್ಥದಂ
ಸದ್ವಿದ್ಯಾಭ್ಯಸನಾಶ್ರಯಾರ್ಥಗುಣದಂ ವಿದ್ಯಾರ್ಥಿನಾಮರ್ಥದಮ್॥

ಹೀಗೆ ಆರಂಭವಾಗುತ್ತದೆ. ಅನುಕೂಲವಾದರೆ, ಗುರುಗಳಾದ ದೈವರಾತರ ಅನುಗ್ರಹದಿಂದ ಆರೋಗ್ಯವಿದ್ದರೆ ಪೂರ್ಣಗ್ರಂಥವನ್ನು 'ಛಂದೋದರ್ಶನ'ದ ವಾಸಿಷ್ಠ ಭಾಷ್ಯವನ್ನೂ ಕನ್ನಡಕ್ಕೆ ಅನುವಾದಿಸುವ ಹಂಬಲವಿದೆ, ಅಂತೂ ಇಷ್ಟಾದರೂ ಆಯಿತೆಂದು ಮತ್ತೊಮ್ಮೆ ನೂತನ ಬ್ರಹರ್ಷಿ ದೈವರಾತರನ್ನೂ, ಶಿಷ್ಯವತ್ಸಲರಾದ ಶ್ರೀ ಡಿ. ಎನ್. ಶಾನಭಾಗರನ್ನು ನಮಿಸಿ, ಆತ್ಮಾನಂ ಧನ್ಯಂ ಮನ್ಯೇ.

ಗೋಕರ್ಣ

ಭವದೀಯ
ಸಾಂಬ ದೀಕ್ಷಿತ